ಪ್ರೊ.ಬಿ.ಕೃಷ್ಣಪ್ಪನವರ ಸಾಹಿತ್ಯ ಚಿಂತನೆಯ ಸ್ವರೂಪ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ
ರಾಜಣ್ಣ ಜಿ.

ಮಾರ್ಗದರ್ಶಕರು
ಡಾ.ಅಮರೇಶ ನುಗಡೋಣಿ
ಸಹ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೩

ಪ್ರೊ.ಬಿ.ಕೃಷ್ಣಪ್ಪನವರ ಸಾಹಿತ್ಯ ಚಿಂತನೆಯ ಸ್ವರೂಪ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ರಾಜಣ್ಣ ಜಿ.

ಮಾರ್ಗದರ್ಶಕರು

ಡಾ.ಅಮರೇಶ ನುಗಡೋಣಿ

ಸಹ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೩

1024

ಘೋಷಣಾ ಪತ್ರ

ಪ್ರೊ.ಬಿ.ಕೃಷ್ಣಪ್ಪನವರ ಸಾಹಿತ್ಯ ಚಿಂತನೆಯ ಸ್ವರೂಪ ಎಂಬ ಸಂಪ್ರಬಂಧವನ್ನು **ಡಾ. ಅಮರೇಶ ನುಗಡೋಣಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿದ್ದೇನೆ. ಈ ಸಂಪ್ರಬಂಧ ವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

Rajanna

ರಾಜಣ್ಣ ಜಿ.
ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: 30-07-2013

ಮಾರ್ಗದರ್ಶಕರ ಪ್ರಮಾಣ ಪತ್ರ

ಪ್ರೊ.ಬಿ.ಕೃಷ್ಣಪ್ಪನವರ ಸಾಹಿತ್ಯ ಚಿಂತನೆಯ ಸ್ವರೂಪ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ರಾಜಣ್ಣ ಜಿ.** ಅವರು ನನ್ನ ಮಾರ್ಗದರ್ಶನ ದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರು ವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಅಮರೇಶ ನುಗಡೋಣಿ
ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೨೦-೦೨-೨೦೧೨

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ಮಹತ್ವ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವೈಧಾನಿಕತೆ

ಅಧ್ಯಾಯ ಒಂದು

ಅಧ್ಯಯನ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವೈಧಾನಿಕತೆ

ಈ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಯಾತನೆ, ವೇದನೆ, ಅಪಮಾನ, ಅನ್ಯಾಯ, ಶೋಷಣೆ, ದೌರ್ಜನ್ಯ, ನಿರಂತರ ತುಳಿತಕ್ಕೆ ಒಳಗಾಗುವ, ಧಾರ್ಮಿಕ ಮೂಢನಂಬಿಕೆಗಳಿಗೆ ಬಲಿಯಾಗುವ ವರ್ಗವೆಂದರೆ ಅದು ದಲಿತರು. ದೇಶದ ಜಾತಿವ್ಯವಸ್ಥೆಯಲ್ಲಿ ಅಸ್ಪೃಶ್ಯರು ಎಲ್ಲ ಅವಕಾಶಗಳಿಂದ ವಂಚಿತರಾಗಿ ಊರ ಹೊರಗಿದ್ದು, ಪ್ರಾಣಿಗಳಿಗಿಂತ ಕಡೆಯಾಗಿ ಬದುಕು ಸವೆಸುತ್ತ ಬಂದಿದ್ದಾರೆ. ಈಗಲೂ ಅಸ್ಪೃಶ್ಯರ ಸ್ಥಿತಿ ಹಾಗೆಯೇ ಇದೆ. ಆದರೆ ಅವರು ಆರ್ಥಿಕವಾಗಿ, ಸಾಮಾಜಿಕವಾಗಿ ಈಗಲೂ ಕೆಳಮಟ್ಟದಲ್ಲಿದ್ದಾರೆ. ಈ ಅಸ್ಪೃಶ್ಯರ ಹೀನಸ್ಥಿತಿಗೆ ಹಿಂದಿನ ಜನ್ಮದ ಪಾಪದ ಫಲ ಮತ್ತು ಹಣೆಬರಹ ಕಾರಣವೆಂದು ಪುರೋಹಿತ ವ್ಯವಸ್ಥೆಯು ಜನರನ್ನು ನಂಬಿಸಿತ್ತು. ಈ ವ್ಯವಸ್ಥೆ ವೇದಗಳ ಕಾಲದಿಂದ ಇಲ್ಲಿಯವರೆಗೆ ನಿರಂತರವಾಗಿ ಸಾಗಿ ಬಂದಿದೆ. ಅದನ್ನು ಪ್ರಾರಂಭದಿಂದಲೂ ಹಲವಾರು ಮಾನವತಾವಾದಿಗಳು, ಸಮಾಜ ಚಿಂತಕರು, ಕ್ರಾಂತಿಕಾರಿಗಳು ಆಯಾ ಕಾಲಘಟ್ಟದಲ್ಲಿ ಪ್ರತಿಭಟಿಸುತ್ತಾ ಮಾನವೀಯ ನೆಲೆಗಳನ್ನು ಗಟ್ಟಿಗೊಳಿಸಲು ಈ ಕ್ರೂರ ವ್ಯವಸ್ಥೆ ವಿರುದ್ಧ ಹೋರಾಟ ಮಾಡಿದ್ದಾರೆ. ಆ ಪರಂಪರೆಯಲ್ಲಿ ಬುದ್ಧ, ಜೈನರು, ವೀರಶೈವ ಶರಣರು, ಆಧುನಿಕ ಭಾರತದ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದನಿಂದ ಜ್ಯೋತಿಬಾ ಫುಲೆ ಶಾಹುಮಹಾರಾಜ, ಪೆರಿಯಾರ್, ದೇವರಾಯ ಇಂಗಳೆ, ಅಯ್ಯನ್‌ಕಾಳಿ, ಅಯೋತಿದಾಸ್, ನಾರಾಯಣಗುರು, ಸ್ವಾಮಿ ಧರ್ಮತೀರ್ಥ, ಅಂಬೇಡ್ಕರ್, ಲೋಹಿಯಾ ಪ್ರಮುಖರಾಗಿದ್ದಾರೆ.

ರಾಜಕೀಯವಾಗಿ ಅಂಬೇಡ್ಕರ್ ಅವರ ವಿಚಾರಧಾರೆಯಿಂದ ಪ್ರೇರಣೆ ಪಡೆದ ಬಿ.ಬಸವಲಿಂಗಪ್ಪ ನವರು ಕರ್ನಾಟಕದಲ್ಲಿ ಅಂಬೇಡ್ಕರ್ ವಿಚಾರಧಾರೆ ಹರಡಲು ಮುಖ್ಯ ಕಾರಣರು. ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ರಾಜಕೀಯ ವಿಚಾರಗಳಲ್ಲಿ ದಲಿತರು ಹೋರಾಟ ನಡೆಸಿದರು. ಅದಕ್ಕೆ ಹೊಸ ರಂಗು ಬಂದದ್ದು ದೇವರಾಜ ಅರಸರ ಅಡಳಿತದ ಕಾಲದಲ್ಲಿ. ಆಗ ಬಂದ 'ಹಾವನೂರು ಅಯೋಗದ ವರದಿ' ವ್ಯವಸ್ಥಿತವಾದ ಆಂದೋಲನಕ್ಕೆ ಅವಕಾಶವನ್ನು ಒದಗಿಸಿತು. ಇದಕ್ಕೆ

ಬಿ.ಬಸವಲಿಂಗಪ್ಪ, ಎಲ್.ಜಿ.ಹಾವನೂರು, ಎಂ.ಮಲ್ಲಿಕಾರ್ಜುನ ಸ್ವಾಮಿ ಮುಂತಾದವರು ನೇತೃತ್ವ ವಹಿಸಿದ್ದರು. ಇದರ ಫಲವಾಗಿ ವರದಿ ಜಾರಿಗೆ ಬಂದು ಹೊಸ ಸಂಚಲನ ಉಂಟಾಯಿತು.

೧೯೭೩ರಲ್ಲಿ 'ಮಲ ಹೊರುವ ಪದ್ಧತಿಯ' ಬಗ್ಗೆ ಚರ್ಚೆ ಆರಂಭವಾಗಿ ಈ ಪದ್ಧತಿಯ ವಿಮೋಚನೆಗೆ ಅವಕಾಶ ಸಿಕ್ಕಿತು. ಈ ಕೆಲಸವನ್ನು ಮಾಡಿದ ಬಿ.ಬಸವಲಿಂಗಪ್ಪನವರಿಗೆ ಎಲ್ಲಿಲ್ಲದ ಪ್ರೋತ್ಸಾಹ ದೊರೆಯಿತು. ತಮಿಳುನಾಡಿನ ಎಂ.ಕರುಣಾನಿಧಿ ಅವರು ಇಂತಹ ಕೆಲಸಕ್ಕೆ ಬಸವಲಿಂಗಪ್ಪನವರಿಗೆ ಖಡ್ಗ ನೀಡಿ ಹುರಿದುಂಬಿಸಿದರು. ಇದೇ ಸಂದರ್ಭದಲ್ಲಿ ಸಮಾಜವಾದಿ ಯುವಜನ ಸಭಾದವರು ಹೊಸ ಚೈತನ್ಯ ಕಂಡುಕೊಂಡರು. 'ಜಾತಿವಿನಾಶ' ಸಮ್ಮೇಳನವು ೧೯೭೩ ಆಗಸ್ಟ್‌ನಲ್ಲಿ ಎರಡು ದಿನ ಮೈಸೂರಿನಲ್ಲಿ ನಡೆಯಿತು. ಈ ಘಟನೆಗಳು ವೈಚಾರಿಕ ವಿಚಾರಧಾರೆಗೆ ಅಂಬೇಡ್ಕರ್ ವಿಚಾರಗಳ ಜೊತೆಗೆ ಮಾರ್ಕ್ಸ್, ಲೋಹಿಯಾ, ಪೆರಿಯಾರ್ ವಿಚಾರಗಳು ಸೇರಿಕೊಂಡು ಬುದ್ಧಿಜೀವಿಗಳನ್ನು ಒಂದೆಡೆ ಕಲೆಯುವಂತೆ ಮಾಡಲು ಸಹಕಾರಿಯಾಯಿತು. ಇದರಿಂದ ಬ್ರಾಹ್ಮಣವಿರೋಧಿ ಚಳುವಳಿಗೆ ಮತ್ತಷ್ಟು ಇಂಬು ನೀಡಿತು. ಡಾ.ಅಂಬೇಡ್ಕರ್ ವಿಚಾರಧಾರೆಯು ಕರ್ನಾಟಕದಲ್ಲಿ ದಲಿತ ಚಳುವಳಿ ಹುಟ್ಟಲು ಕಾರಣವಾದ ಅಂಶಗಳೆಂದರೇ ದಲಿತ ಚಳುವಳಿಯು 'ಬೂಸಾ' ಪ್ರಕರಣದಿಂದ ಪ್ರೇರಣೆ ಪಡೆಯಿತು. ಅದೇ ಕಾಲದಲ್ಲಿ ಕನ್ನಡದಲ್ಲಿ ಅಂಬೇಡ್ಕರ್ ಅವರ ಸಾಹಿತ್ಯ ಅನುವಾದಗೊಂಡು ಪ್ರಕಟಗೊಳ್ಳುತ್ತಿತ್ತು. ಎಂ.ಎಸ್.ಜವರಯ್ಯ ಅವರು ಅನುವಾದಿಸಿ ಪ್ರಕಟಪಡಿಸಿದ ಸಾಹಿತ್ಯ ಅಂಬೇಡ್ಕರ್ ವಿಚಾರಗಳ ಹರಡುವಿಕೆಗೆ ಕಾರಣವಾಯಿತು.

ಪಕ್ಕದ ರಾಜ್ಯ ಮಹಾರಾಷ್ಟ್ರದಲ್ಲಿ ದಲಿತ ಪ್ಯಾಂಥರ್ ಸಂಘಟನೆಯ ಚಟುವಟಿಕೆಗಳು ಬಿರುಸಿನಿಂದ ನಡೆದು ಅಲ್ಲಿನ ಜಾತಿವಾದಿ ಸಂಘಟನೆಯಾದ ಶಿವಸೇನೆ ಹಾಗೂ ಕಾಂಗ್ರೆಸ್ ಅನ್ನು ಎದುರು ಹಾಕಿಕೊಂಡಿತ್ತು ದಲಿತರ ರಕ್ಷಣೆ ಮಾಡುವಲ್ಲಿ ಅಂಬೇಡ್ಕರ್ ಸಾಹಿತ್ಯದ ನಿರ್ಮಾಣದಲ್ಲಿ ನಿರತವಾಗಿತ್ತು. ಹಾಗೆಯೇ ಆಂಧ್ರದ ದಲಿತ ಸಾಹಿತ್ಯ, ಅದರಲ್ಲೂ ನಕ್ಸಲೀಯ ಚಳುವಳಿಯ ಹಾಡುಗಳು ತಮ್ಮದೇ ಆದ ಪ್ರಭಾವ ಬೀರಿ ದಲಿತರನ್ನು ಸಂಘಟಿತರಾಗುವಂತೆ ಪ್ರೇರೇಪಿಸಿತು. ತಮಿಳುನಾಡಿನಲ್ಲಿ ಕೊನೆಯ ಹಂತದಲ್ಲಿದ್ದ ಪೆರಿಯಾರ್ ಚಳುವಳಿ ತಮಿಳು ದಲಿತರ ಮೇಲೆ ವೈಚಾರಿಕತೆಯ ವಿಚಾರಗಳನ್ನು ಮೂಡಿಸಿತು.

೬೦ರ ನಂತರದ ದಶಕದಲ್ಲಿ ಕರ್ನಾಟಕದಲ್ಲಿ ದಲಿತರು ಜಾಗೃತಗೊಂಡು ಸಣ್ಣಪುಟ್ಟ ವೇದಿಕೆ, ಸಂಘಟನೆಗಳ ಮೂಲಕ ದಲಿತರ ರಕ್ಷಣೆಗೆ ನಿಂತಿದ್ದರು. ನಂತರ ಬಸವಲಿಂಗಪ್ಪನವರ ಬೂಸಾ ಪ್ರಕರಣದಲ್ಲಿ ದಲಿತರು, ದಲಿತ ವಿದ್ಯಾರ್ಥಿಗಳು ಹಿಂಸಾಚಾರಕ್ಕೆ ಗುರಿಯಾಗಿ ಸಾಕಷ್ಟು ಕಿರುಕುಳವನ್ನು ಅನುಭವಿಸಿದರು. ಇದೊಂದು ಎಚ್ಚರದ ಘಂಟೆಯಾಯಿತು. ಈ ಕೃತ್ಯಗಳಿಂದ ದಲಿತ ಅಕ್ಷರಸ್ಥರು ಜಾಗೃತರಾದರು. ಹಲವು ಸಣ್ಣಪುಟ್ಟ ವೇದಿಕೆಗಳಲ್ಲಿ ಹಂಚಿ ಹೋಗಿದ್ದ ದಲಿತರೆಲ್ಲಾ ಈ ಬೂಸಾ

ಪ್ರಕರಣದಿಂದ ಒಂದಾದರು. ಇದರೊಂದಿಗೆ ಪ್ರಜ್ಞಾವಂತ ದಲಿತರ, ಪ್ರಗತಿಪರ ಚಿಂತಕರ, ದಲಿತಪರ ಚಿಂತನೆಗಳು ಮತ್ತು ಬರಹಗಳು ದಲಿತ ಚಳುವಳಿಗೆ ಒಂದು ಸಮರ್ಪಕವಾದ ನೆಲೆಗಟ್ಟನ್ನು ಸಿದ್ಧಗೊಳಿಸಿದವು. ದಲಿತಪ್ರಜ್ಞೆ ಜಾಗೃತವಾಯಿತು. ಹೀಗಾಗಿ ದಲಿತ ಕ್ರಿಯಾಶೀಲ ಸಂಘಟನೆಗಳು ಹುಟ್ಟಿಕೊಳ್ಳಲು ಆರಂಭವಾಯಿತು. ೧೯೭೩ರಲ್ಲಿ ಕರ್ನಾಟಕ ದಲಿತ ಕ್ರಿಯಾಸಮಿತಿ ಅಸ್ತಿತ್ವ ಪಡೆಯಿತು. ಡಿ.ತಿಮ್ಮರಾಯಪ್ಪ ಅವರು ಅದರ ನೇತೃತ್ವ ವಹಿಸಿಕೊಂಡಿದ್ದರು. ಇವರಲ್ಲಿ ಓ.ಶ್ರೀಧರನ್, ಮುನಿವೆಂಕಟಪ್ಪ, ಓ.ರಾಜಣ್ಣ, ವಿ.ಟಿ.ರಾಜಶೇಖರ್ ಮುಂತಾದವರು ಗುರುತಿಸಿಕೊಂಡಿದ್ದರು. ಅದೇ ರೀತಿ ವೈ.ಕೆ.ರಾಮಯ್ಯ, ಎನ್.ಶಿವಣ್ಣ ಮತ್ತು ವಿ.ನಾಗರಾಜ, ಇಂದೂಧರ ಹೊನ್ನಾಪುರ, ಎಸ್.ಗಣೇಶನ್, ಮಂಚಯ್ಯ, ಗೋವಿಂದಯ್ಯ, ಪೊ.ಬಿ.ಕೃಷ್ಣಪ್ಪ, ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಕೆ.ಬಿ.ಸಿದ್ದಯ್ಯ ಮುಂತಾದವರು ದಲಿತರಲ್ಲಿ ಜಾಗೃತಿ ಮೂಡಿಸುತ್ತಿದ್ದರು.

೧೯೭೪ರಲ್ಲಿ ಪ್ರೊ.ಬಿ.ಕೃಷ್ಣಪ್ಪ ಮಾರ್ಗದರ್ಶನದಲ್ಲಿ ಭದ್ರಾವತಿಯಲ್ಲಿ 'ದಲಿತ ಸಂಘರ್ಷ ಸಮಿತಿ'ಯನ್ನು ಸ್ಥಾಪಿಸಿದರು. ದಲಿತರ ಬಗ್ಗೆ ಕಾಳಜಿ ಇರುವ ಎನ್.ಗಿರಿಯಪ್ಪನವರು ಸ್ಥಾಪಕ ಅಧ್ಯಕ್ಷರಾಗಿದ್ದರು. ಚಂದ್ರಪ್ರಸಾದ್ ತ್ಯಾಗಿ, ಈರಯ್ಯ, ಎಸ್.ಟಿ.ರಾಜು, ಬಿ.ರಾಜಣ್ಣ ಮುಂತಾದ ಪ್ರಮುಖರು ಇವರ ಸದಸ್ಯರಾಗಿದ್ದರು.

ಈ ರೀತಿಯಾಗಿ ಪ್ರಾರಂಭವಾದ ದಲಿತ ಸಂಘರ್ಷ ಸಮಿತಿ ಮುಂದೆ ಕರ್ನಾಟಕದ ಪ್ರಬಲ ಸಂಘಟನೆಯಾಗಿ ಕಾರ್ಯ ನಿರ್ವಹಿಸಿತು. ಅದಕ್ಕೆ ಮುಖ್ಯ ಕಾರಣರಾದವರು ಪ್ರೊ.ಬಿ.ಕೃಷ್ಣಪ್ಪ ಅವರು. ವೃತ್ತಿಯಲ್ಲಿ ಅಧ್ಯಾಪಕರಾಗಿದ್ದು ಪ್ರವೃತ್ತಿಯಲ್ಲಿ ಸಾಮಾಜಿಕ ಹೋರಾಟಗಾರರಾಗಿದ್ದ ಪ್ರೊ.ಬಿ.ಕೃಷ್ಣಪ್ಪ ಅವರ ಸಾಹಿತ್ಯ ಚಿಂತನೆಯನ್ನು ಕುರಿತು ಅಧ್ಯಯನ ಮಾಡುವ ವಿಶೇಷ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

೧.೧. ಅಧ್ಯಯನದ ಉದ್ದೇಶ

ಕರ್ನಾಟಕದ ಸಾಮಾಜಿಕ ಚಳುವಳಿಗಳಲ್ಲಿ ಬಿ.ಕೃಷ್ಣಪ್ಪನವರ ಹೆಸರು ಪ್ರಮುಖವಾಗಿದೆ. ಅದರಲ್ಲೂ ೭೦-೮೦ರ ದಶಕದಲ್ಲಿ ಅವರು ದಲಿತ ಚಳುವಳಿಯನ್ನು ಕಟ್ಟಿ ಬೆಳೆಸಿ, ಅದರ ನೇತೃತ್ವ ವಹಿಸಿದ್ದರು. ಸಾಮಾಜಿಕ ಹೋರಾಟಗಳ ಜೊತೆಗೆ ಸಾಹಿತ್ಯ, ವೈಚಾರಿಕ ಚಿಂತನೆ ಕುರಿತು ಅನೇಕ ಬರಹಗಳನ್ನು ಮಾಡಿದ್ದರು. ಕೃಷ್ಣಪ್ಪನವರ ಸಾಹಿತ್ಯದ ಮೇಲೆ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳು ಬಹಳ ಕಡಿಮೆ. ಪ್ರಸ್ತುತ ಈ ಅಧ್ಯಯನದಲ್ಲಿ ಬಿ.ಕೃಷ್ಣಪ್ಪ ಅವರ ಸಾಹಿತ್ಯ ಚಿಂತನೆಯನ್ನು ಪರಿಶೀಲಿಸುವ ಮುಖ್ಯ ಉದ್ದೇಶವನ್ನು ಹೊಂದಿದೆ.

* ಬಿ.ಕೃಷ್ಣಪ್ಪನವರ ಸಾಹಿತ್ಯ ಚಿಂತನೆಯ ರೂಪುಗೊಂಡ ಚಾರಿತ್ರಿಕ ಸಂದರ್ಭ, ಒತ್ತಡ ಹಾಗೂ ಹಿನ್ನೆಲೆಯನ್ನು ಪರಿಶೀಲಿಸುವುದು.

* ಬಿ.ಕೃಷ್ಣಪ್ಪನವರ ಸಾಹಿತ್ಯ ಚಿಂತನೆಗಾಗಿ ಸಾಮಾಜಿಕ ಹೋರಾಟಗಳಿಗೆ ಇರುವ ಸಂಬಂಧದ ಸ್ವರೂಪವನ್ನು ಪರಿಶೀಲಿಸುವುದು.
* ಬಿ.ಕೃಷ್ಣಪ್ಪನವರ ಸಾಹಿತ್ಯದಲ್ಲಿ ವೈಚಾರಿಕತೆಯ ಸ್ವರೂಪವನ್ನು ಚರ್ಚಿಸುವುದು.

೧.೨. ಅಧ್ಯಯನದ ಮಹತ್ವ

ಪ್ರೊ.ಬಿ.ಕೃಷ್ಣಪ್ಪನವರು ಎಂದರೆ ಕೇವಲ(ಸಾಮಾಜಿಕ) 'ದಲಿತ ಹೋರಾಟಗಾರ' ಎಂಬ ಸೀಮಿತ ವ್ಯಾಪ್ತಿಯಲ್ಲಿ ಇದುವರೆಗೂ ಚರ್ಚಿಸಲಾಗಿದೆ. ಹೀಗಾಗಿ ಅವರ ಸಾಹಿತ್ಯ ಚಿಂತನೆಗಳು ಗೌಣವಾಗಿವೆ. ದಲಿತ ಹೋರಾಟದ ಹಿನ್ನೆಲೆಯಿರುವ ಒಂದು ಸೃಜನಶೀಲ ಮನಸ್ಸು ಸಾಹಿತ್ಯವನ್ನು ನೋಡಬಹುದಾದ ವಿಭಿನ್ನ ದೃಷ್ಟಿಕೋನಕ್ಕೆ ಬಿ.ಕೃಷ್ಣಪ್ಪ ಅವರ ಸಾಹಿತ್ಯ ಚಿಂತನೆ ಒಂದು ಮಾದರಿ. ಅವರು ಸಾಹಿತ್ಯವನ್ನು ಪರಿಭಾವಿಸಿರುವ ಆಲೋಚನಾಕ್ರಮವನ್ನು ಈ ಅಧ್ಯಯನವು ಪರಿಶೀಲಿಸುತ್ತದೆ. ಈ ದೃಷ್ಟಿಯಲ್ಲಿ ಪ್ರಸ್ತುತ ಸಂಶೋಧನೆಯ ಅಧ್ಯಯನ ಅದರ ಮೌಲ್ಯವನ್ನು ಹೆಚ್ಚಿಸುವುದಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಈ ಅಧ್ಯಯನವು ಪ್ರೊ.ಬಿ.ಕೃಷ್ಣಪ್ಪ ಅವರ ಸಾಹಿತ್ಯ ಚಿಂತನೆಯನ್ನು ಕುರಿತದ್ದಾಗಿದೆ. ಆದ್ದರಿಂದ ಈ ಅಧ್ಯಯನದಲ್ಲಿ ಪ್ರೊ.ಬಿ.ಕೃಷ್ಣಪ್ಪನವರು ಬರೆದಿರುವ ಬರಹಗಳು ಮೂಲ ಆಕರಗಳಾಗಿವೆ. ಕರ್ನಾಟಕ ಸರ್ಕಾರವು ಜನಪ್ರಿಯ ಪುಸ್ತಕಮಾಲೆಯಲ್ಲಿ ಪ್ರಕಟಿಸಿರುವ 'ಪ್ರೊ.ಬಿ.ಕೃಷ್ಣಪ್ಪ ಚಿಂತನೆಗಳು–ಬರಹಗಳು' ಪುಸ್ತಕದಲ್ಲಿ ಆಯ್ದ ಲೇಖನಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರೊ.ಬಿ.ಕೃಷ್ಣಪ್ಪನವರು ತಮ್ಮ ಜೀವಿತಾವಧಿ(೧೯೩೮–೧೯೯೭)ಯವರೆಗೆ ನಡೆದ ಪ್ರಮುಖ ಘಟನೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರೊ.ಬಿ.ಕೃಷ್ಣಪ್ಪನವರ ಸಾಹಿತ್ಯ ಲೇಖನಗಳು ಹಾಗೂ ಜೀವಿತವಾದ ಘಟನೆಗಳಿಗೆ ಮಾತ್ರ ಅಧ್ಯಯನ ಸೀಮಿತವಾಗಿದೆ.

೧.೪. ಅಧ್ಯಯನದ ವೈಧಾನಿಕತೆ

ಈ ಸಂಪ್ರಬಂಧವನ್ನು ೬ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಇದರಲ್ಲಿ ಪ್ರೊ.ಬಿ.ಕೃಷ್ಣಪ್ಪನವರ ಸಾಹಿತ್ಯ ಚಿಂತನೆಯನ್ನು ಚರ್ಚಿಸುವ ಮೂಲ ಉದ್ದೇಶದಿಂದ ಈ ಕೆಳಗಿನಂತೆ ಅಧ್ಯಯನಗಳನ್ನು ವಿಭಾಗಿಸಲಾಗಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಪ್ರವೇಶ, ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವೈಧಾನಿಕತೆಗಳನ್ನು ಒಳಗೊಂಡಿದೆ. ಅಸ್ಪೃಶ್ಯರ ಜೀವನ ಹಾಗೂ ಜಾಗೃತಿಯನ್ನು ಕುರಿತ ವಿವರಣೆಯನ್ನೂ ಈ ಅಧ್ಯಾಯ ಒಳಗೊಂಡಿದೆ.

ಎರಡನೆಯ ಅಧ್ಯಾಯದಲ್ಲಿ ಪ್ರೊ.ಬಿ.ಕೃಷ್ಣಪ್ಪನವರ ಮೇಲೆ ಸಮಾಜವಾದ, ವೈಚಾರಿಕ ಚಿಂತನೆಗಳ ಹಾಗೂ ಅಂಬೇಡ್ಕರ್ ಪ್ರಭಾವ–ಪ್ರೇರಣೆ ಆಗಿರುವುದರ ಕುರಿತು ಅಧ್ಯಯನ ಮಾಡಲಾಗಿದೆ.

ಮೂರನೆಯ ಅಧ್ಯಾಯವು ಪ್ರೊ.ಬಿ.ಕೃಷ್ಣಪ್ಪನವರ ಸಮಕಾಲೀನ ಕರ್ನಾಟಕದ ವಿದ್ಯಮಾನಗಳಾದ, ದಲಿತ ಚಳುವಳಿ, ಅರಸು ಆಡಳಿತ, ಹಾವನೂರು ವರದಿ, ಬೂಸಾ ಪ್ರಕರಣ, ಜಾತಿವ್ಯವಸ್ಥೆ ಕುರಿತಾದ ವಿದ್ಯಮಾನಗಳನ್ನು ಒಳಗೊಂಡಿದೆ.

ನಾಲ್ಕನೆಯ ಅಧ್ಯಾಯವು ಪ್ರೊ.ಬಿ.ಕೃಷ್ಣಪ್ಪನವರ ಸಾಹಿತ್ಯ ಚಿಂತನೆಯಲ್ಲಿ ವಿಶ್ಲೇಷಿಸಿರುವ ಅಸ್ಪೃಶ್ಯತೆ, ಧಾರ್ಮಿಕತೆ, ಶೈಕ್ಷಣಿಕ ಚಿಂತನೆ ಹಾಗೂ ಜಾತಿವ್ಯವಸ್ಥೆ ಬಗ್ಗೆ ಚರ್ಚಿಸಲಾಗಿದೆ. ಬಿ. ಕೃಷ್ಣಪ್ಪ ನವರು ಸಾಹಿತ್ಯದ ಒಲವಿನಿಂದ ಲೇಖನಗಳನ್ನು ಬರೆದಿದ್ದಾರೆ. ಇವುಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಪ್ರೊ.ಬಿ.ಕೃಷ್ಣಪ್ಪನವರ ಜನನ, ಬಾಲ್ಯ, ಶಿಕ್ಷಣ, ವೃತ್ತಿ, ಪ್ರವೃತ್ತಿ, ಹೋರಾಟಗಳು ಹಾಗೂ ಜೀವನ, ಮರಣದ ಕುರಿತು ಮಾಹಿತಿ ಒಳಗೊಂಡಿದೆ.

ಅಧ್ಯಾಯ ಆರರಲ್ಲಿ ಈ ಅಧ್ಯಯನದ ಫಲಿತಗಳನ್ನು ಹಾಗೂ ಸಮಾರೋಪವನ್ನು ನೀಡಲಾಗಿದೆ.

ಅಧ್ಯಾಯ ಎರಡು

ಪ್ರಭಾವ ಮತ್ತು ಪ್ರೇರಣೆ

ಅಧ್ಯಾಯ ಎರಡು

ಪ್ರಭಾವ ಮತ್ತು ಪ್ರೇರಣೆ

ಹುಟ್ಟಿನಿಂದಲೇ ಬಡತನದ ಬೇಗೆ ಹಾಗೂ ಅಸ್ಪೃಶ್ಯತೆಯ ಕರಾಳ ವಾತಾವರಣದಲ್ಲಿ ಬೆಳೆದಿದ್ದ ಕೃಷ್ಣಪ್ಪನವರು ಅಂದಿನ ಶೋಷಣೆಗಳು, ಹೃದಯಹೀನ ಸಮಾಜದ ವರ್ತನೆಯ ನೋವನ್ನು ಒಳಗೊಳಗೆ ಅನುಭವಿಸುತ್ತ ಸಂವೇದನಾಶೀಲತೆಯನ್ನು ಬೆಳೆಸಿಕೊಂಡರು. ದಲಿತರು ಒಳಗಾಗಿದ್ದ ಸತತ ಸಾವಿರಾರು ವರ್ಷಗಳ ಶೋಷಣೆ, ಅನ್ಯಾಯಗಳ ವಿರುದ್ಧ ಪ್ರಶ್ನಾ ಮನೋಭಾವನೆ ಹೊಂದಿದ್ದ ಅವರ ಮನಸ್ಸು ಹೋರಾಟದ ದಾರಿಯನ್ನು ಹಿಡಿದಿತ್ತು. ತನ್ನ ಕುಟುಂಬದ ಮೇಲೆ ಅಂದಿನ ಸಮಾಜವು ವರ್ತಿಸಿದ್ದ ಪರಿ ಮತ್ತು ಬಾಲ್ಯದಲ್ಲಿ ಘಟಿಸಿದ ಘಟನೆಗಳು ಅವರ ಮೇಲೆ ಗಾಢ ಪ್ರಭಾವ ಬೀರಿದವು. ಬಾಲ್ಯದ ಕಷ್ಟದ ಅನುಭವಗಳು ಮುಂದೆ ಅವರೊಬ್ಬ ವಿಶಿಷ್ಟ ವ್ಯಕ್ತಿಯನ್ನಾಗಿ ರೂಪಿಸಲು ಕಾರಣವಾಗಿದ್ದುಂಟು. ಮುಂದೆ ಶಾಲಾ ಕಾಲೇಜು ದಿನಗಳಲ್ಲಿ ಅಂಬೇಡ್ಕರ್, ಲೋಹಿಯಾ, ಜಯಪ್ರಕಾಶ್ ನಾರಾಯಣ ಹಾಗೂ ಶಾಂತವೇರಿ ಗೋಪಾಲಗೌಡ ಮೊದಲಾದ ಸಮಾಜ ಸುಧಾರಕರ ಮತ್ತು ಅವರ ಮಾನತಾವಾದಿ ಚಿಂತನೆಗಳಿಂದ, ಸಮಾನತೆಯ ಸಿದ್ಧಾಂತಗಳಿಂದ ಪ್ರಭಾವಿತರಾಗಿದ್ದರು. ಸಮಾನತೆಯಲ್ಲಿ ನಂಬಿಕೆಯಿಟ್ಟಿದ್ದ ಕೃಷ್ಣಪ್ಪನವರು ಕೂಲಿ ಕಾರ್ಮಿಕರ, ಹಿಂದುಳಿದವರ, ದಲಿತರ ಏಳಿಗೆಗೆ ಹಲವಾರು ಚಳುವಳಿಗಳನ್ನು, ಹೋರಾಟಗಳನ್ನು, ಸಂಘಟನೆಯನ್ನು ರೂಪಿಸಿ ಅಸಮಾನತೆಯನ್ನು ಹೋಗಲಾಡಿಸಲು ಶ್ರಮಿಸಿದರು. ಸಮಾಜದಲ್ಲಿ ಸಮಾನತೆ ಇರಬೇಕು, ದಲಿತರು ಜಾಗೃತರಾಗಬೇಕೆಂದು ದಲಿತರ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾದ ಅಂಬೇಡ್ಕರ್ ಅವರನ್ನು ತಮ್ಮ ಆರಾಧ್ಯ ದೈವವನ್ನಾಗಿ ಸ್ವೀಕರಿಸಿ, ಅವರ ಬಗ್ಗೆ ಅಪಾರ ಗೌರವ, ವಿಶ್ವಾಸ ಹೊಂದಿದ್ದರು. ಅಂಬೇಡ್ಕರ್ ಅವರ ಕ್ರಾಂತಿಕಾರಕ ವಿಚಾರಗಳನ್ನು ಮೆಚ್ಚಿಕೊಂಡಿದ್ದರು. ಅಂಬೇಡ್ಕರ್‌ರ ಶಿಕ್ಷಣ, ಸ್ವಾಭಿಮಾನ, ಸಂಘರ್ಷ, ರಾಜಕೀಯ, ಹೋರಾಟ ಮುಂತಾದ ವಿಚಾರಗಳು ಕೃಷ್ಣಪ್ಪನವರಿಗೆ ಹೋರಾಟದ ಹಾದಿ ಹಿಡಿಯುವಲ್ಲಿ ಪ್ರೇರಣೆಯನ್ನು ಒದಗಿಸಿವೆ. ಹೀಗೆ ಕೃಷ್ಣಪ್ಪ ಅವರು ಸಾಮಾಜಿಕ ಚಿಂತನೆಗಳಿಂದ ಹಾಗೂ ಚಿಂತನಾಶೀಲರ ವೈಚಾರಿಕತೆಯಿಂದ ಪ್ರಭಾವಿತರಾಗಿ ಹಿಂದುಳಿದ ಹಾಗೂ ದಲಿತ, ಅಲ್ಪಸಂಖ್ಯಾತರಿಗೆ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಸಮಾನತೆ ಒದಗಿಸಲು ಅವಿರತ ಹೋರಾಡಿದರು.

ಕಟ್ಟಾ ಅಂಬೇಡ್ಕರ್‌ವಾದಿಯಾಗಿದ್ದ ಕೃಷ್ಣಪ್ಪನವರು ದಲಿತರ ನೋವಿನೊಂದಿಗೆ ಸ್ಪಂದಿಸಿದ ಪ್ರಮುಖ ವ್ಯಕ್ತಿಗಳಲ್ಲಿ ಪ್ರಮುಖರು. ಅಂಬೇಡ್ಕರ್ ವಾದವೊಂದು ದಲಿತರ ವಿಮೋಚನೆಗೆ ಪ್ರೇರಣೆ ಎನ್ನುವ ಸತ್ಯ ಸಂಗತಿಯನ್ನು ಕೃಷ್ಣಪ್ಪ ಹೋರಾಟದ ಮೂಲಕ ತೋರಿಸಿದ್ದಾರೆ. ತಮ್ಮ ಜೀವನದ ಅಮೂಲ್ಯ ಮೂರು ದಶಕಗಳನ್ನು ದಲಿತರ ಉದ್ಧಾರಕ್ಕಾಗಿ, ಸ್ವಾಭಿಮಾನದ ಬದುಕಿಗಾಗಿ ಶ್ರಮಿಸಿದ್ದಾರೆ.

ಅಂಬೇಡ್ಕರರು ಬದುಕಿನುದ್ದಕ್ಕೂ ಪ್ರತಿಕೂಲ ಪರಿಸ್ಥಿತಿಯಲ್ಲಿ ಹೋರಾಟ ನಡೆಸಿ ಕೆಳವರ್ಗದವರನ್ನು ಸಂಘಟಿಸಿ ಅವರ ಶಿಕ್ಷಣಕ್ಕಾಗಿ ಶ್ರಮಿಸಿದರು. ಇಂತಹ ಪರಿವರ್ತನೆಯ ಹರಿಕಾರರ ಹೋರಾಟಗಳು–ಬದುಕು–ಬರಹಗಳು ಹಾಗೂ ಅಂಬೇಡ್ಕರ್ ಅವರ ಆದರ್ಶ ಮೌಲ್ಯಗಳು ಪ್ರೊ.ಬಿ.ಕೃಷ್ಣಪ್ಪನವರ ಮೇಲೆ ಪ್ರಭಾವ ಬೀರಿವೆ. ಮೂಲತಃ ದಲಿತರಿಗೆ ಭೂತವಾಗಿ ಕಾಡುತ್ತ ಸಾಗುತ್ತಿರುವುದು ಜಾತಿ ನೆಲೆಯ ಶೋಷಣೆ. ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಎರಡು ಸಮುದಾಯಗಳಿವೆ. ಒಂದು ದಲಿತ ಭಾರತ, ಇನ್ನೊಂದು ದಲಿತೇತರ ಭಾರತ. ಅಂಬೇಡ್ಕರರು ಅದನ್ನು ತಮ್ಮ ಎಲ್ಲ ಬರಹಗಳಲ್ಲಿ ನಿಖರವಾಗಿ ಗುರುತಿಸಿದರು. ಪ್ರತಿ ದಲಿತನಿಗೂ ದಲಿತೇತರನಿಗೂ ಸಣ್ಣ ವಯಸ್ಸಿನಿಂದಲೂ ಇದು ತಿಳಿದ ಸಂಗತಿ. ದುರಂತವೆಂದರೆ, ಗಾಂಧೀಜಿಯಾದಿಯಾಗಿ ಅನೇಕರು ಈ ಸತ್ಯವನ್ನು ಮರೆಮಾಚುತ್ತಾ ಬಂದರು. ವೈದಿಕಶಾಹಿಯ ಪ್ರಭಾವದ ಪರಿಣಾಮವಿದು. ಎಲ್ಲರೂ ಸಂಘಟಿತ ಕ್ರಿಯೆಯಲ್ಲಿ ಉತ್ಪನ್ನವಾಗುವ "ಒಂದೇ ಭಾರತ" ರಚನೆಯಾಗದ ಹೊರತು ಜಾತಿ ಮೂಲ ಶೋಷಣೆಗೆ ಅಂತಿಮ ತೆರೆಯಿಲ್ಲವೆಂಬುದನ್ನೇ ಬಿ.ಕೃಷ್ಣಪ್ಪನವರು ನಂಬಿದ್ದರು. ಆದ್ದರಿಂದ ವರ್ಗಸಂಘರ್ಷ ಘೋಷಿಸುವ ಮಾರ್ಕ್ಸ್ ಸ್ವಸಂಘಟನೆಗಿಂತ ಜಾತಿಸಂಘರ್ಷದ ಬಗ್ಗೆ ಮಾತನಾಡುವ ಸಮಾಜವಾದಿ ಯುವ ಜನಸಭಾದ ಕಡೆಗೆ ಹೆಚ್ಚು ಆಕರ್ಷಿತರಾದರು.

ಈ ಕುರಿತು ಪ್ರೊ.ಬಿ.ಕೃಷ್ಣಪ್ಪನವರ ಮಾತುಗಳನ್ನು ನೋಡಬಹುದು. "೧೯೭೦ರ ದಶಕದಲ್ಲಿ ನನಗೆ ಜಾತಿ ವಿರುದ್ಧದ ಈ(ಯುವಜನ ಸಭಾ) ಚಳುವಳಿ ತುಂಬಾ ಅಟ್ರಾಕ್ಟ್ ಆಯ್ತು. ಕಾರಣ ಸಮಾಜವಾದಿ ಚಳುವಳಿಯಲ್ಲಿ ಸೇರ್ಕೊಂಡಿದ್ದೆ."[೧] ಸಮಾಜವಾದಿ ಯುವಜನ ಸಭಾದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಂದಿನ ಪ್ರಮುಖರ್‍ಯಾರು? ಅವರ ಜಾತಿ ಮೂಲಗಳ್ಯಾವು ಮತ್ತು ಅವರ ಜಾತಿವಿರೋಧಿ ಕ್ರಿಯೆಯಲ್ಲಿ ತೋರುತ್ತಿದ್ದ ಬದ್ಧತೆಗೆ ಆಕರ್ಷಿತರಾದರು. ಈ ಮೂಲಕ ಸಮಾಜದ ಅಸಮತೋಲನ ವ್ಯವಸ್ಥೆಯನ್ನು ಸರಿದೂಗಿಸಬೇಕೆಂದುಕೊಂಡರು.

ಬಿ.ಕೃಷ್ಣಪ್ಪನವರ ಮೇಲೆ ಅಂಬೇಡ್ಕರ್ ತತ್ವ ಸಿದ್ಧಾಂತಗಳು ತುಂಬಾ ಪ್ರಭಾವ ಬೀರಿವೆ. ಡಾ.ಅಂಬೇಡ್ಕರ್ ಅವರು ಬರೆದಿರುವ 'ರಾನಡೆ, ಗಾಂಧಿ, ಜಿನ್ನಾ' ಪುಸ್ತಕದ ಪ್ರಸ್ತಾವನೆಯಲ್ಲಿ ಒಂದು ಮಾತು ಬರೆಯುತ್ತಾರೆ. "ತನ್ನ ಮೇಲೆ ಪ್ರೀತಿ ಮತ್ತು ದ್ವೇಷದಲ್ಲಿ ಒಲವಿಲ್ಲದ ಯಾವುದೇ ವ್ಯಕ್ತಿ ಉದಾತ್ತ ತತ್ವಗಳಿಗೆ ಮತ್ತು ಹೋರಾಡುತ್ತಿರುವ ಉದ್ದೇಶಗಳಿಗೆ ಪುಷ್ಟಿಯನ್ನು ನೀಡಲಾರ ಮತ್ತು ತನ್ನ ಯುಗದ ಮೇಲೆ ಪ್ರಭಾವ ಬೀರಲಾರ. ನಾನು ಅನ್ಯಾಯ, ದಬ್ಬಾಳಿಕೆ, ಆಡಂಬರ ಮತ್ತು ಆಷಾಢಭೂತಿತನವನ್ನು ದ್ವೇಷಿಸುತ್ತೇನೆ ಮತ್ತು ನನ್ನ ದ್ವೇಷವೇ ಈ ಎಲ್ಲ ವಿಷಾದ ಅಪರಾಧಗಳಲ್ಲಿ ಸೇರಿರುತ್ತವೆ."

ಡಾ.ಅಂಬೇಡ್ಕರ್ ವಿಚಾರಗಳು ಸ್ವತಂತ್ರ ಚಳವಳಿಯ ಸಂದರ್ಭದಲ್ಲಿ ವಿಚಿತ್ರವಾಗಿಯೂ ಅಪಸ್ವರದ ಸ್ವರೂಪವಾಗಿ ಕಾಣುತ್ತಿದ್ದಂತವುಗಳು. 'ಗಾಂಧಿ ಆರಂಭಿಸಿದ ವಿಚಾರಗಳ ಚಳುವಳಿಗಳ ಕೊನೆ ಸ್ವಾತಂತ್ರ್ಯ ಗಳಿಸುವಿಕೆಯಾದರೆ, ಅಂಬೇಡ್ಕರ್ ಆರಂಭಿಸಿದ ವಿಚಾರ ಮತ್ತು ಚಳುವಳಿಗಳ ಅಂತ್ಯ ಅಂತ್ಯಜನ ಬಿಡುಗಡೆಯ ತನಕ' ಪ್ರಸ್ತುತವಾಗಿರಬಲ್ಲದು. ಹೀಗಾಗಿ ಗಾಂಧಿ ಸ್ವಾತಂತ್ರ್ಯ ಪೂರ್ವದ ಯುಗವನ್ನು ಆಳಿದರೆ ಸ್ವಾತಂತ್ರ್ಯ ನಂತರದ ಭಾರತವನ್ನು ಡಾ.ಅಂಬೇಡ್ಕರ್ ವಿಚಾರಗಳು ಆಳತೊಡಗಿದೆ.

ಅಂಬೇಡ್ಕರ್ ಆರಂಭಿಸಿದ ಜಾತಿ ನಿರ್ಮೂಲನೆ–ಮೀಸಲಾತಿ–ಮತಾಂತರ–ಶಿಕ್ಷಣ–ಸಂಘಟನೆಗಳು ನಿಮ್ನವರ್ಗದಲ್ಲಿ ಹೊಸ ವಿಚಾರಗಳ ಸಂಚಲನಕ್ಕೆ, ಅಸ್ಮಿತೆಯ ಜಾಗೃತಿಗೆ ಕಾರಣವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ರಾಜಕಾರಣಿಗಳಿಗೆ 'ಗಾಂಧಿ' ಎಂಬ ಹೆಸರು ಹೇಗೆ ಮಂತ್ರ ಸ್ವರೂಪಿಯಾಗಿತ್ತೋ ಈಗ 'ಅಂಬೇಡ್ಕರ್' ಎಂಬ ಹೆಸರು ನಿತ್ಯ ಜಪಿಸುವ ಮಂತ್ರವಾಗಿದೆ.

"ಭಾರತದಲ್ಲಿ ಜಾತಿ ಇರುವವರೆಗೂ ಹಿಂದೂಗಳು ಅಂತರ್ಜಾತಿ ವಿವಾಹವಾಗಲು ಅಥವಾ ಹೊರಗಿನವರೊಂದಿಗೆ ಸಾಮೂಹಿಕ ಸಂಬಂಧ ಮಾಡರು. ಹಿಂದೂಗಳು ಪ್ರಪಂಚದ ಬೇರೆ ಭಾಗಗಳಿಗೆ ವಲಸೆ ಹೋದರೆ ಭಾರತದ ಜಾತಿಯ ಒಂದು ಲೋಕ ಸಮಸ್ಯೆಯಾಗಿ ಪರಿಣಮಿಸುತ್ತದೆ" ಎಂದು ಅಂಬೇಡ್ಕರ್ ಹೇಳಿದ್ದಾರೆ.

ಜಾತಿ ನಿರ್ಮೂಲನ ಎಂಬ ಪುಸ್ತಕವನ್ನು ಬರೆದ ಅಂಬೇಡ್ಕರ್ ಅವರು "ಗಾಂಧಿ ಹಾಕಿಕೊಂಡ ಹರಿಜನೋದ್ಧಾರ ಕಾರ್ಯಕ್ರಮಗಳ ಉದ್ದೇಶವನ್ನು ಪ್ರಶ್ನಿಸುತ್ತಾರೆ." ಹಾಗೆಯೇ ಅಸ್ಪೃಶ್ಯರನ್ನು ಹರಿಜನ ಎಂಬ ಹೆಸರಿನಿಂದ ಸಂಬೋಧಿಸುವುದನ್ನು ಆಕ್ಷೇಪಿಸಿದ್ದಾರೆ.

"ಅಸ್ಪೃಶ್ಯರಿಗೆ ಹರಿಜನ ಎನ್ನುವ ಪದ ಕಂಡರಾಗದು. ಅದರ ವಿರುದ್ಧ ಅನೇಕರು ಆಕ್ಷೇಪಣೆ ಎತ್ತಿದ್ದಾರೆ. ಮೊದಲನೆಯ ಆಕ್ಷೇಪ ಇದರಿಂದ ಅಸ್ಪೃಶ್ಯರ ಸ್ಥಿತಿಯಂತೂ ಸುಧಾರಣೆಯಾಗದು. ಹೊಸ ಹೆಸರು ಕೊಟ್ಟ ಕ್ಷಣ ಅಸ್ಪೃಶ್ಯತೆಯ ಶಾಪದಿಂದ ಅವರು ಮುಕ್ತರಾಗಲ್ಲ. ಹಳೆಯ ಹೆಸರಿದ್ದಾಗ ಅವರು ಎಷ್ಟು ನಿಕೃಷ್ಟರಾಗಿದ್ದರೋ ಹೊಸ ಹೆಸರಿನಲ್ಲೂ ಅಷ್ಟೇ ನಿಕೃಷ್ಟವಾಗಿದ್ದಾರೆ. ಕೆಟ್ಟದ್ದನ್ನು ಕೆಟ್ಟದಾಗೆ ಕರೆಯಬೇಕು. ಏಕೆಂದರೆ ರೋಗಿಗೆ ತನ್ನ ಕಾಯಿಲೆ ಏನೆಂದು ತಿಳಿದರೆ ಉತ್ತಮ ಎನ್ನುವುದು ಅಂಬೇಡ್ಕರ್ ವಾದವಾಗಿದ್ದವು. ಇವು ಬಿ.ಕೃಷ್ಣಪ್ಪನವರ ಮೇಲೆ ತುಂಬಾ ಪರಿಣಾಮ ಬೀರಿದವು.

ಮಹಾತ್ಮ ಗಾಂಧಿಯವರ ಹರಿಜನ ಎಂಬ ಹೆಸರನ್ನು ಅಂಬೇಡ್ಕರ್ ಆಕ್ಷೇಪಿಸಿದ್ದಾರೆ. "ಅಸ್ಪೃಶ್ಯರು ದೇವರ ಮಕ್ಕಳಾದರೆ ಸ್ಪೃಶ್ಯರು ರಾಕ್ಷಸರ ಮಕ್ಕಳೆ?" ಎಂದು ಪ್ರಶ್ನಿಸುತ್ತಾರೆ. ಹಾಗೆಯೇ "ಹಿಂದೂಗಳು ಪಶು ಪ್ರಾಣಿಗಳನ್ನು, ನಾಯಿಯನ್ನು ಕೂಡ ತಮ್ಮ ಮನೆಯಲ್ಲಿ ಕರೆದುಕೊಳ್ಳಬಲ್ಲರು. ಆದರೆ 'ಅಸ್ಪೃಶ್ಯರನ್ನಲ್ಲ" ಎಂದು ಅಂಬೇಡ್ಕರ್ ಹೇಳುತ್ತಾರೆ.

ಜಾತಿ ಎಷ್ಟೆಲ್ಲಾ ಅನ್ಯಾಯ ಮತ್ತು ಕೆಡುಕಿಗೆ ಕಾರಣವಾಗಿದ್ದರೂ ಬಹುಸಂಖ್ಯಾತರಾದ ಅಸ್ಪೃಶ್ಯರು ಯಾಕೆ ದಂಗೆ ಎದ್ದಿಲ್ಲ ಎಂಬ ಪ್ರಶ್ನೆ ಹಾಕಿಕೊಳ್ಳುವ ಅಂಬೇಡ್ಕರ್ "ಜಗತ್ತಿನ ಬೇರೆ ಬೇರೆ ಪ್ರದೇಶದಲ್ಲಿ

ಸಾಮಾಜಿಕ ಕ್ರಾಂತಿಗಳಾಗಿವೆ. ಭಾರತದಲ್ಲಿ ಸಾಮಾಜಿಕ ಕ್ರಾಂತಿಗಳು ಏಕೆ ನಡೆಯಲಿಲ್ಲ. ಈ ಪ್ರಶ್ನೆಗೆ ಉತ್ತರ, ಚಾತುರ್ವರ್ಣ ಪದ್ಧತಿ ಪರಿಣಾಮ ಹಿಂದೂ ಸಮಾಜ ಕೆಳವರ್ಗದವರಿಗೆ ಏಳಲಾರದಷ್ಟು ದುರ್ಬಲಗೊಳಿಸಿದೆ.

ಈ ಮೇಳಿನ ಎಲ್ಲಾ ಅಂಬೇಡ್ಕರ್ ಅವರ ತತ್ವ ಸಿದ್ಧಾಂತ ಬಿ.ಕೃಷ್ಣಪ್ಪನವರ ಮೇಲೆ ತುಂಬಾ ಪರಿಣಾಮ-ಪ್ರಭಾವ ಬೀರಿದ್ದವು. ಬಿ.ಕೃಷ್ಣಪ್ಪನವರಿಗೆ ಕನ್ನಡ ಸಾಹಿತ್ಯದ ಜೊತೆಗೆ ದೇಶದ ಇತರೇ ಭಾಷೆಗಳ ಸಾಹಿತ್ಯ ಪರಿಚಯವು ಇತ್ತು. "ರವೀಂದ್ರನಾಥ ಠಾಗೂರ್ ಮತ್ತು ಪ್ರೇಮಚಂದ್ರರು ಕೃಷ್ಣಪ್ಪನವರ ಮೇಲೆ ತುಂಬ ಪ್ರಭಾವ ಬೀರಿದ್ದರು. ರವೀಂದ್ರನಾಥ ಠಾಗೂರರು ಒಬ್ಬ ಬಂಡಾಯಿ. ದೇಶದ ಮೂವತ್ತು ಮೂರು ಕೋಟಿ ದೇವರುಗಳ ವಿರುದ್ಧ, ಜಾತಿಪದ್ಧತಿ ವಿರುದ್ಧ ಮತ್ತು ಮೂಢನಂಬಿಕೆಗಳ ವಿರುದ್ಧ ಬಂಡೆದ್ದವರು. ರವೀಂದ್ರನಾಥ ಠಾಗೂರರ ಇಂಥ ಹತ್ತು ಹಲವು ವಿಚಾರ ಚಿಂತನೆಗಳು ಪ್ರೊ.ಬಿ.ಕೃಷ್ಣಪ್ಪನವರ ಮೇಲೆ ಪ್ರಭಾವ ಬೀರಿದ್ದವು. ಠಾಗೂರ ಪ್ರಸಿದ್ಧ ಕಾದಂಬರಿಯಾದ "ಗೋರಾ"ದಲ್ಲಿ ಈ ಪ್ರಮುಖ ವಿಷಯಗಳು ಅಡಕವಾಗಿವೆ."[೨]

ಗ್ರೀಕ್ ರಾಜನೀತಿ ವಿದ್ವಾಂಸ ಪ್ಲೇಟೋ, ಅರಿಸ್ಟಾಟಲ್ ಮತ್ತು ಸಾಕ್ರಟೀಸ್ ಹಾಗೂ ಅಬ್ರಹಾಂ ಲಿಂಕನ್, ನೆಲ್ಸನ್ ಮಂಡೇಲ, ಡಾ.ಅಂಬೇಡ್ಕರ್ ಅವರ ರಾಜಕೀಯ ಸಿದ್ಧಾಂತ ವಿಚಾರಗಳನ್ನು ಪ್ರೊ.ಬಿ.ಕೃಷ್ಣಪ್ಪನವರು ಅರ್ಥೈಸಿಕೊಂಡರು.

ವೈಚಾರಿಕತೆ, ಸಮಾನತೆಯ ತತ್ವಗಳು, ಸಾಮಾಜಿಕ ಬದ್ಧತೆ, ಸಾಹಿತ್ಯಜ್ಞಾನ, ಸ್ನೇಹಪರತೆ, ಹೋರಾಟಗಾರರಾಗಿ ಬೆಳೆಯಲು ಮೇಲಿನ ಅಂಶಗಳು ಪ್ರೊ.ಬಿ.ಕೃಷ್ಣಪ್ಪನವರಿಗೆ ಸಹಕಾರಿಯಾದವು.

ಬಡತನ ಮತ್ತು ದಲಿತವರ್ಗದಲ್ಲಿ ಹುಟ್ಟಿದ ಕೃಷ್ಣಪ್ಪನವರಿಗೆ ಬುದ್ಧ, ಬಸವ, ಅಂಬೇಡ್ಕರ್, ಕಾರ್ಲ್ ಮಾರ್ಕ್ಸ್, ಅಬ್ರಹಾಂ ಲಿಂಕನ್, ರವೀಂದ್ರನಾಥ ಠಾಗೂರ್, ನೆಲ್ಸನ್ ಮಂಡೇಲ, ರಾಮ ಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ, ಮುಂತಾದ ಸಮಾಜ ಸುಧಾರಕರ ಜೀವನ ಸಾಧನೆ, ಜೀವನ ಮೌಲ್ಯಗಳು, ಚಿಂತನೆಗಳು, ತುಂಬಾ ಪರಿಣಾಮ ಬೀರಿದವು. ಮುಂದೆ ಅನ್ಯಾಯ, ಅಸ್ಪೃಶ್ಯತೆ, ಅಸಮಾನತೆ, ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿ ಚಳುವಳಿ ರೂಪಿಸಲು, ಹೋರಾಟ ನಡೆಸಲು ತುಂಬಾ ಪ್ರೇರಣೆಯನ್ನು ನೀಡಿದವು. ಅಸ್ಪೃಶ್ಯತೆಯಲ್ಲಿ ಹುಟ್ಟಿದ ಕೃಷ್ಣಪ್ಪನವರು ಕಣ್ಣಾರೆ ಕಂಡ ಜಾತಿವ್ಯವಸ್ಥೆಯಲ್ಲಿ ಅಸಮಾನತೆ, ಸಮಾಜದಲ್ಲಿ ಮೇಲು ಕೀಳು, ಅನ್ಯಾಯವನ್ನು ಕಂಡು, ಅಸ್ಪೃಶ್ಯತೆಯ ಬೇಗೆಯಲ್ಲಿ ಬೆಂದರು. ಅವು ಸಹ ಮುಂದಿನ ಹೋರಾಟಕ್ಕೆ ಪ್ರೇರಣೆಯಾದವು.

ಅಡಿಟಿಪ್ಪಣಿಗಳು

೧. ಮಹೇಶ ಸಿ.ಕೆ., ೨೦೧೨, **ಶೋಷಿತರ ಹಣತೆ ಬಿ.ಕೃಷ್ಣಪ್ಪ,** ಪು.೪೩

೨. ಅದೇ, ಪು.೨೩

ಅಧ್ಯಾಯ ಮೂರು

ಬಿ.ಕೃಷ್ಣಪ್ಪನವರ ಸಮಕಾಲೀನ ಕರ್ನಾಟಕದ ವಿದ್ಯಮಾನಗಳು

ಅಧ್ಯಾಯ ಮೂರು

ಬಿ.ಕೃಷ್ಣಪ್ಪನವರ ಸಮಕಾಲೀನ ಕರ್ನಾಟಕದ ವಿದ್ಯಮಾನಗಳು

ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ಸ್ಥಾಪನೆ ಒಂದು ಮಹತ್ವದ ಘಟನೆ. ದಲಿತ ಚಳುವಳಿಯ ಚರಿತ್ರೆಯಲ್ಲಿ ಅತ್ಯಂತ ಪ್ರಮುಖ ದಾಖಲಾರ್ಹ ಘಟನೆಯಾಗಿದೆ. ಸುಮಾರು ಎರಡು ದಶಕಗಳ ಕಾಲ ಕರ್ನಾಟಕದಲ್ಲಿ ದಲಿತ ಚಳುವಳಿ ಪ್ರಖರವಾಗಿ ಉಳಿಯಲು ಸಾಧ್ಯವಾದದ್ದು ದಲಿತ ಸಂಘರ್ಷ ಸಮಿತಿಯ ಮೂಲಕ. ದಲಿತ ಚಳುವಳಿ ಅತ್ಯಂತ ಶೀಘ್ರವಾಗಿ, ವ್ಯಾಪಕವಾಗಿ ತನ್ನ ಚಟುವಟಿಕೆಗಳನ್ನು ವಿಸ್ತರಿಸಿಕೊಂಡು, ಒಟ್ಟು ಸಮಾಜದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ರಂಗದಲ್ಲಿ ತೀವ್ರತರದ ಬದಲಾವಣೆಗಳಿಗೆ ಕಾರಣವಾಯಿತು. ದಲಿತ ಸಂಘರ್ಷ ಸಮಿತಿಯ ಮರೆಯಲಾರದ ಘಟನೆಯೆಂದರೆ ದಲಿತೇತರ ಸಮುದಾಯಗಳು ದಲಿತರನ್ನು ನೋಡುವ ದೃಷ್ಟಿಕೋನವನ್ನು ಬದಲಾಗಿಯಿಸಿದ್ದಾಗಿದೆ. ಈ ಸಂದರ್ಭದಲ್ಲಿ ಸರಕಾರಗಳು ದಲಿತರನ್ನು ಒಂದು ಪ್ರಬಲಶಕ್ತಿಯೆಂದು ಪರಿಗಣಿಸಿದ್ದು ಕೃಷ್ಣಪ್ಪನವರ ಕಾಲಘಟ್ಟದಲ್ಲಿ.

ಅಮೆರಿಕದ "ಬ್ಲ್ಯಾಕ್ ಪ್ಯಾಂಥರ್ಸ್"ನ ಪ್ರಭಾವದಿಂದ ೧೯೭೦ರಲ್ಲಿ ಮಹಾರಾಷ್ಟ್ರದಲ್ಲಿ ದಲಿತ ಪ್ಯಾಂಥರ್ಸ್ ಹುಟ್ಟಿಕೊಂಡಿತು. ದಲಿತ ಪ್ಯಾಂಥರ್ಸ್ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯನ್ನು ಕೃಷ್ಣಪ್ಪ ಮತ್ತು ಸ್ನೇಹಿತರು ೧೯೭೪ರಲ್ಲಿ ಸ್ಥಾಪಿಸಿದರು. ಯಾವುದೇ ಹೋರಾಟಕ್ಕೆ ಒಂದು ಸೈದ್ಧಾಂತಿಕ ನೆಲೆ ಅವಶ್ಯಕ. ಇಂತಹ ನೆಲೆಯನ್ನು ಕೃಷ್ಣಪ್ಪನವರು ಒದಗಿಸಿಕೊಟ್ಟರು. ಇದರಿಂದ ದಲಿತ ಸಂಘರ್ಷ ಸಮಿತಿಯನ್ನು ಕರ್ನಾಟಕದ ಮನೆ ಮಾತು ಮಾಡಿದರು. ದಲಿತರಿಂದ ಆರಂಭವಾದ ದಲಿತ ಸಂಘರ್ಷ ಸಮಿತಿ ದಲಿತೇತರ ಸಮಸ್ಯೆಗಳಿಗೂ ಸ್ಪಂದಿಸಿ, ಜಾತ್ಯತೀತ ಧೋರಣೆಗಳಿಗೆ ಚಾಲನೆ ನೀಡುವಂತೆ ಆ ಕಾಲಘಟ್ಟದಲ್ಲಿ ಕೃಷ್ಣಪ್ಪನವರು ಶ್ರಮಿಸಿದರು.

ಎಪ್ಪತ್ತರ ದಶಕದ ಕಾಲಘಟ್ಟದಲ್ಲಿ ಕನ್ನಡ ನೆಲದಲ್ಲಿ ಜರುಗಿದ ಸಾಮಾಜಿಕ ರಾಜಕೀಯ ಮತ್ತು ಸಾಹಿತ್ಯ ಚಳುವಳಿಯಿಂದ ಮಾರ್ಕ್ಸ್, ಲೆನಿನ್, ಫುಲೆ, ಗಾಂಧಿ, ಅಂಬೇಡ್ಕರ್, ಪೆರಿಯಾರ್, ಜೆ.ಪಿ. ಪ್ರೇರಣೆಯಿದ್ದ ಕಾಲಘಟ್ಟವದು. ಕರ್ನಾಟಕ ರಾಜಕೀಯ ಸ್ಥಿತ್ಯಂತರಕ್ಕೆ ಎಪ್ಪತ್ತರ ದಶಕ

ಮಹತ್ವಪೂರ್ಣದ ದಶಕ. ದೇಶದಲ್ಲಿ ಇಂದಿರಾಗಾಂದಿಯವರು ಹೊಸ ರಾಜಕೀಯ ಶಕೆಯನ್ನು ಆರಂಭಿಸಿದ್ದರು. ಸ್ವತಂತ್ರ ಭಾರತದ ರಾಜಕೀಯದಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ ಎಂಬ ಹೆಬ್ಬಂಡೆಯು ಸಿಡಿದು ಎರಡು ಬಣಗಳಾಗಿ ಹೊರಹೊಮ್ಮಿತು. ಹಳೆಯ ತಲೆಮಾರಿನವರ ಸಂಸ್ಥಾ ಕಾಂಗ್ರೆಸ್ ಒಂದಾದರೆ, ಇಂದಿರಾಗಾಂಧಿಯ ನೇತೃತ್ವದಲ್ಲಿ ಜಗಜೀವನ್‌ರಾಮ್ ಅಧ್ಯಕ್ಷತೆಯಲ್ಲಿ ಆಡಳಿತ ಕಾಂಗ್ರೆಸ್ ಮತ್ತೊಂದು ರಚಿತವಾಯಿತು. ಆ ಸಂದರ್ಭದಲ್ಲಿ ಜರುಗಿದ ಸಂಸತ್ತು ಚುನಾವಣೆಯು ಇಂದಿರಾಗಾಂಧಿಯ ಕಾಂಗ್ರೆಸ್ಸಿಗರನ್ನು ಮೇಲೆತ್ತಿದರೆ, ಅದೇ ಹಳೆಯ ಕಾಂಗ್ರೆಸ್ಸಿಗರನ್ನು ಕೆಳಗುರುಳಿಸಿತು. ನಿಜಲಿಂಗಪ್ಪನವರ ಅನುಯಾಯಿಗಳಾದ ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ ಮತ್ತು ದೇವೇಗೌಡರಿಗೆ ಕರ್ನಾಟಕದಲ್ಲಿ ಮುಖಭಂಗವಾಯಿತು.

"ಇಂದಿರಾ–ಜಗಜೀವನ್‌ರಾಮರ ನೇತೃತ್ವದಲ್ಲಿ ಮುನ್ನಡೆದ ದೇವರಾಜ ಅರಸು ರಾಜ್ಯದಲ್ಲಿ ಹೊಸ ರಾಜಕೀಯ, ಸಾಮಾಜಿಕ ಸಂಯೋಜನೆಯಿಂದ ಶಕ್ತಿ ರಾಜಕಾರಣದ ಕೇಂದ್ರ ಸ್ಥಾನವನ್ನು ಆಕ್ರಮಿಸಿದರು. ಅಲ್ಪಸಂಖ್ಯಾತರ, ಹಿಂದುಳಿದವರ, ದಲಿತ(ಅಹಿಂದ) ರಾಜಕೀಯ ಅಧಿಕಾರ ವೇದಿಕೆಯನ್ನು ಸೃಷ್ಟಿಸಿದರು. ಅದರ ಪ್ರತಿಫಲವಾಗಿ ಪ್ರಪ್ರಥಮ ಬಾರಿಗೆ ಬ್ರಾಹ್ಮಣ, ವೀರಶೈವ, ಒಕ್ಕಲಿಗ ಜನಾಂಗಗಳು ಅಧಿಕಾರ ಕೇಂದ್ರದಿಂದ ಪಲ್ಲಟಗೊಂಡವು."[೧] ಅರಸು ಆಡಳಿತದ ಕಾಲಘಟ್ಟದಲ್ಲಿ ದಲಿತ ರಾಜಕಾರಣವು ಜಾಗೃತವಾಗತೊಡಗಿತು. ಎನ್.ರಾಚಯ್ಯ ಮತ್ತು ಬಸವಲಿಂಗಪ್ಪ ಆ ಸಂದರ್ಭದ ಪ್ರಮುಖ ರಾಜಕಾರಣಿಗಳು.

ಅರಸು ಆಡಳಿತ

ಪ್ರಥಮ ಬಾರಿಗೆ ಅಧಿಕಾರ ಕೇಂದ್ರದಿಂದ ದೂರ ಉಳಿದಿದ್ದ ಮೇಲ್ವರ್ಗಗಳು ಹತಾಶೆ, ಅತೃಪ್ತಿ, ಅಸಹನೆಗೆ ಒಳಗಾದವು. ಅದು ಬರೀ ಅಧಿಕಾರಿವನ್ನು ಕಳೆದುಕೊಂಡಿದ್ದರೆ ಬಹುಶಃ ಮೇಲ್ಜಾತಿಗಳು ಅಂಥ ತೀವ್ರ ಕಳವಳ, ಆತಂಕಕ್ಕೆ ಈಡಾಗುತ್ತಿರಲಿಲ್ಲವೇನೋ, ಆದರೆ ಅರಸು ಅವರ ಭೂಸುಧಾರಣಾ ಕಾನೂನು, ಹಿಂದುಳಿದವರಿಗೆ ಕಲ್ಪಿಸಿದ ಮೀಸಲಾತಿ ಮತ್ತು ಸಾಮಾಜಿಕ ಸಾಂಸ್ಕೃತಿಕ ಅಸ್ತಿತ್ವವನ್ನೇ ಬದಲಾಯಿಸಿತ್ತು. ಭೂಮಿಗೆ ಬೆವರು ಸುರಿಸದಿದ್ದರೂ ಭೂ ಮಾಲೀಕತ್ವವನ್ನು ಪಟ್ಟಾಗಿ ಹಿಡಿದುಕೊಂಡಿದ್ದ ಮೈಗಳ್ಳ ಭೂಮಾಲೀಕರ ಕಡೆಯಿಂದ, 'ಉಳುವವನೇ ಭೂ ಒಡೆಯ' ಎಂಬಂತೆ ಭೂಮಿಗೆ ಬೆವರು ಸುರಿಸುವವರ ಕೈಗಳಿಗೆ ಭೂಮಿಯ ವರ್ಗಾವಣೆ ಆಯಿತು. ಇದು ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ತಲ್ಲಣವನ್ನು ಉಂಟುಮಾಡಿತು. ಹಿಂದುಳಿದವರು ಚಲನಶೀಲತೆಯನ್ನು ಪಡೆದರು ಹಾಗೂ ಸ್ವಾಭಿಮಾನಿಗಳಾಗಿ ದುಡಿಮೆಯಿಂದ ಬದುಕಲು ಪ್ರಾರಂಭಿಸಿದರು. ಆದರೆ ಇದು ಮೇಲ್ಜಾತಿಗಳಿಗೆ ಹಿಡಿಸಲಿಲ್ಲ. ಬಿ.ಕೃಷ್ಣಪ್ಪನವರ ಕಾಲಘಟ್ಟದಲ್ಲಿ ಸಾಮಾಜಿಕ ಬದಲಾವಣೆ ಕಂಡುಬಂದವು.

ಹಾವನೂರು ವರದಿ: ಹಾವನೂರು ವರದಿಯು ಹಿಂದುಳಿದವರಿಗೆ ಕಲ್ಪಿಸಿದ ಮೀಸಲಾತಿಯ ಸವಲತ್ತು ಅವರಷ್ಟೇ ಆಗಾಧ ಪ್ರಮಾಣದ ತಲ್ಲಣವನ್ನು ಸೃಷ್ಟಿಸಿತು. ಅರಸು ಅವರ ಮತ್ತೊಂದು ಮಹತ್ತರವಾದ

ಕಾರ್ಯ ಎಂದರೆ ದಲಿತರಿಗೆ ಮುಂಬಡ್ತಿಯನ್ನು ಕಲ್ಪಿಸಿದ್ದು. ಅಲ್ಲದೇ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳಲು ಅವಶ್ಯಕವಾದ ಮೂಲ ಬಂಡವಾಳದ ಸಂಗ್ರಹಕ್ಕೆ, ಹೂಡಿಕೆಗೆ ಸಹಾಯಧನ ಒದಗಿಸಿದ್ದು.

ಬೂಸಾ ಪ್ರಕರಣ

ಕರ್ನಾಟಕದ ಮುಖ್ಯಮಂತ್ರಿ ದೇವರಾಜು ಅರಸರ ಕ್ಯಾಬಿನೆಟ್‌ನಲ್ಲಿ ಪೌರಾಡಳಿತ ಮಂತ್ರಿಗಳಾಗಿದ್ದ ಬಿ.ಬಸವಲಿಂಗಪ್ಪನವರು(೧೯೨೮-೧೯೯೨)ತಮ್ಮ ಕಾರ್ಯದಕ್ಷತೆಯಿಂದ ಪ್ರಸಿದ್ಧವಾಗಿದ್ದರು. ಮಲ ಹೊರುವುದನ್ನು ತಪ್ಪಿಸಿದರು ಹಾಗೂ ದೇವದಾಸಿ ಪದ್ಧತಿಯನ್ನು ತೊಡೆದುಹಾಕಲು ಯತ್ನಿಸಿದರು. ವೈಚಾರಿಕ ಚಿಂತನೆ, ಸ್ಪಷ್ಟವಾದ ಖಚಿತವಾದ ಆಲೋಚನೆ, ನೇರ ಮಾತುಗಾರಿಕೆ ಅವರ ಗುಣವಾಗಿತ್ತು. ತಮ್ಮ ದಿಟ್ಟ ವೈಚಾರಿಕ ಹೇಳಿಕೆಯಿಂದ ಅವರು ಹೆಸರಾಗಿದ್ದರು. ಅವರು ದೇವರ ಪಟಗಳನ್ನು ಚರಂಡಿಗೆ ಎಸೆಯಬೇಕು ಎಂದು ಹೇಳಿಕೆ ನೀಡಿದ್ದರು ಹಾಗೂ ವೇದ ಉಪನಿಷತ್ತುಗಳನ್ನು ಬಾವಿಗೆ ಎಸೆಯಿರಿ ಎಂದರು. ಗಾಂಧಿಗೆ ಸತ್ಯದ ಅರಿವು ಇರಲಿಲ್ಲ ಎಂದು ಟೀಕಿಸಿದರು. ಮೇಲ್ಜಾತಿಯ ಹುಡುಗಿಯರನ್ನು ಮದುವೆಯಾಗಿ ಜಾತಿವ್ಯವಸ್ಥೆಯನ್ನು ಮುರಿಯಿರಿ ಎಂದು ದಲಿತ ತರುಣರಿಗೆ ಕರೆ ಕೊಟ್ಟರು. ಇದೇ ತೆರನಾದ ಹೇಳಿಕೆ ಕೊಡುತ್ತಿದ್ದ ಬಸವಲಿಂಗಪ್ಪನವರು ದಲಿತರಲ್ಲಿ, ವಿಚಾರವಾದಿಗಳಲ್ಲಿ ಸಾಮಾಜಿಕ ಹೋರಾಟಕ್ಕೆ ಬೇಕಾದ ಎಚ್ಚರ ಮತ್ತು ಪ್ರೇರಣೆಗಳನ್ನು ಮೂಡಿಸುತ್ತಿದ್ದರು.

"ಬಸವಲಿಂಗಪ್ಪನವರು ಸಾಹಿತ್ಯದ ಮೇಲೆ ನೀಡಿದ ಹೇಳಿಕೆಯೊಂದನ್ನು ನೆಪವಾಗಿಟ್ಟುಕೊಂಡು ವಿವಾದ ಎಬ್ಬಿಸಲಾಯಿತು. ಬಸವಲಿಂಗಪ್ಪನವರು(೧೮-೧೧-೧೯೭೩) ಮೈಸೂರಿನಲ್ಲಿ ಅಂಬೇಡ್ಕರ್ 'ಸ್ಕೂಲ್ ಆಫ್ ಥಾಟ್ಸ್' ಎಂಬ ಸಂಸ್ಥೆಯಲ್ಲಿ 'ಹೊಸ ಅಲೆಗಳು' ಎಂಬ ವಿಷಯದ ಮೇಲೆ ಏರ್ಪಾಟಾಗಿದ್ದ ವಿಚಾರ ಸಂಕಿರಣದಲ್ಲಿ ಇಂಗ್ಲಿಷ್‌ನಲ್ಲಿ ಭಾಷಣ ಮಾಡಲು ಶುರು ಮಾಡಿದರು. ಆಗ ಸಭೆಯಲ್ಲಿದ್ದ ಕೆಲವರು ಅದಕ್ಕೆ ತಕರಾರು ಎತ್ತಿದರು. ಕನ್ನಡದಲ್ಲಿ ಮಾತನಾಡಲು ಒತ್ತಾಯಿಸಿದರು. ಇಂಥ ಕಿರಿಕಿರಿಗೆ ಸೊಪ್ಪು ಹಾಕದ ಬಸವಲಿಂಗಪ್ಪನವರು ಭಾಷಣ ಮುಂದುವರಿಸಿದರು, ಪ್ರತಿಭಟನೆ ಸ್ತಬ್ಧವಾಗಲಿಲ್ಲ. ಅದೇ ವೇಳೆಯಲ್ಲಿ ಸಭೆಯ ವ್ಯವಸ್ಥಾಪಕರಲ್ಲಿ ಒಬ್ಬರಾದ 'ಸಂಜೀವಯ್ಯ'ನವರು 'ಕನ್ನಡದಲ್ಲೇನಿದೆ ಬೂಸಾ' ಎಂದರು. ಅದನ್ನೇ ಬಸವಲಿಂಗಪ್ಪ ನವರು ೨-೩ ಬಾರಿ ಉಚ್ಚರಿಸಿದರು."೨

ಸಂಜೀವಯ್ಯನವರ ಪ್ರಾಸಂಗಿಕ ಮಾತು ಬಸವಲಿಂಗಪ್ಪನವರ ಪುನರುಚ್ಚಾರಣೆಯ ಪರಿಣಾಮವಾಗಿ ಸ್ಫೋಟಕ ಸ್ವರೂಪ ಪಡೆಯಿತು. ಮಹಾರಾಜ ಕಾಲೇಜಿನ ಸಭೆಯು ಸಣ್ಣ ಕಿಡಿಯನ್ನು ಹೊತ್ತಿಸಿ ಸಮಾಪ್ತಿಯಾಯಿತು. ಬಸವಲಿಂಗಪ್ಪನವರ ಹೇಳಿಕೆಗೆ ಸಾಮಾನ್ಯ ಓದುಗರಿಂದ ಹಿಡಿದು ಹಿರಿಯ ವಿದ್ವಾಂಸರು, ರಾಜಕಾರಣಿಗಳು, ಪರ-ವಿರೋಧದ ಪ್ರತಿಕ್ರಿಯೆ ಕೊಡತೊಡಗಿದರು. ಹೇಳಿಕೆಯನ್ನು ಬೆಂಬಲಿಸುವ ಮತ್ತು ಖಂಡಿಸುವ ಎರಡು ಬಣಗಳೇ ಏರ್ಪಟ್ಟವು. ಪೌರಾಡಳಿತ ಸಚಿವರ ವಿರುದ್ಧ ಬೃಹತ್ ಪ್ರತಿಭಟನೆಗಳು ನಡೆದವು. ಕೊನೆಗೆ ಬಸವಲಿಂಗಪ್ಪನವರು ರಾಜೀನಾಮೆ ನೀಡಿದರು.

ಈ ಸಮಕಾಲೀನ ಘಟನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಕೃಷ್ಣಪ್ಪನವರು ಬಸವಲಿಂಗಪ್ಪನವರ ಪರವಾಗಿದ್ದರು. "ಜಾತಿವ್ಯವಸ್ಥೆ ವಿರುದ್ಧ ಚಳುವಳಿ ಮಾಡುತ್ತಿದ್ದಂತಹ ಸೋಷಿಯಲಿಸ್ಟರು ಇಡೀ ಸಮಾಜವೇ ಬದಲಾವಣೆ ಆಗಬೇಕು ಅಂತ ಹೇಳಿದಂತಹ ಕಮ್ಯೂನಿಸ್ಟರು. ಬಸವಲಿಂಗಪ್ಪನವರ ಬೂಸಾ ಪ್ರಕರಣದ ಸಮಯದಲ್ಲಿ ಧ್ವನಿ ಎತ್ತಲಿಲ್ಲ"[೩] ಎಂದು ಕೃಷ್ಣಪ್ಪನವರು ಹೇಳಿದ್ದಾರೆ. ಅನಂತಮೂರ್ತಿಯವರು ಅಲ್ಲೊಂದು ಇಲ್ಲೊಂದು ಹೇಳಿಕೆಯನ್ನು ಕೊಡುತ್ತಾ ಇದ್ದರು ಬಿಟ್ಟರೆ, ಬೇರೆ ಯಾರೂ ಕೂಡ ಬಸವಲಿಂಗಪ್ಪನವರ ಪರವಾಗಿ ಸಮಾಜವಾದಿಗಳ ಕೆಲಸ ಮಾಡಲಿಲ್ಲ ಎಂದಿದ್ದಾರೆ.

ವಿವಿಧ ಸಂಘಟನೆಗಳು

ಕೃಷ್ಣಪ್ಪನವರ ದಲಿತ ಸಂಘರ್ಷ ಸಮಿತಿಯು ಅಸ್ತಿತ್ವಕ್ಕೆ ಬರುವ ಮುನ್ನ ಎಪ್ಪತ್ತರ ದಶಕದಲ್ಲಿ ವಿವಿಧ ದಲಿತ ಸಂಘಟನೆಗಳು ಇದ್ದವು. ದಲಿತ ಕ್ರಿಯಾ ಸಮಿತಿಯು ಡಿ. ತಿಮ್ಮರಾಮಪ್ಪನವರ ನೇತೃತ್ವದಲ್ಲಿ ರಚನೆಯಾಗಿತ್ತು. ಈ ಸಂಘಟನೆ ಕೋಲಾರ ಮತ್ತು ಬೆಂಗಳೂರುಗಳಲ್ಲಿ ಕ್ರಿಯಾಶೀಲವಾಗಿತ್ತು. ಇದು ೧೯೭೦ರಲ್ಲಿ ಸ್ಥಾಪಿತವಾಗಿತ್ತು. ಓ ಶ್ರೀಧರನ್, ಮುನಿವೆಂಕಟಪ್ಪ, ಬಿ. ರಾಜಣ್ಣ, ವಿ.ಟಿ.ರಾಜಶೇಖರ್ ಮುಂತಾದವರು ಗುರುತಿಸಿಕೊಂಡಿದ್ದರು.

ದಲಿತ ರಾಜಕಾರಣಿಗಳ ಸಾಮೀಪ್ಯ ಹೊಂದಿದ್ದ ದಲಿತ ಕ್ರಿಯಾ ಸಮಿತಿಯು ತನ್ನ ಇತಿಮಿತಿಯಲ್ಲಿ ದಲಿತರ ಬವಣೆಗಳ ನಿವಾರಣೆಗೆ ಕಾರ್ಯ ನಿರ್ವಹಿಸುತ್ತಿತ್ತು. ಬೂಸಾ ಪ್ರಕರಣದಲ್ಲಿ ಬಿ.ಬಸವಲಿಂಗಪ್ಪನವರಿಗೆ ನೈತಿಕ ಬೆಂಬಲ ನೀಡಿದ್ದ ಸಂಘಟಕರ ಆಗಿನ ನಿಲುವು ಉತ್ತಮವಾಗಿತ್ತು. ಇದೇ ವೇಳೆಯಲ್ಲಿ ಮೈಸೂರಿನ ಆದಿಜಾಂಬವ ಸಂಘ, ಛಲವಾದಿ ಸಂಘ ಮತ್ತು ಹೊಲೆ ಮಾದಿಗರನ್ನು ಒಳಗೊಂಡ ಆದಿಕರ್ನಾಟಕ ಸಂಘಟನೆಗಳು, ರಚನೆಯಾಗಿದ್ದವು. ಬೆಳಗಾಂ, ಧಾರವಾಡ, ಬಿಜಾಪುರ ಮತ್ತಿತರ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ದಲಿತ ಪ್ಯಾಂಥರ್ಸ್, ಭೀಮಾಸೇನಾ ಇತ್ಯಾದಿ ಸಂಘಟನೆಗಳಿದ್ದವು. ಇದೇ ಸಂದರ್ಭದಲ್ಲಿ ಶಿವಮೊಗ್ಗದಲ್ಲಿ ದಲಿತರು ವಿಶೇಷವಾಗಿ ಭದ್ರಾವತಿಯಲ್ಲಿ ಕ್ರಿಯಾಶೀಲರಾಗಿದ್ದರು. ಬಿ.ಕೃಷ್ಣಪ್ಪನವರು ಅಲ್ಲಿ ದಲಿತರನ್ನು ಜಾಗೃತಗೊಳಿಸುತ್ತಿದ್ದರು. ತರುವಾಯ ಪ್ರೊ.ಬಿ.ಕೃಷ್ಣಪ್ಪನವರು ಕೆಲವು ಒಡನಾಡಿಗಳೊಡಗೂಡಿ ದಲಿತ ಸಂಘರ್ಷ ಸಮಿತಿಯನ್ನು ೧೯೭೪ರಲ್ಲಿ ಸ್ಥಾಪಿಸಿದರು ಹಾಗೂ ದಲಿತ ವೇದಿಕೆಯನ್ನು ಇದರೊಳಗೆ ವಿಲೀನಗೊಳಿಸಿದರು. ದಕ್ಷಿಣ ಭಾರತದ ಪ್ರಬಲ ದಲಿತ ಚಳುವಳಿಯಾಗಿ ಬೆಳೆದ ದಲಿತ ಸಂಘರ್ಷ ಸಮಿತಿಯು ಸಹಕಾರಿ ಸಂಘಗಳ ಕಾನೂನಿನಡಿಯಲ್ಲಿ ನೋಂದಾಯಿಸಲ್ಪಟ್ಟ ಸಂಘಟನೆ. ಇದರ ಸ್ಥಾಪಿತ ಅಧ್ಯಕ್ಷರು ಎನ್.ಗಿರಿಯಪ್ಪನವರು. ದಲಿತರ ಬಗ್ಗೆ ಕಾಳಜಿ ಇದ್ದ ಇವರನ್ನು ಸಂಸ್ಥಾಪಕ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಚಂದ್ರಪ್ರಸಾದ್ ತ್ಯಾಗಿ, ಈರಯ್ಯ, ಎಸ್.ಟಿ.ರಾಜು, ಬಿ.ರಾಜಣ್ಣ ಇತರರು ದಲಿತ ಸಂಘರ್ಷ ಸಮಿತಿಯ(ಭದ್ರಾವತಿ) ಆರಂಭಿಕ

ಕಾರ್ಯಕರ್ತರಾಗಿದ್ದರು. ಕೃಷ್ಣಪ್ಪನವರ ಮಾರ್ಗದರ್ಶನದಲ್ಲಿ ದಲಿತ ಸಂಘರ್ಷ ಸಮಿತಿಯು ಭದ್ರಾವತಿಯಲ್ಲಿ ಆರಂಭಿಕ ಹೆಜ್ಜೆಗಳನ್ನಿಟ್ಟಿತು.

ದಲಿತ ಸಂಘರ್ಷ ಸಮಿತಿ ಸ್ಥಾಪಿತವಾದ ನಂತರ ಬಿ.ಕೃಷ್ಣಪ್ಪನವರು ರಾಜ್ಯದ ವಿವಿಧೆಡೆ ಬೇರೆ-ಬೇರೆ ಹೆಸರುಗಳ ಸಂಘಟನೆಗಳು ದಲಿತರ ಪರ ಕಾರ್ಯ ನಿರ್ವಹಿಸುತ್ತಿದ್ದ ದಲಿತರೊಡನೆ ಸಂವಾದ ನಡೆಸಿದರು. ಸಾಮಾಜಿಕ ಪರಿವರ್ತನೆ ಮತ್ತು ಆರ್ಥಿಕ ಆಂದೋಲನಕ್ಕೆ ಹೊಸದೊಂದು ವೇದಿಕೆ ಅಗತ್ಯವೆಂದು ತಿಳಿಸಿದರು. ೧೯೭೪ರ ಹೊತ್ತಿಗಾಗಲೇ "ಮಾರಿಕೊಂಡವರು" ಕತೆಯ ಮೂಲಕ ಸಾಹಿತ್ಯ ವಲಯದಲ್ಲಿ ಪರಿಚಿತರಾಗಿದ್ದ ಹಾಗೂ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಬಳಿ ಸಮಾಜವಾದ ಮತ್ತು ಗಾಂಧಿವಾದದ ಬಗ್ಗೆ ತರಬೇತಿ ಪಡೆಯುತ್ತಿದ್ದ ದೇವನೂರ ಮಹಾದೇವ ಅವರು ಸಹ ಪ್ರೊ.ಬಿ.ಕೃಷ್ಣಪ್ಪನವರಿಗೆ ಪರಿಚಿತರಾಗಿದ್ದರು. ಕಮ್ಯೂನಿಸ್ಟರ ಪಾಠಕ್ಕೆ ಒಲಿದ ಸಿದ್ಧಲಿಂಗಯ್ಯ ಕಾಮ್ರೇಡ್ಗಳ ಮತ್ತು ಕಮ್ಯೂನಿಸ್ಟ್ ನಾಯಕರ ಮೆಚ್ಚಿನ ವಿದ್ಯಾರ್ಥಿಯಾಗಿದ್ದರು. ಸೂರ್ಯನಾರಾಯಣ ರಾವ್, ಎಂ.ಕೆ.ಭಟ್, ಜಿ.ರಾಮಕೃಷ್ಣ ಮತ್ತಿತರ ಕಾಮ್ರೇಡ್‌ಗಳ ನಿಕಟದಲ್ಲಿ ಬೆಳೆಯುತ್ತಿದ್ದ ಸಿದ್ಧಲಿಂಗಯ್ಯ ನವರ ಪರಿಚಯವೂ ಇತ್ತು. ಅದೇ ರೀತಿಯಲ್ಲಿ ಮೈಸೂರು, ಬೆಂಗಳೂರು, ಕೋಲಾರ, ಚಿಕ್ಕಮಗಳೂರು, ಹಾಸನ, ತುಮಕೂರು, ಚಿತ್ರದುರ್ಗ, ಧಾರವಾಡ, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ಕ್ರಿಯಾಶೀಲರಾಗಿದ್ದ ದಲಿತ ಮತ್ತು ದಲಿತೇತರ ಪ್ರಗತಿಪರರು ಕೃಷ್ಣಪ್ಪನವರ ಸಂಪರ್ಕದಲ್ಲಿದ್ದರು. ಎಲ್ಲರ ಸಹಕಾರ ಮತ್ತು ಕ್ರಿಯಾಶೀಲ ಭಾಗವಹಿಸುವಿಕೆಯು ಇರದೆ ದಲಿತ ಸಂಘರ್ಷ ಸಮಿತಿಯು ರಾಜ್ಯದೆಲ್ಲೆಡೆಗೆ ಪಸರಿಸುವುದು ಕನಸಿನ ಮಾತು ಎಂದು ಅರಿತಿದ್ದ ಪ್ರೊ.ಬಿ.ಕೃಷ್ಣಪ್ಪನವರು ಆ ದಿಸೆಯಲ್ಲಿ ಗಂಭೀರವಾದ ಕಾರ್ಯದಲ್ಲಿ ನಿರತರಾದರು. ಅದರ ಪ್ರತಿಫಲವಾಗಿ ಭದ್ರಾವತಿಯಲ್ಲಿ ೧೯೭೪ರಲ್ಲಿ ಡಿಸೆಂಬರ್ ೨೮, ೨೯, ೩೦ರಂದು ಮೂರು ದಿನಗಳ ರಾಜ್ಯಮಟ್ಟದ ದಲಿತರ ಸಮಾವೇಶವನ್ನು ಆಯೋಜಿಸಲಾಯಿತು. ಸಮಾವೇಶಕ್ಕೆ ರಾಜ್ಯದ ಎಲ್ಲ ದಿಕ್ಕುಗಳಿಂದ ದಲಿತ ಯುವಕರು ಧಾವಿಸಿದರು.

ವಿದ್ಯಾರ್ಥಿಗಳು, ನೌಕರರು ಮತ್ತು ಶ್ರಮಿಕರು ಎಲ್ಲರೂ ಒಗ್ಗೂಡಿದ ಸಮಾವೇಶವಾದರೂ ಅದೊಂದು ಚಿಂತನ ಮಂಥನದ ಕಾರ್ಯಾಗಾರವಾಗಿತ್ತು. ದಲಿತರ ಜ್ವಲಂತ ಸಮಸ್ಯೆಗಳು ಮತ್ತು ಪರಿಹಾರಗಳ ಕುರಿತು ಸಂವಾದಗಳು ನಡೆದವು. ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವಿಷಯಗಳು ಚರ್ಚೆಯ ಪ್ರಧಾನ ವಿಷಯಗಳಾಗಿದ್ದವು. ವಾಸ್ತವಿಕವಾಗಿ ದಲಿತ ಸಂಘರ್ಷ ಸಮಿತಿಯ ಮೂರು ದಿನಗಳ ಸಮಾವೇಶವು ಮಹತ್ವವಾದದ್ದು. ದಲಿತರು ದಲಿತರಿಂದ ದಲಿತರಿಗೋಸ್ಕರವೇ ಆಯೋಜಿಸಿದ ಚಿಂತನ ಮಂಥನದ ರಾಜ್ಯಮಟ್ಟದ ದಲಿತರ ಪ್ರಪ್ರಥಮ ಜಾಗೃತಿಯ ಸಮಾವೇಶವದು. ಪ್ರಾಚೀನ ಕಾಲದಿಂದಲೂ ವೈದಿಕಸಂಸ್ಕೃತಿಯ ವಿರುದ್ಧ ಸಂಘರ್ಷಿಸುತ್ತಾ ಬಂದಿರುವ ಚರಿತ್ರೆ, ಸಂಘರ್ಷಕರ ಬದುಕು, ವಿಚಾರ, ಕ್ರಿಯೆಗಳು ಸಮಾವೇಶದಲ್ಲಿ ವಿಸ್ತೃತವಾಗಿ ಪ್ರಸ್ತಾಪಿಸಲ್ಪಟ್ಟವು. ಬೌದ್ಧರ, ಚಾರ್ವಾಕರ, ವಚನಕಾರರ ಚಿಂತನೆಗಳು, ಚರ್ಚೆಯ ವಿಷಯಗಳಾಗಿದ್ದವು. ಇಡೀ ಸಮಾವೇಶವು

ಅಂಬೇಡ್ಕರ್‌ಮಯವಾಗಿದ್ದೊಂದು ಚಾರಿತ್ರಿಕ ಘಟನೆ. ಪ್ರತಿಯೊಬ್ಬ ವಿಷಯ ಮಂಡಕರೂ ಅಂಬೇಡ್ಕರರು ದಲಿತರಿಗಾಗಿ ಪಟ್ಟ ಪರಿಶ್ರಮವನ್ನು ಸ್ಮರಿಸುತ್ತಿದ್ದರು. ಅಂಬೇಡ್ಕರರ ಜೀವನ, ಹೋರಾಟ, ತತ್ವಸಿದ್ಧಾಂತಗಳು, ಚಿಂತನೆಗಳು ಪ್ರಧಾನವಾಗಿ ಉಲ್ಲೇಖಿಸಲ್ಪಟ್ಟವು.

ಆ ಕಾಲಘಟ್ಟದಲ್ಲಿ ಅಂಬೇಡ್ಕರರ ಭಾವಚಿತ್ರಗಳು ಸುಲಭವಾಗಿ ಲಭಿಸುತ್ತಿರಲಿಲ್ಲ. ಅದಕ್ಕೆ ಕಾರಣ ದಲಿತೋದ್ಧಾರಕ, ದಲಿತರ ವಿಮೋಚನೆಗಾರ, ಗಾಂಧೀಜಿ ಎಂದು ಪ್ರಬಲವಾಗಿ ಬಿಂಬಿಸಿದ್ದರು ಹಾಗೂ ಅಂಬೇಡ್ಕರರನ್ನು ನೇಪಥ್ಯಕ್ಕೆ ತಳ್ಳಲಾಯಿತು. ಅಂಥ ಕಾಲಘಟ್ಟದಲ್ಲಿ ಕೃಷ್ಣಪ್ಪನವರು ಅಂಬೇಡ್ಕರ್ ವಿಚಾರಧಾರೆಯನ್ನು ದಲಿತರಿಗೆ ತಿಳಿಸುವ ಕೆಲಸವನ್ನು ಈ ವೇದಿಕೆ ಮೂಲಕ ಮಾಡಿದರು.

ದಲಿತ ಸಂಘರ್ಷ ಸಮಿತಿಯ ವಿವಿಧ ಒಕ್ಕೂಟಗಳು

ಪ್ರೊ.ಬಿ.ಕೃಷ್ಣಪ್ಪನವರ ಬಿರುಸಿನ ತಿರುಗಾಟ ಮತ್ತು ಅವಿಶ್ರಾಂತ ದುಡಿಮೆಯ ಫಲವಾಗಿ ಅತಿವೇಗದಲ್ಲಿ ದಲಿತ ಸಂಘರ್ಷ ಸಮಿತಿಯ ಶಾಖೆಗಳು ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ, ಹೋಬಳಿಗಳಲ್ಲಿ ಮತ್ತು ಗ್ರಾಮಗಳಲ್ಲಿ ತೆರೆಯಲ್ಪಟ್ಟವು. ಸಾವಿರಾರು ದಲಿತ ಯುವಕರು ಚಳುವಳಿಯ ಕಾರ್ಯಕರ್ತರಾಗಿ ಶ್ರಮಿಸಲು ಮುಂದಾದರು. ದಲಿತರ ಧ್ವನಿಯು ಎಲ್ಲೆಲ್ಲೂ ಕೇಳಲಾರಂಭಿಸಿತು. ಅವರ ಚಿಂತನೆಗಳು ಹರಿದಾಡತೊಡಗಿದವು. ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಕವಾಗಿ ಅಲ್ಪಸ್ವಲ್ಪ ಸುಧಾರಿಸಿಕೊಂಡಿದ್ದ ದಲಿತರೆಲ್ಲರನ್ನು ದಲಿತ ಚಳುವಳಿಯೊಳಗೆ ಕ್ರಿಯಾಶೀಲಗೊಳಿಸಲು ಪ್ರೊ.ಬಿ.ಕೃಷ್ಣಪ್ಪನವರು ಅಪೇಕ್ಷಿಸಿದರು. ಅದಕ್ಕಾಗಿ ದಲಿತ ಸಂಘರ್ಷ ಸಮಿತಿಯೇ ವಿವಿಧ ಒಕ್ಕೂಟಗಳನ್ನು, ವೇದಿಕೆಯನ್ನು ರಚಿಸಿತು.

ಪ್ರಮುಖ ದಲಿತ ಒಕ್ಕೂಟಗಳು

* ದಲಿತ ಲೇಖಕರ ಮತ್ತು ಕಲಾವಿದರ ಒಕ್ಕೂಟ
* ದಲಿತ ವಿದ್ಯಾರ್ಥಿಗಳ ಒಕ್ಕೂಟ
* ದಲಿತ ಮಹಿಳಾ ಒಕ್ಕೂಟ
* ದಲಿತ ನೌಕರರ ಒಕ್ಕೂಟ
* ದಲಿತ ಕಲಾಮಂಡಳಿ

ಈ ತೆರನಾದ ದಲಿತರ ಒಕ್ಕೂಟಗಳ ಮೂಲಕ ದಲಿತ ಸಂಘರ್ಷ ಸಮಿತಿಯಿಂದ ದಲಿತ ಜಾಗೃತಿ ಮೂಡಿಸಿದರು. ೧೯೭೪ರಿಂದ ಈಚೆಗೆ ನಡೆದ ಚಳುವಳಿಗಳು ಮತ್ತು ಅನೇಕ ಘಟನೆಗಳು ದಲಿತ ಸಾಹಿತ್ಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವವನ್ನು ಬೀರಿದವು. ಅವುಗಳನ್ನು ಹೀಗೆ ಗುರುತಿಸಬಹುದು.

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ನಡೆದ ರಾಷ್ಟ್ರ ಚಳುವಳಿಯಿಂದ ಪ್ರೇರಿತರಾದ ಹಲವಾರು ಜನ ಗಾಂಧಿ ಅನುಯಾಯಿಗಳು ದಲಿತೋದ್ಧಾರದಂತಹ ಪ್ರಗತಿ, ರಾಮಚಂದ್ರರಾಯರು, ಕುದ್ಮುಲ್ ರಂಗರಾಯರು, ಹರ್ಡೇಕರ್ ಮಂಜಪ್ಪ, ಕಾರ್ನಾಡ ಸದಾಶಿವರಾವ್, ಸಿ.ಆರ್.ರೆಡ್ಡಿ ಮೊದಲಾದವರು ದಲಿತರಲ್ಲಿ ಹುಟ್ಟಿಸಿದ ಸ್ವಾಭಿಮಾನಕ್ಕೆ ಚಾರಿತ್ರಿಕ ಮಹತ್ವ ಇದೆ. ಅನಂತರ ತುಂಬ ಮುಖ್ಯವಾದ ಘಟನೆ ೧೯೬೯ರಲ್ಲಿ ನಡೆಯಿತು. ಆಗಿನ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ದೇವರಾಜು ಅರಸರ ನೇತೃತ್ವದಲ್ಲಿ ಎ.ಜಿ.ಹಾವನೂರರು ಮಂಡಿಸಿದ ದಿನದಂದು ನಡೆಸಿದ ಆಂದೋಲನದಿಂದಾಗಿ ದಲಿತ ಬುದ್ಧಿಜೀವಿಗಳೆಲ್ಲ ಒಂದು ನಿರ್ದಿಷ್ಟ ಕಾರಣಕ್ಕೆ ಒಂದುಗೂಡಿದಂತಾಯಿತು. ಮುಂದೆ ೧೯೭೩ರಲ್ಲಿ ರಾಜಕಾರಣಿಯಾಗಿದ್ದ ಬಸವಲಿಂಗಪ್ಪನವರು ದಲಿತರು ತಲೆಯಲ್ಲಿ ಮಲ ಹೊರುವುದನ್ನು ನಿಲ್ಲಿಸಲು ಕೂಗೆಬ್ಬಿಸಿದರು. ಇದರ ಪರಿಣಾಮವಾಗಿ ೧೯೭೩ ಆಗಸ್ಟ್‌ನಲ್ಲಿ ಮೈಸೂರಿನಲ್ಲಿ 'ಜಾತಿವಿನಾಶ' ಸಮ್ಮೇಳನ ನಡೆಯಿತು. ಆ ಸಮ್ಮೇಳನದ ಹಿಂದೆ ಲೋಹಿಯಾ ಅವರ ವೈಚಾರಿಕತೆಯಿತ್ತು. ಲಂಕೇಶ್, ತೇಜಸ್ವಿ, ರಾಮದಾಸ್, ಶ್ರೀಕೃಷ್ಣ ಆಲನಹಳ್ಳಿ, ದೇವನೂರ ಮಹಾದೇವ, ಸಿದ್ಧಲಿಂಗಯ್ಯ ಮುಂತಾದವರು ಈ ಸಮ್ಮೇಳನದಲ್ಲಿ ಪಾಲ್ಗೊಂಡು ಕರ್ನಾಟಕದಾದ್ಯಂತ ಒಂದು ರೀತಿಯ ಸಂಚಲನವನ್ನು ಉಂಟು ಮಾಡಿದರು. ಇವರು ಮುಂದೆ ೧೯೭೪ ಏಪ್ರಿಲ್‌ನಲ್ಲಿ "ಬರಹಗಾರರ ಕಲಾವಿದರ ಒಕ್ಕೂಟ"ವನ್ನು ರಚಿಸಿ ಮೈಸೂರಿನಲ್ಲಿ ಸಮ್ಮೇಳನ ಮಾಡಿದರು.

ಶೂದ್ರಪ್ರಜ್ಞೆ ಮತ್ತೊಮ್ಮೆ ಸ್ವಾಭಿಮಾನದ ಸಂಕೇತವಾಯಿತು. ಆ ಸಮ್ಮೇಳನದಲ್ಲಿ ಕುವೆಂಪು ಅವರು ಮಾಡಿದ ಉದ್ಘಾಟನಾ ಭಾಷಣ ಅನೇಕರ ರಕ್ತವನ್ನು ಬೆಚ್ಚಗಾಗಿಸಿತ್ತು. "ಕನ್ನಡ ಸಾಹಿತ್ಯದಲ್ಲಿ ಎಲ್ಲವೂ ಬೂಸಾ" ಎಂದು ಹೇಳಿದ ಬಸವಲಿಂಗಪ್ಪನವರು ಆ ಕಾರಣಕ್ಕಾಗಿ ತಮ್ಮ ಮಂತ್ರಿಪದವಿಯನ್ನು ಕಳೆದುಕೊಂಡರು. ಅಸ್ವಸ್ಥಚಿತ್ತರಾಗಿ ನಿದ್ರಿಸುತ್ತಿದ್ದ ಸಾಂಪ್ರದಾಯಿಕ ಸಂಗತಿಗಳ ಚಿತ್ರವನ್ನು ಕೆಡಿಸುವುದರಲ್ಲಿ ಮೈಕೊಡವಿ ನಿಲ್ಲುವಂತಾಯಿತು. ದಲಿತರಲ್ಲಿ ಉಂಟಾದ ಎಚ್ಚರದ ಪರಿಣಾಮವಾಗಿ ೧೯೭೪ರಲ್ಲಿ ಭದ್ರಾವತಿಯಲ್ಲಿ ದಲಿತ ಸಂಘರ್ಷ ಸಮಿತಿಯು ರೂಪುಗೊಂಡಿತು. ದಲಿತರ ಸಂರಕ್ಷಣೆಗೆ ನಾಂದಿಯನ್ನು ಹಾಡಿತು. ಕರ್ನಾಟಕದಾದ್ಯಂತ ಹರಡಿಕೊಂಡ ದಲಿತ ಸಂಘರ್ಷ ಸಮಿತಿಯು ದಲಿತರ ಮೇಲಾಗುವ ದೌರ್ಜನ್ಯದ ವಿರುದ್ಧ ಎತ್ತಿದ ಧ್ವನಿ ಅಸಾಧಾರಣವಾದುದ್ದು. ಮುಂದೆ ಇದು 'ದಲಿತ ವಿದ್ಯಾರ್ಥಿ ಒಕ್ಕೂಟ', 'ದಲಿತ ಮಹಿಳಾ ಒಕ್ಕೂಟ', 'ದಲಿತ ಕಲಾವಿದರ ಒಕ್ಕೂಟ', 'ದಲಿತ ನೌಕರರ ಒಕ್ಕೂಟ', 'ದಲಿತ ವೈದ್ಯರ ಒಕ್ಕೂಟ' ಮುಂತಾದ ಹಲವು ಹತ್ತು ಸಂಘ ಸಂಸ್ಥೆಗಳು ಹುಟ್ಟಿ ಬೆಳೆಯಲು ಕಾರಣವಾಯಿತು. ಕೃಷ್ಣಪ್ಪನವರ ನಾಯಕತ್ವ ಗುಣದಲ್ಲಿ ದಲಿತರನ್ನು ಒಗ್ಗೂಡಿಸಿ ದಲಿತ ಧ್ವನಿ ಬೀದಿ ಬೀದಿಯಲ್ಲಿ ಮೊಳಗಿಸಲು ದಲಿತ ಸಂಘರ್ಷ ಸಮಿತಿ ಪ್ರಮುಖ ಕಾರಣವಾಯಿತು.

೧೯೭೯ ಮಾರ್ಚ್ ೧೦ರಂದು ಧರ್ಮಸ್ಥಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಗೋಪಾಲಕೃಷ್ಣ ಅಡಿಗರು ಅಧ್ಯಕ್ಷರಾಗಿದ್ದರು. ಈ ಸಮ್ಮೇಳನದಲ್ಲಿ ದಲಿತ ಸಾಹಿತ್ಯದ ಬಗ್ಗೆ ಪ್ರತ್ಯೇಕ ಗೋಷ್ಠಿಯನ್ನು

ನಡೆಸಲು ಕನ್ನಡ ಸಾಹಿತ್ಯ ಪರಿಷತ್ತು ಒಪ್ಪದೆ ರದ್ದಾದ್ದರಿಂದ, ದಲಿತಪರ ಬಂಡಾಯ ಸಾಹಿತಿಗಳೆಲ್ಲರು ಪ್ರತ್ಯೇಕವಾಗಿ ಸಮ್ಮೇಳನ ನಡೆಸಲು ಸಿದ್ಧರಾದರು. ಅದುವರೆಗೆ ಸಾಹಿತಿಗಳಲ್ಲಿ ಬೆಳೆದುಬಂದಿದ್ದ ಅಸಮಾಧಾನ ಸ್ಫೋಟಗೊಳ್ಳಲು ಧರ್ಮಸ್ಥಳ ಸಾಹಿತ್ಯ ಸಮ್ಮೇಳನ ಒಂದು ನೆಪವಾಯಿತು. ಆಗ ಬಂಡಾಯ ಚಳುವಳಿಯಲ್ಲದೆ ಅನೇಕ ದಲಿತ ಬಂಡಾಯಗಾರರು ಬೇರ್ಪಟ್ಟರು. ಅವರು ಧಾರವಾಡದಲ್ಲಿ ದಲಿತ ಕಲಾವಿದರ ಬಳಗವನ್ನು ರಚಿಸಿಕೊಂಡರು.

ದಲಿತ ಸಾಹಿತ್ಯದ ಉಗಮವನ್ನು ಸಾರಿದ್ದು ಸಣ್ಣ ಕಥೆಗಳೇ ಅದರೂ, ಈ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡದ್ದು ಕಾವ್ಯ. ಈ ಕಾವ್ಯ ಪ್ರಕಾರ ಸ್ಫೋಟಗೊಂಡಿದ್ದು ಸಿದ್ಧಲಿಂಗಯ್ಯನವರ "ಹೊಲೆಮಾದಿಗರ ಹಾಡು" ಕವನ ಸಂಕಲನದಿಂದ ಎಂದು ಹೇಳಬಹುದು. ತಮ್ಮ ಸಂಕಲನದ ಕವನಗಳನ್ನು "ಗಟ್ಟಿಯಾಗಿ, ಲಯಬದ್ಧವಾಗಿ ಹಾಡಿದಾಗ, ಓದಿಕೊಂಡಾಗ ಮಾತ್ರ ತಿಳಿಯುತ್ತದೆಂದು ತಮ್ಮ ಉದ್ದೇಶವನ್ನು ಸ್ಪಷ್ಟಪಡಿಸಿದರು." ಈ ಸಂಕಲನದ ಕೆಲವು ಕವನ ಭಾಗಗಳನ್ನು ಇಲ್ಲಿ ಗುರುತಿಸಬಹುದು.

> "ಇಕ್ರಲಾ ವದೀರ್ಲಾ
> ಈ ನನ್ ಮಕ್ಕಳ್ ಚರ್ಮ ಎಬ್ರಲಾ
> ದೇವ್ರು ಒಂದೇ ಅಂತಾರೆ
> ಓಣಿಗೊಂದೊಂದು ತರಾ ಗುಡಿ ಕಟ್ಟವ್ರೇ
> ಎಲ್ಲಾರೂ ದೇವ್ರು ಮಕ್ಕಳು ಅಂತಾರೆ
> ಹೊಲೇರ್ನ ಕಂಡ್ರೆ ಹಾವ ಕಂಡಂಗಾಡ್ತಾರೆ"

ಎಂದು ನಮ್ಮ ಸಾಮಾಜಿಕ ವ್ಯವಸ್ಥೆಯ ಧಾರ್ಮಿಕ ನೆಲೆಯನ್ನು ಕುರಿತು ಈ 'ಒಂದು ಪದ' ಎಂಬ ಕವನವು ತುಂಬಾ ಮೌಲ್ಯಯುತವಾಗಿದೆ. ಸಣ್ಣ ಕಥೆಯ ಸಂದರ್ಭದಲ್ಲಿ ದಲಿತ ಸಾಹಿತ್ಯ ಚಳುವಳಿಯ ಅತ್ಯಂತ ಪ್ರಮುಖ ಬರಹಗಾರ ದೇವನೂರ ಮಹಾದೇವ. ೧೯೭೩ರಲ್ಲಿ "ದ್ಯಾವನೂರು" ಕಾಥಾ ಸಂಕಲನದ ಮೂಲಕ ದಲಿತ ಲೇಖಕರಾಗಿ ಗುರುತಿಸಿಕೊಂಡರು. ಈ ಕಥಾಸಂಕಲನದ 'ಮಾರಿ ಕೊಂಡವರು', 'ಒಂದು ದಹನದ ಕತೆ', 'ಡಾಂಬರು ಬಂದುದ್ದು', 'ಗ್ರಸ್ತರು' ಇತ್ಯಾದಿ ಕಥೆಗಳು ತುಂಬಾ ಪ್ರಮುಖವಾದವು. ಹಾಗೆಯೇ ಅವರ 'ಒಡಲಾಳ' ಎಂಬ ನೀಳ್ಗತೆಯಲ್ಲಿ ಸಾಕವ್ವನ ಪಾತ್ರದ ಮೂಲಕ ದಲಿತ ಸಮಾಜವನ್ನು ಪ್ರತಿಬಿಂಬಿಸಿದರು. ಇದೇ ಸಂದರ್ಭದಲ್ಲಿ ಕುಂ.ವೀರಭದ್ರಪ್ಪ, ಚೆನ್ನಣ್ಣ ವಾಲೀಕಾರ, ಮ.ನ.ಜವರಯ್ಯ, ಮೊಗಳ್ಳಿ ಗಣೇಶ್, ಅರವಿಂದ ಮಾಲಗತ್ತಿ ಮುಂತಾದವರು ಕಥಾಸಾಹಿತ್ಯ ಸಂದರ್ಭದ ಪ್ರಮುಖರು. ಕಾದಂಬರಿಯಲ್ಲಿ ಮುಳ್ಳೂರು ನಾಗರಾಜ್ ಅವರ "ಮರಣ

ಮಂಡಲಮಧ್ಯದೊಳಗೆ" ಮ.ನ.ಜವರಯ್ಯನವರ 'ಮಾಗಿ' ಅರವಿಂದ ಮಾಲಗತ್ತಿರ 'ಕಾರ್ಯ', ದೇವನೂರು 'ಕುಸುಮ ಬಾಲೆ'. ಮುಂಕದ ಕೃತಿಗಳು ಬಿ.ಕೃಷ್ಣಪ್ಪರವರ ಸಮಕಾಲೀನ ಪ್ರಮುಖ ಸಾಹಿತಿಗಳ ಕೃತಿಗಳಾಗಿವೆ.

ಪ್ರಥಮ ರಾಜ್ಯ ಸಂಚಾಲಕರು : ದಲಿತ ಸಮಾವೇಶ ನಂತರ ನಡೆದ ಸಭೆಯಲ್ಲಿ ರಾಜ್ಯ ಸಂಚಾಲಕರ ಮತ್ತು ರಾಜ್ಯ ಸಮಿತಿಯು ರಚನೆಯಾಯಿತು. ದಲಿತ ಸಂಘರ್ಷ ಸಮಿತಿಯ ಪ್ರಥಮ ರಾಜ್ಯ ಸಂಚಾಲಕರಾಗಿ ಪ್ರೊ.ಬಿ.ಕೃಷ್ಣಪ್ಪನವರು ಒಕ್ಕೊರಲಿನಿಂದ ಆಯ್ಕೆ ಆದರು. ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಗೋವಿಂದಯ್ಯ, ನಾರಾಯಣಸ್ವಾಮಿ, ಕೆ.ಬಿ.ಸಿದ್ಧಯ ಮತ್ತು ದಲಿತ ಬಂಡಾಯಗಾರರು, ಚಿಂತಕರು, ಹೋರಾಟಗಾರರು ರಾಜ್ಯ ಸಮಿತಿಯ ಸದಸ್ಯರಾದರು.

ಕೃಷ್ಣಪ್ಪನವರು ಸಂಘಟಿಸಿದ ಮುಖ್ಯ ಹೋರಾಟಗಳು

* "ಭೂ ಹೋರಾಟಗಳು: ಹೊನ್ನಾಳಿ ತಾಲ್ಲೂಕಿನ ಕ್ಯಾಸನಕೆರೆ ಭೂಹೋರಾಟ, ೧೯೭೬ರಲ್ಲಿ ಸಿದ್ಧಲಿಪುರದ ಭೂಹೋರಾಟ(ಭದ್ರಾವತಿ), ಧಾರವಾಡ ಜಿಲ್ಲೆ ದಮ್ಮಿನಾಳ ಭೂ ಹೋರಾಟ (೧೯೭೬), ಹಾಸನ ಜಿಲ್ಲೆಯ ಭೂಹೋರಾಟ ಇನ್ನೂ ಮುಂತಾದ ಹೋರಾಟ ಮಾಡಿದ್ದಾರೆ.
* ನಿವೇಶನ ಹೋರಾಟಗಳು
* ದಲಿತ ಕ್ರೈಸ್ತರಿಗೆ ಮೀಸಲಾತಿ ಆಂದೋಲನ
* ಬೆತ್ತಲೆಸೇವೆ ನಿಷೇಧಕ್ಕಾಗಿ ಹೋರಾಟ: ಈ ಹೋರಾಟ ಕರ್ನಾಟಕದ ಚಾರಿತ್ರಿಕವಾದ ಒಂದು ಚಳುವಳಿಯ ಭಾಗವೆಂದು ಹೇಳಬಹುದು. ಕೃಷ್ಣಪ್ಪನವರ ಕಾಲಘಟ್ಟದಲ್ಲಿ ಮೂಢನಂಬಿಕೆಯಿಂದ ನಡೆಯುತ್ತಿದ್ದ ಈ ಅಂಧಾಚರಣೆಯನ್ನು ಚಳುವಳಿ ಮೂಲಕ ಜನಜಾಗೃತಿ ಮೂಡಿಸಿದರು."[೪]
* ಕುಡಿಯುವ ನೀರಿಗಾಗಿ ಹೋರಾಟ ಮತ್ತು ದೇವಸ್ಥಾನ ಪ್ರವೇಶಕ್ಕಾಗಿ ಹೋರಾಟಗಳು, ಅಸ್ಪೃಶ್ಯತೆಯ ಮತ್ತು ಸಮುದಾಯ ಬಹಿಷ್ಕಾರಗಳ ವಿರುದ್ಧ ಸಂಘಟಿಸಿದ ಹೋರಾಟಗಳು.
* ಬೆಂಡಿಗೇರಿ ಪ್ರಕರಣ: ಅಸ್ಪೃಶ್ಯರಿಗೆ ಬಲವಂತವಾಗಿ ಮಲ ತಿನಿಸಿದ ಪ್ರಕರಣದ ವಿರುದ್ಧ ಕೃಷ್ಣಪ್ಪನವರು ಚಳುವಳಿ ಮಾಡಿದರು.

ಈ ಮುಂತಾದ ಸಂದರ್ಭಗಳು ಕೃಷ್ಣಪ್ಪನವರ ಸಮಕಾಲೀನ ಪ್ರಮುಖ ಘಟನೆಗಳು ಎಂದು ಹೇಳಬಹುದು. ಬಸವಲಿಂಗಪ್ಪನವರು ಕನ್ನಡ ಸಾಹಿತ್ಯ ಬೂಸಾ ಸಾಹಿತ್ಯ ಎಂಬುದು ಕರ್ನಾಟಕದ ಒಂದು ಹೊಸ ಸಾಮಾಜಿಕ ಚಳುವಳಿಗೆ ಪ್ರೇರಕವಾಯಿತು. ಅದೇ ರೀತಿ ದಲಿತ ಚಳುವಳಿ ಸ್ಥಾಪನೆ ಹಾಗೂ ಅದರ ಹೋರಾಟಗಳು ಕರ್ನಾಟಕದ ಚಾರಿತ್ರಿಕ ಘಟನೆಗಳಾಗಿವೆ. ಬಿ.ಕೃಷ್ಣಪ್ಪನವರ ಹೋರಾಟದಲ್ಲಿ ಚಂದ್ರಗುತ್ತಿ ಬೆತ್ತಲೆಸೇವೆ ಪ್ರಮುಖವಾದವು. ಸರಕಾರ ಚಂದ್ರಗುತ್ತಿ ಬೆತ್ತಲೆಸೇವೆಯನ್ನು ನಿಷೇಧಿಸಿದೆ.

ಕೃಷ್ಣಪ್ಪನವರ ಚಳುವಳಿಯಲ್ಲಿ ಬೆಂಡಿಗೇರಿ ಪ್ರಕರಣ ಮುಖ್ಯವಾದುದು. ಅಸ್ಪೃಶ್ಯರಿಗೆ ನ್ಯಾಯ ಸಿಗುವಂತೆ ಚಳುವಳಿ ಮಾಡಿದರು.

ಪ್ರೊ.ಬಿ.ಕೃಷ್ಣಪ್ಪನವರ ಸಮಕಾಲೀನ ಘಟನೆಗಳು ಕರ್ನಾಟಕ ಸಾಮಾಜಿಕವಾಗಿ, ರಾಜಕೀಯವಾಗಿ, ಹೊಸತಿರುವುಗಳನ್ನು ಕಂಡಂತಹ ಮಹತ್ವದ ಘಟನೆಗಳಾಗಿವೆ. ದೇವರಾಜ ಅರಸರ ಆಡಳಿತ, ಕರ್ನಾಟಕದ ಪ್ರಥಮ ಬಾರಿಗೆ ಬ್ರಾಹ್ಮಣ ಮತ್ತು ಲಿಂಗಾಯಿತತೇತರವಾದ ಸರಕಾರ ಕರ್ನಾಟಕದಲ್ಲಿ ಬಂದದ್ದು ಸಹ ಮಹತ್ವದ ಘಟನೆಯಾಗಿದೆ. ಅದೇ ರೀತಿ ಪೌರಾಡಳಿತ ಸಚಿವ ಬಿ.ಬಸವಲಿಂಗಪ್ಪ, ದೇಶದಲ್ಲಿ ಮೊದಲ ಬಾರಿಗೆ ಮಲ ಹೊರುವ ಕೆಟ್ಟ ವ್ಯವಸ್ಥೆಯನ್ನು ನಿಷೇಧಿಸಿದ್ದಾರೆ. ಕರ್ನಾಟಕವು ಈ ಪದ್ಧತಿ ನಿಷೇಧ ಮಾಡಿ ೨೦ ವರ್ಷಗಳ ನಂತರ ಕೇಂದ್ರ ಸರ್ಕಾರದ ಪಿ.ವಿ.ನರಸಿಂಹರಾವ್ ಅವರು ನಿಷೇಧಿಸಿದರು.

ಬೂಸಾ ಚಳುವಳಿಯು ಕರ್ನಾಟಕ ಇತಿಹಾಸದ ಒಂದು ಸಾಂಸ್ಕೃತಿಕ ಹೋರಾಟವಾಗಿ ನೆಲೆಯೂರಿ ದಲಿತರನ್ನು ಜಾಗೃತರನ್ನಾಗಿ ಮಾಡಿತು. ಭೂ ಚಳುವಳಿಯ ತರುವಾಯ ಕನ್ನಡ ಸಾಹಿತ್ಯದ ಮಹತ್ವವಾದ ಬಂಡಾಯ ಮತ್ತು ದಲಿತ ಸಾಹಿತ್ಯ ನೆಲೆಗೊಳ್ಳಲು ದಲಿತ ಸಂಘರ್ಷ ಸಮಿತಿಯ ಹೋರಾಟದಿಂದ ಕರ್ನಾಟಕದ ಮನೆ ಮಾತಾಯಿತು. ದಲಿತರ ಶೋಷಣೆ, ಅನ್ಯಾಯದ ವಿರುದ್ಧ ಸಿಡಿದು ನಿಲ್ಲುವಂತಾಯಿತು. ಈ ಮೇಲಿನ ಎಲ್ಲ ಅಂಶಗಳು ಪ್ರೊ.ಬಿ.ಕೃಷ್ಣಪ್ಪನವರ ಸಮಕಾಲೀನ ಘಟನೆಗಳಾಗಿವೆ.

ಅಡಿಟಿಪ್ಪಣಿಗಳು

೧. ಮಹೇಶ ಸಿ.ಕೆ., ೨೦೧೨, **ಶೋಷಿತರ ಹಣತೆ ಬಿ.ಕೃಷ್ಣಪ್ಪ,** ಪು.೭೧

೨. ಅದೇ, ಪು.೭೬

೩. ಅದೇ, ಪು.೪೩

೪. ಕೇಶವ ಎಸ್.ಆರ್., ೨೦೧೧, **ಪ್ರೊ.ಬಿ.ಕೃಷ್ಣಪ್ಪ ದಲಿತರ ಮನೆ ಮನೆ ಜ್ಯೋತಿ,** ಪು.೨೧

ಅಧ್ಯಾಯ ನಾಲ್ಕು

ಸಾಹಿತ್ಯ ಚಿಂತನೆಯ ಸ್ವರೂಪ

ಅಧ್ಯಾಯ ನಾಲ್ಕು

ಸಾಹಿತ್ಯ ಚಿಂತನೆಯ ಸ್ವರೂಪ

೪.೧. ಶೋಷಿತರ ಮತ್ತು ದಲಿತರ ಬಗ್ಗೆ ಚಿಂತನೆ

ಪ್ರೊ.ಬಿ.ಕೃಷ್ಣಪ್ಪನವರು ಬರೆದಿರುವ 'ಮಾನವತಾವಾದಿ ಅಂಬೇಡ್ಕರ್' ಲೇಖನದಲ್ಲಿ ಅಂಬೇಡ್ಕರ್ ಜೀವನ ಮತ್ತು ಆದರ್ಶ ಮೌಲ್ಯವನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಅಂಬೇಡ್ಕರ್ ಅವರು ಭಾರತೀಯ ಅಸ್ಪೃಶ್ಯರನ್ನು ವೈಚಾರಿಕ ಚಿಂತನೆಗೆ ಒಳಪಡಿಸಿ ಜಾಗೃತಿ ಮೂಡಿಸಿದರು. ಅಸ್ಪೃಶ್ಯರಲ್ಲಿ ಜನಿಸಿದ ಅಂಬೇಡ್ಕರ್ ಅವರು ಅಸ್ಪೃಶ್ಯರು ಅನುಭವಿಸುವ ಎಲ್ಲ ಅಮಾನವೀಯ ಆಚರಣೆಗಳಿಗೆ ಮತ್ತು ಸನ್ನಿವೇಶಗಳಿಗೆ ಗುರಿಯಾದರು. ನಂತರ ಅವರು ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಹೋರಾಡುತ್ತಾರೆ. ಸಂವಿಧಾನಾತ್ಮಕ ನ್ಯಾಯವನ್ನು ಕೊಡಿಸಿದ್ದಾರೆ.

ಅಸ್ಪೃಶ್ಯರನ್ನು ಕುರಿತು ಅಂಬೇಡ್ಕರ್ ಒಂದು ಮಾತನ್ನು ಹೀಗೆ ಹೇಳಿದ್ದಾರೆ. 'ನಿಮ್ಮ ಈ ದಯನೀಯವಾದ, ದಾರುಣವಾದ ಪರಿಸ್ಥಿತಿಗಳನ್ನು ನಿಮ್ಮಿಂದ ಸುಧಾರಿಸಿಕೊಳ್ಳಲಾಗದಿದ್ದರೆ, ನೀವು ಈ ಜಗತ್ತಿನಲ್ಲಿ ಬದುಕಿರುವುದಕ್ಕಿಂತ ಸಾಯುವುದೇ ಸರಿ' ಎಂದು ಹೇಳಿದ್ದಾರೆ. ಬಿ.ಕೃಷ್ಣಪ್ಪನವರ ಈ ಲೇಖನದಲ್ಲಿ ಅಂಬೇಡ್ಕರ್ ಅವರ ಹೋರಾಟ, ಹಿಂದೂಗಳ ದಬ್ಬಾಳಿಕೆ ವಿರುದ್ಧ, ಅವರ ಮೂಢನಂಬಿಕೆ ವಿರುದ್ಧ, ಜಾತಿವ್ಯವಸ್ಥೆ ವಿರುದ್ಧ, ಜಾತಿವಿನಾಶದ ಕುರಿತು, ಅಸ್ಪೃಶ್ಯತೆಯನ್ನು ಆಚರಿಸುವುದರ ವಿರುದ್ಧ, ಸಮಾನ ಹಕ್ಕುಗಳ ಪರವಾಗಿ ಜೀವನಪೂರ್ತಿ ಹೋರಾಟ ನಡೆಸಿರುವುದನ್ನು ಇಲ್ಲಿ ಹೇಳಿದ್ದಾರೆ.

ಭಾರತದಲ್ಲಿ ಹಿಂದೂ ಧರ್ಮದ ಕ್ರೂರ ವ್ಯವಸ್ಥೆಯ ವಿರುದ್ಧ ಕ್ರಿಸ್ತಪೂರ್ವದಲ್ಲಿಯೇ ಹಿಂದೂಧರ್ಮದಿಂದ ವಿಭಜನೆ ಹೊಂದಿ ಬೌದ್ಧ ಮತ್ತು ಜೈನಧರ್ಮಗಳು ಉದಯವಾದವು. ಪ್ರಸ್ತುತ ಬಿ.ಕೃಷ್ಣಪ್ಪನವರು ಬರೆದಿರುವ 'ದಲಿತರು ಮತ್ತು ಮತಾಂತರ' ಲೇಖನದಲ್ಲಿ ಹಿಂದೂ ಧರ್ಮ ಹಾಗೂ ಹಿಂದೂಧರ್ಮದಲ್ಲಿನ ಅಸ್ಪೃಶ್ಯತೆ ಆಚರಣೆ ಕುರಿತು ಚರ್ಚಿಸಿದ್ದಾರೆ.

ಹಿಂದೂ ಧರ್ಮದಲ್ಲಿರುವ ಅಸ್ಪೃಶ್ಯರು ಪ್ರಸ್ತುತ ಹಿಂದೂಧರ್ಮದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಮಾನವೀಯ ನೆಲೆಯಲ್ಲಿ ಸಮಾನತೆ ಸಾಧಿಸಲು ಹಿಂದೂಧರ್ಮವನ್ನು ತೊರೆಯುವ ಅಂದರೆ,

ದಲಿತರು ಮತಾಂತರ ಹೊಂದುವ ಮೂಲಕ ಜಾಗೃತರಾಗಿರುವ ಸಂದೇಶವನ್ನು ಹಿಂದೂಗಳಿಗೆ ಮುಟ್ಟಿಸಿದ್ದಾರೆ ಎಂದು ಕೃಷ್ಣಪ್ಪನವರು ಹೇಳಿದ್ದಾರೆ.

ಜಾತಿವಿನಾಶ ಕುರಿತು ಬಿ.ಕೃಷ್ಣಪ್ಪನವರು ಗಂಭೀರವಾಗಿ ಚರ್ಚಿಸಿದ್ದಾರೆ. ಭಾರತ ದೇಶದಲ್ಲಿ ಜಾತಿವ್ಯವಸ್ಥೆಯೂ ಒಂದು ದೊಡ್ಡ ಸಾಮಾಜಿಕ ಪಿಡುಗು ಎಂದು ಹೇಳಬಹುದು. ಪ್ರಪಂಚದ ಇತಿಹಾಸದಲ್ಲಿ ಕಪ್ಪು ವರ್ಣದವರನ್ನು ಬಿಳಿ ವರ್ಣದವರು ಅಸ್ಪೃಶ್ಯರಂತೆ ಕಾಣುತ್ತಿದ್ದರು. ಆದರೆ ಕಪ್ಪು ವರ್ಣದವರು ಜಾಗೃತರಾಗಿ ತಮ್ಮ ಅಸಮಾನತೆಯನ್ನು ಸರಿದೂಗಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅದೇ ರೀತಿ ಭಾರತದಲ್ಲಿ ಜನರು ಒಂದೇ ಬಣ್ಣದ ಜನಾಂಗವಾದರೂ ಜಾತಿ ವ್ಯವಸ್ಥೆಗೆ ಸಿಲುಕಿ ನರಳುತ್ತಿದ್ದಾರೆ. ಈ ದೃಷ್ಟಿಕೋನದಿಂದ ಜಾತಿವ್ಯವಸ್ಥೆ ವಿನಾಶ ಮಾಡಬೇಕಾಗಿದೆ.

ಪ್ರೊ.ಬಿ.ಕೃಷ್ಣಪ್ಪನವರು 'ಮೀಸಲಾತಿ ಮತ್ತು ದಲಿತರು' ಲೇಖನದಲ್ಲಿ ದಲಿತರಿಗೆ ಮೀಸಲಾತಿ ಕುರಿತು ಚರ್ಚಿಸಿದ್ದಾರೆ. ಈ ದೇಶದಲ್ಲಿ ದಲಿತರು ಸಬಲರಾಗಲು ಮೀಸಲಾತಿ ಅವಶ್ಯಕವಾಗಿದೆ ಎಂದು ಹೇಳಿದ್ದಾರೆ. ಎಲ್ಲಿಯವರೆಗೆ ಜಾತಿವ್ಯವಸ್ಥೆ, ಅಸ್ಪೃಶ್ಯತೆ ಈ ದೇಶದಲ್ಲಿ ಮುಂದುವರಿಸಲಾಗುವುದೋ ಅಲ್ಲಿಯವರೆಗೂ ಮೀಸಲಾತಿಯನ್ನು ಮುಂದುವರಿಸಬೇಕು ಎಂಬುದೇ ಮುಖ್ಯ ಆಶಯವಾಗಿದೆ.

೪.೧.೧ ಮಾನವತಾವಾದಿ ಅಂಬೇಡ್ಕರ್

ಮಹಾನ್ ಮಾನವತಾವಾದಿ, ಸಂವಿಧಾನ ಶಿಲ್ಪಿ, ಸಮಾನತೆಯ ಹರಿಕಾರ, ದಲಿತರ ಜ್ಯೋತಿ, ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಕುರಿತು ಕೃಷ್ಣಪ್ಪನವರು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಆಕ್ಸ್‌ಫರ್ಡ್ ಲೈಬ್ರರಿಯಲ್ಲಿ ವಿಸ್ಮಯ ಹುಟ್ಟಿಸುವಂತಹ ಅನೇಕ ವಿಷಯಗಳನ್ನು ದಾಖಲಿಸಲಾಗಿದೆ. ಅದರಲ್ಲಿ ಅತಿ ಹೆಚ್ಚು ಗ್ರಂಥಗಳನ್ನು ಓದಿದ ವ್ಯಕ್ತಿಗಳ ಹೆಸರುಗಳು ದಾಖಲೆಯಾಗಿವೆ. ಇದುವರೆಗೂ ಆಕ್ಸ್‌ಫರ್ಡ್ ಲೈಬ್ರರಿಯಿಂದ ಹೆಚ್ಚು ಪುಸ್ತಕಗಳನ್ನು ಎರವಲು ಪಡೆದು ಓದಿದವರಲ್ಲಿ ಡಾ.ಅಂಬೇಡ್ಕರ್ ಅವರು ಒಬ್ಬರು ಎಂದು. ಭಾರತದಲ್ಲಿ ಅಂಬೇಡ್ಕರ್ ಅವರನ್ನು ಅಸ್ಪೃಶ್ಯನೆಂದು ಭಾವಿಸುವ ಒಬ್ಬ ಮೇಲುವರ್ಗದ ವ್ಯಕ್ತಿ ಬ್ರಿಟನ್ನಿನಲ್ಲಿ ಅದೇ ಅಂಬೇಡ್ಕರ್ ಅವರನ್ನು ಭಾರತೀಯನೆಂದು ಭಾವಿಸಿ ಹೆಮ್ಮೆ ಪಟ್ಟಿದ್ದ. ಅಂಬೇಡ್ಕರ್ ಆರು ಸಾವಿರ ವರ್ಷಗಳ ಅಜ್ಞಾನದಿಂದ ಬಳಲಿದ್ದ ಅಸ್ಪೃಶ್ಯ ಗಜಗರ್ಭ ಒಂದೇ ಬಾರಿಗೆ ಹೆತ್ತ ಜ್ಞಾನಸೂರ್ಯನಂತಿದ್ದರು. ಅವರ ಜ್ಞಾನದ ತೃಷೆ ಅಸದೃಶವಾಗಿತ್ತು. ಅವರು ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ನೀತಿಶಾಸ್ತ್ರ, ತತ್ವಶಾಸ್ತ್ರ ಹೀಗೆ ಅನೇಕ ಶಾಸ್ತ್ರಗಳ ಮೇಲೆ ಪ್ರಭುತ್ವ ಪಡೆದಿದ್ದರು ಎಂದು ಕೃಷ್ಣಪ್ಪನವರು ತಮ್ಮ ಮಹಾನ್ ಮಾನವತಾವಾದಿ ಅಂಬೇಡ್ಕರ್ ಲೇಖನದಲ್ಲಿ ಹೇಳಿದ್ದಾರೆ. ಅಂಬೇಡ್ಕರ್ ಅವರ ವಿದ್ವತ್ತನ್ನು, ಅವರ ಜ್ಞಾನದ ತೃಷೆ, ಅವರ ಅನೇಕ

ವಿಷಯಗಳ ಮೇಲೆ ಸಾಧಿಸಿದ ಹಿಡಿತವನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ಅಂಬೇಡ್ಕರ್ ಇಂಥ ಜ್ಞಾನಸಮುದ್ರವಾಗಿದ್ದರಿಂದಲೇ ಈ ದೇಶದ ಸಂಪ್ರದಾಯ ಶಕ್ತಿಗಳನ್ನು ಎದುರಿಸಿ ನಿಲ್ಲಲು ಸಾಧ್ಯವಾಯಿತು ಎಂದು ಬಿ.ಕೃಷ್ಣಪ್ಪನವರು ಈ ಲೇಖನದಲ್ಲಿ ಹೇಳಿದ್ದಾರೆ.

ಬಾಲ್ಯದಲ್ಲಿಯೇ ಅಸ್ಪೃಶ್ಯತೆಯ ಬೆಂಕಿಯಲ್ಲಿ ಬೆಂದಿದ್ದ ಅಂಬೇಡ್ಕರ್ ಅವರು ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಿದರು. ಆದರೆ ಪುಣೆಯಲ್ಲಿ ಕಲೆಕ್ಟರ್ ಆಗಿದ್ದಾಗ ಅವರ ಆಫೀಸಿನ ಜವಾನ ದೂರದಲ್ಲಿಯೇ ನಿಂತುಕೊಂಡು ಫೈಲುಗಳನ್ನು ಟೇಬಲ್ಲಿನ ಮೇಲೆ ಎತ್ತಿ ಹಾಕುತ್ತಿದ್ದ. ಅಂಬೇಡ್ಕರ್ ಅವರ ಕೈಗೆ ಕೊಟ್ಟರೆ ತನಗೆ ಮೈಲಿಗೆಯಾಗುತ್ತದೆ ಎಂದು ಆತ ಭಾವಿಸಿದ್ದ. ವಿದ್ಯಾವಂತ ಕಲೆಕ್ಟರ್ ಅಸ್ಪೃಶ್ಯನಾಗಿ ಹುಟ್ಟಿದ ಕಾರಣಕ್ಕಾಗಿ ಅವನು ಮೇಲುಜಾತಿಯ ದಡ್ಡ ಜವಾನನಿಗಿಂತ ಕೀಳಾಗಿ ಬದುಕುವ ಈ ವ್ಯವಸ್ಥೆಯ ವಿರುದ್ಧ ಅವರು ಕೋಪದಿಂದ ಬುಸುಗುಟ್ಟುತ್ತಿದ್ದರು. ಈ ಅವಧಿಯಲ್ಲಿ ಅಂಬೇಡ್ಕರ್ ಅವರಿಗೆ ಒಂದು ಬಾಡಿಗೆ ಮನೆ ಕೊಡಲು ಯಾರೂ ಮುಂದೆ ಬರಲಿಲ್ಲ. ಹಿಂದೂ ವೈದಿಕಶಾಹಿಯ ಮೂಲನಿವಾಸಿಗಳನ್ನು ಗುಲಾಮಗಿರಿಗೆ ನೂಕಿತ್ತು ಎಂದು ಬಿ.ಕೃಷ್ಣಪ್ಪನವರು ಈ ಲೇಖನದಲ್ಲಿ ಅಂಬೇಡ್ಕರ್ ಅನುಭವಿಸಿದ ಅಸ್ಪೃಶ್ಯತೆಯ ಕರಾಳ ಮುಖವನ್ನು ಉಲ್ಲೇಖಿಸಿದ್ದಾರೆ.

ಅಂಬೇಡ್ಕರ್ ಅವರ ಮಾತಿನಂತೆ ಬಿ.ಕೃಷ್ಣಪ್ಪನವರು ಹೇಳುತ್ತಾರೆ: ಬ್ರಿಟೀಷ್ ಸಾಮ್ರಾಜ್ಯಶಾಹಿ ಭಾರತದ ಮೇಲೆ ೨೦೦ ವರ್ಷಗಳು ಆಡಳಿತವನ್ನು ನಡೆಸಿದ್ದಾರೆ ಎಂದು ವಿವರಿಸುತ್ತಾರೆ. ಹಿಂದೂ ಸಾಮ್ರಾಜ್ಯಶಾಹಿ ಈ ದೇಶದ ಮೂಲನಿವಾಸಿಗಳ ಮೇಲೆ ೬ ಸಾವಿರ ವರ್ಷಗಳಿಂದ ಆಡಳಿತ ನಡೆಸುತ್ತಿವೆ" ಎಂದು ವೈದಿಕವ್ಯವಸ್ಥೆಯಲ್ಲಿ ಅಸ್ಪೃಶ್ಯತೆಯ ಮೇಲೆ ತುಂಬಾ ಕಾಲದಿಂದಲೂ ದಬ್ಬಾಳಿಕೆ ಮಾಡಿದ್ದಾರೆ ಎಂದಿದ್ದಾರೆ. ಈಗಲೂ ಈ ದೇಶದಲ್ಲಿ ಜಾತಿ ವ್ಯವಸ್ಥೆ ಕ್ರೂರವಾಗಿದೆ. ಏಕೆಂದರೆ ಬೆಂಗಳೂರಿನಂತಹ ಬೃಹತ್ ನಗರದಲ್ಲಿ ಇಂದಿಗೂ ಅಸ್ಪೃಶ್ಯ ವಿದ್ಯಾವಂತನೊಬ್ಬ ತನ್ನ ಜಾತಿಯನ್ನು ಹೇಳಿಕೊಂಡು ಬಾಡಿಗೆ ಮನೆಯನ್ನು ಪಡೆದುಕೊಳ್ಳುವುದು ಸಾಧ್ಯವಿಲ್ಲ. ಜಾತಿಯ ತಾರತಮ್ಯ, ಮೇಲುಕೀಳುಗಳ ಭಾವನೆ ೨೧ನೇ ಶತಮಾನಕ್ಕೆ ಕಾಲಿಟ್ಟಿರುವ ಭಾರತದಲ್ಲಿ ಇನ್ನೂ ಗಟ್ಟಿಗೊಳ್ಳುತ್ತಲೇ ಹೋಗುತ್ತಿರುವುದು ಅತಂಕಕಾರಿಯಾಗಿದೆ ಎಂದು ಕೃಷ್ಣಪ್ಪನವರು ಆತಂಕ ವ್ಯಕ್ತಪಡಿಸಿದ್ದಾರೆ.

ಅಂಬೇಡ್ಕರ್ ಅವರ ವಿರುದ್ಧ ಹೋರಾಡುತ್ತಿದ್ದ ಕೆಲವು ಘಟನೆಗಳನ್ನು ಕೃಷ್ಣಪ್ಪನವರು ಹೀಗೆ ಹೇಳಿದ್ದಾರೆ.

ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಬ್ರಿಟಿಷರ ವಿರುದ್ಧ ಹೋರಾಟವನ್ನು ನಡೆಸುತ್ತಲೇ ಅಂಬೇಡ್ಕರ್ ಗಾಂಧೀಜಿಯವರನ್ನು ಪ್ರಶ್ನೆ ಮಾಡುತ್ತಿದ್ದರು. "ಗಾಂಧೀಜಿ, ನಿಮಗೆ ೨೦೦ ವರ್ಷಗಳ ಬ್ರಿಟಿಷ್ ದಬ್ಬಾಳಿಕೆಯನ್ನು ತಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ, ಆದರೆ ಅಸ್ಪೃಶ್ಯರು ಆರು ಸಾವಿರ ವರ್ಷಗಳಿಂದ ಹಿಂದೂ ದಬ್ಬಾಳಿಕೆಯನ್ನು ಹೇಗೆ ಸಹಿಸಿರಬೇಕು? ನಿಮಗೆ ಬ್ರಿಟಿಷರಿಂದ ಬಿಡುಗಡೆ ಬೇಕಾಗಿದ್ದರೆ,

ನಮಗೆ ಮೊದಲು ಹಿಂದೂ ಸಂಪ್ರದಾಯವಾದಿಗಳಿಂದ ಬಿಡುಗಡೆ ಬೇಕಾಗಿದೆ" ಎಂದು ಕೇಳಿದರು. ಅಂಬೇಡ್ಕರ್ ಅವರ ಮನಸ್ಸನ್ನು ಅರ್ಥ ಮಾಡಿಕೊಳ್ಳಲಾರದ ಈ ದೇಶದ ಮೇಲುವರ್ಗದ ಜನ ಅಂಬೇಡ್ಕರ್ ಅವರನ್ನು 'ಬ್ರಿಟಿಷರ ಏಜೆಂಟ್' ಎಂದು ಕರೆದರು. ಆದರೆ ಜಿನ್ನಾ ಅವರು ಗಾಂಧೀಜಿ ಅವರನ್ನು 'ಹಿಂದೂಗಳ ಏಜೆಂಟ್' ಎಂದು ಕರೆದಾಗ ಎಲ್ಲರೂ ಜಿನ್ನಾ ಅವರ ವಿರುದ್ಧ ತಿರುಗಿಬಿದ್ದರು. ಈ ದೇಶ ಜಾತಿತಾರತಮ್ಯದಿಂದ ನರಳುತ್ತಿದೆ. ಅದು ರೋಗದಂತೆ ಸಮಾಜವನ್ನು ಒಳಗೊಳಗೆ ನುಂಗಿ ನೀರು ಕುಡಿಯುತ್ತಿರುವ ಈ ಸಮಸ್ಯೆಗೆ ಪರಿಹಾರ ಇಲ್ಲವೇ? ಆರೋಗ್ಯಕರ ಸಮಾಜ ಕಟ್ಟುವ ದಿಕ್ಕಿನಲ್ಲಿ ಈ ಹೊತ್ತು ಅಂಬೇಡ್ಕರ್ ಅವರ ವಿಚಾರಗಳು ದಾರಿದೀಪವಾಗಿದೆ ಎಂದು ಬಿ.ಕೃಷ್ಣಪ್ಪನವರು ತಮ್ಮ ಲೇಖನದಲ್ಲಿ ಗ್ರಹಿಸಿದ್ದಾರೆ. ಒಬ್ಬ ಗುಲಾಮನಿಗೆ ಅವನು ಗುಲಾಮ ಎಂಬ ಅರಿವನ್ನು ಹೇಳಿಕೊಡಿ. ಅವನು ಗುಲಾಮಗಿರಿಯ ವಿರುದ್ಧ ಹೋರಾಡುತ್ತಾನೆ' ಎಂದು ಗ್ರೀಕಿನ ತತ್ವಜ್ಞಾನಿ ಥೂಸಿಡೈಡಸ್‌ನ ಮಾತನ್ನು ಅಂಬೇಡ್ಕರ್ ಅವರು ಮೇಲಿಂದ ಮೇಲೆ ಉದ್ಧರಿಸುತ್ತಿದ್ದರು. ಥೂಸಿಡೈಡಸ್ ಗ್ರೀಕ್‌ನ ಪ್ರಭುಗಳಿಗೆ ಹೀಗೆ ಹೇಳುತ್ತಾನೆ. "ನಿಮಗೇನೊ ನಮ್ಮ ಒಡೆಯರಾಗಬೇಕು ಎಂಬ ಆಸೆ ಇದ್ದಿರಬಹುದು, ಆದರೆ ನಮಗೆ ನಿಮ್ಮ ಗುಲಾಮರಾಗಬೇಕೆಂಬ ಆಸೆ ಇಲ್ಲವಲ್ಲ"[೧] ಎಂದು ಹೇಳುತ್ತಿದ್ದ. ಈ ಹೇಳಿಕೆಯು ಅಂಬೇಡ್ಕರ್ ಮೇಲೆ ತುಂಬಾ ಪರಿಣಾಮ ಬೀರಿದೆ ಎಂದು ಕೃಷ್ಣಪ್ಪನವರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

ತುಳಿಯುವುದರಲ್ಲಿಯೇ ಖುಷಿಪಟ್ಟ ಜನ ತುಳಿಸಿಕೊಳ್ಳುವವರ ಬಗ್ಗೆ ಕಿಂಚಿತ್ತಾದರೂ ಯೋಚನೆಯನ್ನು ಮಾಡುತ್ತಿದ್ದರೆ, ಈ ದೇಶ, ಸಮಾಜ ಹೀಗೆ ಇರುತ್ತಿರಲಿಲ್ಲ. ಬುದ್ಧ ಬಸವನ ಧರ್ಮಗಳೇ ಕಾಲಾನುಕ್ರಮದಲ್ಲಿ ಜಾತಿ ಧರ್ಮಗಳಾಗಿ ಪರಿವರ್ತನೆಗೊಂಡಿರುವುದು ಈ ದೇಶದ ಕರಾಳ ಇತಿಹಾಸವಾಗಿದೆ. ಅಸ್ಪೃಶ್ಯತೆಯ ವಿರುದ್ಧ ಹೋರಾಡುವುದು ಅಸ್ಪೃಶ್ಯರಿಗೆ ಅನಿವಾರ್ಯವಾಗಿತ್ತು. ಸಮಾನತೆಗಾಗಿ ಜಾತಿ ವಿರುದ್ಧ ಹೋರಾಡುವಂತೆ ಅಸ್ಪೃಶ್ಯರಿಗೆ ಕರೆ ಕೊಟ್ಟರು. ಡಾ.ಅಂಬೇಡ್ಕರ್ ಅವರೇ ಸ್ವತಃ ಈ ಚಳುವಳಿಯ ನೇತೃತ್ವವನ್ನು ವಹಿಸಿಕೊಂಡರು ಎಂದು ಬಿ.ಕೃಷ್ಣಪ್ಪನವರು ತಮ್ಮ ಲೇಖನದಲ್ಲಿ ಅಂಬೇಡ್ಕರ್ ಅವರ ನಾಯಕತ್ವವನ್ನು ಕುರಿತು ಮಾತನಾಡಿದ್ದಾರೆ. ಮಹಾದ್ ಕೆರೆ ನೀರು ಕುಡಿಯಲು ಅಸ್ಪೃಶ್ಯರಿಗೆ ಬಿಡುತ್ತಿರಲಿಲ್ಲ. ಅಂಬೇಡ್ಕರ್ ಅವರು ತಾವೇ ನೇತೃತ್ವ ವಹಿಸಿಕೊಂಡು ೧೦ ಸಾವಿರ ಅನುಯಾಯಿಗಳೊಂದಿಗೆ ಕೆರೆ ಪ್ರವೇಶ ಮಾಡಿ ನೀರು ಕುಡಿದರು. ಇದರಿಂದ ಕೋಪಗೊಂಡ ಮೇಲುವರ್ಗದ ಜನ ಮಾರಕ ಅಸ್ತ್ರಗಳಿಂದ ಅಂಬೇಡ್ಕರ್ ಅವರ ಮೇಲೆ ಹಲ್ಲೆ ನಡೆಸಿದರು. ಅಂಬೇಡ್ಕರ್ ಅನುಯಾಯಿಗಳು ಭಯದಿಂದ ಆತಂಕಗೊಂಡರು. ಅಂಬೇಡ್ಕರ್ ಅವರು "ತ್ಯಾಗ ಬಲಿದಾನಗಳಿಲ್ಲದೆ ಸ್ವಾತಂತ್ರ್ಯ ಸಾಧ್ಯವಿಲ್ಲ" ಎಂದು ಹೇಳಿದ್ದರು. ಅದೇ ರೀತಿ ಮಹಾದ್ ಕೆರೆ ಪ್ರವೇಶದ ಬಳಿಕ ನಾಸಿಕ್ ದೇವಸ್ಥಾನ ಪ್ರವೇಶ ಚಳುವಳಿಯನ್ನು ಹಮ್ಮಿಕೊಂಡರು. ಇಲ್ಲಿಯೂ ಮೇಲುವರ್ಗದ ಜನ ಅಂಬೇಡ್ಕರ್ ಮತ್ತಿತರ ಅವರ ಅನುಯಾಯಿಗಳ ವಿರುದ್ಧ ತಿರುಗಿಬಿದ್ದರು.

ಅಸ್ಪೃಶ್ಯರಿಗೆ ರಥವನ್ನು ಎಳೆಯಲು ಅವಕಾಶ ಕೊಡುವುದಾಗಿ ಭರವಸೆ ಕೊಟ್ಟು ನಾಸಿಕ್ ನಗರಸಭೆಯು, ಅಂಬೇಡ್ಕರ್ ಬರುವುದಕ್ಕೆ ಮುಂಚೆಯೇ ರಥವನ್ನು ಎಳೆದು ಮುಗಿಸಿಬಿಟ್ಟಿತ್ತು. ಈ ರೀತಿಯಾದ ಸಾಮಾಜಿಕ ಅಸಮಾನತೆಯನ್ನು ಅಂಬೇಡ್ಕರ್ ಅವರು ಎದುರಿಸಿದ್ದಾರೆ ಎಂದು ಬಿ.ಕೃಷ್ಣಪ್ಪನವರು ತಮ್ಮ ಲೇಖನದಲ್ಲಿ ಹೇಳಿದ್ದಾರೆ.

ಗಾಂಧೀಜಿಯವರು 'ಬ್ರಿಟಿಷರೇ ನಮ್ಮ ದೇಶ ಬಿಟ್ಟು ತೊಲಗಿರಿ' ಎಂದು ಚಳುವಳಿ ಮಾಡುತ್ತಿದ್ದರು. ಆದರೆ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು "ಹಿಂದೂಗಳೇ ನಮಗೆ ಕುಡಿಯುವ ನೀರು ಕೊಡಿ, ದೇವಸ್ಥಾನದ ಒಳಗೆ ಬಿಡಿ" ಎಂದು ಚಳುವಳಿ ಮಾಡುತ್ತಿದ್ದರು. ಗಾಂಧಿ ಅವರ ಸ್ವಾತಂತ್ರ್ಯ ಚಳುವಳಿ ಇಂದು ಮುಗಿದ ಅಧ್ಯಾಯ. ಆದರೆ ಅಂಬೇಡ್ಕರ್ ಚಳುವಳಿ ಅಂತ್ಯವಿಲ್ಲದ ನಿರಂತರ ಹೋರಾಟವಾಗಿದೆ. ಸಾಮಾಜಿಕ ನ್ಯಾಯವನ್ನು ಪಡೆಯುವುದು, ಜಾತಿವಿನಾಶ ಮಾಡುವುದು, ವ್ಯವಸ್ಥೆಯನ್ನು ಬದಲಾಯಿಸುವುದು ಆಗಿದೆ. ಹಿಂದೂ ಧರ್ಮದಲ್ಲಿರುವ ಕೆಟ್ಟ ಜಾತಿವ್ಯವಸ್ಥೆಯನ್ನು ಕೊನೆಗಾಣಿಸುವುದು ಅಂಬೇಡ್ಕರ್ ಅವರ ಮೂಲ ಮಂತ್ರವಾಗಿ ಮಹಾದ್ ಕೆರೆ ಪ್ರವೇಶ, ನಾಸಿಕ್‌ನಲ್ಲಿ ದೇವಸ್ಥಾನ ಪ್ರವೇಶ ಮುಂತಾದ ಅಸ್ಪೃಶ್ಯತೆಯನ್ನು ವಿರೋಧಿಸುವ ಚಳುವಳಿಯನ್ನು ಅವರು ಮಾಡಿದ್ದಾರೆಂದು ಪ್ರೊ.ಬಿ.ಕೃಷ್ಣಪ್ಪನವರು ಈ ಲೇಖನದಲ್ಲಿ ಹೇಳಿದ್ದಾರೆ.

ಅಂಬೇಡ್ಕರ್ ಅವರ ಮಹಿಳಾ ಚಿಂತನೆಗಳನ್ನು ಕೃಷ್ಣಪ್ಪ ಹೀಗೆ ಹೇಳಿದ್ದಾರೆ. "ಅಂಬೇಡ್ಕರ್ ಅವರ ಚಿಂತನೆಗಳು, ವಿಚಾರಗಳು ಯಾವತ್ತೂ ದುರ್ಬಲರ, ಮಹಿಳೆಯರ ಪರವಾಗಿದ್ದವು. ಅವರು ನೆಹರೂ ಅವರ ಸರ್ಕಾರದಲ್ಲಿ ಕಾನೂನು ಮಂತ್ರಿಯಾಗಿದ್ದರು. ಮಹಿಳೆಯರ ಪರವಾದ ಸಂಸತ್ತಿನಲ್ಲಿ "ಹಿಂದೂ ಕೋಡ್ ಬಿಲ್ಲನ್ನು" ಮಂಡಿಸಿದರು. ಒಂದು ಕಡೆ 'ಯತ್ರ ನಾರೀಣಾಂ ಪೂಜ್ಯಂತೆ, ತತ್ರ ದೇವತಾ ಪ್ರತಿಷ್ಟಿತಾಃ' ಎಂದು ಹೇಳುತ್ತಾರೆ, ಮತ್ತೊಂದು ಕಡೆಗೆ ಮಹಿಳೆಯರಿಗೆ ದೀಕ್ಷೆಯನ್ನು ನಿರಾಕರಿಸಿ ಮಹಿಳೆ ಶೂದ್ರನಿಗೆ ಸಮಾನಳು. ಅವಳಿಗೆ ವಿದ್ಯಾಭ್ಯಾಸದ ಹಕ್ಕಿಲ್ಲ ಎಂದು ಜ್ಞಾನದ ಬಾಗಿಲನ್ನು ಮುಚ್ಚಿದ್ದಾರೆ. ಬಾಲ್ಯವಿವಾಹ, ಸತಿಪದ್ಧತಿ ಅಂತಹ ಕ್ರೂರ ವಿಧಿವಿಧಾನಗಳನ್ನು ಆಕೆಯ ಮೇಲೆ ಹೇರಿದೆ. ಅನೇಕ ಕಟ್ಟುಪಾಡುಗಳಿಂದ ಬಂಧಿತಳಾದ ಮಹಿಳೆ ಬಂಧಮುಕ್ತಳಾಗಬೇಕು. ಪುರುಷನಷ್ಟೇ ಸಮಾನ ಹಕ್ಕುಗಳು ಆಕೆಗೂ ಸಿಗಬೇಕು ಎಂದು ಅವರು ಸಂಸತ್ತಿನಲ್ಲಿ ಒಳಗೂ ಹೊರಗೂ ಹೋರಾಟ ನಡೆಸಿದರು. ಸಂಪ್ರದಾಯವಾದಿಗಳು ಅಂಬೇಡ್ಕರ್ ವಿರುದ್ಧ ತಿರುಗಿನಿಂತರು. ಸಂಸತ್ತಿನಲ್ಲಿ ಹಿಂದೂ ಕೋಡ್ ಬಿಲ್ ಪಾಸಾಗದಂತೆ ಸರ್ವ ಪ್ರಯತ್ನಗಳನ್ನು ಮಾಡಿದರು. ಅಂಬೇಡ್ಕರ್ ವಿಚಾರಗಳ ಬಗ್ಗೆ ನೆಹರೂ ಅವರಿಗೆ ಅಪಾರ ಗೌರವವಿದ್ದರೂ ಸಂಪ್ರದಾಯವಾದಿಗಳ ಮನಸ್ಸನ್ನು ತಿದ್ದಲು ಅವರ ಕೈಯಿಂದಲೂ ಸಾಧ್ಯವಾಗಲಿಲ್ಲ.

ಅಂಬೇಡ್ಕರ್ ಅವರು ಆರಂಭದಲ್ಲಿ ಅಸ್ಪೃಶ್ಯತೆ, ಜಾತಿವ್ಯವಸ್ಥೆ ವಿರುದ್ಧ ಹೋರಾಡುತ್ತಿದ್ದರು. ನಂತರ ಕೊನೆಗೆ ಅಸ್ಪೃಶ್ಯರು, ಕೆಳಜಾತಿಗಳು ಪ್ರವೇಶ ಮಾಡಬೇಕಾಗಿರುವುದು ದೇವಸ್ಥಾನವನ್ನಲ್ಲ

ಪಾರ್ಲಿಮೆಂಟನ್ನು ಎಂಬ ತೀರ್ಮಾನಕ್ಕೆ ಬಂದರು. ಪ್ರಜಾತಂತ್ರದಲ್ಲಿ ಒಬ್ಬ ವ್ಯಕ್ತಿಗೆ ಒಂದು ಮತ, ಒಂದು ಮತವೆಂದರೆ ಒಂದು ಮೌಲ್ಯ. ಓಟಿನ ಶಕ್ತಿಯಿಂದ ಪಡೆದುಕೊಳ್ಳುವ ರಾಜಕೀಯ ಅಧಿಕಾರದಿಂದ ನಾವು ಇಷ್ಟಪಟ್ಟ ಬದಲಾವಣೆ ತರುವುದು ಸಾಧ್ಯ. ಆದ್ದರಿಂದ ಕೆಳಜಾತಿಗಳು ತಮ್ಮ ಮತಶಕ್ತಿಯಿಂದ ಬದಲಾವಣೆಯನ್ನು ತರಬೇಕು ಎಂದು ಹೇಳಿದರು. ಈ ದೇಶದ ಅಜ್ಞಾನ ಕೆಟ್ಟ ಸಂಪ್ರದಾಯದ ಶೋಷಣೆಗಳಿಗೆ ಪ್ರಜಾಪ್ರಭುತ್ವ ಬಲವಾದ ಅಸ್ತ್ರ ಎಂದು ಭಾವಿಸಿದ್ದರು. "ರಾಜಕೀಯ ಅಧಿಕಾರ ಎನ್ನುವುದು ಮಾಸ್ಟರ್ ಕೀಲಿಕೈ ಇದ್ದ ಹಾಗೆ. ಈ ಮಾಸ್ಟರ್ ಕೀಲಿಕೈಯಿಂದ ನೀವು ಬದಲಾವಣೆಯ ಕಪಾಟುಗಳನ್ನು ತೆರೆಯಬಹುದು ಎಂದರು. ಮುಸ್ಲಿಮರಿಗೆ ಬ್ರಿಟಿಷರು ಪ್ರತ್ಯೇಕ ಮತದಾನದ ಹಕ್ಕನ್ನು ಕೊಟ್ಟಿದ್ದರು. ಮುಸ್ಲಿಮರಿಗೆ ಕೊಟ್ಟ ಹಾಗೆ ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ಕೊಡಬೇಕು" ಎಂದು ಅಂಬೇಡ್ಕರ್ ಚಳುವಳಿ ಪ್ರಾರಂಭಿಸಿದರು. ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ಕೊಟ್ಟರೆ ಅವರು ಹಿಂದೂಧರ್ಮದ ರಕ್ಷೆಯಿಂದ ಹೊರಗೆ ಉಳಿದುಬಿಡುತ್ತಾರೆ. ಮುಂದೆ ಇದರಿಂದ ಹಿಂದೂ ಧರ್ಮಕ್ಕೆ ಅಪಾಯವಿದೆ ಎಂದು ತಿಳಿದ ಗಾಂಧೀಜಿ ಅವರು 'ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ಕೊಡಕೂಡದು' ಎಂದು ಆಮರಣಾಂತ ಸತ್ಯಾಗ್ರಹವನ್ನು ಹೂಡಿದರು. ಗಾಂಧೀಜಿಯವರು ಪ್ರಾಣಾಪಾಯದ ಸ್ಥಿತಿಯನ್ನು ತಲುಪಿದಾಗ, ಒಂದು ಅಸ್ಪೃಶ್ಯರ ಪ್ರತ್ಯೇಕ ಮತದಾನ ಮತ್ತೊಂದು ಕಡೆ ಗಾಂಧೀಜಿಯವರ ಪ್ರಾಣ ಈ ಎರಡರ ದ್ವಂದ್ವದಲ್ಲಿ ಅಂಬೇಡ್ಕರ್ ಅವರು ಅಸ್ಪೃಶ್ಯರ ಪ್ರತ್ಯೇಕ ಮತದಾನದ ಬೇಡಿಕೆಯನ್ನು ಬಿಟ್ಟುಕೊಡಬೇಕಾಯಿತು. ಬಿ.ಕೃಷ್ಣಪ್ಪನವರು ಅಂಬೇಡ್ಕರ್ ಚಿಂತನೆ ಮತ್ತು ಜೀವನದ ಸವಾಲ್ ಆಗಿದ್ದ ಅಸ್ಪೃಶ್ಯತೆಯನ್ನು ಮೆಟ್ಟಿ ನಿಲ್ಲುವ ಸತತ ಪ್ರಯತ್ನ ಮಾಡುತ್ತಿದ್ದರು. ಪ್ರತ್ಯೇಕ ಮತದಾನಕ್ಕೆ ಪ್ರಯತ್ನಿಸಿದ್ದರು. ಅದು ಗಾಂಧೀಜಿಯ ವಿರೋಧದಿಂದ ಕೈಗೂಡಲಿಲ್ಲ ಎಂದು ಕೃಷ್ಣಪ್ಪ ಗುರುತಿಸಿದ್ದಾರೆ. ಅದೇ ರೀತಿ ಜಂಟಿ ಮತದಾನ ಪದ್ಧತಿಯಿಂದ ಆಗು ತ್ತಿರುವ ಅನ್ಯಾಯಗಳನ್ನು ನೋಡಿದರೆ, ಪ್ರತ್ಯೇಕ ಮತದಾನ ಪದ್ಧತಿ ಇದ್ದಿದ್ದರೆ ದಲಿತರ ಸ್ಥಿತಿ ಈಗಿರು ವುದಕ್ಕಿಂತ ಉತ್ತಮವಾಗಿರಬಹುದಿತ್ತು ಎಂದು ಬಿ.ಕೃಷ್ಣಪ್ಪನವರು ಹೇಳಿದ್ದಾರೆ.

ಅಂಬೇಡ್ಕರ್ ಅವರು ಬದುಕಿದ ಕಾಲಕ್ಕಿಂತ ಅವರು ಪರಿನಿರ್ವಾಣ ಹೊಂದಿದ ಕಾಲದಲ್ಲಿ ಅವರು ಬೃಹದಾಕಾರವಾಗಿ ಬೆಳೆದಿದ್ದಾರೆ. ಅವರಿಗೆ ಭಾರತರತ್ನ ಮರಣೋತ್ತರ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಪಾರ್ಲಿಮೆಂಟ್ ಭವನದಲ್ಲಿ ಅವರ ಭಾವಚಿತ್ರ ಅನಾವರಣ ಮಾಡಲಾಗಿದೆ. ವಿಧಾನಸೌಧದ ಮುಂದೆ ಅವರ ಮೂರ್ತಿಯನ್ನು ಕಡೆದು ನಿಲ್ಲಿಸಲಾಗಿದೆ. ಬೀದಿ ಬೀದಿಗಳಿಗೆ ಅವರ ಹೆಸರುಗಳನ್ನು ಇಡಲಾಗಿದೆ. ವಿಶ್ವವಿದ್ಯಾನಿಲಯಗಳಲ್ಲಿ ಅಂಬೇಡ್ಕರ್ ಅಧ್ಯಯನ ಪೀಠಗಳು ಸ್ಥಾಪನೆಗೊಂಡಿದೆ. ಅಂಬೇಡ್ಕರ್ ಅವರ ಹೆಸರಿನಲ್ಲಿ ಲಕ್ಷಾಂತರ ಸಂಘಸಂಸ್ಥೆಗಳು ಹುಟ್ಟಿಕೊಂಡಿವೆ. ಅವರ ಅಭಿಮಾನಿಗಳ ಸಂಖ್ಯೆ ಅವರು ಬದುಕಿದ್ದ ಕಾಲಕ್ಕಿಂತ ನೂರುಪಟ್ಟು, ಸಾವಿರಪಟ್ಟು ಹೆಚ್ಚಾಗಿದೆ ಎಂದು ಪ್ರೊ.ಬಿ.ಕೃಷ್ಣಪ್ಪನವರು ಅಭಿಪ್ರಾಯಪಡುತ್ತಾರೆ. ಅಂಬೇಡ್ಕರ್ ಅವರು ದೇಶಕ್ಕೆ ಸಮಗ್ರ

ರಾಜ್ಯಾಂಗವನ್ನು ಬರೆದುಕೊಟ್ಟರು. ಅವರ ಚಿಂತನೆ, ಬರಹಗಳು, ಕೆಳವರ್ಗದ ಜನರಲ್ಲಿ ಸ್ವಾಭಿಮಾನ, ಆತ್ಮಗೌರವಗಳನ್ನು ತುಂಬಿದೆ. ಅಂಬೇಡ್ಕರ್ ಒಬ್ಬ ಮಹಾನ್ ಹೋರಾಟಗಾರ, ಮಾನವತಾವಾದಿಯಾಗಿದ್ದರು. ಇಂದು ಭಾರತದ ಆದರ್ಶಪುರುಷರಾಗಿದ್ದಾರೆ.

೪.೧೨. ದಲಿತರು ಮತ್ತು ಮತಾಂತರ

ಈ ದೇಶದ ಶಾಪವಾಗಿರುವ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯು ಜಾತಿಯ ನೆಲೆಯಲ್ಲಿ ಹಿಂದೂಧರ್ಮದಲ್ಲಿ ಕಂಡುಬರುವ ಕೆಟ್ಟ ಜಾತಿ ಅಸ್ಪೃಶ್ಯತೆಯ ಕರಾಳ ಆಚರಣೆಯ ವಿರುದ್ಧ ಅಂದರೆ ಅಸ್ಪೃಶ್ಯರು ವಿದ್ಯಾವಂತರಾದಂತೆಲ್ಲ, ಸ್ವಾಭಿಮಾನಿಗಳಾಗಿ ಈ ಕೆಟ್ಟ ವ್ಯವಸ್ಥೆಯ ವಿರುದ್ಧ ತಿರುಗಿಬಿದ್ದರು. ಅದು ತಮಿಳುನಾಡಿನ ಮೀನಾಕ್ಷಿಪುರಂ ದಲಿತರು ಮುಸ್ಲಿಂರಾಗುವುದರ ಮೂಲಕ ಕನ್ಯಾಕುಮಾರಿಯಿಂದ ಹಿಡಿದು ಹಿಮಾಲಯದವರೆಗೆ, ಅರಬ್ಬಿ ಸಮುದ್ರದಿಂದ ಹಿಡಿದು ಬಂಗಾಳಕೊಲ್ಲಿಯವರೆಗೆ ಹಬ್ಬಿರುವ ಈ ನೆಲದಲ್ಲಿ ದೊಡ್ಡ ಬಿರುಗಾಳಿ ಎಬ್ಬಿಸಿದ್ದಾರೆ ಎಂದು ಬಿ.ಕೃಷ್ಣಪ್ಪನವರು 'ದಲಿತರು ಮತ್ತು ಮತಾಂತರ' ಲೇಖನದಲ್ಲಿ ದಲಿತರು ಮುಸ್ಲಿಮರಾಗಿ ಮತಾಂತರವಾಗುತ್ತಿದ್ದರ ಕುರಿತು ಚರ್ಚಿಸಿದ್ದಾರೆ.

ದಲಿತರು ಅಂಬೇಡ್ಕರ್ ಮಾರ್ಗದಲ್ಲಿ ನಡೆದಿದ್ದಾರೆ. ಬೌದ್ಧ ಅಥವಾ ಕ್ರಿಶ್ಚಿಯನ್‌ರಾಗುತ್ತಿದ್ದರೆ, ಹಿಂದೂಗಳಿಗೆ ಈಗಿನಂತೆ ಬಿಸಿ ತಟ್ಟುತ್ತಿರಲಿಲ್ಲ. ಪ್ರಸ್ತುತ ಭಾರತದಲ್ಲಿ ಬೌದ್ಧ ಮತ್ತು ಕ್ರಿಶ್ಚಿಯನ್ ಧರ್ಮಗಳು ಹಿಂದೂಧರ್ಮದ ಕಕ್ಷೆ ಒಳಗೆ ಅದೆಷ್ಟೋ ರೂಪ ಪಡೆದುಕೊಂಡಿವೆ. ಅವರು ಎಂದೂ ದ್ವೇಷಿಗಳಾಗಿ ವರ್ತಿಸಿಲ್ಲ. ಆದರೆ ಮುಸ್ಲಿಂ ಮತ್ತು ಹಿಂದೂಧರ್ಮಗಳು ಶತಮಾನಗಳಿಂದ ಹಾವು ಮುಂಗುಸಿಗಳಂತೆ ಕಾದಾಡುತ್ತ, ದ್ವೇಷದ ಕಿಡಿ ಕಾರುತ್ತ ಬಂದಿರುವುದಕ್ಕೆ ಇತಿಹಾಸವೇ ಸಾಕ್ಷಿ. ಇತ್ತೀಚೆಗಂತೂ ಆರ್.ಎಸ್.ಎಸ್.ನವರು ಹಳೆಯ ಗಾಯಕ್ಕೆ ಉಪ್ಪು ಸುರಿಯುತ್ತಿದ್ದಾರೆ ಎಂದು ಕೃಷ್ಣಪ್ಪನವರು ಹೇಳಿದ್ದಾರೆ. ಅಂದಿನ ಹಿಂದೂ ರಾಜಕೀಯ, ಹಿಂದುಗಳ ಪ್ರತಿಕ್ರಿಯೆಯನ್ನು ಹೀಗೆ ಹೇಳಿದ್ದಾರೆ ಕೃಷ್ಣಪ್ಪನವರು.

"ದೇಶದ ೩೦ ಕೋಟಿ ದಲಿತರು ಮುಸ್ಲಿಂ ಧರ್ಮಕ್ಕೆ ಮತಾಂತರವಾದರೇ ಏನು ಗತಿ? ಜುಟ್ಟು ಜನಿವಾರಗಳು ಕಿತ್ತು ಹೋಗುತ್ತವೆ. ಮಠಮಾನ್ಯಗಳು ಮಸೀದಿಗಳಾಗುತ್ತವೆ. ರಾಜಕೀಯ ಅಧಿಕಾರ ಮುಸ್ಲಿಮರ ಕೈಗೆ ಹೋಗುತ್ತದೆ. ತ್ರಿವರ್ಣ ಧ್ವಜ ಹೋಗಿ ಚಂದ್ರ ಚುಕ್ಕಿ ಬಾವುಟ ಹಾರಾಡುತ್ತದೆ. ಕಾಶಿಗೆ ಬದಲಾಗಿ ಮೆಕ್ಕ ಮದೀನಗಳು ಧಾರ್ಮಿಕ ಶ್ರದ್ಧೆಯ ಕೇಂದ್ರಗಳಾಗುತ್ತವೆ. ಇದನ್ನು ಊಹಿಸಿಕೊಂಡು ಹಿಂದೂ ಮಠಾಧಿಪತಿಗಳಿಗೆ, ರಾಜಕಾರಣಿಗಳಿಗೆ ಭೇದಿ ಕಿತ್ತುಕೊಂಡಿದೆ. ಮಲಗಿದ್ದ ಮುದ್ರೆ, ನಾಮ, ವಿಭೂತಿಗಳು ಎದ್ದು ಕೂತಿವೆ. ಹಿಂದೂ ರಾಜಕಾರಣಿಗಳು ಪುರುಸೊತ್ತಿಲ್ಲದೇ ಓಡಾಡತೊಡಗಿವೆ. ಎಂದಿನಂತೆ ಹಿಂದೂ ಮೆದುಳು ವಾಸ್ತವ ಸ್ಥಿತಿಯ ಸುತ್ತ ಇಲ್ಲಸಲ್ಲದ ಕಥೆ ಕಟ್ಟತೊಡಗಿದೆ."[೨]

ಈ ರೀತಿಯಾಗಿ ಮುಸ್ಲಿಂ ಧರ್ಮಕ್ಕೆ ದಲಿತರ ಮತಾಂತರದ ಬಗ್ಗೆ ಹಿಂದೂ ರಾಜಕಾರಣಿಗಳು ಮತ್ತು ಮಠಮಾನ್ಯಗಳು ಜಾಗೃತವಾದ ಪ್ರಕ್ರಿಯೆಯನ್ನು ಕೃಷ್ಣಪ್ಪನವರು ದಲಿತರ ಮತಾಂತರ ಲೇಖನದಲ್ಲಿ ಹೇಳಿದ್ದಾರೆ. ಮುಂದುವರೆದು, ದಲಿತರು ಹಿಂದೂಧರ್ಮವನ್ನು ಬಿಟ್ಟು ಮುಸ್ಲಿಂ ಧರ್ಮ ಸೇರಲಿಕ್ಕೆ ಕಾರಣವಾದವರು ಯಾರು? ಅದಕ್ಕೆ ಕಾರಣ ಮೇಲುವರ್ಗದವರೇ ಆಗಿದ್ದಾರೆ. ಮೇಲುವರ್ಗದವರು ಅಸ್ಪೃಶ್ಯರನ್ನು ಊರಿಂದ ಹೊರಗೆ ಇಟ್ಟಿದ್ದರು. ತಮ್ಮ ನೋಟ ಅಪವಿತ್ರ ಎಂದು ಭಾವಿಸಿದ್ದರು. ದೇವಸ್ಥಾನ, ಭಾವಿ, ಕೆರೆಗಳಲ್ಲಿ ನೀರೆತ್ತುವ ಅವಕಾಶ ಕೊಡದಿದ್ದರೂ, ತಮ್ಮ ಹುಟ್ಟು ಹೀನಾಯವೆಂದು ಹೀಗಳೆಯುತ್ತಿದ್ದರು. ೫ ಸಾವಿರ ವರ್ಷಗಳಿಂದ ದಲಿತರು ತಮ್ಮನ್ನು ಹಿಂದೂಗಳು ಎಂದು ಭಾವಿಸಲಿಲ್ಲವೇ? ಹಿಂದೂ ದೇವರು, ಪುರಾಣ, ಶಾಸ್ತ್ರಗಳನ್ನು ಪರಮಪೂಜ್ಯವೆಂದು ಆರಾಧಿಸಲಿಲ್ಲವೇ? ಒದ್ದ ಕಾಲುಗಳಿಗೆ ಚಪ್ಪಲಿ ಹೊಲಿದುಕೊಡಲಿಲ್ಲವೇ? ಬೆವರು ಸುರಿಸಿ ಮೂಕಪ್ರಾಣಿಗಳಂತೆ ಜೀತ ಮಾಡಲಿಲ್ಲವೇ? ಇಷ್ಟಾದರೂ ಹಿಂದೂಗಳು ಅವರನ್ನು ಮನುಷ್ಯರೆಂದು ಭಾವಿಸಿದರೇನು? ತಮ್ಮ ಸಹ ಸೋದರರೆಂದು ಅತ್ತುಗರೆದರೇನು? ಅದರ ಬದಲಾಗಿ ಇನ್ನೂ ಹಿಂಸೆಯನ್ನೇ ನೀಡಿದರು. ಕಾಲ ಬದಲಾದಂತೆ ಅನ್ಯಾಯ, ಅಸಮಾನತೆಯ ಮುಖಗಳು ಜಾಸ್ತಿಯಾದವು. ಅಂಬೇಡ್ಕರ್ ಒಂದು ಕಡೆ ಹೀಗೆ ಹೇಳಿದ್ದಾರೆ. “ಹಿಂದೂ ಧರ್ಮದವರು ಪ್ರಾಣಿಗಳನ್ನು ನಾಯಿ, ಬೆಕ್ಕುಗಳನ್ನು ಮನೆಯೊಳಗೆ ಬಿಟ್ಟುಕೊಳ್ಳುತ್ತಾರೆ, ಆದರೆ ಅಸ್ಪೃಶ್ಯರನ್ನಲ್ಲ” ಎಂದು ಅದೇ ರೀತಿಯಾಗಿ ಅಸಮಾನತೆಯಲ್ಲಿ ಬೆಂದು ಸಾವಿರಾರು ವರ್ಷಗಳು ಜೀತಗಾರರಾಗಿ ದುಡಿದರು. ಹಿಂದೂಧರ್ಮದಲ್ಲಿ ಅನಿಷ್ಟವಾಗಿ ಏಕೆ ಬದುಕಬೇಕು? ಅಡ್ಡಬಿದ್ದವರನ್ನೆ ಮತ್ತಷ್ಟು ತುಳಿಯುವ ಈ ಲಫಂಗ ಹಿಂದೂಧರ್ಮದಲ್ಲಿ ತಾವಾದರೂ ಏಕೆ ಇರಬೇಕು ಎಂದು ದಲಿತರು ಮುಸ್ಲಿಮರಾಗುವ ಮೂಲಕ ಸಮಾನತೆಯ ಕಡೆಗೆ ನಡೆದಿದ್ದಾರೆ ಎಂದು ಹೇಳಬಹುದು.

ಭಾರತೀಯ ಜನತಾ ಪಕ್ಷದ ನಾಯಕ ವಾಜಪೇಯಿ ಸುಬ್ರಹ್ಮಣ್ಯಸ್ವಾಮಿ ನಾಮಮುದ್ರೆ, ವಿಭೂತಿ, ಜುಟ್ಟಿನ ಖದೀಮ ಮಠಾಧಿಪತಿಗಳು, ಆರ್.ಎಸ್.ಎಸ್. ಚಡ್ಡಿಗಳು, ಮೇಲುವರ್ಗ, ಅಂದಿನ ಗೃಹಮಂತ್ರಿ ಜೇಲ್ ಸಿಂಗ್ ಅಸ್ಪೃಶ್ಯರು ಮತಾಂತರ ಹೊಂದಲು ವಿದೇಶಿ ಹಣ ಕಾರಣ ಎಂದು ಹೇಳಿದ್ದಾರೆ. ಆದರೆ ಸ್ಟೇಟ್ ಗೃಹಸಚಿವರಾದ ಯೋಗೀಂದ್ರ ಮಕ್ವಾನ್ “ಮತಾಂತರಕ್ಕೆ ಸಾಮಾಜಿಕ ಅವಹೇಳನ ಕಾರಣ” ಎಂದಿದ್ದಾರೆ. ಅದೇ ರೀತಿ ಪೇಜಾವರ ಮಠಾಧಿಪತಿಯು “ಮತಾಂತರಕ್ಕೆ ಸಾಮಾಜಿಕ ಅಸಮಾಧಾನವೇ ಕಾರಣ” ಎಂದಿರುವುದು ಗಮನಾರ್ಹ. ಇದರಲ್ಲಿ ಯಾವುದು ಮೂಲಭೂತ? ಯಾವುದು ನಿಜ? ಯಾವುದು ಸುಳ್ಳು? ಎಂದು ಕೃಷ್ಣಪ್ಪನವರು ಅಸ್ಪೃಶ್ಯರ ಪರವಾಗಿ ಸಮಾಜಕ್ಕೆ ಪ್ರಶ್ನೆಗಳ ಮೂಲಕ ಉತ್ತರ ಹೇಳಿದ್ದಾರೆ. ಹಾಗೆಯೇ ಭಾರತೀಯ ಮೌಢ್ಯತೆಯ ಪ್ರತೀಕವಾದ ಜಾತಿವ್ಯವಸ್ಥೆಯನ್ನು ಮತಾಂತರದ ಮೂಲಕ ಪ್ರತಿರೋಧ ತೋರಿದ್ದಾರೆ. ಹಣಕ್ಕಾಗಿಯೇ ಅಸ್ಪೃಶ್ಯರು ಮತಾಂತರಗೊಳ್ಳುವುದಾಗಿದ್ದರೆ, ಬ್ರಿಟಿಷರ ಕ್ರಿಶ್ಚಿಯನ್ ಧರ್ಮಕ್ಕೆ ದಲಿತರು ಮತಾಂತರಗೊಳ್ಳುತ್ತಿದ್ದರು. ಇಲ್ಲವೇ ಅದಕ್ಕೂ ಹಿಂದೆಯೇ ಮುಸ್ಲಿಂ ಧರ್ಮಕ್ಕೆ ಸೇರುತ್ತಿದ್ದರು. ಇಷ್ಟಾದರೂ ದಲಿತರು ಹಿಂದೂ

ಧರ್ಮದಲ್ಲಿ ಉಳಿದಿರಲು ಕಾರಣ, ಅವರಲ್ಲಿ ಮೌಢ್ಯ, ಅಜ್ಞಾನ, ಅನಕ್ಷರತೆಗಳನ್ನು ಪೋಷಿಸಿಕೊಂಡು ಬಂದಿರುವ ಹಿಂದೂಧರ್ಮದ ಪರಿಸರ ಕಾರಣವಾಗಿದೆ ಎಂದು ಕೃಷ್ಣಪ್ಪನವರು ಈ ಲೇಖನದಲ್ಲಿ ಹಿಂದೂಧರ್ಮದ ಅನ್ಯಾಯ ಅಂಧಾಚರಣೆಯನ್ನು ವಿಸ್ತೃತವಾದ ರೀತಿಯ ವೈಚಾರಿಕ ಪ್ರಜ್ಞೆಯಿಂದ ಚರ್ಚಿಸಿದ್ದಾರೆ.

ಯಾವ ವಿದ್ಯಾವಂತ ದಲಿತನೇ ಆಗಲಿ, ಯಾವೊಬ್ಬ ಮಾನವತಾವಾದಿಯೇ ಆಗಲಿ, ತನ್ನನ್ನು ಕೀಳಾಗಿ ಕಾಣುವ ಯಾವ ಧರ್ಮವನ್ನೂ ಗೌರವಿಸಲಾರ, ಗೌರವಿಸುವುದಿಲ್ಲ. ದಲಿತರು ವಿದ್ಯಾವಂತ ರಾಗುತ್ತಿರುವುದರಿಂದಲೇ ಮತಾಂತರ ಹೆಚ್ಚುತ್ತಿರುವುದು. ಇದರಿಂದ ಮತಾಂತರ ನಿಷೇಧ ಮಸೂದೆ ತರಲು ಪ್ರಯತ್ನಿಸಿದ್ದಾರೆ. ಮತಾಂತರ ನಿಷೇಧ ಎಂದರೆ "ಅಸ್ಪೃಶ್ಯರು ಈ ದೇಶದಲ್ಲಿ ಅಸ್ಪೃಶ್ಯರಾಗಿಯೇ ಉಳಿಯಬೇಕು, ಸಮಾನತೆಯನ್ನು ಬಯಸಬಾರದು" ಎಂಬುದು ಆಗಿದೆ.

ಪೇಜಾವರ ಸ್ವಾಮಿಗಳು ಅಸ್ಪೃಶ್ಯರ ಕಾಲೋನಿಗೆ ಹೋದ ಮಾತ್ರಕ್ಕೆ, ಬ್ರಾಹ್ಮಣ ಅಸ್ಪೃಶ್ಯರ ಮನೆಯಲ್ಲಿ ಭೋಜನ ಮಾಡಿದ ಮಾತ್ರಕ್ಕೆ ಜಾತೀಯತೆ ಹೋಗಲಾರದು. ಜಾತಿಬೇರುಗಳು ಇರುವುದು ಹಿಂದೂಧರ್ಮದಲ್ಲಿ. ಜನನ, ವೈವಾಹಿಕ ಮತ್ತು ಮರಣ ಕಾಲಗಳಲ್ಲಿ ನಡೆಸುವ ಕ್ರಿಯೆಗಳಲ್ಲಿ. ಮನು ಧರ್ಮಶಾಸ್ತ್ರ, ಗೃಹಸೂತ್ರ ಪುರಾಣಗಳನ್ನು ನಾಶ ಮಾಡುವುದಾದರೆ ಜಾತಿ ಹೋಗಲು ಸಾಧ್ಯ.

ಹಿಂದೂಧರ್ಮ ಸಮಗ್ರ ಘಟಕವಾಗಿರುತ್ತಿದ್ದರೆ, ಜಾತಿನಾಶ ಸುಲಭವಾಗಬಹುದಿತ್ತು. ಆದರೆ ಬ್ರಾಹ್ಮಣ ಜಾತಿ ಬಿಡುತ್ತೇನೆ ಎಂದರೆ ಲಿಂಗಾಯತರು? ಗೌಡರು? ಕನಿಷ್ಠ ಅಗಸ? ಕುಂಬಾರ? ಇಂಥ ಭಿನ್ನ ಘಟಕಗಳು ಒಂದೊಂದೂ ಜಾತಿಕಲ್ಪನೆಯಿಂದ ಹೊರಬರಬೇಕಾದರೆ ಶತಮಾನಗಳು ಹಿಡಿದೀತು. ದಲಿತರಿಗೆ ಬೇಕಾಗಿರುವುದು ಜಾತಿ, ನೋವು, ತುಳಿತಗಳಿಂದ ತಕ್ಷಣ ಪರಿಹಾರ. ಅವರ ಬೇಡಿಕೆಯನ್ನು ಹಿಂದೂಧರ್ಮ ಪೂರೈಸಲಾರದು. ಅದು ಸಾಧ್ಯವೂ ಇಲ್ಲ. ಆದ್ದರಿಂದ ಜೀತ, ಅವಮಾನ, ಹಿಂಸೆಗಳಿಂದ ಬಿಡುಗಡೆ ಹೊಂದಲು ದಲಿತರಿಗೆ ಉಳಿದ ಮಾರ್ಗ ಮತಾಂತರವೊಂದೇ. ಆದರೆ ಯಾವ ಮತ? ಈ ಬಗ್ಗೆ ರಾಷ್ಟ್ರಮಟ್ಟದಲ್ಲಿ ದಲಿತರು ಚರ್ಚಿಸಬೇಕಾಗಿದೆ. ಸಮಗ್ರವಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಈ ಮಧ್ಯೆ ಯಾವುದೇ ಪೂರ್ವಚಿಂತನೆ ಇಲ್ಲದೇ ಹಸಿ ಹಸಿಯಾಗಿ ಮತಾಂತರಗೊಳ್ಳುವುದು ದಲಿತರ ಪಾಲಿಗೆ ವರವಾಗುವ ಬದಲು ಶಾಪವಾಗಿ ಪರಿಣಮಿಸಬಹುದು ಎಂದು ಬಿ.ಕೃಷ್ಣಪ್ಪನವರು ದಲಿತರು ಮತ್ತು ಮತಾಂತರ ಲೇಖನದಲ್ಲಿ ದಲಿತರ ನೋವುಗಳನ್ನು, ಅವರ ಅಸಮಾನತೆಯನ್ನು, ಅನ್ಯಾಯದ ವಿರುದ್ಧ ಮತಾಂತರದ ಮೂಲಕ ಧ್ವನಿ ಎತ್ತಿದ್ದಾರೆ ಎಂದು ಇದರಲ್ಲಿ ಹೇಳಿದ್ದಾರೆ. ಹಿಂದೂಧರ್ಮದಲ್ಲಿ ಸಾಮಾಜಿಕವಾಗಿ ಬಹಿಷ್ಕಾರ ಸಲ್ಲದು. ಅಸ್ಪೃಶ್ಯರಿಗೆ ಸ್ವಾಭಿಮಾನದ ಬದುಕು ಬೇಕು. ಅದಕ್ಕೆ ಅದು ಹಿಂದೂಧರ್ಮದಲ್ಲಿ ಇಲ್ಲ. ಆದ್ದರಿಂದ ದಲಿತರು ಮತಾಂತರವಾಗುತ್ತಿರುವುದು ಸಹಜ ಪ್ರಕ್ರಿಯೆ ಎಂದು ಹೇಳಬಹುದು.

೪.೧.೩. ಜಾತಿ ವಿನಾಶ

ಜಾತಿ ಈ ದೇಶದಲ್ಲಿ ೬ ಸಾವಿರ ವರ್ಷಗಳಿಂದ ಒಂದು ಬಹುದೊಡ್ಡ ಸಮಸ್ಯೆಯಾಗಿದೆ. ಆದರೆ ಅದು ಮೇಲುವರ್ಗದ ಭಾರತೀಯರಿಗೆ ಸಮಸ್ಯೆ ಅಲ್ಲ. ಆದರೆ ಕೆಳವರ್ಗದ ದಲಿತರಿಗೆ ನಿತ್ಯ ನರಕವಾಗಿದೆ. ಈ ಜಾತಿವ್ಯವಸ್ಥೆಯಿಂದಲೇ ಸಾವಿರಾರು ವರ್ಷ ಗುಲಾಮರಾಗಿ ದಲಿತರು ಬಾಳಿ ಬದುಕಿದ್ದಾರೆ. ಈಗಲೂ ಇದರಿಂದ ಸಾವಿರಾರು ಕಷ್ಟಗಳು ಬರುತ್ತಿವೆ. ಜಾತಿವ್ಯವಸ್ಥೆಯ ಅನ್ಯಾಯ, ಅಸಮಾನತೆ, ದೌರ್ಜನ್ಯಗಳು ಕೆಳವರ್ಗದವರ ಮೇಲೆ ನಿತ್ಯ ನಿರಂತರತೆಯನ್ನು ತಂದುಕೊಟ್ಟಿದೆ.

ಪ್ರತ್ಯಕ್ಷವಾಗಲಿ, ಅಪ್ರತ್ಯಕ್ಷವಾಗಲೀ ಭಾರತದ ಇಂದಿನ ತಪ್ಪುಗಳೆಲ್ಲ ಜಾತೀಯತೆ, ಮತೀಯತೆ ಹಾಗೂ ಪ್ರಾಂತೀಯತೆಗೆ ಸಂಬಂಧಿಸಿವೆ. ಪ್ರಸ್ತುತದಲ್ಲಿ ಜಾತಿವ್ಯವಸ್ಥೆ ತೀರ ಕೆಟ್ಟದಾಗಿದೆ. ಅವುಗಳನ್ನು ಕುರಿತು ಪ್ರೊ.ಬಿ.ಕೃಷ್ಣಪ್ಪನವರು 'ಜಾತಿವಿನಾಶ' ಎಂಬ ಲೇಖನದಲ್ಲಿ ಜಾತಿಯ ಸಮಸ್ಯೆ ಮತ್ತು ಜಾತಿವ್ಯವಸ್ಥೆ ಹಾಗೂ ಅದರಿಂದ ಅನ್ಯಾಯಕ್ಕೆ ಒಳಗಾಗುವ ದಲಿತರನ್ನು ಕುರಿತು ಮತ್ತು ಜಾತಿ ವಿನಾಶದ ಕುರಿತು ಈ ಲೇಖನದಲ್ಲಿ ಕೃಷ್ಣಪ್ಪನವರು ಚರ್ಚಿಸಿದ್ದಾರೆ. ಮುಂದುವರೆದು ಅಸ್ಪೃಶ್ಯತೆಯನ್ನು ನಿಷೇಧಿಸಿದ್ದೇ ಆದರೆ, ಕೊನೆಯ ಪಕ್ಷ ಜಾತೀಯತೆಯ ಕೊಂಡಿ ಸಡಿಲವಾಗುವುದೆಂದು ಬಹಳ ಜನ ತಪ್ಪಾಗಿಯಾದರೂ ಯೋಚಿಸುತ್ತಾರೆ. ಅಸ್ಪೃಶ್ಯತಾ ಆಚರಣೆ ಅಪರಾಧವೆಂದು ಘೋಷಿಸಲಾಗಿದ್ದರೂ, ಜಾತಿಭಾವನೆಯಲ್ಲಿ ಯಾವುದೇ ಬದಲಾವಣೆಯನ್ನು ಯಾರೂ ಇದುವರೆಗೂ ಅನುಭವಿಸಿಲ್ಲ ಎಂದು ಬಿ.ಕೃಷ್ಣಪ್ಪನವರು ಈ ಲೇಖನದಲ್ಲಿ ಪ್ರಸ್ತುತಪಡಿಸಿದ್ದಾರೆ.

ಸಾವಿರ ವರ್ಷಗಳ ಹಿಂದೆ ಇದ್ದಂತೆ, ನಾಲ್ಕು ವರ್ಣಗಳ ವಿಭಜನೆಗಳು, ಅವುಗಳ ಉಪಭಾಗಗಳು ಇಂದಿಗೂ ಜೀವಂತವಾಗಿದೆ. ಮಾನವತ್ವದ ಬಹುದೊಡ್ಡ ಅಪರಾಧವಾದ ಜಾತೀಯತೆಯ ಬಗ್ಗೆ ಯಾರು ಪಿತೂರಿ ಮಾಡಿದ್ದಾರೊ ಅವರು ಎಂದಿಗೂ ಸಮಾಜದ ಉನ್ನತ ಸ್ಥಾನದಲ್ಲಿಯೇ ಉಳಿದಿದ್ದಾರೆ ಎಂದು ಬಿ.ಕೃಷ್ಣಪ್ಪನವರು ಈ 'ಜಾತಿವಿನಾಶ' ಲೇಖನದಲ್ಲಿ ಹೇಳಿದ್ದಾರೆ. ಮುಂದುವರೆದು ಭಾರತೀಯ ಸರ್ಕಾರದ ನಿಲುವನ್ನು ಹೀಗೆ ಹೇಳಿದ್ದಾರೆ.

"ವರ್ಣದ್ವೇಷದ ಅಪರಾಧಕ್ಕಾಗಿ ಬಿಳಿಯರನ್ನು ಟೀಕಿಸುವ ಭಾರತ ಸರ್ಕಾರವು ತನ್ನ ದೇಶದಲ್ಲಿ ಜಾತೀಯತೆ ಮುಂದುವರಿಯಲು ಅವಕಾಶ ಕೊಟ್ಟಿರುವುದನ್ನು ಕಂಡರೆ ಯಾರಿಗೂ ಆಶ್ಚರ್ಯವಾಗುತ್ತದೆ. ವರ್ಣನೀತಿಯು ಕಪ್ಪು ಮತ್ತು ಬಿಳಿಯರಿಂದ ಪ್ರತ್ಯೇಕಿಸುವುದಾದರೆ, ಜಾತೀಯತೆ ಎನ್ನುವುದು ಒಂದೇ ಜನಾಂಗ ಇಲ್ಲವೇ ಒಂದೇ ಧರ್ಮದ ಭಿನ್ನ ತರಗತಿಯ ಜನರನ್ನ ಪ್ರತ್ಯೇಕಿಸುವುದಾಗಿದೆ. ಒಂದು ಪಕ್ಷ ವರ್ಣನೀತಿ ಎನ್ನುವುದು ಅಪರಾಧ ಎನ್ನುವುದಾದರೆ, ಜಾತೀಯತೆ ನಿಜಕ್ಕೂ ಮಹಾಪಾತಕವಾಗಿದೆ. ಭಾರತ ಸರ್ಕಾರ ಕೇವಲ ವರ್ಣನೀತಿಯನ್ನು ಟೀಕಿಸುವುದೇ ಅಲ್ಲ. ಅದನ್ನು ಅನುಸರಿಸುವ ಯಾವುದೇ ದೇಶದೊಂದಿಗೆ ತನ್ನ ಸಂಬಂಧವನ್ನು ಕಡಿದುಕೊಂಡಿದೆ. ಆದರೂ

ಮಹಾ ಅಪರಾಧವಾದ ಜಾತೀಯತೆ ಮಾಡುವ ತನ್ನ ಜನರ ವಿರುದ್ಧ ಏನು ಮಾಡದಿರುವುದು ಅತ್ಯಂತ ವಿಸ್ಮಯ ಸಂಗತಿಯಾಗಿದೆ”[೩] ಎಂದು ಭಾರತ ಸರ್ಕಾರ ದಲಿತರಿಗೆ ಮಾಡುತ್ತಿರುವ ಮಹಾ ದ್ರೋಹವನ್ನು ಟೀಕಿಸಿದ್ದಾರೆ.

ಭಾರತದ ಯಾವುದೇ ಧರ್ಮಗ್ರಂಥಗಳಲ್ಲಿ ಮನುಷ್ಯನನ್ನು ವೈಶ್ಯ, ಶೂದ್ರ ಎಂದು ಉಲ್ಲೇಖಿಸಲಾಗಿದೆ. ಗೀತೆಯಲ್ಲೂ ಕೂಡ ಶ್ರೀಕೃಷ್ಣನು ತಾನು ಮಾನವರಲ್ಲಿಯೇ ಬ್ರಾಹ್ಮಣನೆಂದು ಹೇಳಿಕೊಂಡಿದ್ದಾನೆ. ಇದಕ್ಕೆ ಸರಳವಾದ ಕಾರಣವೊಂದಿದೆ. ಎಲ್ಲ ಹಿಂದೂ ಧಾರ್ಮಿಕ ಗ್ರಂಥಗಳನ್ನು ಬರೆದವರು ಬ್ರಾಹ್ಮಣರು. ಅವರೇ ಜಾತಿಯನ್ನು ಸೃಷ್ಟಿಸಿದವರು ಮತ್ತು ಹರಡಿದವರು. ಅವರು ತಮಗಾಗಿ ಯಾವ ಸವಲತ್ತುಗಳನ್ನು ಉಳಿಸಿಕೊಳ್ಳಬೇಕಾಗಿತ್ತೊ ಅದನ್ನು ಉಳಿದವರಿಗೆ ಇಲ್ಲದಂತೆ ಮಾಡಿದರು ಎಂದು ಬಿ.ಕೃಷ್ಣಪ್ಪನವರು ತಮ್ಮ ಲೇಖನದಲ್ಲಿ ವೈದಿಕಶಾಹಿ ಹಿಂದೂಧರ್ಮವನ್ನು ಟೀಕಿಸಿದ್ದಾರೆ.

ಬಿ.ಕೃಷ್ಣಪ್ಪನವರು ಹಿಂದೂ ಧಾರ್ಮಿಕ ಗ್ರಂಥಗಳ ಮನುಸ್ಮೃತಿಯನ್ನು ಹೀಗೆ ನೋಡಿದ್ದಾರೆ.

“ವಿಪ್ರಶ್ಯ ಶೈವ ಶೂದ್ರಸ್ಯ ವಿಶಿಷ್ಟಂ ಕರ್ಮಕ್ರಿಯತೆ
ಯದ್ ತೋನ್ಯದ್ಧಿ ಕುರುತೆ ತದ್ಧು ವಸ್ತಕ್ತಿ ನಿಷ್ಫಲಂ”

ಬ್ರಾಹ್ಮಣನ ಸೇವೆ ಮಾಡುವುದೇ ಶೂದ್ರನ ಶ್ರೇಷ್ಠ ಕರ್ತವ್ಯ. ಆದ್ದರಿಂದ ಅವನು ಬೇರೆ ಏನನ್ನು ಮಾಡಿದರೂ ಅದು ನಿಷ್ಫಲವಾಗುತ್ತದೆ.

“ನ ಬ್ರಾಹ್ಮಣ್ವಧದ್ ಅಭ್ಯಂಧರ್ಮೋ ವಿದ್ಯತೇ ಭೂವಿ
ತಸ್ಮಾ ದಶ್ಯವಧಂ ರಾಜ ಮನಸಪಿನ ಚಿಂತಯೇತ್”[೪]

ಬ್ರಾಹ್ಮಣನನ್ನು ಕೊಲ್ಲುವುದಕ್ಕಿಂತ ಹೆಚ್ಚಿನ ಪಾಪ ಈ ಲೋಕದಲ್ಲಿ ಯಾವುದೂ ಇಲ್ಲ. ಆದ್ದರಿಂದ ರಾಜನು ಅವನ ಕೊಲೆಯ ಬಗ್ಗೆ ಯೋಚಿಸಲೂ ಕೂಡದು.

“ನಮ್ಜತಿಗ್ರಮ್ ತ್ವೇಷಮನಿದ್ರೋಹಂ ಕುರ್ವಥಾ
ನಿಕ್ಷೇಪೊಯೋಮಃ ಶಕುರ್ಜ್ವಲನ್ನಸ್ಸೇ ದಶಂಗುಲಃ”

ಒಂದು ಪಕ್ಷ ಶೂದ್ರನು ಬ್ರಾಹ್ಮಣನ ಜಾತಿ ಅಥವಾ ಹೆಸರನ್ನು ಅವಹೇಳನ ಮಾಡಿದ್ದೇ ಆದರೆ ಅವನ ಮೂಗಿನಲ್ಲಿ ಹತ್ತು ಬೆರಳುದ್ದದ ಕೆಂಪಾದ ಮೊಳೆಯನ್ನು ಬಡಿಯಬೇಕು.

“ಸ್ವಮೇವ ಬ್ರಾಹ್ಮಣೋ ಭುಂಕ್ತೇ ಸ್ವಂವಸ್ಸೇ ಸ್ಪಂದಧಾತೀಚ
ಅರ್ನಿಶನ್ನ್ಯದ ಬ್ರಾಹ್ಮಣಸ್ಯ ಭೂಂಜತೇ ಇತರೆ ಜಿನಾ”

ಬ್ರಾಹ್ಮಣ ತಿನ್ನುವ, ಉಡುವ ಅಥವಾ ಇತರರಿಗೆ ಕೊಡುವ ಯಾವುದೇ ಆಗಲಿ ಅದು ಅವನಿಗೆ ಸೇರಿದ್ದು. ಆದರೆ ಪ್ರಪಂಚದ ಉಳಿದ ಜನರೆಲ್ಲ ತಿನ್ನುವುದು, ಕುಡಿಯುವುದು ಇತರರಿಗೆ ಕೊಡುವುದು ಅಥವಾ ತೆಗೆದುಕೊಳ್ಳುವುದು ಎಲ್ಲವೂ ಬ್ರಾಹ್ಮಣನ ಕೃಪೆಯಿಂದ. ಈ ಮೇಲಿನ ಅಂಶಗಳನ್ನು ನೋಡಿದರೆ ಹಿಂದೂಧರ್ಮ ರೋಗಗ್ರಸ್ತ ಯೋಚನೆಗಳನ್ನು ಹೊಂದಿದೆ ಎಂದು ನಾವು ಹೇಳಬಹುದು. ಅವುಗಳು ಕೇವಲ ಬ್ರಾಹ್ಮಣರ ಅನುಕೂಲಕ್ಕೆ ಮಾತ್ರ ಮೀಸಲಾಗಿದೆ. ಉಳಿದ ಧರ್ಮಗಳ ಜನರಂತೆಯೇ ಹಿಂದೂಗಳು ಕೂಡ ಕುರುಡುನಂಬಿಕೆಯನ್ನು ಹೊಂದಿರುವುದು ಮನುಧರ್ಮಶಾಸ್ತ್ರವನ್ನು ಓದಿದರೆ ತಿಳಿಯುತ್ತದೆ. ಪ್ರಸ್ತುತ ಹಿಂದೂ ಜನರಲ್ಲಿರುವ ಒಂದೇ ಒಂದು ತಿಳುವಳಿಕೆ ಎಂದರೆ ತಾನು ಇಂತಹ ನಿರ್ದಿಷ್ಟ ಜಾತಿಗೆ ಸೇರಿದವನೆಂದು ಪ್ರತಿಯೊಬ್ಬನೂ ನಂಬುತ್ತಾನೆ. ಜಾತಿ ಚೌಕಟ್ಟಿನ ಒಳಗಿರಲು ಪ್ರಯತ್ನಿಸುತ್ತಾನೆ. ಅದಕ್ಕಾಗಿ ಹೆಮ್ಮೆಯನ್ನು ಪಡುತ್ತಾನೆ. ಇದು ಹಿಂದೂಧರ್ಮದ ಜಾತಿ ಬಗ್ಗೆ ಇರುವ ಅಜ್ಞಾನದ ಪರಮಾವಧಿ ಎಂದು ನಾವು ಹೇಳಬಹುದು.

ಸಾವಿರಾರು ವರ್ಷಗಳ ಹಿಂದೆ ಮಾಡುವ ಕೆಲಸದ ಮೇಲೆ ಜಾತಿ ಕಟ್ಟಿದ ಬ್ರಾಹ್ಮಣರ ಹೊಡೆದು ಆಳುವ ನೀತಿಯನ್ನು ಇಂದು ಒಪ್ಪಿಕೊಂಡು ಮುಂದುವರಿಯುತ್ತಿರುವುದು ಭಾರತ ದೇಶದ ದುರಂತವೆಂದು ಹೇಳಬಹುದು. ಭಾರತ ದೇಶದಲ್ಲಿ ಜಾತಿ ಮುಂದುವರಿಯುವುದಾದರೆ ಅದು ಜನರ ತಪ್ಪಲ್ಲ, ಅದು ಸರ್ಕಾರದ ತಪ್ಪು. ಜನರೇ ಜಾತಿಯನ್ನು ನಾಶಗೊಳಿಸಬೇಕೇ ಹೊರತು ಹಿಂದೂಧರ್ಮದ ಸಾಮಾಜಿಕ ವ್ಯವಸ್ಥೆಯನ್ನು ಸರ್ಕಾರ ಬದಲಾಯಿಸಲು ಸಾಧ್ಯವಿಲ್ಲ ಎಂದು ನಂಬುವುದು ತಪ್ಪು. ಸಮಾಜ ಜನರಿಂದ ರಚಿತವಾಗಿದೆ. ಸಾಮಾಜಿಕ ವ್ಯವಸ್ಥೆಯನ್ನು ಕಾಲಕ್ಕೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಕಾನೂನು ಇಲ್ಲವೇ ಮತ್ತಾವುದೇ ವಿಧಾನದಿಂದ ಬದಲಾಯಿಸುವ ಹಕ್ಕು ಸರ್ಕಾರದ್ದು ಹಾಗೂ ಪ್ರತಿಯೊಬ್ಬನಿಗೂ ಇದೆ ಎಂಬುದನ್ನು ಬಹುಶಃ ಮರೆಯಲಾಗಿದೆ ಎಂದು ಬಿ.ಕೃಷ್ಣಪ್ಪನವರು ಜಾತಿವಿನಾಶ ಲೇಖನದಲ್ಲಿ ಹೇಳಿದ್ದಾರೆ. ಅಂತರ್ಜಾತೀಯ ವಿವಾಹದಿಂದ ಜಾತಿವಿನಾಶವಾಗುವುದಿಲ್ಲ. ಇದು ಒಂದು ಜಾತಿಯಿಂದ ಮತ್ತೊಂದು ಜಾತಿಗೆ ಮಾಡುವ ಸರಳ ಪರಿವರ್ತನೆಯಾಗಿದೆ ಎಂದು ಸ್ವತಃ ಅಂತರ್ಜಾತಿ ವಿವಾಹವಾದ ಬಿ.ಕೃಷ್ಣಪ್ಪನವರು ಹೇಳಿದ್ದಾರೆ.

ಹಿಂದೂಗಳಿಗೆ ಅಸ್ಪೃಶ್ಯತೆ ಸಾಮಾಜಿಕ ಸಮಸ್ಯೆಯಾಗಿ ಅದನ್ನು ರದ್ದುಗೊಳಿಸಲು ಸರ್ಕಾರ ಶಾಸನ ಮಾಡಿದೆ. ಅದೇ ಸರ್ಕಾರ ಅಸ್ಪೃಶ್ಯತೆಗಿಂತಲೂ ಗಂಭೀರವಾಗಿರುವ ಜಾತಿ ಒಂದು ಸಮಸ್ಯೆಯೆಂದು ಭಾವಿಸಲು ನಾಚಿಕೆ ಪಡುತ್ತಿರುವುದು ದುರಂತವಾಗಿದೆ.

ಶ್ರೇಷ್ಠ ವಿದ್ಯಾವಂತ ಭಾರತೀಯರು ಪ್ರಗತಿಗಾಮಿಗಳೆನಿಸಿಕೊಂಡವರಲ್ಲಿ ಶೇಕಡ ಒಂದು ಭಾಗದಷ್ಟು ಜನ ಜಾತಿವಿನಾಶದ ಬಗ್ಗೆ ಎಂದಿಗೂ ಧ್ವನಿ ಎತ್ತದಿರುವಾಗ ಅವಿದ್ಯಾವಂತ ಜನಸಾಮಾನ್ಯರು, ಜಾತೀಯತೆ ಬಗ್ಗೆ ಕುತೂಹಲ ತೋರಿಸಬೇಕೆಂದು ಸರ್ಕಾರ ಬಯಸಕೂಡದು. ಶಾಸನ ಮಾಡುವುದರ ಮೂಲಕ ಸರ್ಕಾರವೊಂದೇ ಜಾತೀಯತೆ ನಿರ್ಮೂಲನೆ ಮಾಡಬೇಕು. ಶಾಸನದ ಮೂಲಕ ಅಸ್ಪೃಶ್ಯತೆ

ನಿರ್ಮೂಲನೆ ಮಾಡಲು ಪ್ರಯತ್ನಿಸುವುದಾದರೆ ಅದನ್ನೇ ಜಾತೀಯತೆಯ ವಿರುದ್ಧ ಏಕೆ ಮಾಡಬಾರದು ಎಂದು ಕೃಷ್ಣಪ್ಪನವರು ಜಾತಿವಿನಾಶದ ಕುರಿತು ಹೇಳಿದ್ದಾರೆ.

ಜಾತಿ ಸೂಚಿಸುವ ಅಥವಾ ಅಡ್ಡ ಹೆಸರುಗಳ ಉಪಯೋಗವನ್ನು ನಿಷೇಧಿಸಬೇಕು. ರಾಜಕೀಯ ಪಕ್ಷಗಳು ಜಾತಿ ಸೂಚಿಸುವ ಅಡ್ಡ ಹೆಸರುಗಳನ್ನು ಬಿಟ್ಟುಬಿಡಬೇಕೆಂದು ಆಜ್ಞೆ ಹೊರಡಿಸಬೇಕು. ಜಾತಿ ಆಧಾರದ ಮೇಲೆ ಯಾವುದೇ ಧಾರ್ಮಿಕ, ಪರೋಪಕಾರಿ ಟ್ರಸ್ಟ್ ಅಥವಾ ಸಾಮಾಜಿಕ ಸಂಸ್ಥೆ ರಚನೆಯಾಗಲು ಬಿಡಕೂಡದು. ಎಲ್ಲಾ ವಿದ್ಯಾಸಂಸ್ಥೆಗಳು ಜಾತಿ ಸೂಚಿಸುವ ವಿದ್ಯಾರ್ಥಿಗಳ ಅಡ್ಡ ಹೆಸರುಗಳನ್ನು ತೆಗೆದು ಹಾಕಬೇಕು. ಜನತಾ ಮಾಧ್ಯಮಗಳಾದ ಸಿನಿಮಾ, ರೇಡಿಯೋ, ವರ್ತಮಾನ ಪತ್ರಿಕೆಗಳು, ಪ್ರತ್ಯಕ್ಷವಾಗಲಿ, ಪರೋಕ್ಷವಾಗಲಿ, ಜಾತಿ ಉಲ್ಲೇಖ ಮಾಡಬಾರದು. ಪಠ್ಯಕ್ರಮವು ಸಹ ಜಾತಿ ಉಲ್ಲೇಖಗಳಿಂದ ದೂರವಿರಬೇಕು. ಹಿಂದೂ ಧರ್ಮಗ್ರಂಥಗಳನ್ನು ಸಹ ಜಾತಿ ಉಲ್ಲೇಖದಿಂದ ಪರಿಷ್ಕರಣ ಮಾಡಬೇಕು. ಈ ದಿಶೆಯಲ್ಲಿ ನಡೆದಿದ್ದೇ ಆದರೆ ಜಾತಿನಾಶವಾಗಬಹುದು ಎಂದು ಜಾತಿವಿನಾಶ ಲೇಖನದಲ್ಲಿ ತಮ್ಮ ವೈಚಾರಿಕ ಚಿಂತನೆಯಿಂದ ಜಾತಿ ನಾಶ ಸಾಧ್ಯವೆಂದು ಹೇಳಿದ್ದಾರೆ.

ಭಾರತದೇಶದಲ್ಲಿ ಜಾತಿ ಒಂದು ದೊಡ್ಡ ಸಮಸ್ಯೆ. ಆ ಸಮಸ್ಯೆಯನ್ನು ವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದಿಂದ ಎಲ್ಲಾ ರೀತಿಯಿಂದಲೂ ಅದಕ್ಕೆ ಕಾನೂನು ಜಾರಿಗೆ ತಂದು ಅದನ್ನು ನಾಶ ಮಾಡಬೇಕು ಎಂದು ಹೇಳಬಹುದು. 'ಜಾತಿವಿನಾಶ' ಎಂಬ ಬಿ.ಕೃಷ್ಣಪ್ಪನವರ ಲೇಖನದ ಮೂಲಕ ಜಾತಿಯ ಬಗ್ಗೆ ವೈಚಾರಿಕ ದೃಷ್ಟಿಯಿಂದ ವಿವೇಚಿಸಿ, ಸರ್ಕಾರಕ್ಕೆ ಸಲಹೆ ನೀಡಿದ್ದಾರೆ ಎನ್ನಬಹುದು.

೪.೪. ಮೀಸಲಾತಿ ಮತ್ತು ದಲಿತರು

ಈ ದೇಶದಲ್ಲಿ ಜಾತೀಯತೆಯಿಂದ ಮೇಲು-ಕೀಳು ಅಸಮಾನತೆಯ ಅನ್ಯಾಯವನ್ನು ಹೊಗಲಾಡಿಸಲು ಮೀಸಲಾತಿ ತರಲಾಗಿದೆ. ಅಸ್ಪೃಶ್ಯರನ್ನು ಕೂಡಿಸಿಕೊಂಡು ಎಲ್ಲ ಕೆಳಜಾತಿಗಳಿಗೆ ಸಮಾಜದಲ್ಲಿ ಸ್ಥಾನಮಾನಗಳಲ್ಲಿ, ಹೊಲೆಯ, ಮಾದಿಗ, ಹಜಾಮ, ಅಗಸ, ಕೊರಮ, ಕೊರಚ ಎಂದು ಮುಂತಾಗಿ ಹೆಸರನ್ನು ಹೇಳಿಕೊಳ್ಳಲು ನಾಚಿಕೊಳ್ಳುವ ಅಸಂಖ್ಯ ಕೋಟಿ ಕೋಟಿ ಜನರಿದ್ದಾರೆ. ಅವರಿಗೆ ಸ್ವಾಭಿಮಾನವಿಲ್ಲ. ಮೇಲುಜಾತಿಯವರೊಂದಿಗೆ ಸಮಾನರೆಂದು ನಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಾಮಾಜಿಕ ಅಸಮಾನತೆ ಹೋಗಬೇಕಾದರೆ ಮೀಸಲಾತಿ ಬೇಕು. ಈ ಕುರಿತು ಮೀಸಲಾತಿ ಮತ್ತು ದಲಿತರನ್ನು ಕುರಿತು ಬಿ.ಕೃಷ್ಣಪ್ಪನವರು ದಲಿತರಿಗೆ ಮೀಸಲಾತಿ ಏಕೆ ಕೊಡಬೇಕು ಎಂದು ಹೀಗೆ ಹೇಳಿದ್ದಾರೆ.

"ವೇದವನ್ನು ಓದಿದರೆ, ಕೇಳಿದರೆ, ನೆನಪಿಸಿಕೊಂಡರೆ ಅವರ ನಾಲಿಗೆಯನ್ನು ಸೀಳಬೇಕು, ಕಾದ ಕಬ್ಬಿಣದ ರಸವನ್ನು ಕಿವಿಯಲ್ಲಿ ಸುರಿಯಬೇಕು, ದೇಹವನ್ನು ಹರಿದು ಚೂರು ಚೂರು ಮಾಡಬೇಕು, ಎಂದೂ ಓದದ ಹಾಗೆ ಶತಮಾನಗಳ ಉದ್ದಕ್ಕೂ ಅವರ ಬಾಯನ್ನು ಕಟ್ಟಿದ್ದಕ್ಕಾಗಿ

ಜಾತಿಗೆರೆಯನ್ನು ದಾಟಿದರೆ ಮರಕ್ಕೆ ಬಿಗಿದು ಸಾಯುವವರೆಗೆ ಹೊಡೆಯಬೇಕು ಎಂದು, ಅವರ ಸಾಮಾಜಿಕ ಒಡನಾಟವನ್ನು ಪ್ರತಿಬಂಧಿಸಿದ್ದಕ್ಕಾಗಿ ಸತ್ತ ದನವನ್ನು ಹೊರಬೇಕು, ಹೇಲು ಹೊತ್ತು ಸಾಗಿಸಬೇಕು, ಊರ ಹೊರಗೆ ಹೊಲಗೇರಿಯಲ್ಲಿ ವಾಸ ಮಾಡಬೇಕು, ಬೀದಿಯಲ್ಲಿ ಹೆಜ್ಜೆಗುರುತು ಮೂಡದಂತೆ ಸೊಂಟಕ್ಕೆ ಪೊರಕೆ ಕಟ್ಟಿಕೊಂಡು ಓಡಾಡಬೇಕು, ಬೀದಿಯಲ್ಲಿ ಉಗುಳದಂತೆ ಬಾಯಿಗೆ ಮಡಿಕೆ ಕಟ್ಟಿಕೊಳ್ಳಬೇಕು, ದೇವಸ್ಥಾನ ಪ್ರವೇಶ ಮಾಡಬಾರದು, ಬಾವಿ ಕೆರೆಕಟ್ಟೆಗಳಲ್ಲಿ ನೀರು ತೆಗೆಯಬಾರದು ಎಂದು ಮುಂತಾಗಿ ಅವರನ್ನು ಸಮಾಜದಿಂದ ತಿರಸ್ಕರಿಸಿದ್ದಕ್ಕಾಗಿ ಎಲ್ಲಕ್ಕಿಂತ ಮಿಗಿಲಾಗಿ ಈ ದೇಶದ ಸಂಪತ್ತಿನ ಉತ್ಪಾದನೆಯಲ್ಲಿ ಅವರ ಶ್ರಮದ ಪಾತ್ರ ಗಮನಾರ್ಹವಾಗಿದ್ದಾಗ್ಯೂ ಆ ಶ್ರಮದ ಬೆಲೆ ಅವರಿಗೆ ದಕ್ಕದಂತೆ ದೋಚಿದ್ದಕ್ಕಾಗಿ ಇಂದು ಅವರಿಗೆ ಮೀಸಲಾತಿ ಕೊಡಬೇಕಾಗಿದೆ. ಯಾರಾದರೂ ಮೀಸಲಾತಿ ಮೇಲುಜಾತಿಯವರು ದಲಿತರಿಗೆ ತೋರಿರುವ ಅನುಕಂಪ, ಕೊಡುವ ಭಿಕ್ಷೆ ಎಂದು ಭಾವಿಸಿದ್ದರೆ ಅದು ತಪ್ಪು. ಮೀಸಲಾತಿ ಶತಮಾನಗಳ ಶೋಷಣೆಗಾಗಿ ದಲಿತರು ಆಶಿಸಿರುವ ಹಕ್ಕೇ ಹೊರತು ಅದು ಭಿಕ್ಷೆಯಲ್ಲ." ಈ ಮೇಲಿನಂತೆ ದಲಿತರಿಗೆ ಏಕೆ ಮೀಸಲಾತಿ ಕೊಡಬೇಕು ಎಂಬುದಕ್ಕೆ ಉತ್ತರವಾಗಿ ದಲಿತರ ಮೇಲೆ ಶತಮಾನಗಳಿಂದಲೂ ಸಾಮಾಜಿಕ ಅಸಮಾನತೆಯಿಂದ ನಿಕೃಷ್ಟ ಸ್ಥಿತಿಯಲ್ಲಿ ಇರುವಂತೆ ಮಾಡಿದ್ದಕ್ಕಾಗಿ ದಲಿತರಿಗೆ ಮೀಸಲಾತಿ ಕೊಡಬೇಕು ಎಂದು ವೈಚಾರಿಕ ದೃಷ್ಟಿಯಿಂದ 'ಮೀಸಲಾತಿ ಮತ್ತು ದಲಿತರು' ಲೇಖನದಲ್ಲಿ ಕೃಷ್ಣಪ್ಪನವರು ಹೇಳಿದ್ದಾರೆ.

ಮೀಸಲಾತಿಯಿಂದ ಪ್ರತಿಭೆ, ಅರ್ಹತೆ, ಯೋಗ್ಯತೆಗಳು ಹಾಳಾಗುತ್ತಿವೆ. ಮೂಲಭೂತವಾಗಿ ಇಂತಹ ವಾದಗಳು ವಸ್ತುಸ್ಥಿತಿಯ ಅರಿವಿಲ್ಲದ, ಅವೈಜ್ಞಾನಿಕವಾದ, ಸ್ವಾರ್ಥದಿಂದ ಕೂಡಿದ ವಿಚಾರಗಳಿವೆ. ಅರ್ಹತೆ, ಪ್ರತಿಭೆ, ಯೋಗ್ಯತೆಗಳು ಯಾವುದೇ ಒಂದು ಜಾತಿಯ ಜನಾಂಗದ ಸ್ವತ್ತು ಆಗಿರುವುದಿಲ್ಲ. ಹುಟ್ಟಿಗಿಂತ ನಾವು ಕಲ್ಪಿಸುವ ವಾತಾವರಣ, ಪರಿಸರ ಒಟ್ಟು ವ್ಯಕ್ತಿ ಪ್ರತಿಭಾವಂತ ಅಥವಾ ಅರ್ಹ ವ್ಯಕ್ತಿಯಾಗಲು ಕಾರಣವಾಗುತ್ತವೆ.

ದಲಿತರು ಎಂದರೆ ದಡ್ಡರು ಎಂಬ ಅವೈಜ್ಞಾನಿಕ ದೃಷ್ಟಿಕೋನವು ತಪ್ಪು. ಮೇಲುವರ್ಗ ದವರೆಲ್ಲಾ ಬುದ್ಧಿವಂತರಲ್ಲ. ಮೇಲುವರ್ಗದವರಲ್ಲಿ ಹುಟ್ಟಿದ ಎಷ್ಟೋ ಜನ ಅಸಮರ್ಥ ಅನರ್ಹ ಅಧಿಕಾರಿಗಳನ್ನು ನೋಡಬಹುದು. ಲಕ್ಷಾಂತರ ರೂಪಾಯಿ ಡೊನೇಶನ್ ಕೊಟ್ಟು ಪ್ರವೇಶ ಮತ್ತು ಕೆಲಸ ಗಿಟ್ಟಿಸಿಕೊಳ್ಳುತ್ತಿರುವ ಈ ವ್ಯವಸ್ಥೆಯಲ್ಲಿ ಅರ್ಹತೆ ಪ್ರತಿಭೆ ಪ್ರಶ್ನೆಗಳನ್ನು ಅಸ್ಪೃಶ್ಯರ ಮೇಲೆ ಮಾತ್ರ ಹೊರಿಸುತ್ತಿರುವ ಹಿನ್ನೆಲೆಯಲ್ಲಿ ಸದುದ್ದೇಶಕ್ಕಿಂತ ದುರದ್ದೇಶವೇ ಹೆಚ್ಚಾಗಿವೆ ಎಂದು ಬಿ.ಕೃಷ್ಣಪ್ಪನವರು ಹೇಳಿದ್ದಾರೆ.

೧೯೮೦ರಲ್ಲಿ ನಡೆದ ಗುಜರಾತ್ ಮೀಸಲಾತಿ ವಿರೋಧಿ ಚಳುವಳಿಯಲ್ಲಿ ಅಲಹಾಬಾದ್ ನಗರದ ಗೋಡೆಗಳ ಮೇಲೆ ಮೀಸಲಾತಿ ವಿರೋಧಿಗಳು 'ಅಸ್ಪೃಶ್ಯರೇ ನೀವೇಕೆ ಕಸ ಗುಡಿಸುವ ಕಾರ್ಯ

ಮಾಡಬಾರದು? ನೀವೇಕೆ ಚಪ್ಪಲಿ ಹೊಲಿಯುವ, ಚರಂಡಿ ಎಳೆಯುವ ಕೆಲಸ ಮಾಡಬಾರದು?' ಎಂದು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆದಿದ್ದರು. ಆಟೋರಿಕ್ಷಾಗಳನ್ನು ಓಡಿಸುತ್ತಿದ್ದ ೨೦ ಜನ ಅಸ್ಪೃಶ್ಯರ ಆಟೋ ನಂಬರುಗಳನ್ನು ಅಚ್ಚು ಮಾಡಿಸಿ ಅವುಗಳನ್ನು ಯಾರೂ ಹತ್ತಕೂಡದು ಎಂದು ಪ್ರಚಾರ ಮಾಡಿದರು. "ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸರ್ಕಾರ ಕೂಡಿಸಿದ್ದ ಹಸುಗಳನ್ನು ಸಾಕಿ, ಹಾಲು ಮಾರುತ್ತಿದ್ದ ಅಸ್ಪೃಶ್ಯರಿಂದ ಹಾಲು ಕೊಳ್ಳಕೂಡದು ಎಂದು ಹೋಟೆಲ್ ಮಾಲೀಕರಿಗೆ ಎಚ್ಚರಿಕೆ ಕೊಡಲಾಯಿತು. ಪರಿಣಾಮ ಅಸ್ಪೃಶ್ಯರ ಹಾಲನ್ನು ಯಾರು ಕೊಳ್ಳದಂತಾಗಿದೆ. ಬಹುಶಃ ಅವರು ಹಸುಗಳನ್ನು ಮಾರಿ ಮತ್ತೆ ಜೀತಕ್ಕೆ ಹೋದರು"[೫] ಎಂಬುದಾಗಿ ಪ್ರೊ.ಬಿ.ಕೃಷ್ಣಪ್ಪನವರು 'ಮೀಸಲಾತಿ ಮತ್ತು ದಲಿತರು' ಲೇಖನದಲ್ಲಿ ಚರ್ಚಿಸಿದ್ದಾರೆ.

ಮೀಸಲಾತಿಯಿಂದ ದಲಿತರಿಗೆ ಅನುಕೂಲವಾಗಿವೆ. ದಲಿತರಲ್ಲಿ ವೈದ್ಯರು, ಇಂಜಿನಿಯರು, ಕುಲಪತಿ, ನ್ಯಾಯಾಧೀಶ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಮಂತ್ರಿಗಳು, ಶಾಸಕರು, ಲೋಕಸಭಾ ಸದಸ್ಯರು, ಐ.ಎ.ಎಸ್. ಅಧಿಕಾರಿಗಳು ಆಗಿದ್ದಾರೆ. ವಿದ್ಯಾಭ್ಯಾಸ ದೊರೆತಿದ್ದರಿಂದ ಅವರಲ್ಲಿ ಸ್ವಾಭಿಮಾನ, ಸ್ವಾವಲಂಬನೆ, ಮೀಸಲಾತಿ ಕೊಡುಗೆಗಳು ಎಂದು ಹೇಳಬಹುದು.

ಅವಮಾನಕ್ಕೆ ಒಳಗಾದ ಜಾತಿ ಪ್ರತಿನಿಧಿಯೊಬ್ಬ ಮೀಸಲಾತಿಯಿಂದ ಸರ್ಕಾರದ ಉನ್ನತ ಹುದ್ದೆಯಲ್ಲಿದ್ದರೆ ಅಸ್ಪೃಶ್ಯನೊಬ್ಬನಿಗೆ ತಮ್ಮವನೊಬ್ಬ ಕುಲಪತಿ ಆಗಬಹುದು, ಪ್ರಾಧ್ಯಾಪಕ ಆಗಬಹುದು, ಜಿಲ್ಲಾಧಿಕಾರಿ ಆಗಬಹುದು, ಮಂತ್ರಿ ಆಗಬಹುದು ಎಂಬುದನ್ನು ಕಣ್ಣಾರೆ ಕಂಡಾಗ, ಅಸ್ಪೃಶ್ಯ ಎಂದು ನಾನು ನೊಂದುಕೊಳ್ಳಬೇಕಾಗಿಲ್ಲ. ನಾನು ಆ ಸ್ಥಾನಕ್ಕೆ ಏರಬಹುದು ಎಂಬ ಆತ್ಮವಿಶ್ವಾಸ ಅವನಲ್ಲಿ ಮೂಡುತ್ತದೆ. ಅದೇ ರೀತಿ ತಾನೇ ಶ್ರೇಷ್ಠ ಎಂದು ಭಾವಿಸುತ್ತಿದ್ದ ಮೇಲ್ಜಾತಿ ಒಬ್ಬನಿಗೆ ತನಗಿಂತ ಕೀಳಾದ ಅಸ್ಪೃಶ್ಯನೊಬ್ಬ ಮೇಲಧಿಕಾರಿಯಾಗಬಲ್ಲ ಎಂಬುದನ್ನು ಕಂಡಾಗ ಅವನಿಗೆ ಅವನ ಮೇಲುತನಕ್ಕೆ ಆಘಾತ ಉಂಟಾಗಿ ಶ್ರೇಷ್ಠತೆ, ಸಾಮರ್ಥ್ಯ ಎಲ್ಲರಿಗೂ ಸಾಧ್ಯ ಎಂಬ ತಿಳಿವಳಿಕೆ ಬರುವುದು.

ಅಂಬೇಡ್ಕರ್ ಅವರು ಸ್ವಾತಂತ್ರ್ಯನಂತರ ಕೇವಲ ಹತ್ತು ವರ್ಷಗಳು ಮಾತ್ರ ಮೀಸಲಾತಿ ಕೇಳಿದ್ದರು. ಇಂದು ೬೫ ವರ್ಷಗಳಾದರೂ ಮೀಸಲಾತಿಯ ಉದ್ದೇಶವು ಪೂರ್ಣವಾಗಿಲ್ಲ. ಭಾರತೀಯರು ವೈಚಾರಿಕ ಚಿಂತನೆಯಿಂದ ದೂರ ಉಳಿದಿದ್ದಾರೆ. ಸಾಮಾಜಿಕ ಅಸಮಾನತೆ ಜಾತಿವ್ಯವಸ್ಥೆಯಿಂದ ಮೀಸಲಾತಿಯನ್ನು ಮುಂದುವರಿಸಲಾಗಿದೆ.

ಬಿ.ಕೃಷ್ಣಪ್ಪನವರು ಮೀಸಲಾತಿಯನ್ನು ಎಲ್ಲಿಯವರೆಗೆ ಮುಂದುವರಿಸಬೇಕೆಂದು ಈ ಕೆಳಗಿನಂತೆ ಹೇಳಿದ್ದಾರೆ. "ಎಲ್ಲಾ ಜಾತಿಯ ಜನರು ಕೂಡಿ ಅಂತರ್‌ಜಾತೀಯ ವಿವಾಹ ಮಾಡುವವರೆಗೆ ಸಾಂಪ್ರದಾಯಿಕ ಮದುವೆಗಳನ್ನು ಕಾನೂನುಬಾಹಿರ ಎಂದು ಘೋಷಿಸುವರೆಗೆ, ಸಾಂಪ್ರದಾಯಿಕ ಸಾರ್ವಜನಿಕ ಪೂಜಾಗೃಹಗಳು, ಉಪಾಹಾರ ಮಂದಿರಗಳು, ಕೆರೆ-ಕಟ್ಟೆ, ಬಾವಿಗಳು ಮುಕ್ತವಾಗಿ

ಎಲ್ಲರಿಗೂ ತೆರೆಯುವವರೆಗೆ ದೇಶದ ಪ್ರತಿಯೊಬ್ಬ ಪ್ರಜೆಗೂ ದುಡಿಯುವ ಹಕ್ಕನ್ನು ಕೊಡುವವರೆಗೆ" ಎಂದು ಹೇಳಿದ್ದಾರೆ.

ಹಿಂದೂಧರ್ಮದ ಅವಕೃಪೆಗೆ ಒಳಗಾಗಿ ಅಸ್ಪಶ್ಯರಾಗಿ ಬಾಳಿ ಬದುಕಿದ ಶ್ರೀಮಂತರ ಮನೆಯ ಜೀತ ಕೆಲಸ ಮಾಡಿದ, ಅವರ ಹೇಲು ಹೊತ್ತ, ಅವಮಾನಕ್ಕೆ ತನ್ನ ಸ್ವಂತ ಆಸ್ತಿ ಎಂದು ಬದುಕಿ ನರಕಸದೃಶ ಜೀವನ ಮಾಡಿದ ದಲಿತರಿಗೆ ಮೀಸಲಾತಿಯು ಸಂವಿಧಾನಾತ್ಮಕ ಹಕ್ಕು ಎಂದು ಹೇಳಬಹುದು. ಇದುಬಿ.ಕೃಷ್ಣಪ್ಪನವರ ಆಶಯವೂ ಆಗಿದೆ.

೪.೨. ಶೈಕ್ಷಣಿಕ ಚಿಂತನೆ

ಪ್ರೊ.ಬಿ.ಕೃಷ್ಣಪ್ಪನವರು ಚರ್ಚಿಸಿರುವ ಶೈಕ್ಷಣಿಕ ಚಟುವಟಿಕೆ ಕುರಿತು 'ಅಧ್ಯಾಪಕನೇಕೆ ಭ್ರಷ್ಟಾಚಾರಿಯಾದ' ಲೇಖನದಲ್ಲಿ ಅಧ್ಯಾಪಕರು ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಆಗಿರುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಬದಲಾವಣೆಗೆ ಹೊಂದಿಕೊಳ್ಳುತ್ತ ಬಂದಿದ್ದಾರೆ. ಪ್ರಾಚೀನ ಕಾಲದಲ್ಲಿ ಅಧ್ಯಾಪಕನ ಮೂಲಭೂತ ಅವಶ್ಯಕತೆಗಳನ್ನು ಅಂದಿನ ವಿದ್ಯಾರ್ಥಿಯ ಪೋಷಕರು ನಿರ್ವಹಿಸುತ್ತಿದ್ದರು. ಅಂದರೆ ಇಂದು ಸಮಾಜದ ಋಣದಲ್ಲಿ ಅಧ್ಯಾಪಕ ಇರುವುದಿಲ್ಲ. ಸ್ವಂತ ಬದುಕಿಗಾಗಿ ಅಧ್ಯಾಪಕನ ವೃತ್ತಿ ಆಯ್ಕೆ ಮಾಡಿಕೊಂಡಿರುತ್ತಾನೆ ಎಂದು ಕೃಷ್ಣಪ್ಪನವರು ಹೇಳಿದ್ದಾರೆ.

ಕಾಲ ಬದಲಾದಂತೆ ಅಧ್ಯಾಪಕನ ಅವಶ್ಯಕತೆಗಳು ಜಾಸ್ತಿಯಾದವು. ಅವುಗಳ ಈಡೇರಿಕೆಯು ಸರ್ಕಾರ ಕೊಡುವ ಸಂಬಳದಿಂದ ಸಾಧ್ಯವಿಲ್ಲ. ಆದ್ದರಿಂದ ಅಧ್ಯಾಪಕ ವಿದ್ಯಾರ್ಥಿಗಳಿಗೆ ಮನೆ ಪಾಠ ಮುಂತಾದ ರೀತಿಯಿಂದ ಭ್ರಷ್ಟ ದಾರಿಗಳನ್ನು ಹುಡುಕಿಕೊಂಡು ತಾನು ಮಾಡುವ ಪವಿತ್ರ ಕೆಲಸಕ್ಕೆ ಕಳಂಕ ತಂದಿದ್ದಾನೆ ಎಂದು ಹೇಳುತ್ತಾರೆ.

ವಿದ್ಯಾರ್ಥಿ ಕೂಡ ಭವಿಷ್ಯದ ಕುರಿತು ಆಲೋಚಿಸದೇ ಕೆಟ್ಟ ವ್ಯಸನಗಳಿಗೆ ಒಳಗಾಗುತಿದ್ದಾನೆ. ವಿದ್ಯೆಯ ಬಗ್ಗೆ ಆಸಕ್ತಿ ಇರುವುದಿಲ್ಲ. ಪರೀಕ್ಷೆಗೆ ಮಾತ್ರ ಸೀಮಿತವಾಗುತ್ತಾನೆ. ವಿದ್ಯಾರ್ಥಿಗಳನ್ನು ಹೆತ್ತವರು ಸರಿಯಾದ ದಾರಿಯಲ್ಲಿ ನಡೆಸಬೇಕು. ವಿದ್ಯಾರ್ಥಿ ದಿನದ ಕೆಲವೇ ಸಮಯದಲ್ಲಿ ಮಾತ್ರ ಅಧ್ಯಾಪಕರ ಜೊತೆ ಇರುತ್ತಾನೆ. ಆದರೆ ಉಳಿದೆಲ್ಲ ಸಮಯದಲ್ಲಿ ಸಮಾಜದಲ್ಲಿ ಹಾಗೂ ಮನೆಯಲ್ಲಿ ಇರುತ್ತಾನೆ. ಆದ್ದರಿಂದ ವಿದ್ಯಾರ್ಥಿಯ ಬೆಳವಣಿಗೆಯಲ್ಲಿ ಸಮಾಜ ಹಾಗೂ ಪೋಷಕರ ಪಾತ್ರ ಇದೆ ಎಂದು ಕೃಷ್ಣಪ್ಪನವರು ಹೇಳಿದ್ದಾರೆ.

ಇದರಲ್ಲಿ ಅಧ್ಯಾಪಕರ ತಪ್ಪೇ ಇಲ್ಲ ಎಂದು ಹೇಳಲಾಗದು. ತಪ್ಪಿದ್ದರೂ ಅದರ ಪ್ರಮಾಣ ಅತ್ಯಲ್ಪ. ಇಂದಿನ ವಿದ್ಯಾರ್ಥಿ ಉಡಾಳನಾಗುತ್ತಿದ್ದಾನೆ. ದೇಶದ ಪ್ರಗತಿಗೆ ಮಾರಕವಾಗಿ ಬೆಳೆಯುತ್ತಿದ್ದಾನೆ. ಇದಕ್ಕೆ ಯಾರು ಹೊಣೆ ಎಂಬುದನ್ನು ಶಿಕ್ಷಣತಜ್ಞರು, ವಿದ್ಯಾಭ್ಯಾಸದ ಆಸಕ್ತಿಯುಳ್ಳ ಎಲ್ಲರೂ ಆಳವಾಗಿ ಚಿಂತಿಸಬೇಕಾಗಿದೆ ಎಂದು ಪ್ರೊ.ಬಿ.ಕೃಷ್ಣಪ್ಪನವರು ಚರ್ಚಿಸಿದ್ದಾರೆ.

೪.೨.೧. ಅಧ್ಯಾಪಕನೇಕೆ ಭ್ರಷ್ಟಾಚಾರಿಯಾದ?

ಸ್ವತಃ ಶಿಕ್ಷರಾಗಿದ್ದ ಕೃಷ್ಣಪ್ಪನವರು ಶಿಕ್ಷಕರ ಕರ್ತವ್ಯವೇನು ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಅಧ್ಯಾಪಕನ ಕರ್ತವ್ಯ ವಿದ್ಯಾರ್ಜನೆ ಮಾಡುವುದು ಹಾಗೂ ವಿದ್ಯಾಪ್ರಸಾರ ಮಾಡುವಾಗ ಮುಕ್ತ ಹೃದಯದವನಾಗಿರುವುದು. ವ್ಯಾಪಾರಿಗೆ ಹಣ ಹೇಗೋ ಹಾಗೆಯೇ ಅಧ್ಯಾಪಕನಿಗೆ ವಿದ್ಯೆ ಎನ್ನುವುದು ಒಂದು ಬಂಡವಾಳ. ಅದನ್ನು ಪ್ರಸಾರದಲ್ಲಿ ತೊಡಗಿಸಿ ಅವನು ತನ್ನ ಜೀವನದ ಅವಶ್ಯಕತೆಗಳನ್ನು ಪಡೆದುಕೊಳ್ಳುತ್ತಾನೆ. ಭಾರತದಲ್ಲಿ ಆಚಾರ್ಯ, ಗುರು, ಉಪಾಧ್ಯಾಯ, ಶಿಕ್ಷಕ ಎಂದು ಕರೆಯುತ್ತಿದ್ದರು. ಆಗಿನ ಕಾಲದಲ್ಲಿ ಜ್ಞಾನ ಪ್ರಸಾರವು ಲಾಭದ ಆಶೆಗಾಗಿ ಮಾಡುವ ವೃತ್ತಿಯಾಗಿರಲಿಲ್ಲವಾದರೂ ಬೋಧಕ ತನಗೆ ಹಾಗೂ ತನ್ನ ಕುಟುಂಬಕ್ಕೆ ಬೇಕಾದ ಅವಶ್ಯಕತೆಗಳನ್ನು ಜನರಿಂದ ಪಡೆಯಲೇಬೇಕಾಗಿತ್ತು. ಜ್ಞಾನವನ್ನು ಕೊಡುವ ಗುರು ಎಲ್ಲರಿಗಿಂತಲೂ ದೊಡ್ಡವನು. 'ಗುರುಬ್ರಹ್ಮ, ಗುರುವಿಷ್ಣು, ಗುರುದೇವೋ ಮಹೇಶ್ವರ ಗುರು ಸಾಕ್ಷಾತ್ ಪರಬ್ರಹ್ಮ' ಎಂದು ಮುಂತಾಗಿ ಭಾವಿಸಿ ಅವನಿಗೆ ಲೌಕಿಕ ಅವಶ್ಯಕತೆಗಳ ಕೊರತೆ ಬೀಳದಂತೆ ನೋಡಿಕೊಂಡರಲ್ಲ! ಗುರು ದೊಡ್ಡವನು, ಎಲ್ಲರೂ ಒಪ್ಪುವ ಮಾತೇ. ಆದರೆ ಅವನು ದೊಡ್ಡವನಾಗಲು ಎಲ್ಲ ಅವಶ್ಯಕತೆಗಳನ್ನು ಒದಗಿಸುವ ಆ ಜನ ಅವನಿಗಿಂತ ದೊಡ್ಡವರು ಎಂದು ಬಿ.ಕೃಷ್ಣಪ್ಪನವರು ಹೇಳಿದ್ದಾರೆ. ದೇಶದಲ್ಲಿ ಬದಲಾಗಿರುವ ಕಾಲದಲ್ಲಿ ಇಂದು ದಿವಸಕ್ಕೆ ಎರಡು ಬಾರಿ ಅಲ್ಲ, ಎರಡು ದಿವಸಕ್ಕೆ ಒಂದು ಬಾರಿ ಅನ್ನ ಸಿಕ್ಕದೆ ಎಷ್ಟೋ ಜನ ಕಂಗಾಲಾಗುತ್ತಿದ್ದಾರೆ. ತನ್ನ ಹೊಟ್ಟೆಯ ಪಾಡಿಗಾಗಿ ಇಂದು ಪ್ರತಿಯೊಬ್ಬನೂ ತೀವ್ರ ಹೋರಾಟ ನಡೆಸಿದ್ದಾನೆ. ಇತರರಂತೆ ಅಧ್ಯಾಪಕನೂ ತನ್ನ ಅಸ್ತಿತ್ವಕ್ಕಾಗಿ ಹೋರಾಟ ನಡೆಸದೇ ವಿಧಿಯಿಲ್ಲ.

ಹಿಂದಿನ ಕಾಲದಲ್ಲಿ ಅಧ್ಯಾಪಕರ ವೃತ್ತಿ ಕೇವಲ ಒಂದು ವರ್ಣದವರಿಗೆ ಮಾತ್ರ ಮೀಸಲಾಗಿತ್ತು. ಎಲ್ಲರೂ ಅವರ ಹತ್ತಿರ ಕುಳಿತು ವಿದ್ಯಾರ್ಜನೆ ಮಾಡಬೇಕಾಗಿತ್ತು. ಇಂದು ವಿದ್ಯಾಭ್ಯಾಸವನ್ನು ಮುಕ್ತಗೊಳಿಸಲಾಗಿದೆ. ಮೇಲುಕೀಳೆನ್ನದೇ ಯಾರು ಬೇಕಾದರೂ ಅಧ್ಯಾಪಕರಾಗಬಹುದು. ಸಮಾಜ ಅಧ್ಯಾಪಕನ ಜವಾಬ್ದಾರಿಯನ್ನು ಹೊರಲು ಸಾರ್ವತ್ರಿಕವಾಗಿ ನಿರಾಕರಿಸಿತೋ ಅಂದೇ ಅವನ ನ್ಯೂನತೆಯನ್ನು ಕುರಿತು ಪ್ರಶ್ನೆ ಮಾಡುವ ಅಧಿಕಾರವನ್ನು ಕಳೆದುಕೊಂಡಿತು. ಅಧ್ಯಾಪಕನಿಗೆ ಸಾಮಾಜಿಕ ಭೀತಿ ಇಲ್ಲವಾಯಿತು. ಶಿಕ್ಷಣ ಇಲಾಖೆಯು ನಿಗದಿಪಡಿಸಿದ ಪಠ್ಯಭಾಗವನ್ನು ಮುಗಿಸಿದರೆ ಆಯಿತು. ಈ ರೀತಿಯಾಗಿ ಶಿಕ್ಷಣ ಸಂಕೀರ್ಣಗೊಂಡಿತು ಎಂದು ಕೃಷ್ಣಪ್ಪನವರು ಹೇಳಿದ್ದಾರೆ.

ಗುರುಮೂಲ, ಋಷಿಮೂಲ, ನದಿಮೂಲ ಹುಡುಕಬಾರದು ಎಂದು ಹೇಳುತ್ತಿದ್ದ ಕಾಲ ವೊಂದಿತ್ತು. ಆದರೆ ಇಂದು ಅಧ್ಯಾಪಕನ ಮೈಮೇಲಿನ ಬಟ್ಟೆಯಿಂದ ಹಿಡಿದು ಮನೆ, ಮಡದಿ ಮಕ್ಕಳವರೆಗೂ ಲಘುವಾಗಿ ಮಾತನಾಡುತ್ತಾನೆ. ಇಂದು ಅಧ್ಯಾಪಕ ತನ್ನ ಸ್ಥಾನ ಅಥವಾ ವೃತ್ತಿಗೌರವವನ್ನು ಉಳಿಸಿಕೊಂಡಿಲ್ಲ. ಅವನಿಗೆ ತನ್ನ ಗೌರವ ಕಡಿಮೆಯಾಗುತ್ತದೆ ಎಂಬ ಅರಿವು ಉಂಟಾದರೂ

ತನ್ನನ್ನು ತಿದ್ದಿಕೊಳ್ಳುವುದಿಲ್ಲ. ಅದು ತನಗೆ ತಿಳಿದೇ ಇಲ್ಲವೋ ಎನ್ನುವಂತೆ ವರ್ತಿಸುತ್ತಿದ್ದಾನೆ. ಅಧ್ಯಾಪಕನ ಘನತೆ ಅಧಃಪತನ ಕಂಡು ಅವನು ಭ್ರಷ್ಟಾಚಾರಿಯಾಗಿದ್ದಾನೆ. ಭ್ರಷ್ಟಾಚಾರಿ ಎಂದರೆ ತನ್ನ ಕರ್ತವ್ಯದಲ್ಲಿ ಚ್ಯುತನಾದವನು. ಅಧ್ಯಾಪಕ ಭ್ರಷ್ಟಾಚಾರಿಯಾಗಿದ್ದರೆ ಅದಕ್ಕೆ ಹಲವಾರು ಕಾರಣಗಳಿವೆ.

೧. ಆರ್ಥಿಕ ಪರಿಸ್ಥಿತಿ

೨. ಸಾರ್ವತ್ರಿಕ ವಾತಾವರಣ

೩. ಜಾತೀಯತೆ

ಇಂದಿನ ಕಾಲದ ಅಧ್ಯಾಪಕನನ್ನು ಹಿಂದಿನ ಕಾಲದ ಅಧ್ಯಾಪಕನಿಗೆ ಹೋಲಿಸಿದಾಗ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದಿನ ಕಾಲದ ಅಧ್ಯಾಪಕ ಅದೃಷ್ಟವಂತನೆನಿಸುತ್ತದೆ. ಸಮಾಜದಲ್ಲಿ ಅವನಿಗೆ ಹೆಚ್ಚಿನ ಸವಲತ್ತು ಗೌರವಗಳಿದ್ದವು. ಒಟ್ಟಿನಲ್ಲಿ ಅವನಿಗೆ ಸಮಾಜದ ರಕ್ಷಣೆ ಇತ್ತು. ಇಂದಿನ ಅಧ್ಯಾಪಕನಿಗೆ ತಿಂಗಳಿಗೆ ಇಷ್ಟು ಸಂಬಳ ಕೊಡಲಾಗುತ್ತದೆ. ಬರುವ ಸಂಬಳದಲ್ಲಿ ಅಧ್ಯಾಪಕ ತನ್ನ ಸಂಸಾರ ಸಾಗಿಸಬೇಕು. ತಿಂಗಳಾಯಿತೆಂದರೆ ಅಂಗಡಿ, ಮನೆ ಬಾಡಿಗೆ, ಹಾಲಿನವರಿಗೆ, ಸೌದೆಗೆ, ಮಕ್ಕಳ ವಿದ್ಯಾಭ್ಯಾಸ ನೋಡಿಕೊಳ್ಳಬೇಕು. ಇಷ್ಟೆಲ್ಲದರ ಜೊತೆಗೆ ಸಮಾಜ ಅಧ್ಯಾಪಕನನ್ನು ನೋಡುವ ದೃಷ್ಟಿಯೇ ಬೇರೆ. ಅವನು ಸತ್ಯವಂತನಾಗಿರಬೇಕು. ಪ್ರಾಮಾಣಿಕನಾಗಿರಬೇಕು. ವಂಚನೆ, ಮೋಸ ಮುಂತಾದ ದುರ್ಗುಣವಿರಬಾರದು. ಒಂದು ಕಡೆ ವೃತ್ತಿಸಂಬಂಧವಾದ ನೈತಿಕ ಕಟ್ಟಳೆಗಳು, ಮತ್ತೊಂದು ಕಡೆ ಆರ್ಥಿಕ ದುಃಸ್ಥಿತಿ ಎಂದು ಬಿ.ಕೃಷ್ಣಪ್ಪನವರು ಈ ಲೇಖನದಲ್ಲಿ ಅಧ್ಯಾಪಕರ ಜೀವನ ವಿಧಾನವನ್ನು ಚರ್ಚಿಸಿದ್ದಾರೆ.

ಅಧ್ಯಾಪಕರ ವರ್ಗಗಳು

ಆರ್ಥಿಕ ದೃಷ್ಟಿಯಿಂದ ಸಮಾಜದಲ್ಲಿ ಕೆಳವರ್ಗ, ಮಧ್ಯಮವರ್ಗ ಹಾಗೂ ಉನ್ನತ ವರ್ಗಗಳಿರುವಂತೆಯೇ ಅಧ್ಯಾಪಕರಲ್ಲಿಯೂ ಈ ಮೂರು ವರ್ಗಗಳನ್ನು ಕಾಣಬಹುದು. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಅಧ್ಯಾಪಕರನ್ನು ಕೆಳವರ್ಗ, ಪ್ರೌಢಶಾಲೆಯ ಅಧ್ಯಾಪಕರು ಮಧ್ಯಮವರ್ಗ ಹಾಗೂ ವಿಶ್ವವಿದ್ಯಾನಿಲಯದ ಅಧ್ಯಾಪಕರನ್ನು ಉನ್ನತವರ್ಗವೆಂದು ಬಿ.ಕೃಷ್ಣಪ್ಪನವರು ಹೇಳಿದ್ದಾರೆ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಅಧ್ಯಾಪಕರ ಪರಿಸ್ಥಿತಿ ಒಂದು ತೀರದ ಕಥೆ, ಮುಗಿಯಲಾರದ ಗೋಳು. ಪ್ರೌಢಶಾಲೆಯ ಅಧ್ಯಾಪಕರೆಂದರೆ ಆರ್ಥಿಕ ಹೊಯ್ದಾಟದ ಕೇಂದ್ರ ಸ್ಥಾನ. ಅವರೆಲ್ಲ ಪದವೀಧರರು. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಅಧ್ಯಾಪಕರು ಬಹುವಾಗಿ ಎಸ್.ಎಸ್.ಎಲ್.ಸಿ ಆದವರು. 'ಅಯ್ಯೋ ನಾವು ಓದಿದ್ದು ಅಷ್ಟೆ. ಅದಕ್ಕೆ ಸರಿಯಾಗಿ ಬದುಕಿದರಾಯಿತು' ಎಂದು ಸಮಾಧಾನಪಟ್ಟುಕೊಳ್ಳಬಲ್ಲರು. ಪ್ರೌಢಶಾಲಾ ಅಧ್ಯಾಪಕರ ಅವಶ್ಯಕತೆಗಳನ್ನು

ಹೊಂದಾಣಿಕೆ ಮಾಡಿಕೊಳ್ಳಲಾಗದೆ ಪರಿತಪಿಸುತ್ತಾರೆ ಎಂದು ಕೃಷ್ಣಪ್ಪನವರು ಈ ಲೇಖನದಲ್ಲಿ ಹೇಳಿದ್ದಾರೆ.

ಅಧ್ಯಾಪಕ ಸುತ್ತಲಿನ ಸಮಾಜವನ್ನು ತನ್ನ ಪರಿಸ್ಥಿತಿಯೊಂದಿಗೆ ಹೋಲಿಸಿ ನೋಡಿಕೊಂಡ. ತನ್ನಷ್ಟೇ ಅಥವಾ ತನಗಿಂತಲೂ ಕಡಿಮೆ ಓದಿದ ಒಬ್ಬ ರಾಜಕಾರಣಿ ಒಬ್ಬ ತಹಸೀಲ್ದಾರ್, ಎಕ್ಸೈಸ್ ಆಫೀಸರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಇವರೆಲ್ಲ ತನ್ನಷ್ಟೇ ಅಥವಾ ತನಗಿಂತಲೂ ಕಡಿಮೆ ಸಂಬಳವನ್ನು ತೆಗೆದುಕೊಳ್ಳುತ್ತಾರೆ. ಆದರೆ ಅವನ ಜೀವನವನ್ನು ತನ್ನ ಜೀವನದೊಂದಿಗೆ ಹೋಲಿಸಿ ನೋಡಿದಾಗ ತನ್ನ ಪಾಡು ನಾಯಿಪಾಡು. ಅವರು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಸುತ್ತಿದ್ದಾರೆ. ಕಾರಿನಲ್ಲಿ ಓಡಾಡುತ್ತಿದ್ದಾರೆ. ನೂರಾರು ಎಕರೆ ಜಮೀನು ಮಾಡಿದ್ದಾರೆ. ಇವನ್ನೆಲ್ಲ ನೋಡಿದ ಅಧ್ಯಾಪಕ ನೀತಿಯನ್ನು ಬಿಟ್ಟರೆ ಮಾತ್ರ ಬದುಕಲು ಸಾಧ್ಯ ಎಂದು ಅನ್ನಿಸಿದ್ದರೆ ಅದು ಸಹಜ. ಅಧಿಕಾರಿಗೆ, ರಾಜಕಾರಣಿಗೆ ಹಣ ಲಪಟಾಯಿಸಲು ಜನ ಸಿಕ್ಕರು. ಅಧ್ಯಾಪಕನಿಗೆ ವಿದ್ಯಾರ್ಥಿ ಸಿಕ್ಕ. ಅಧಿಕಾರಿಗಳು ಮತ್ತು ರಾಜಕಾರಣಿಗಳು ಸಮಾಜವನ್ನು ನೇರವಾಗಿ ಶೋಷಣೆ ಮಾಡತೊಡಗಿದರು. ಅಧ್ಯಾಪಕ ವಿದ್ಯಾರ್ಥಿಯ ಮುಖಾಂತರ ಸಮಾಜದ ಶೋಷಣೆಗೆ ತೊಡಗಿದ. ರಾಜಕಾರಣಿ, ಅಧಿಕಾರಿ ತತ್ಕಾಲೀನ ಸಮಾಜವನ್ನು ಶೋಷಣೆ ಮಾಡುತ್ತಿದ್ದಾರೆ. ಅಧ್ಯಾಪಕ ಸಮಾಜದ ಭವಿಷ್ಯವನ್ನೇ ಶೋಷಣೆ ಮಾಡಬೇಕಾಗಿದೆ ಎಂದು ಬಿ.ಕೃಷ್ಣಪ್ಪನವರು ಅಧ್ಯಾಪಕನು ತನ್ನ ವೃತ್ತಿಯನ್ನು ಹೇಗೆ ಶೋಷಣೆಗೆ ಬಳಸಿಕೊಂಡ ಎಂಬುದನ್ನು ವಿವರಿಸಿದ್ದಾರೆ.

ಟ್ಯುಟೋರಿಯಲ್‌ಗಳು

"ಇಂದು ಒಂದು ಊರಿನಲ್ಲಿ ಕಾಲೇಜಿತ್ತೆಂದರೆ ಅಲ್ಲಿ ನಾಲ್ಕು ಐದು ಪ್ರೌಢಶಾಲೆಗಳಿರುತ್ತವೆ. ಈ ಎರಡಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಟ್ಯುಟೋರಿಯಲ್ ಕಾಲೇಜುಗಳು, ಹೈಸ್ಕೂಲುಗಳು ಇರುತ್ತದೆ. ಎಷ್ಟೋ ಟುಟೋರಿಯಲ್ ಕ್ಲಾಸುಗಳನ್ನು ಅಧ್ಯಾಪಕರೇ ನಡೆಸುವುದೇಕೆ? ಪ್ರಾಥಮಿಕ ಶಾಲೆಯಿಂದ ಹಿಡಿದು ಕಾಲೇಜು ಮಟ್ಟದವರೆಗೂ ಇಂದು ಅಧ್ಯಾಪಕರು ಮನೆಯ ಪಾಠವನ್ನು ಹೇಳುತ್ತಿದ್ದಾರೆ. ಅವರು ಮನೆಪಾಠಕ್ಕೆ ವಿದ್ಯಾರ್ಥಿಗಳನ್ನು ಆಕರ್ಷಿಸುವ ವಿಧಾನ ಅತ್ಯಂತ ಕುತೂಹಲಕಾರಿ. ಶಾಲಾ ಕಾಲೇಜುಗಳ ಪ್ರಾರಂಭವಾಗುವ ಎರಡು ತಿಂಗಳು ತುಂಬಾ ಆಸಕ್ತಿಯಿಂದ ಪಾಠ ಮಾಡುತ್ತಾರೆ. ಏಕೆಂದರೆ ವಿದ್ಯಾರ್ಥಿಗಳಿಗೆ ಇವರು ಚೆನ್ನಾಗಿ ಪಾಠ ಮಾಡಬಲ್ಲರು ಎಂಬ ನಂಬಿಕೆ ಉಂಟಾಗಬೇಕು. ನಂತರ ಕ್ಲಾಸಿನಲ್ಲಿ ಇದ್ದಕ್ಕಿದ್ದಂತೆ ಪಾಠ ಅರ್ಥವಾಗದೇ ಹೋಗುತ್ತದೆ. ನೋಟ್ಸ್ ಕೊಡುವುದು ನಿಂತು ಹೋಗುತ್ತದೆ. ಕೆಲವು ಸಾರಿ ವಿದ್ಯಾರ್ಥಿಯ ತಂದೆತಾಯಿಗಳೇ ಬಂದು ಅಧ್ಯಾಪಕರಿಗೆ ಬಲವಂತ ಮಾಡುವುದು ಉಂಟು."[೬] ಶಿಕ್ಷಕ ಕೂಡ ಕೆಲವು ಜನ ವಿದ್ಯಾರ್ಥಿಗಳಿದ್ದರೆ, ಇನ್ನಷ್ಟು ಜನರನ್ನು ತನ್ನಿ ಎಂದು ಹೇಳುತ್ತಾನೆ. ಪ್ರಾರಂಭದಲ್ಲಿ ಚೆನ್ನಾಗಿ ಲೆಕ್ಕ ಮಾಡಿ ತೋರಿಸುತ್ತಿದ್ದ ಶಿಕ್ಷಕ ಬೋರ್ಡಿನ ಮೇಲೆ

ಲೆಕ್ಕ ಮಾಡುತ್ತಿದ್ದಂತೆಯೇ ಎಡಗೈಯಿಂದ ಅಳಿಸುತ್ತ ಹೋಗುತ್ತಾನೆ. ವಿದ್ಯಾರ್ಥಿ ಬರೆದುಕೊಳ್ಳುವುದು ಹೇಗೆ ಅಥವಾ ನಾಲ್ಕು ಐದು ಹಂತದಲ್ಲಿ ಮಾಡಿ ತೋರಿಸಬೇಕಾದ ಲೆಕ್ಕವನ್ನು ಎರಡೇ ಹಂತದಲ್ಲಿ ವಿದ್ಯಾರ್ಥಿಗಳಿಗೆ ಅರ್ಥವಾಗದಂತೆ ಬಿಡಿಸಿ ಇಡುತ್ತಾರೆ. ಈ ರೀತಿಯಾಗಿ ವಿದ್ಯಾರ್ಥಿಗಳು ಮನೆಪಾಠಕ್ಕೆ ಬರುವಂತೆ ಪ್ರೇರೇಪಿಸುತ್ತಾರೆ ಎಂದು ಹೇಳಬಹುದು. ಅದೇ ರೀತಿ ಇಂಗ್ಲಿಷ್ ವಿಷಯವನ್ನು ಹಾಗೆ ಮನೆಪಾಠಕ್ಕೆ ಪ್ರೇರೇಪಿಸುತ್ತಾರೆ ಎಂದು ಬಿ.ಕೃಷ್ಣಪ್ಪನವರು ಹೇಳುತ್ತಾರೆ.

ವೃತ್ತಿ ಮಾತ್ಸರ್ಯ

ಈ ಮನೆಪಾಠದ ಪರಿಣಾಮಗಳು ಒಂದಲ್ಲ ಎರಡಲ್ಲ, ಹತ್ತು ಹಲವಾರು. ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕ ವಿದ್ಯಾರ್ಥಿಗಳಲ್ಲಿ ಜಾತಿ ಗುಂಪುಗುಳಿತನಕ್ಕೆ ಕಾರಣವಾಗಿದೆ. ತನ್ನ ಹತ್ತಿರ ಬರದೇ ಬೇರೆಯವರ ಹತ್ತಿರ ಹೋಗುವ ವಿದ್ಯಾರ್ಥಿಯನ್ನು ಕಂಡು ಅಧ್ಯಾಪಕ ಹರಿಹಾಯುತ್ತಾನೆ. ಅನಾವಶ್ಯಕವಾಗಿ ಪ್ರಶ್ನೆ ಹಾಕಿ ವಿದ್ಯಾರ್ಥಿಯನ್ನು ಬಯ್ಯುತ್ತಾನೆ. ಒಬ್ಬ ಅಧ್ಯಾಪಕ ಬರೆಯಿಸಿದ ನೋಟ್ಸನ್ನು ಮತ್ತೊಬ್ಬ ತೆಗಳುವುದು, ಅವನ ಮನೆಗೆ ಹೋಗುವ ವಿದ್ಯಾರ್ಥಿಗಳನ್ನು ಇವನು ಫೇಲ್ ಮಾಡಿದರೆ ಇವನ ಮನೆಗೆ ಹೋಗುವ ವಿದ್ಯಾರ್ಥಿಗಳನ್ನು ಅವನು ಫೇಲ್ ಮಾಡುವುದು. ತನ್ನ ಮನೆಗೆ ಪಾಠಕ್ಕೆ ಬರುವ ವಿದ್ಯಾರ್ಥಿಗಳು ಯಾವ ಪರೀಕ್ಷಾ ಕೊಠಡಿಯಲ್ಲಿರುತ್ತಾರೋ ಅಧ್ಯಾಪಕ ಅಲ್ಲಿಗೆ ತನ್ನನ್ನು ಸೂಪರ್‌ವೈಸರ್ ಆಗಿ ಹಾಕಿಸಿಕೊಂಡು ತನ್ನ ವಿದ್ಯಾರ್ಥಿಗಳಿಗೆ ಹೇಳಿ ಬರೆಸುತ್ತಾನೆ. ಇಲ್ಲವೇ ಕಾಪಿ ಹೊಡೆಯಲು ಬಿಡುತ್ತಾನೆ. ವಿದ್ಯಾರ್ಥಿಗಳಿಗೆ ಪರೀಕ್ಷೆ ಎಂಬ ನೈತಿಕ ಭೀತಿಯೇ ಹೊರಟು ಹೋಗುತ್ತದೆ. ಇಷ್ಟಾದರೂ ಪಾಸಾಗದಿದ್ದರೆ, ತನಗೆ ಬೇಕಾದ ವಿದ್ಯಾರ್ಥಿಯ ಪೇಪರ್ ಎಲ್ಲಿಗೆ ಹೋಗಿದೆ ಎಂದು ಹುಡುಕಿ ಪಾಸು ಮಾಡಿಸುವ ಅಧ್ಯಾಪಕನ ಕೂಟಗಳು ಇವೆ. ಆಗಲೂ ಪಾಸು ಮಾಡದಿದ್ದಾಗ ಡೂಪ್ಲಿಕೇಟ್ ಮಾರ್ಕ್ಸ್ ಕಾರ್ಡ್‌ಗಳನ್ನು ಅಚ್ಚು ಮಾಡಿ ಹಂಚಲಾಗುತ್ತದೆ. ಈ ರೀತಿಯಾಗಿ ಅಧ್ಯಾಪಕರು ಸಮಾಜದ ಶೋಷಣೆ ಮಾಡಲು ಮುಂದಾಗುತ್ತಿದ್ದಾರೆ ಎಂದು ಬಿ.ಕೃಷ್ಣಪ್ಪನವರು ಈ ಲೇಖನದಲ್ಲಿ ಶೈಕ್ಷಣಿಕ ಗುಣಮಟ್ಟದ ಕುರಿತು ಚರ್ಚಿಸಿದ್ದಾರೆ.

ಪ್ರಿನ್ಸಿಪಾಲರು ಮತ್ತು ಮುಖ್ಯೋಪಾಧ್ಯಾಯರು ಸಹ ವಿವಿಧ ರೀತಿಯಲ್ಲಿ ಭ್ರಷ್ಟಾಚಾರ ಮಾಡಿರುವುದು ಕಂಡುಬರುತ್ತದೆ. ಅದೇ ರೀತಿ ಉನ್ನತ ಶಿಕ್ಷಣದಲ್ಲಿ ಜಾತಿವಾರು ಶೋಷಣೆ ಕಂಡುಬರುತ್ತವೆ. ಜಾತಿಮತ ಕುಲಗಳ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಪಾಸು ಫೇಲ್ ನಡೆಯುತ್ತಿರುತ್ತವೆ ಎಂದೇ ಬಿ.ಕೃಷ್ಣಪ್ಪನವರು ನಮ್ಮ ಶೈಕ್ಷಣಿಕ ವ್ಯವಸ್ಥೆಯನ್ನು ಯಾವ ರೀತಿ ಶೋಷಣೆ ಮಾಡುವುದು ಎಂದು ಹೇಳಿದ್ದಾರೆ. ಶೈಕ್ಷಣಿಕ ಗುಣಮಟ್ಟ ಕಡಿಮೆಯಾಗಲು ವಿವಿಧ ಮುಖಗಳಿವೆ. ಅಧ್ಯಾಪಕರ ಸಮಸ್ಯೆಯು ಹೇಗೆ ಸಾಮಾಜಿಕ ಸಮಸ್ಯೆಯಾಗುತ್ತದೆ ಎಂಬುದನ್ನು ಕೃಷ್ಣಪ್ಪನವರು ಈ ಮೇಲಿನಂತೆ ಹೇಳಿದ್ದಾರೆ.

೪.೨.೨. ಇಂದಿನ ವಿದ್ಯಾರ್ಥಿ ಹಾಗೂ ಅಧ್ಯಾಪಕ

ಪ್ರೊ.ಬಿ.ಕೃಷ್ಣಪ್ಪನವರು ಪ್ರಸ್ತುತ ಈ ಲೇಖನದಲ್ಲಿ ಕಾಲೇಜಿನ ವಿದ್ಯಾರ್ಥಿ ಸಮೂಹವನ್ನು ಕುರಿತು ಹೆಚ್ಚು ಚರ್ಚೆ ಮಾಡಿದ್ದಾರೆ ಎಂದು ಹೇಳಬಹುದು. ವಿದ್ಯಾರ್ಥಿ ಕುರಿತು ಕೃಷ್ಣಪ್ಪನವರು ಹೀಗೆ ಹೇಳಿದ್ದಾರೆ.

"ಇಂದಿನ ವಿದ್ಯಾರ್ಥಿ ವರ್ತನೆಯನ್ನು ಅಧ್ಯಾಪಕ ಹೇಳುವಂತೆಯೂ ಇಲ್ಲ, ನುಂಗಿಕೊಳ್ಳು ವಂತೆಯೂ ಇಲ್ಲ. ಸರಿಯಾಗಿ ಏಕೆ ಕ್ಲಾಸಿಗೆ ಬರುತ್ತಿಲ್ಲ ಎಂದು ಇವರನ್ನು ಕೇಳುವಂತಿಲ್ಲ. ಏನು ಓದುತ್ತೀರಿ, ಏನಿಲ್ಲ ಎಂದು ಪ್ರಶ್ನೆ ಮಾಡುವಂತಿಲ್ಲ. ಮನೆಯಲ್ಲಿ ಅಪ್ಪ ಅಮ್ಮನೇ ಕೇಳುವುದಿಲ್ಲ ನೀವ್ಯಾರು ಕೇಳುವುದಕ್ಕೆ ಎಂದು ಮುಖದ ಮೇಲೆ ಹೊಡೆದಂತೆ ಮಾತನಾಡುತ್ತಾರೆ. ಕಾಲೇಜಿನ ಸುತ್ತ ಅಲೆಯುತ್ತಿದ್ದರೂ ಕ್ಲಾಸುಗಳಿಗೂ ಬರುವುದಿಲ್ಲ. ಅಧ್ಯಾಪಕರನ್ನು ಕಂಡು ಸಿಗರೇಟು ಹೊತ್ತಿಸಿ ಹೊಗೆ ಉಗುಳುತ್ತಾರೆ. ವರ್ಷದ ಕೊನೆಯಲ್ಲಿ ಹಾಜರಿ ಖೋತ ಬಂದಾಗ ಹಾಜರಿ ತುಂಬಿಕೊಡಿ ಎಂದು ಅಧ್ಯಾಪಕರ ಮೇಲೆ ದಾಳಿ ಮಾಡುತ್ತಾರೆ. ತಮ್ಮ ಉದ್ದೇಶಕ್ಕೆ ಅಡ್ಡಿ ಬರುವ ಯಾವುದೇ ವ್ಯವಸ್ಥೆಯನ್ನು ಮುರಿಯಲು ಅವರು ಸದಾ ಸಿದ್ಧರಾಗಿರುತ್ತಾರೆ. ಇಂತಹ ಅವರಣದಲ್ಲಿ ಇರುವ ಪ್ರಜ್ಞಾವಂತ ಅಧ್ಯಾಪಕನೇ ಆಗಲಿ, ಗೌರವದಿಂದ ಬದುಕುವುದು ತುಂಬಾ ಕಷ್ಟವಾಗುತ್ತದೆ. ಕಾಲೇಜಿಗೆ ಹೋಗುವುದಕ್ಕಿಂತ ಮುಂಚೆ ಅವನು ತನ್ನ ಗೌರವ ಸ್ವಾಭಿಮಾನ ಎಲ್ಲವನ್ನು ಕಟ್ಟಿ ಮನೆಯಲ್ಲಿಟ್ಟು ಹೋಗಬೇಕಾಗುವುದು ಎಂದು ಕೃಷ್ಣಪ್ಪನವರು ಕಾಲೇಜಿನಲ್ಲಿ ನಡೆಯುವ ವಿದ್ಯಾರ್ಥಿಗಳ ದೌರ್ಜನ್ಯವನ್ನು ಹೇಳಿದ್ದಾರೆ.

ವಿದ್ಯಾರ್ಥಿಗಳ ಈ ನಡವಳಿಕೆಗೆ ಯಾರು ಕಾರಣ? 'ವಿದ್ಯಾರ್ಥಿಗಳು ಪಾಸಾದರೆ ವಿದ್ಯಾರ್ಥಿಗಳು ಬುದ್ಧಿವಂತರು ಅದಕ್ಕೆ ಪಾಸಾದರು' ಎನ್ನುತ್ತಾರೆ. 'ಫೇಲಾದರೆ ಅಧ್ಯಾಪಕರು ಪಾಠ ಸರಿಯಾಗಿ ಹೇಳಿಲ್ಲ, ಅದಕ್ಕೆ ಫೇಲಾದರು' ಎಂದು ಬಯ್ಯುತ್ತಾರೆ. ದೊಡ್ಡ ದೊಡ್ಡ ಸಭೆಗಳಲ್ಲಿ 'ಅಧ್ಯಾಪಕರ ಕರ್ತವ್ಯ ಅತ್ಯಂತ ಪವಿತ್ರವಾದದ್ದು. ಅವರು ಜನಾಂಗವನ್ನು ನಿರ್ಮಾಣ ಮಾಡುವವರು. ಈ ದೇಶದ ಭವಿಷ್ಯವನ್ನು ರೂಪಿಸುವವರು. ಅವರಿಗೆ ಎಲ್ಲಾ ರೀತಿಯ ರಕ್ಷಣೆ ಸವಲತ್ತುಗಳು ಸಿಕ್ಕಬೇಕು' ಎಂದು ಭಾಷಣ ಮಾಡುವ ಜನ ಸಮಾಜದಲ್ಲಿ ಅವರು ಯಾತಕ್ಕೂ ಬೇಡದ ವ್ಯಕ್ತಿಗಳಂತೆ ನಡೆಸಿಕೊಳ್ಳುತ್ತಿರುವುದನ್ನು ಕಾಣಬಹುದು. ಸಮಾಜದಲ್ಲಿ ಅಂದ ಹಾಗೆ ಅನ್ನಿಸಿಕೊಂಡು ಬೈದ ಹಾಗೆ ಬೈಸಿಕೊಂಡು, ತಿರುಗಿಬೀಳದ ವ್ಯಕ್ತಿಯೊಬ್ಬನಿದ್ದರೆ ಅವನು ಅಧ್ಯಾಪಕ. ಇಂದು ಬ್ಯಾಂಕ್ ಕಾರ್ಮಿಕರು, ರೈಲ್ವೆ ಕಾರ್ಮಿಕರು, ಕಾರ್ಖಾನೆ ಕೆಲಸಗಾರರು ತಮಗೆ ಕಾಲಕಾಲಕ್ಕೆ ಬರುವ ಸಂಬಳ, ತುಟ್ಟಿಭತ್ಯೆಗಳನ್ನು ಸಕಾಲದಲ್ಲಿ ಕೊಡದೇ ಹೋದರೆ ಒಂದೆರಡು ದಿನ ಮುಷ್ಕರ ಹೂಡಿದರೆ ಸಾಕು ಆಡಳಿತ ಮಂಡಳಿ, ಸರಕಾರ ಬೆವರುತ್ತದೆ. ಬೇಡಿಕೆಗಳನ್ನು ಪೂರೈಸುತ್ತಾರೆ. ಆದರೆ ಅಧ್ಯಾಪಕರನ್ನು ಕೇಳುವವರಾರು.

ಎಷ್ಟೋ ಖಾಸಗಿ ಕಾಲೇಜುಗಳಲ್ಲಿ ತುಟ್ಟಿಭತ್ಯವಲ್ಲ, ಅವರಿಗೆ ಕೊಡಬೇಕಾದ ಮೂಲಸಂಬಳವನ್ನು ಸರಿಯಾದ ಸಮಯಕ್ಕೆ ಕೊಡುವುದಿಲ್ಲ ಎಂದು ಬಿ.ಕೃಷ್ಣಪ್ಪನವರು ಅಧ್ಯಾಪಕರ ಮಿತಿ ಹಾಗೂ ಸಂಬಳದ ಕುರಿತು ಹೇಳಿದ್ದಾರೆ.

ಮಕ್ಕಳು ಚಿಕ್ಕವರಿರುವಾಗ ತಂದೆ ತಾಯಿಗಳು ತಿದ್ದಬೇಕು. ಅವರಲ್ಲಿ ಓದುವ ಅಸಕ್ತಿಯನ್ನು ಬೆಳೆಸಬೇಕು. ತಪ್ಪು ಮಾಡಿದಾಗ ಶಿಕ್ಷಿಸಿ ಒಳ್ಳೆಯ ನಡತೆಯನ್ನು ರೂಪಿಸಬೇಕು.

ಕಾಲಕಾಲಕ್ಕೆ ಅವನು ಏನನ್ನು ಕಲಿಯುತ್ತಿದ್ದಾನೆ, ಅವನ ಪ್ರಗತಿ ಬಗ್ಗೆ ವಿಚಾರಿಸಿ, ಮಾರ್ಗದರ್ಶನ ಮಾಡಬೇಕು. ಆಗಲೇ ವಿದ್ಯಾರ್ಥಿ ಒಳ್ಳೆಯವನಾಗಲು ಸಾಧ್ಯ. ದೊಡ್ಡ ದುರಂತವೆಂದರೆ ನಮ್ಮ ಸಮಾಜದಲ್ಲಿ ಸರಾಸರಿ, ಹತ್ತು ಭಾಗ ತಂದೆ ತಾಯಿಗಳನ್ನು ಬಿಟ್ಟರೆ ಉಳಿದವರು ಅನಕ್ಷರಸ್ಥರು. ಅವರಿಗೆ ತಮ್ಮ ಮಗ ಏನು ಕಲಿಯುತ್ತಿದ್ದಾನೆ, ಏನು ಮಾಡುತ್ತಿದ್ದಾನೆ ಎಂಬುದೇ ತಿಳಿದಿರುವುದಿಲ್ಲ. ಇನ್ನು ಶ್ರೀಮಂತ ತಂದೆ ತಾಯಿಯರು ಎಲ್ಲವನ್ನೂ ಹಣದಿಂದಲೇ ಅಳೆಯುವರು. ಮಗ ಕಷ್ಟಪಟ್ಟು ಏಕೆ ಓದಬೇಕು? ಡಿಗ್ರಿಯನ್ನು ಕೊಂಡುಕೊಂಡರಾಯಿತು ಎನ್ನುತ್ತಾರೆ.

"ಸಮಾಜವಂದರೆ ಒಂದು ವ್ಯವಸ್ಥೆ ಅಥವಾ ಕಟ್ಟುಪಾಡು. ಮಾನವನ ರಕ್ಷಣೆ ಸಹಬಾಳ್ವೆ ಹಾಗೂ ವ್ಯಕ್ತಿತ್ವದ ವಿಕಾಸಕ್ಕೆ ಯಾವ ಮೌಲ್ಯಗಳು ಅವಶ್ಯಕವೋ ಅಂತಹವುಗಳನ್ನು ಎತ್ತಿ ಹಿಡಿದು ನ್ಯಾಯ ದೊರಕಿಸಿಕೊಡಬೇಕಾದುದು ಸಮಾಜದ ಕರ್ತವ್ಯ. ಅದು ನ್ಯಾಯ ಪಕ್ಷಪಾತಿಯಾಗಿರಬೇಕು. ಅನ್ಯಾಯ ಕಂಡು ಬಂದಾಗ ಅದನ್ನು ತುಳಿದು ಒರೆಸಿಹಾಕಬೇಕು. ವ್ಯಕ್ತಿಗೆ ಸತ್ಯದಲ್ಲಿ ಆಸ್ಥೆ, ಗೌರವ ಉಳಿಯುವಂತೆ ಮಾಡಬೇಕು. ಒಂದು ದೃಷ್ಟಿಯಲ್ಲಿ ಅದು ಸತ್ಯದ ಹಿಂಬಾಲಕ, ಪೋಷಕ. ಆದರೆ ಇಲ್ಲಿಯೂ ಕಾಣುವ ದೊಡ್ಡ ದುರಂತವೆಂದರೆ ಸತ್ಯ ನ್ಯಾಯಗಳಿಗೆ ಬೆಲೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಲ್ಲಿ ನಡೆದ ವಿದ್ಯಾರ್ಥಿ ಚಳುವಳಿಗಳನ್ನು ಗಮನಿಸಿದರೆ, ಅವುಗಳಿಗೆನಾದರೂ ಘನ ಉದ್ದೇಶಗಳಿವೆ ಎಂದು ಯಾರಿಗೂ ಅನ್ನಿಸಬಾರದು. ಇದಕ್ಕೆಲ್ಲ ಹೊಣೆ ಯಾರು"[೭] ಎಂದು ಬಿ.ಕೃಷ್ಣಪ್ಪನವರು ಶೈಕ್ಷಣಿಕ ಚಿಂತನೆಯಲ್ಲಿ ವಿದ್ಯಾರ್ಥಿ ದಾರಿ ತಪ್ಪಿರುವ ಬಗ್ಗೆ ಎಚ್ಚರಿಸುತ್ತಾರೆ.

ವಿದ್ಯಾರ್ಥಿ ವಿಕಸನದ ಮೇಲೆ ವಿದ್ಯಾ ಸಂಸ್ಥೆಗಳಿಗಿಂತ ಮನೆ ಹಾಗೂ ಸಮಾಜದ ವ್ಯಾಪ್ತಿ ವಿಶಾಲವಾದದ್ದು. ದಿನದ ಇಪ್ಪತ್ತನಾಲ್ಕು ಗಂಟೆಗಳ ಅವಧಿಯಲ್ಲಿ ವಿದ್ಯಾರ್ಥಿ ಕಾಲೇಜಿನಲ್ಲಿರುವುದು ಕೇವಲ ಐದು ಗಂಟೆಗಳು ಮಾತ್ರ. ಉಳಿದ ಹತ್ತೊಂಬತ್ತು ಗಂಟೆಗಳು ಅವರ ಮನೆಯಲ್ಲೋ ಸಮಾಜದ ಮತ್ತಾವುದೋ ಭಾಗದಲ್ಲೋ ಇರುತ್ತಾನೆ. ಈ ದೀರ್ಘ ಅವಧಿಯಲ್ಲಿ ಮನೆ ಹಾಗೂ ಸಮಾಜದಲ್ಲಿ ತಿದ್ದಲಾಗದ ವಿದ್ಯಾರ್ಥಿಯನ್ನು ಐದು ಗಂಟೆಗಳ ಅವಧಿಯಲ್ಲಿ ತಿದ್ದಲಾಗದು. ಹೆಚ್ಚು ಹೊತ್ತು ಸಾಕಿದ ಮಕ್ಕಳನ್ನು ತಂದೆ ತಾಯಿಗಳು ಅವರನ್ನು ತಿದ್ದಲಾಗುವುದಿಲ್ಲ ಎಂದ ಮೇಲೆ ಪರಕೀಯನಂತೆ ಭಾವಿಸಲ್ಪಡುವ ಅಧ್ಯಾಪಕನಿಂದ ಹೇಗೆ ಸಾಧ್ಯವಾದೀತು.

ಮಕ್ಕಳನ್ನು ತಂದೆ ತಾಯಿಗಳ ಒಳ್ಳೆಯ ಪರಿಸರ ಕಲ್ಪಿಸಿ ಅವರಿಗೆ ಉತ್ತಮ ನಡೆನುಡಿ ಕಲಿಸಿ ಒಳ್ಳೆಯ ನಾಗರಿಕನಾಗಲು ಪೋಷಕರ ಸಹಕಾರ ಮುಖ್ಯ. ಹಾಗೆಂದರೆ ಸಮಾಜದ ಸಹಕಾರವು ಮುಖ್ಯ ಎಂದು ಬಿ.ಕೃಷ್ಣಪ್ಪನವರು ಈ ಲೇಖನದಲ್ಲಿ ಹೇಳಿದ್ದಾರೆ.

೪.೩. ಧಾರ್ಮಿಕ ಹಾಗೂ ಮಹಿಳಾ ಚಿಂತನೆ

ಪ್ರೊ.ಬಿ.ಕೃಷ್ಣಪ್ಪನವರು ಧಾರ್ಮಿಕ ಆಚರಣೆಯನ್ನು ವೈಚಾರಿಕ ದೃಷ್ಟಿಯಲ್ಲಿ ನೋಡಿದ್ದಾರೆ. ಅವುಗಳಲ್ಲಿ 'ಚಂದ್ರಗುತ್ತಿ ಬೆತ್ತಲೆಸೇವೆ', 'ಭಾರತೀಯ ಸ್ತ್ರೀ ಅಂದು-ಇಂದು', 'ಗ್ರಾಮದೇವತೆ ಹಬ್ಬ', 'ವೀರಶೈವ ಪರಂಪರೆ' ಹಾಗೂ ನಶಿಸಿ ಹೋಗುತ್ತಿರುವ ಜಾನಪದ ಕಲೆಯನ್ನು ಕುರಿತು 'ಅಯ್ಯೋ ಜೋಗಪ್ಪ ಯಾರಿಗೆ ಬೇಕು ನಿನ್ನ ಹಾಡು, ಪಾಡು?' ಈ ಮೇಲಿನವುಗಳನ್ನು ಚರ್ಚಿಸಿದ್ದಾರೆ.

'ಚಂದ್ರಗುತ್ತಿ ಬೆತ್ತಲೆಸೇವೆ' ಇದು ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುತ್ತಿತ್ತು. ಇದರಲ್ಲಿ ಭಾಗವಹಿಸುತ್ತಿದ್ದವರು ಕೆಳವರ್ಗದವರು ಮತ್ತು ದಲಿತರು ಮಾತ್ರ. ಇದು ವೈದಿಕರ ಕ್ರೂರ ಮುಖವೆಂದೇ ಹೇಳಬಹುದು. ತಮ್ಮ ಹೆಣ್ಣುಮಕ್ಕಳು ಚೆನ್ನಾಗಿರಬೇಕು, ಆದರೆ ಕೆಳವರ್ಗದವರ, ದಲಿತರ ಹೆಣ್ಣುಮಕ್ಕಳ ಬೆತ್ತಲೆಸೇವೆ ಮಾಡಬೇಕು. ತಾವು ಮಾತ್ರ ಪ್ರೇಕ್ಷಕರಾಗಿ ಮನರಂಜನೆ ತೆಗೆದುಕೊಳ್ಳಬೇಕು. ಈ ದೇಶದ ದುರಂತವೇ ಹೀಗೆ ದಲಿತರನ್ನು ನಾನಾ ವಿಧದಲ್ಲಿ ಶೋಷಣೆಗೆ ಗುರಿ ಮಾಡಿದ್ದಾರೆ. ಅವರ ವಿರುದ್ಧ ಕೃಷ್ಣಪ್ಪನವರು ಚಳುವಳಿ ಕೂಡ ಮಾಡಿದ್ದಾರೆ. ಭಾರತೀಯ ಸ್ತ್ರೀ ಕುರಿತು ಚರ್ಚಿಸಿದ್ದಾರೆ. ಇದರಲ್ಲಿ ಪ್ರಮುಖವಾಗಿ ಮಹಿಳೆ ಪರವಾದ ಆಲೋಚನೆಗಳನ್ನು ಹೊಂದಿದೆ. ಮಹಿಳೆಗೆ ಇಂದು ಕೂಡ ಸ್ವಾತಂತ್ರ್ಯ ನೀಡಿಲ್ಲ ಹಾಗೂ ಪ್ರಾಚೀನ ಕಾಲದಿಂದಲೂ ಮಹಿಳೆಯರನ್ನು ಶೋಷಣೆ ಮಾಡುತ್ತ ಬಂದಿರುವುದರ ಕುರಿತು ಪ್ರೊ.ಬಿ.ಕೃಷ್ಣಪ್ಪನವರು ತಿಳಿಸಿದ್ದಾರೆ. 'ಗ್ರಾಮದೇವತೆ' ಹಬ್ಬದ ಕುರಿತು ಅದರ ಆಚರಣೆಯನ್ನು ಹಾಗೂ ಆಚರಣೆಯಲ್ಲಿಯ ಮೂಢ ನಂಬಿಕೆಗಳು ಮತ್ತು ಕ್ರೂರ ಆಚರಣೆಗಳ ಬಗ್ಗೆ ಚರ್ಚಿಸಿದ್ದಾರೆ.

'ವೀರಶೈವ ಪರಂಪರೆ'ಯ ಕುರಿತು ಬಿ.ಕೃಷ್ಣಪ್ಪನವರು ಚರ್ಚಿಸಿದ್ದಾರೆ. ಕರ್ನಾಟಕ ಇತಿಹಾಸದಲ್ಲಿ ಸಾಹಿತ್ಯಕವಾಗಿ ಹಾಗೂ ಚಾರಿತ್ರಿಕವಾಗಿ ೧೨ನೇ ಶತಮಾನದಲ್ಲಿ 'ಶರಣರು' ಕ್ರಾಂತಿ ಮಾಡಿದ್ದಾರೆ. ಜಾತಿವಿನಾಶದ ಕುರಿತು ಗಂಭೀರವಾದ ಪ್ರಯತ್ನ ಮಾಡಿದ್ದಾರೆ. ಬಸವಣ್ಣನವರ ನೇತೃತ್ವದಲ್ಲಿ ಸಮಾಜದ ಬದಲಾವಣೆಗೆ(ವಚನ ಚಳುವಳಿ) ವೈಚಾರಿಕ ಚಿಂತನೆಯಲ್ಲಿ ಪ್ರಯತ್ನಿಸಿ ದ್ದಾರೆ. ಆದರೆ ಇಂದು ವೀರಶೈವ ಒಂದು ಜಾತಿಯಾಗಿ ಸಂಕೀರ್ಣವಾಗಿದೆ ಎಂದು ಬಿ.ಕೃಷ್ಣಪ್ಪನವರು ಹೇಳಿದ್ದಾರೆ.

ಬೈರಜೋಗಿಗಳ ಕುರಿತು ಅವರ ಕಲೆ ಇಂದು ಕಣ್ಮರೆಯಾಗುವ ಹಂತದಲ್ಲಿರುವುದನ್ನು ಗುರುತಿಸಿದ್ದಾರೆ. ಬೈರಜೋಗಿಗಳ ಸಾಮಾಜಿಕ, ಆರ್ಥಿಕ, ಜೀವನದ ಪಲ್ಲಟಗಳನ್ನು ಕುರಿತು ಚರ್ಚೆ ಮಾಡಿದ್ದಾರೆ.

೪.೩.೧. ಚಂದ್ರಗುತ್ತಿ ಬೆತ್ತಲೆಸೇವೆ

ಪ್ರೊ.ಬಿ.ಕೃಷ್ಣಪ್ಪನವರು ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಬೆತ್ತಲೆಸೇವೆಯನ್ನು ಕಣ್ಣಾರೆ ಕಂಡು ಅಲ್ಲಿಯ ಅದರ ಆಚರಣೆಯನ್ನು ಕಥನದ ರೂಪದಲ್ಲಿ ನಿರೂಪಿಸಿದ್ದು ಅಲ್ಲದೆ ಬೆತ್ತಲೆ ಸೇವೆಯನ್ನು, ಅದರ ಹಿಂದಿರುವ ಹುನ್ನಾರಗಳನ್ನು ವ್ಯಾಖ್ಯಾನಿಸಿದ್ದಾರೆ.

ಕೃಷ್ಣಪ್ಪನವರು ಆದಿಕಾಲದಲ್ಲಿ ಮನುಷ್ಯ ನಿಸರ್ಗದಂತೆ ಬೆತ್ತಲಾಗಿರುವುದನ್ನು ಹೇಳುತ್ತಾ ಆದಿಮಾನವರಿಗೂ ಬೆತ್ತಲೆ ಎನ್ನುವುದು ಸಹಜ ಅಲ್ಲವೆಂದು ಅನ್ನಿಸಿದ್ದನ್ನು ವಿವರಿಸುತ್ತಾರೆ. ಆದಿಕಾಲದಲ್ಲಿ ಮನುಷ್ಯ ಬೆತ್ತಲೆಯಾಗಿರುವುದನ್ನು ಹಾಗೂ ಮಾನವನು ವಿಕಾಸ ಹೊಂದುತ್ತಾ ಬೆತ್ತಲೆಯನ್ನು ನಿರಾಕರಿಸಿ ಮಾನವನು ಬಟ್ಟೆ ತೊಡುವುದರ ಮೂಲಕ ನಾಗರಿಕ ಲೋಕಕ್ಕೆ ಕಾಲಿಟ್ಟನು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಮೇಲೆ ನಿಯಂತ್ರಣ ಹೇರಲಾಗಿರುತ್ತದೆ. ಇದು ಜನ ಸಮುದಾಯದ ಒಳಿತಿಗೆ ಈ ನಿಯಂತ್ರಣ ಹಾಕಲಾಗಿರುತ್ತದೆ. ಒಂದು ಕಡೆ ಬೆತ್ತಲೆಸೇವೆ ಎನ್ನುವುದನ್ನು ಪೂಜ್ಯ ಕೆಲಸವೆಂದು ಭಾವಿಸುವಂತೆ ಮಾಡಲಾಗಿದೆ. ಅಕ್ಷರಸ್ಥರು, ಅನಕ್ಷರಸ್ಥರನ್ನು ಹೀಗೆ ವಂಚಿಸುತ್ತ ಬಂದರು. ಬಿ.ಕೃಷ್ಣಪ್ಪ ಹೇಳುವಂತೆ ಚಂದ್ರಗುತ್ತಿಯಲ್ಲಿ ದೇವಿಯ ದೇವಸ್ಥಾನದ ಅರ್ಚಕರು ಬ್ರಾಹ್ಮಣರು. ಆದರೆ ದೇವಿಗೆ ಬೆತ್ತಲೆಸೇವೆ ನಡೆದುಕೊಳ್ಳುವವರು ಕೆಳವರ್ಗದ ಮತ್ತು ಬಡವರ ಮಹಿಳೆಯರು. ಕೆಳಸಮುದಾಯಗಳನ್ನು ಮೌಢ್ಯದಲ್ಲಿರುವಂತೆ ಶತ-ಶತಮಾನಗಳಿಂದ ಮಾಡುತ್ತ ಬರಲಾಗಿದೆ. ಬೆತ್ತಲೆಸೇವೆ ಮಾಡುವುದರಿಂದ ಆಯಾ ಕುಟುಂಬಗಳಿಗೆ ಫಲ ಸಿಗುತ್ತದೆಂದು ನಂಬಿಸಿರುವುದು. ಹಾಗಾಗಿ ಈ ಕೆಳವರ್ಗದ ಕುಟುಂಬಗಳಲ್ಲಿ ಪೋಷಕರೇ ತಮ್ಮ ಹೆಣ್ಣುಮಕ್ಕಳನ್ನು ಬೆತ್ತಲೆಸೇವೆಗೆ ದೂಡುತ್ತಾರೆ. ಮತ್ತು ಕೆಲವು ಮಹಿಳೆಯರನ್ನು ದೇವಿಯ ಮುತ್ತು ಕಟ್ಟುವ ನೆಪದಲ್ಲಿ ವೇಶ್ಯೆಯರಾಗಿ ಜೀವನ ಸವೆಸಬೇಕಾಗುತ್ತದೆ. ಕೆಳವರ್ಗದ ಮಹಿಳೆಯರನ್ನು ಬೆತ್ತಲೆಸೇವೆಗೆ ದೂಡಿ ಅದರಿಂದ ಸುಖ ಪಡೆಯುವುದು ಮೇಲ್ವರ್ಗದ ಹುನ್ನಾರ ಇರುತ್ತದೆ ಎನ್ನುವುದನ್ನು ಕೃಷ್ಣಪ್ಪನವರು ಹೇಳುತ್ತಾರೆ. ಚಂದ್ರಗುತ್ತಿಯಲ್ಲಿ ಬೆತ್ತಲೆಸೇವೆ ನಡೆಯುವುದು ಹಾಡುಹಗಲೇ ಸಮುದಾಯಗಳ ಸಮ್ಮುಖದಲ್ಲಿ ಕಾನೂನನ್ನು ರಕ್ಷಿಸುವ ಪೊಲೀಸರ ನಡುವೆ ಬೆತ್ತಲೆ ಸೇವೆ ನಡೆಯುತ್ತವೆ. ಮೇಲ್ವರ್ಗದ ಜಾಣರು ಬೆತ್ತಲೆಸೇವೆಯನ್ನು ಜಾಣತನದಿಂದ ವ್ಯಾಖ್ಯಾನಿಸುತ್ತಾರೆ. ಅಂದರೆ ಬೆತ್ತಲೆಸೇವೆ ಮಾಡುವವರು ತಮ್ಮ ಒಳಿತಿಗಾಗಿ ಮಾಡುತ್ತಾರೆ. ಸ್ವಯಂ ಸ್ಫೂರ್ತಿಯಿಂದ ಭಾಗಿಯಾಗುತ್ತಾರೆ, ಇದರಿಂದಾಗಿ ಇದನ್ನು ತಡೆಯುವ ಅಗತ್ಯವಿಲ್ಲವೆಂದು ವಾದಿಸುತ್ತಾರೆ. ಹೀಗೆ ವಾದಿಸುವವರು ತಮ್ಮ ಮಹಿಳೆಯರನ್ನು, ಮಕ್ಕಳನ್ನು ಬೆತ್ತಲೆ ಸೇವೆಗೆ ತೊಡಗಿಸುತ್ತಾರೆಯೇ?

ಪ್ರಜಾಪ್ರಭುತ್ವದಲ್ಲಿ ಹೀಗೆ ಮೂಢನಂಬಿಕೆ ಆಧಾರದ ಮೇಲೆ ಅಥವಾ ಸ್ವಯಂ ಸ್ಫೂರ್ತಿಯಿಂದ ಮೂಢನಂಬಿಕೆಗಳನ್ನು ನಂಬಿ ಬೆತ್ತಲೆ ಸೇವೆಗೆ ಒಳಗಾಗುವುದು ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡಿದಂತೆ, ಕಾನೂನಿನಿಂದ ಬೆತ್ತಲೆಸೇವೆಯನ್ನು ನಿಯಂತ್ರಿಸುವ ಅಗತ್ಯವಿರುವುದನ್ನು ವಿ.ಕೃಷ್ಣಪ್ಪನವರು ಈ ಲೇಖನದ ಮೂಲಕ ಹೇಳುತ್ತಾರೆ.

ಈ ಬೆತ್ತಲೆಸೇವೆ ನಡೆಯುವುದನ್ನು ಬಿ.ಕೃಷ್ಣಪ್ಪನವರು ಚಂದ್ರಗುತ್ತಿಯಲ್ಲಿ ಕಣ್ಣಾರೆ ಕಂಡು ಅಲ್ಲಿಯ ವಾಸ್ತವ ಚಿತ್ರಣವನ್ನು ಹೇಳುತ್ತಾ, ಯಾವುದೇ ಮಹಿಳೆಗೆ ಬೆತ್ತಲಾಗುವ ಇಚ್ಛೆ ಇರುವುದಿಲ್ಲ, ಅದರಲ್ಲೂ ಬಹಿರಂಗವಾಗಿ, ಜನ ಸಮುದಾಯದ ಮುಂದೆ ಬೆತ್ತಲಾಗುವುದು ಯಾವ ಮಹಿಳೆಗೆ ಇಷ್ಟವಿರುವುದಿಲ್ಲ. ಅನೇಕ ಪವಾಡ ಸದೃಶ್ಯ ಕತೆಗಳನ್ನು ಹೇಳುವುದರ ಮೂಲಕ ಬೆತ್ತಲೆಸೇವೆಯನ್ನು ನಂಬಿಸಲು ಪ್ರಯತ್ನಿಸುತ್ತಾರೆ. ಇದು ಮೇಲ್ವರ್ಗದವರ ಕ್ರೌರ್ಯ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಬಿ.ಕೃಷ್ಣಪ್ಪನವರು ಚಂದ್ರಗುತ್ತಿಯಲ್ಲಿ ನೋಡಿದ ಸಂಗತಿಯನ್ನು ಹೀಗೆ ಹೇಳುತ್ತಾರೆ.

"ಬೆತ್ತಲೆ ಮೆರವಣಿಗೆಗೆ ವಯಸ್ಸಿನ ಮಿತಿ ಇಲ್ಲ. ಎರಡು ವರ್ಷದ ನಗ್ನ ಮಗುವನ್ನು ಬೆತ್ತಲೆ ತಾಯಿಯೊಬ್ಬಳು ಸೊಂಟದಲ್ಲಿ ಕವುಚಿಕೊಂಡು ಓಡುವ ದೃಶ್ಯ ನಮ್ಮ ದುಃಖದ ಕಟ್ಟೆಯನ್ನು ಒಡೆಯಿತು. ಬೆಟ್ಟದ ಬುಡದಲ್ಲಿ ೬೦ ವರ್ಷದ ಬೆತ್ತಲೆ ಮುದುಕನೊಬ್ಬ ಬಿಸಿಲಿನ ತಾಪ ತಾಳಲಾರದೇ, ಮೂರ್ಛೆ ಹೋಗಿದ್ದ. ಜನ ಸುತ್ತುಗಟ್ಟಿ ಆತನ ತಲೆಗೆ ನೀರು ತಟ್ಟುತ್ತಿದ್ದರು. ೧೨ ವರ್ಷದ ಬೆತ್ತಲೆ ಹುಡುಗಿಯನ್ನು ನಗ್ನ ತಾಯಿಯೊಬ್ಬಳು ಕೈಹಿಡಿದುಕೊಂಡು ಸಾಗುತ್ತಿದ್ದಳು. ಐದು ವರ್ಷದ ಹೆಣ್ಣು ಮಗು ನಡೆಯಲು ಶಕ್ತಿ ಇಲ್ಲದೆ ಅಳುತ್ತಿತ್ತು. ತಂದೆ ಉಧೋ ಉಧೋ ಎನ್ನುತ್ತಾ ಬಲವಂತವಾಗಿ ಅದನ್ನು ನಡೆಸಿಕೊಂಡು ಹೋಗುವ ದೃಶ್ಯ ಅಮಾನುಷವಾಗಿತ್ತು. ಬಾಲ್ಯದಿಂದಲೇ ಮಕ್ಕಳನ್ನು ಇಂಥಾ ಮೃಗೀಯ ಪದ್ಧತಿಗೆ ಗುರಿಮಾಡಿ ಅವರ ಭವಿಷ್ಯವನ್ನೇ ಕತ್ತಲಾಗಿಸುವುದು, ಈ ದೈವೀ ಕ್ರೌರ್ಯ ಎಡಿಯಲ್ಲಿದ್ದು, ೧೦-೧೨ ವರ್ಷದ ಹುಡುಗಿಯರು, ೨೦ ವರ್ಷದ ನವ ಯುವತಿಯರು, ಗೃಹಿಣಿಯರು ಅವಿವಾಹಿತೆಯರು ೬೦ ವರ್ಷದ ಮುದುಕಿಯರು, ಮಧ್ಯವಯಸ್ಸಿನ ಹೆಂಗಸರು ಈ ಸೇವೆಗೆ ವಯೋಮಾನದ ಅಂತರವೇ ಇಲ್ಲ. ಒಂದು ಕಡೆ ೬೦ ವರ್ಷದ ಮುದುಕಿಯೊಬ್ಬಳು, ತಲೆ ಮೇಲೆ ಬುಟ್ಟಿ ಹೊತ್ತುಕೊಂಡು ಹೋಗುತ್ತಿದ್ದು ಆಕೆಯ ೪೦ ವರ್ಷದ ಗಂಡುಮಕ್ಕಳು ಅಮ್ಮನ ಹಿಂದೆ ನಡೆಯುತ್ತಿದ್ದರು. ಮತ್ತೊಂದು ಕಡೆ ೨೦ ವರ್ಷದ ಅವಿವಾಹಿತ ತರುಣಿ ಬೆತ್ತಲೆ ಹೋಗುತ್ತಿದ್ದಳು. ಅವರ ತಂದೆ ಪಕ್ಕದಲ್ಲಿ ಬಿಂದಿಗೆ ಹೊತ್ತು ಹೋಗುತ್ತಿದ್ದ. ೧೨ ವರ್ಷದ ಮಗ ತಾಯಿಯ ನಗ್ನತೆಯನ್ನು, ೬೦ ವರ್ಷದ ತಾಯಿಯ ನಗ್ನತೆಯನ್ನು ೪೦ ವರ್ಷದ ಮಕ್ಕಳು, ೨೦ ವರ್ಷದ ಮಗಳ ನಗ್ನತೆಯನ್ನು ಕಾಣುವ ತಂದೆಯ ಚಿತ್ರ, ನಾವು ಇತಿಹಾಸದಲ್ಲಿ ಓದುವ ಕಾಡುಮನುಷ್ಯರ ಅನಾಗರಿಕ ಬದುಕನ್ನು ನೆನಪಿಗೆ ತರುತ್ತದೆ."[೮]

ಮುಂದುವರೆದು ಬಿ.ಕೃಷ್ಣಪ್ಪನವರು ಇಲ್ಲಿ ನಡೆಯುವ ಬೆತ್ತಲೆಸೇವೆ ಸಹಜವಾದುದು ಎಂದು ಅನ್ನಿಸುತ್ತಿರಲಿಲ್ಲ ಎಂದು ಆ ಭಯಾನಕ ಚಿತ್ರಣವನ್ನು ಹೀಗೆ ವಿವರಿಸಿದ್ದಾರೆ.

ಇವರೆಲ್ಲ ಸ್ವಯಂಸ್ಫೂರ್ತಿಯಿಂದ ಬೆತ್ತಲೆಸೇವೆ ಮಾಡುತ್ತಿದ್ದಾರೆ ಎಂದು ನಮಗೆ ಅನಿಸಲಿಲ್ಲ. ಕೆಲವು ಕಡೆ ಬಲವಂತ ಎದ್ದುಕಾಣುತ್ತಿತ್ತು. ಒಂದು ಕಡೆ ಹೊಸದಾಗಿ ಮದುವೆಯಾದ ಗಂಡ ಹೆಂಡತಿಯನ್ನು ಬಲವಂತಪಡಿಸುತ್ತಿದ್ದ, ಹೆಂಡತಿ ಒಲ್ಲೆ ಎಂದು ಅಳುತ್ತಿದ್ದಳು. ಮತ್ತೊಂದು ಕಡೆ

ಯುವತಿಯೊಬ್ಬಳು ಬರುತ್ತಿದ್ದಳು. ಬರುತ್ತಿದ್ದಾಗ ಫೋಟೋ ಹಿಡಿಯಲು ಹೋದ ಕೂಡಲೆ ನಾಚಿ, ಜೀವ ಕೈಯಲ್ಲಿ ಹಿಡಿದುಕೊಂಡು ಓಡಿ ಹೋದಳು. ಕೆಲವರಂತೂ ಕಣ್ಣು ಕೆಂಪಗೆ ಮಾಡಿ ನುಂಗುವಂತೆ ನೋಡಿದಾಗ ನಮಗೆ ಹೆದರಿಕೆ ಆಯಿತು. ನದಿಯ ದಂಡೆಯಲ್ಲಿ ನಡೆಯತ್ತಿದ್ದ ದೃಶ್ಯ ಅಮಾನುಷವಾಗಿತ್ತು. ಬೆತ್ತಲೆಸೇವೆ ಮಾಡುವವರು ನದಿಯಲ್ಲಿ ಮಿಂದು ಪೂಜಾ ಕಾರ್ಯಗಳನ್ನು ಮುಗಿಸಿಕೊಂಡು ಹೊರಡಬೇಕು. ಸ್ನಾನ ಮಾಡಿಸುವ ತಂದೆ ಮಗಳ ಸೀರೆಯನ್ನು, ಮಕ್ಕಳು ತಾಯಿಯ ಸೀರೆಯನ್ನು, ಗಂಡ ಹೆಂಡತಿ ಸೀರೆಯನ್ನು ಬಲವಂತವಾಗಿ ಕಳಚುವ ದೃಶ್ಯ ನಮ್ಮ ಮೂರನೆಯ ದರ್ಜೆಯ ಸಿನಿಮಾಗಳಲ್ಲಿ ಖಳನಾಯಕರು ನಡೆಸುವ ಮಾನಭಂಗ ದೃಶ್ಯದಂತೆ ಕಾಣುತ್ತಿತ್ತು.

ಒಬ್ಬ ಹುಡುಗ 'ನೀನು ನನ್ನ ತಾಯಿಯಲ್ಲ, ನಮ್ಮವ್ವ ಬೆಪ್ಪಿದಾಗ ಐವಾಳೆ ನೀನು ನಡಿ' ಎಂದು ತಾಯಿಗೆ ಹೇಳುತ್ತಿದ್ದ. ಮತ್ತೊಂದು ಕಡೆ ಮಧ್ಯೆ ವಯಸ್ಸಿನ ಹೆಂಗಸೊಬ್ಬಳು 'ನನಗೆ ಗಂಧದ ಉಟಿಗೆ ಉಡಿಸಿರೋ(ಬೆತ್ತಲೆ) ಈ ಬಟ್ಟೆ ತೆಗಿರೋ" ಎಂದು ಮಕ್ಕಳಿಗೆ ಅಜ್ಞೆ ಮಾಡುತ್ತಾ ಮೈಮೇಲಿನ ಬಟ್ಟೆಗಳನ್ನು ಕೀಳುತ್ತಿದ್ದಳು. ಇದನ್ನೆಲ್ಲ ನೋಡುತ್ತಿದ್ದ ನಮಗೆ ಗಂಡು ಹೆಣ್ಣುಗಳ ಬಗ್ಗೆ ಇದ್ದ ಗೌರವ ಕಿಂಚಿತ್ತು ಉಳಿಯದೇ ಜುಗುಪ್ಸೆಯಿಂದ ವಾಕರಿಸುವಂತಿತ್ತು.

ಬೆತ್ತಲೆಸೇವೆ ಹೀಗೆ ಹಾಡಹಗಲು ಉರಿಬಿಸಿಲಿನಲ್ಲಿ ನಡೆಯುತ್ತಿದ್ದರೂ ರಸ್ತೆ ಬದಿಗಳಲ್ಲಿ ನಡೆಯುವ ಜನ ಆ ಕಡೆ ಬೆರಳು ಮಾಡಿ ತೋರುವುದೇ ಆಗಲಿ, ಕೀಟಲೆ ಮಾಡುವುದೇ ಆಗಲಿ ಮಾಡುವುದಿಲ್ಲ. ಹಾಗೆಂದು ಅವರಿಗೆ ಪೂಜ್ಯ ಭಾವನೆ ಇದೆ ಎಂದೇನೂ ಅಲ್ಲ. ಬೆತ್ತಲೆಸೇವೆ ಮಾಡುವವರನ್ನು ಯಾರೇ ಅಪಹಾಸ್ಯ ಗೇಲಿ ಮಾಡಿದರು ಎಲ್ಲಮ್ಮ ತಾಯಿ ಅವರಿಗೆ ಕೊಡಬಾರದ ಕಷ್ಟಗಳನ್ನು ಕೊಡುತ್ತಾಳೆ ಎಂಬ ಧರ್ಮದ ಭೀತಿಯಿಂದ ಅವರು ಉಸಿರೆತ್ತುವುದಿಲ್ಲ. ಇಂಥ ಭೀತಿಯನ್ನು ಶತಮಾನಗಳಿಂದ ಅವರ ಮನಸ್ಸಿನಲ್ಲಿ ಬೇರೂರಿಸಲಾಗಿದೆ. ಸಂದರ್ಭಕ್ಕೆ ತಕ್ಕಂತೆ ಕೆಲವು ಘಟನೆಗಳನ್ನು ಹೆಣೆಯಲಾಗಿದ್ದು, ಕೆಲವು ವರ್ಷಗಳ ಹಿಂದೆ ಮುಸ್ಲಿಮ್‌ನೊಬ್ಬ ತಮಾಷೆ ಮಾಡಿದಾಗ ಆತನ ಮುಖ ಸುಟ್ಟ ಗಾಯವಾಯಿತಂತೆ, ಇನ್ನೊಬ್ಬ ರಕ್ತಕಾರಿ ಸತ್ತನಂತೆ. ವೆಟ್ಟಪ್ಪ ಅಮ್ಮನವರ ಗುಡಿಯಿರುವ ಮುಗ್ಗುಲಲ್ಲಿ ಒಂದು ಎತ್ತರವಾದ ಕೋಡುಗಳಿವೆ. ಅಲ್ಲಿ ಐದಾರು ಜೇನು ಗೂಡುಗಳಿವೆ. ಯಾರೇ ಮೈಲಿಗೆ, ಮುಟ್ಟು ಅದವರು ಪೂಜೆ ಅಪವಿತ್ರಗೊಳಿಸಿದರೆ ಅಂತಹವರನ್ನು ಜೇನುಗಳು ಕಡಿದು ಸಾಯಿಸಿಬಿಡುತ್ತವೆ ಎಂಬ ನಂಬಿಕೆ ಜನರಿಗೆ ಇರುವುದರಿಂದ ಎಲ್ಲರು ಮಡಿ, ನಡೆಯಲ್ಲೆ ಗುಡಿಗೆ ಹೋಗುತ್ತಾರೆ. ಜನ ದೇವಸ್ಥಾನಕ್ಕೆ ಸುತ್ತು ಹಾಕುವಾಗ ಜೇನುಗಳಿಗೆ ಊದುಬತ್ತಿ ಬೆಳಗುತ್ತಾರೆ. ಪ್ರತಿ ವರ್ಷ ಅಂದರೆ ೧೯೮೩ನೇ ಸಾಲಿನಲ್ಲಿ ಪೋಲೀಸ್ ಅಧಿಕಾರಿಯೊಬ್ಬ ಜನ ಗುಂಪುಗುಂಪಾಗಿ ಗುಡಿಯೊಳಗೆ ಬರಕೂಡದು ಎಂದು ಗಲಾಟೆ ಮಾಡಿದ್ದಕ್ಕೆ ಜೇನುಗಳು ಬಂದು ಆತನನ್ನು ಮನಸ್ಸಾ ಇಚ್ಛೆ ಕಡಿದವಂತೆ. ಹಾಗೆಯೇ ಅವನಂಥಾ ಹತ್ತಾರು ಜನರನ್ನು ಕಡಿದು ಓಡಿಸಿದವಂತೆ. ಅವರು

ಉರಿ ಉರಿ ಎಂದು ಬಂದು ಗುತ್ತೆಮ್ಮನನ್ನು ಮೊರೆ ಹೋಗಲು ಕೂಡಲೇ ಉರಿ ಇಳಿಯಿತಂತೆ ನಾವು ಸ್ನಾನ ಮಾಡಿರಲಿಲ್ಲ, ಚಪಲಿಗಳನ್ನು ಚೀಲದಲ್ಲಿ ತುಂಬಿಕೊಂಡು ಗರ್ಭಗುಡಿಗೆ ಹೋಗಿದ್ದರುಯ ಯಾವ ಜೇನು ನಮಗೆ ಕಚ್ಚಲಿಲ್ಲ. ನಾನು ಒಬ್ಬ ಹಳ್ಳಿ ಯಜಮಾನನ್ನು 'ಈಗ ಆ ಪೋಲಿಸ್ ಅಧಿಕಾರಿ ಎಲ್ಲಿದ್ದಾನೆ' ಎಂದು ಕೇಳಿದ್ದಕ್ಕೆ ಆತ ಕೋಪ ತಿರಸ್ಕಾರಗಳಿಂದ ಆ ನನಮನಿಗೆ ನೇಣ ಹೆಚ್ಚಾಗಿತ್ತು. ಕಡಿಸಿಕೊಂಡು ದೇಶಗತಿ ಹೋದ ಎಂದು ಮತ್ತೊಬ್ಬ ಒಂದು ವರ್ಷ ಬೆತ್ತಲೆ ಸೇವೆ ಚಿತ್ರ ತೆಗೆದಿದ ಮಂಜುಳ ಎನ್ನುವ ನಟಿ ಬಂದಿದ್ಲು ಅವರಿಗೂ ಇಟ್ಟಿದವು. ಕಲ್ಲುಕಲ್ಲಿಗೆ ಅವರು ದೇವಿ ತಾಯಿ ಅಂತ ಶರಣು ಮಾಡಿ ಹೋದ್ರು ಎಂದ. ಇಂತ ಘಟನೆ ಪ್ರಸಂಗಗಳು ನೂರಕ್ಕೆ ತೊಂಬತೊಂಬತ್ತು ಭಾಗ ಸತ್ಯವಾಗದೆ. ಕೇವಲ ಕಲ್ಪಿತವುಗಳು ಅಥವಾ ಕಾಕತಾಳಿಯಿಗಳು ಆಗಿದ್ದರು ಜನ ಅವುಗಳನ್ನು ಪ್ರಶ್ನಿಸದೆ ನಂಬುತ್ತಾರೆ.

ಬಿ.ಕೃಷ್ಣಪ್ಪನವರು ಈ ಬೆತ್ತಲೆ ಸೇವೆಯನ್ನು ಕಥನದ ರೂಪದಲ್ಲಿ ನಿರೂಪಿಸಿದ್ದಾರೆ. ಅಂದರೆ ಅವರು ಚಂದ್ರಗುತ್ತಿಗೆ ಹೋಗಿ ಅಲ್ಲಿ ನಡೆಯುವ ಬೆತ್ತಲೆ ಸೇವೆಯನ್ನು ನೋಡಿ ಅವರ ವಿವರಗಳನ್ನು ಕಥೆಯ ರೂಪದಲ್ಲಿ ನಿರೂಪಿಸಿದ್ದಾರೆ. ಅಲ್ಲಿ ಇದಕ್ಕೆ ಸಂಬಂಧಿಸಿದ ಕಾನೂನಿನ ವೈಫಲ್ಯ ಜನರ ಅಜ್ಞಾನದಿಂದ ಹುಟ್ಟಿದ ಸಮರ್ಥನೆಗಳನ್ನು ಉಲ್ಲೇಖಿಸಿದ್ದಾರೆ. ಈ ಒಂದು ಅನಾಗರಿಕ ಪದ್ಧತಿಯನ್ನು ಯಾವುದೇ ಸಂಘಟನೆ, ಸಂಸ್ಥೆ ಮತ್ತು ಮಾಧ್ಯಮಗಳು, ಪತ್ರಕರ್ತರು ಇದನ್ನು ಇನ್ನಿಲ್ಲದಂತೆ ಮಾಡುವ ಬದಲು ಮುಂದುವರಿಸಲು ತಮ್ಮದೇ ಆದ ರೀತಿಯಲ್ಲಿ ಅವರು ಇದನ್ನು ವ್ಯಾಖ್ಯಾನಿಸುತ್ತ ಜೀವಂತವಾಗಿಡಲು ಪ್ರಯತ್ನಿಸುತ್ತಿದ್ದಾರೆ. ಈ ಬೆತ್ತಲೆಸೇವೆ ಕರ್ನಾಟಕದ ಬೇರೆ ಬೇರೆ ಕಡೆ ಇದೆ ಎಂದು ಹೇಳುತ್ತ ಲೇಖನದ ಕೊನೆಯಲ್ಲಿ ಬಿ.ಕೃಷ್ಣಪ್ಪನವರು ಹೀಗೆ ಹೇಳಿದ್ದಾರೆ.

"ಸರ್ಕಾರ ಈ ಕೂಡಲೆ ವ್ಯವಸ್ಥಿತ ಕಾರ್ಯಕ್ರಮ ರೂಪಿಸುವ ಮೂಲಕ ಮನುಷ್ಯತನಕ್ಕೆ ಅಪಮಾನ ಎಸಗುತ್ತಿರುವ ಇಂಥ ಕ್ರೂರಪದ್ಧತಿಯನ್ನು ಮೂಲೋಚ್ಚಾಟನೆ ಮಾಡಬೇಕು ಮತ್ತು ಮಾನವೀಯ ಮೌಲ್ಯಗಳಲ್ಲಿ ನಂಬಿಕೆ ಇರುವ ಎಲ್ಲ ಜನಸಂಘಟನೆಗಳು ಇದರ ವಿರುದ್ಧ ಧ್ವನಿ ಎತ್ತಿ ನಾವು ಮಾನವರು ಎಂಬುದನ್ನು ಸಾಬೀತುಮಾಡಿಕೊಳ್ಳಬೇಕಾಗಿದೆ."

೪.೩.೨. ಭಾರತೀಯ ಸ್ತ್ರೀ ಅಂದು ಮತ್ತು ಇಂದು

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿವ್ಯವಸ್ಥೆಯ ಅನ್ಯಾಯ, ದೌರ್ಜನ್ಯ ಒಂದು ಕಡೆಯಾದರೆ, ರಕ್ತಸಂಬಂಧವಿರುವ ಮಹಿಳೆಯನ್ನು ತೀರಾ ನಿಕೃಷ್ಟ ಸ್ಥಿತಿಯಲ್ಲಿ ಇಟ್ಟಿದೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಮಹಿಳೆಯರಿಗೆ ವಿದ್ಯಾಭ್ಯಾಸವನ್ನು ನಿರಾಕರಿಸಲಾಗಿತ್ತು. ವೇದಾಧ್ಯಯನದ ಹಕ್ಕನ್ನು ನಿಷೇಧಿಸಲಾಗಿತ್ತು. ಹಿಂದೂ ಧರ್ಮಶಾಸ್ತ್ರಜ್ಞ ಮನು ಪ್ರಕಾರ ಹೆಣ್ಣು ಎಂದಿಗೂ ಸ್ವತಂತ್ರಳಲ್ಲ. ಅವಳು ಅಬಲೆ ಎಂದಿದ್ದಾನೆ. ಬಾಲ್ಯದಲ್ಲಿ ತಂದೆ ಆಶ್ರಯದಲ್ಲಿ, ಯೌವನದಲ್ಲಿ ಪತಿಯ ರಕ್ಷಣೆಯಲ್ಲಿ ಮತ್ತು ಇಳಿ ವಯಸ್ಸಿನಲ್ಲಿ ಮಕ್ಕಳ ಆಶ್ರಯದಲ್ಲಿ ಇರಬೇಕೆಂದು ತಿಳಿಸಿದ್ದಾನೆ. ಮಹಿಳೆ ಸ್ವತಂತ್ರ್ಯವಾಗಿ

ಬದುಕಬಾರದು. ತಂದೆ-ತಾಯಿಗಳ ಆಜ್ಞೆಗೆ ಅಥವಾ ಇಚ್ಛೆಗೆ ಅನುಗುಣವಾಗಿ, ಪತಿಯ ಬಯಕೆಗೆ ವಿರೋಧವಿಲ್ಲದಂತೆಯೂ, ಮಕ್ಕಳ ಆಶಯಕ್ಕೆ ಪೋಷಕವಾಗಿಯೂ ಬಾಳುತ್ತಿದ್ದಳು. ಪ್ರಾಚೀನ ಕಾಲದಿಂದಲೂ ಮಹಿಳೆಗೆ ಆರ್ಥಿಕವಾಗಿ ಸ್ವತಂತ್ರವಾಗಿರಲು ಅವಕಾಶ ಕೊಟ್ಟಿಲ್ಲ. ಮಹಿಳೆಯ ಕೆಲಸವೆಲ್ಲವೂ ಮನೆಯ ಒಳಗಡೆಯೆ. ಅಡುಗೆ ಮಾಡುವುದು, ಮಕ್ಕಳನ್ನು ಹೆರುವುದು. ಅವುಗಳ ಪಾಲನೆ, ಪತಿಯ ಸೇವೆ ಮುಂತಾದ ಕರ್ತವ್ಯಗಳಿಗೆ ಮಾತ್ರ ಸೀಮಿತಗೊಳಿಸಿದ್ದಾರೆ. ಸ್ತ್ರೀಯರಿಗೆ ಸ್ವತಂತ್ರವಾಗಿ ಮುಕ್ತಿ ಇಲ್ಲ. ಮಹಿಳೆಯರು ಮುಕ್ತಿ ಪಡೆಯಬೇಕೆಂದರೆ ಅದು ಪತಿಯ ಸೇವೆಯ ಮುಖಾಂತರವೇ. ಅವಳಿಂದ ವೇದಾಧ್ಯಯನದ ಹಕ್ಕನ್ನು ಕಿತ್ತುಕೊಂಡರು. ಸ್ತ್ರೀ ಶೂದ್ರಳು ಎಂದರು. ಮನು ಬಾಲಕಿಯರಿಗೆ ಉಪನಯನ ಕೂಡದು ಎಂದು ನಿಷೇಧಿಸುತ್ತಾನೆ.

'ಮನೆಯನ್ನು ಬಿಟ್ಟು ಹೋಗಬಹುದೆಂಬ ಹೆದರಿಕೆಯಿಂದ ಬ್ರಾಹ್ಮಣರು ತಮ್ಮ ಪತ್ನಿಯರಿಗೆ ತತ್ತ್ವಜ್ಞಾನವನ್ನು ಹೇಳಿಕೊಡುತ್ತಿರಲಿಲ್ಲ' ಎಂದು ಮೆಗಾಸ್ತನಿಸ್-ಹೇಳುತ್ತಾನೆ. ಬ್ರಾಹ್ಮಣ ಹೆಣ್ಣುಮಕ್ಕಳ ಕಥೆಯೇ ಹೀಗಿರಬೇಕಾದರೆ, ಅವರನ್ನೇ ಆದರ್ಶವಾಗಿಟ್ಟುಕೊಂಡು ಬದುಕುತ್ತಿರುವ ಉಳಿದ ವರ್ಣಗಳ ಸ್ತ್ರೀಯರ ಜೀವನ ಹೀನಾಯ ಸ್ಥಿತಿಯಲ್ಲಿದ್ದವು ಎಂದೇ ಕೃಷ್ಣಪ್ಪನವರು ಕಳಕಳಿ ವ್ಯಕ್ತಪಡಿಸುತ್ತಿದ್ದರು.

ಪ್ರಾಚೀನ ಭಾರತದಲ್ಲಿನ ಸ್ತ್ರೀಯರನ್ನು ಕುರಿತು ಕೃಷ್ಣಪ್ಪನವರು ಹೀಗೆ ಹೇಳುತ್ತಾರೆ.

"ಪ್ರಾಚೀನ ಭಾರತದಲ್ಲಿ ಸ್ತ್ರೀಯನ್ನು ಒಂದು ಉಪಭೋಗದ ವಸ್ತು, ಮಕ್ಕಳನ್ನು ಹೆರುವ ಯಂತ್ರ, ಅಡುಗೆ ಮನೆಯಲ್ಲಿರಬೇಕಾದವಳು ಎಂದು ಕಾಣುತ್ತ ಬಂದರು. ಎಲ್ಲಿ ನಾರಿಯರನ್ನು ಪೂಜಿಸಲಾಗುತ್ತದೆಯೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. ಅಂತಹ ಭಾಗ್ಯ ಪಡೆದ ಪುಣ್ಯವಂತ ಸ್ತ್ರೀಯರು ನೂರಕ್ಕೊಂದು ಭಾಗ ಮಾತ್ರ. ಅವರು ಕೇವಲ ಅಪವಾದಗಳು ಅಷ್ಟೇ. ನಮ್ಮ ವಿವೇಚನೆ, ಅನುಕಂಪ, ತೊಂಬತ್ತೊಂಬತ್ತು ಭಾಗ ಸ್ತ್ರೀಯರನ್ನು ಕುರಿತದ್ದೇ ಹೊರತು ಒಂದು ಭಾಗ ಸ್ತ್ರೀಯರಿಗಲ್ಲ. ಆದರೆ ಕೆಲವು ವಿದ್ವಾಂಸರು ಮೈತ್ರೇಯಿ, ಗಾರ್ಗಿ, ಘೋಷಾ, ಲೋಪಾಮುದ್ರಾ ಮುಂತಾದ ಸ್ತ್ರೀಯರ ಪ್ರಸ್ತಾಪ ಮಾಡುತ್ತ ಸ್ತ್ರೀಯರಿಗೂ ವೇದಾಧ್ಯಯನ ಮಾಡುವ ಹಕ್ಕಿತ್ತು ಎಂದು ವಾದಿಸುತ್ತಾರೆ. ಈ ಹಕ್ಕನ್ನು ಸಾರ್ವತ್ರಿಕವಾಗಿ ಎಲ್ಲ ಹೆಣ್ಣು ಮಕ್ಕಳಿಗೂ ಕೊಟ್ಟಿದ್ದರೆ ಉಳಿದವರು ಇವರಂತೆ ಏಕೆ ವೇದಾಧ್ಯಯನ ಮಾಡಲಿಲ್ಲ ಎಂಬುದೇ ನಮ್ಮ ಪ್ರಶ್ನೆ. ಅಲ್ಲದೆ ಮೈತ್ರೇಯಿ, ಗಾರ್ಗಿ ಮುಂತಾದ ಸ್ತ್ರೀಯರು ಬ್ರಾಹ್ಮಣರೋ, ಋಷಿ ಪತ್ನಿಯರೋ ಆಗಿದ್ದರೇ ಹೊರತು, ವೈಶ್ಯ, ಶೂದ್ರ ಹೆಣ್ಣು ಮಕ್ಕಳ ಸ್ಥಿತಿ ಏನು? ಶೂದ್ರರಿಗೆ ವೇದಾಧ್ಯಯನದ ಹಕ್ಕೇ ಇಲ್ಲದ ಕಾಲದಲ್ಲಿ ಶೂದ್ರ ಸ್ತ್ರೀಯರಿಗೆ ವೇದಾಧ್ಯಯನದ ಹಕ್ಕಿತ್ತು ಎಂದು ಯಾವ ಬಾಯಲ್ಲಿ ಇವರು ಆಡುತ್ತಾರೆ? ಬ್ರಾಹ್ಮಣ ಸ್ತ್ರೀಯರನು ಕುರಿತು ಮಾತ್ರ ನಮ್ಮ ಹೇಳಿಕೆ ಎಂದು ಇವರು ಹೇಳುವುದಾದರೆ, ಹಿಂದೂ ಸಮಾಜ ಎಂದರೆ ಬರೀ ಬ್ರಾಹ್ಮಣರು ಎಂದರ್ಥವೇ? ಅಲ್ಲದೇ ಇವರು ಹಿಂದೂ ಸಮಾಜದಲ್ಲಿ ಸ್ತ್ರೀಯರ ಸ್ವಯಂವರದ ಮುಖಾಂತರ ತಮ್ಮ ಪತಿಯನ್ನು ತಾವೇ ಆರಿಸಿಕೊಳ್ಳುವ ಪದ್ಧತಿ ಇತ್ತು ಎನ್ನುತ್ತಾರೆ. ಇದಕ್ಕೆ ಉದಾಹರಣೆಯಾಗಿ

ಸಿಕ್ಕುವ ವ್ಯಕ್ತಿಗಳೆಂದರೆ ದಮಯಂತಿ ಹಾಗೂ ಸಾವಿತ್ರಿ. ಇತಿಹಾಸದಲ್ಲಿ ಬರುವ ಜಯಚಂದ್ರನ ಮಗಳು ಸಂಯುಕ್ತ. ಸೀತೆ ಹಾಗೂ ದ್ರೌಪದಿಯರ ಸ್ವಯಂವರಗಳೇ ಆಗಲಿ, ಬುದ್ಧ ಯಶೋಧರೆಯನ್ನು ಮದುವೆಯಾದದ್ದೇ ಆಗಲಿ, ಶಕ್ತಿ ಪ್ರದರ್ಶನದಿಂದ. ಅವು ಶುದ್ಧ ಅರ್ಥದಲ್ಲಿ ಸ್ವಯಂವರಗಳಾದವು. ಅಂದರೆ ಹೆಣ್ಣುಮಕ್ಕಳು ತಮ್ಮ ಪತಿಯನ್ನು ತಾವೇ ಆರಿಸಿಕೊಳ್ಳುವ ಪದ್ಧತಿ ಕ್ಷತ್ರಿಯ ಮುಂತಾದ ಉಚ್ಚ ವರ್ಣಗಳಲ್ಲಿ ಮಾತ್ರ ಅಪವಾದವಾಗಿ ಕಂಡುಬರುತ್ತದೆ. ಮನು ತನ್ನ ಧರ್ಮಶಾಸ್ತ್ರದಲ್ಲಿ "ತ್ರೀಣಿ ವರ್ಷಾಣ್ಯು ದೀಕ್ಷೇತ ಕುಮಾರ್ಯ ಋತುಮತೀ ಸತಿ ಊರ್ಧ್ವಂತು ಕಾಲಾದೇತ ಸ್ಮಾದ್ವಿಣ್ದೇತ ಸದೃಶಂ ಪತಿಮ್" ಎಂದರೆ ತಂದೆ ಮೊದಲಾದ ಹಿರಿಯರು ತನ್ನನ್ನು ಉತ್ತಮನಾದ ವರನಿಗೆ ಕೊಡಲೆಂದು ಕನ್ಯೆಯು ಋತುಮತಿಯಾದ ಮೇಲೆ ಮೂರು ವರ್ಷಗಳವರೆಗೆ ನಿರೀಕ್ಷಿಸಬೇಕು. ಆ ಕಾಲ ಕಳೆದ ಬಳಿಕ ತನಗೆ ಅನುರೂಪನಾದ ವರನನ್ನು ತಾನೇ ಹುಡುಕಿಕೊಳ್ಳಬಹುದು" ಎಂದು. "ಅದೀಯಮಾನಾ ಧರ್ತಾರಮಥಿ ಗಚ್ಛೇದ್ಯದಿ ಸ್ವಯಮ್" "ನೈನಃ ಕಿಂಚಿದವಾಪ್ನೋತಿ ನಚಯಂ ಸಾಧಿಗಚ್ಛತಿ" ಎಂದರೆ ಹಿರಿಯರಿಂದ ಯೋಗ್ಯನಿಗೆ ಕೊಡಲ್ಪಡದ ಕನ್ಯೆಯು ಪ್ರಾಪ್ತ ಕಾಲದಲ್ಲಿ ತನ್ನ ಗಂಡನನ್ನು ತಾನೇ ಪಡೆದುಕೊಂಡರೆ, ಅದರಿಂದ ಅವಳಿಗೆ ಸ್ವಲ್ಪವೂ ಪಾಪ ಬರುವುದಿಲ್ಲ" ಎಂದೂ ನಿಯಮವನ್ನೇನೋ ಹೇಳುತ್ತಾನೆ. ಆದರೆ ಎಷ್ಟು ಜನ ತಂದೆ ತಾಯಿಗಳು ಅದಕ್ಕೆ ಅವಕಾಶವನ್ನು ಕೊಟ್ಟರು? ಎಷ್ಟು ಜನ ಸ್ತ್ರೀಯರು ಅಂತಹ ಅವಕಾಶ ಪಡೆದರು? ಎಲ್ಲಕ್ಕಿಂತ ಘೋರವಾದ ಕರ್ಮವೆಂದರೆ ವಿಧವೆಯರ ಸ್ಥಿತಿ. ಹೆಂಗಸರು ಪತಿ ಸತ್ತ ಮೇಲೆ ಬದುಕಿ ಅಮಂಗಳ ಎನ್ನಿಸಿಕೊಳ್ಳುವುದಕ್ಕಿಂತ ಸಾಯುವುದೇ ಲೇಸು ಎನ್ನೋಣವೇ!-ಅಂತೂ ವಿಧವೆಯರ ಸ್ಥಿತಿ ಭರಿಸಲಾರದ ಒಂದು ಕಳಂಕ. ಅವರು ಪುನಃ ಲಗ್ನವಾಗುವಂತಿಲ್ಲ. ಪತಿ ಬದುಕಿದ್ದಷ್ಟು ಕಾಲ ಅವಳಿಗೆ ಎಲ್ಲ ಸೌಭಾಗ್ಯ, ಸಮಾಜದಲ್ಲಿ ಬೆಲೆ ಇರುತ್ತಿತ್ತು. ಅವನು ಸತ್ತ ಮೇಲೆ ಅವಳು ಸಮಾಜಕ್ಕೆ ಬೇಡದ ವಸ್ತುವಾಗುತ್ತಿದ್ದಳು. ಆದ್ದರಿಂದಲೇ ಎಷ್ಟೋ ಜನ ಹೆಣ್ಣು ಮಕ್ಕಳು ಮುತ್ತೈದೆ ಸಾವನ್ನೇ ಬಯಸುತ್ತಿದ್ದರು. ಹೆಣ್ಣಿಗೆ ಪುನಃ ಜೀವನವನ್ನು ಕೊಡಲಾರದ ಹಿಂದೂ ಸಮಾಜ ಎಷ್ಟು ಜನ ವಿಧವೆಯರ ಜೀವನ ಅಪಹರಿಸಿದೆ, ಅಪಹರಿಸುತ್ತಿದೆ! ವಿಧವೆಯರು ಪುನಃ ಹೊಸ ಬದುಕನ್ನು ಕಂಡು ತಲೆ ಎತ್ತುವ ಬಗೆ ಹೇಗೆ"[೯] ಎಂದು ಕೃಷ್ಣಪ್ಪನವರ ಹೆಣ್ಣಿನ ಜೀವನದ ಬಗ್ಗೆ ಚಿಂತಿಸಿದ್ದಾರೆ.

ಹೀಗೆ ಪ್ರಾಚೀನ ಭಾರತೀಯ ಸ್ತ್ರೀಯರು ವಿದ್ಯಾಭ್ಯಾಸದ, ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಪುರುಷರ ಭೋಗವಸ್ತುಗಳಾಗಿ ಶೋಷಣೆಗೆ ಒಳಗಾದರು ಎಂದ ಮಾತ್ರಕ್ಕೆ ಇಂದಿನ ಭಾರತೀಯ ನಾರಿಯರು ಪೂರ್ಣ ಶೋಷಣೆಯಿಂದ ಮುಕ್ತರಾಗಿದ್ದಾರೆ ಎಂದು ಹೇಳುವಂತಿಲ್ಲ ಎಂದು ಕೃಷ್ಣಪ್ಪನವರು ಪ್ರಸ್ತುತ ಮಹಿಳೆಯ ಸ್ಥಿತಿಯನ್ನು, ಅವರ ಕಂದಾಚಾರಗಳನ್ನು ವಿವರಿಸುತ್ತಾರೆ. ಮುಂದುವರಿದು, ಇಂದು ಭಾರತದಲ್ಲಿ ಕೆಲವು ಸ್ತ್ರೀಯರು ಪ್ರಧಾನಮಂತ್ರಿ, ರಾಜ್ಯದ ಮುಖ್ಯಮಂತ್ರಿ, ಕೇಂದ್ರ ಸಚಿವೆ, ವಿಧಾನಮಂಡಲಿ ಸ್ಪೀಕರ್, ರಾಯಭಾರಿಗಳಾಗಿದ್ದಾರೆ ಎಂದರೆ ಎಲ್ಲಾ ಸ್ತ್ರೀಯರು ಹಾಗೆಯೇ ಇದ್ದಾರೆ ಎನ್ನುವುದು

ತಪ್ಪು ಕಲ್ಪನೆಯಾಗುತ್ತದೆ. ಒಬ್ಬ ಇಂದಿರಾಗಾಂಧಿ, ಒಬ್ಬ ಸತ್ವಶ್ರೀ ನಂದಿನಿ, ಒಬ್ಬ ಸರೋಜಿನಿ ಮಹಿಷಿ, ಒಬ್ಬ ವಿಜಯಲಕ್ಷ್ಮಿ ಪಂಡಿತ್, ಒಬ್ಬ ನಾಗರತ್ನಮ್ಮ ಇದ್ದರೆ, ಎಲ್ಲರಿಗೂ ಇಂದಿರಾ ಗಾಂಧಿಯಂತಹ, ವಿಜಯಲಕ್ಷ್ಮಿ ಪಂಡಿತ್ ಅಂತಹ, ಸರೋಜಿನಿ ಮಹಿಷಿಯಂತಹ ಸೌಲಭ್ಯಗಳು, ಅವಕಾಶಗಳು ಇವೆ ಎಂಬುದು ಉತ್ಪ್ರೇಕ್ಷೆಯ ಮಾತಾದೀತು ಎಂದು ಬಿ.ಕೃಷ್ಣಪ್ಪನವರು ಹೇಳುತ್ತಾರೆ.

ಶಿಕ್ಷಣದಿಂದ ವಂಚಿತ ಸ್ತ್ರೀ ಸಂಖ್ಯೆ ಅಧಿಕವೆಂದು ಕೃಷ್ಣಪ್ಪನವರು ಅಭಿಪ್ರಾಯಪಡುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಪರೀಕ್ಷಾ ಫಲಿತಾಂಶಗಳಲ್ಲಿ ವಿದ್ಯಾರ್ಥಿನಿಯೇ ಮೇಲುಗೈ ಸಾಧಿಸಿದ್ದಾಳೆ. ಪ್ರಾಥಮಿಕ, ಸೆಕೆಂಡರಿ ಪರೀಕ್ಷೆಯ ನಾನಾ ಹಂತಗಳಲ್ಲಿ ಅವರ ಸಂಖ್ಯೆ ಹೆಚ್ಚುತ್ತಿದೆ. ಇಂದು ಕಡ್ಡಾಯ ಶಿಕ್ಷಣ ಬಂದಿರುವುದರಿಂದ ಹಳ್ಳಿಯ ಮಹಿಳೆಯು ಅಕ್ಷರಾಭ್ಯಾಸ ಮಾಡಿ ಜ್ಞಾನಾರ್ಜನೆ ಮಾಡಲು ಅನುಕೂಲವಾಗಿದೆ ಎಂದು ಕೃಷ್ಣಪ್ಪ, ಸ್ತ್ರೀ ಶಿಕ್ಷಣ ಕುರಿತು ಹೇಳಿದ್ದಾರೆ. "ಹೆಣ್ಣು ಮತ್ತೊಬ್ಬರ ಒಡವೆ, ಹೆಚ್ಚಿಗೆ ಓದಿಸಿ ಏನು ಪ್ರಯೋಜನ ಎಂಬ ಭಾವನೆಯಿಂದಲೋ, ಜಾಸ್ತಿ ಓದಿದರೆ ಹೆಣ್ಣು ಮಕ್ಕಳು ಕೆಟ್ಟು ಹೋಗುತ್ತಾರೆ ಎಂಬ ಭಾವನೆಯಿಂದಲೋ ಜಾಸ್ತಿ ಓದಿದರೆ, ಗಂಡು ಸಿಕ್ಕುವುದು ಕಷ್ಟವೆಂಬ ಉದ್ದೇಶದಿಂದಲೋ, ಓದನ್ನು ನಿಲ್ಲಿಸಿಬಿಡುತ್ತಾರೆ. ಸ್ತ್ರೀಗೆ ವಿದ್ಯಾಭ್ಯಾಸ ಕೊಡಿಸುವುದು ತಂದೆ ತಾಯಿಗಳ ಕೈಯಲ್ಲಿರುತ್ತದೆ. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಟ್ಟರೆ ಸಾಕು, ಮುಂದಿನ ಜೀವನಕ್ರಮವನ್ನು ಅವರು ನೋಡಿಕೊಳ್ಳುತ್ತಾರೆ ಎನ್ನುವುದಕ್ಕಿಂತ ಅವರಿಗೆ ವಿದ್ಯಾಭ್ಯಾಸ ಮಾಡಿಸದಿದ್ದರೂ ಚಿಂತೆಯಿಲ್ಲ, ಮದುವೆ ಮಾಡಿಬಿಟ್ಟರೆ ಸಾಕು. ನಮ್ಮ ಜೀವನ ಸಫಲವಾಯಿತು ಎಂದು ತಿಳಿದು ತಂದೆ ತಾಯಿಗಳು ಇಂದು ನೂರಕ್ಕೆ ತೊಂಬತ್ತು ಭಾಗ ಇದ್ದಾರೆ." ಈ ರೀತಿಯಾಗಿ ಕೃಷ್ಣಪ್ಪನವರು ಹಳ್ಳಿಗಾಡಿನ ಮಹಿಳೆಯರ ಶಿಕ್ಷಣ ಕುರಿತು ಈ ಲೇಖನದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಹಾಗೂ ವ್ಯಾಖ್ಯಾನಿಸಿದ್ದಾರೆ.

ಮಹಿಳೆಯರ ತಮ್ಮ ಜೀವನ ಸಂಗಾತಿಗಳ ಆಯ್ಕೆಯ ವಿಚಾರದಲ್ಲೂ ಸಹ ತಂದೆ ತಾಯಿಗಳ ಆಯ್ಕೆಯೇ ಆಗಿರುತ್ತದೆ. ಈ ವಿಚಾರದಲ್ಲಿ ಮಹಿಳೆ ತೀರಾ ಅಸ್ವತಂತ್ರಳಾಗಿದ್ದಾಳೆ ಎಂದು ಕೃಷ್ಣಪ್ಪನವರು ಹೇಳಿದ್ದಾರೆ. "ಭಾರತೀಯ ಸ್ತ್ರೀ ಅಂದು ಮತ್ತು ಇಂದು" ಎಂಬ ಲೇಖನದಲ್ಲಿ ಭಾರತೀಯ ಸ್ತ್ರೀಯ ಶೋಷಣೆಯನ್ನು ಕುರಿತು ಗಂಭೀರವಾಗಿ ಚಿಂತಿಸಿದ್ದಾರೆ. ಭಾರತೀಯ ಮದುವೆ ಕುರಿತು, ಕೃಷ್ಣಪ್ಪ ನವರು ಹೀಗೆ ಹೇಳಿದ್ದಾರೆ.

"ರಾಜಕೀಯ ಹಾಗೂ ಶಿಕ್ಷಣ ರಂಗದಲ್ಲಿ ಸ್ತ್ರೀ ಬೆಳೆಯುತ್ತಿರುವುದನ್ನು ಕಂಡರೂ ಮದುವೆ ಅಥವಾ ತನ್ನ ಜೀವನಸಂಗಾತಿಯ ಆಯ್ಕೆಯಲ್ಲಿ ನಮ್ಮ ಸ್ತ್ರೀಯರು ಇನ್ನೂ ಅಸಂಪ್ರದಾಯದ ಸಂಕೋಲೆಯಿಂದ ಬಿಡಿಸಿಕೊಂಡಿಲ್ಲ. ಈ ಕ್ಷೇತ್ರದಲ್ಲಿ ಅವಳು ತೀರಾ ಅಸ್ವತಂತ್ರಳಾಗಿದ್ದಾಳೆ. ಇಂದು ನಮ್ಮ ಸ್ತ್ರೀಯರು ಎಷ್ಟೇ ವಿದ್ಯಾವಂತೆಯಾಗಿದ್ದರೂ ತಮ್ಮ ಪತಿಯನ್ನು ತಾವು ಸ್ವತಂತ್ರವಾಗಿ ಆಯ್ಕೆ ಮಾಡಿಕೊಂಡು ಮದುವೆಯಾಗುವಂತಿಲ್ಲ. ಇದಕ್ಕೆ ಎರಡು ಕಾರಣಗಳಿವೆ. ಒಂದು ಅವಳು ಆರ್ಥಿಕವಾಗಿ ತಂದೆ ತಾಯಿಗಳನ್ನು ಆಶ್ರಯಿಸಿದ್ದಾಳೆ. ಎರಡು ತನ್ನ ಜಾತಿ ಮತ್ತು ಕುಲಗಳನ್ನು ಬಿಟ್ಟು ಆಚೆ

ಯೋಚಿಸಕೂಡದೆಂಬ ಸಾಮಾಜಿಕ ಪ್ರತಿಬಂಧ. ಹೀಗಾಗಿ ಅವರ ಪತಿಯನ್ನು ಆರಿಸುವವರು ತಂದೆ ತಾಯಿಗಳೇ. ಅವರು ಮೆಚ್ಚಿದ ಹುಡುಗನನ್ನು ಅವಳು ಮೆಚ್ಚಲೇಬೇಕು. ತನಗೆ ಇಷ್ಟವಿಲ್ಲದಿದ್ದರೂ ತಂದೆ ತಾಯಿಗಳ ಬಲವಂತಕ್ಕೆ ಬಲಿಯಾಗಲೇಬೇಕು. ಇಲ್ಲದೆ ಹೋದರೆ, ಪರಿಸ್ಥಿತಿ ಏನಾಗುವುದೆಂದು ಬಿಡಿಸಿ ಹೇಳುವ ಅಗತ್ಯವಿಲ್ಲ. ಇಂಥ ಬಲವಂತದ ಮದುವೆಗಳಿಂದ ಇಂದು ನಮ್ಮ ಸಮಾಜ ಎಷ್ಟು ತೊಂದರೆಯನ್ನು ಅನುಭವಿಸುತ್ತಿದೆ? ಯುವಕ ಯುವತಿಯರು ನರಕ ಯಾತನೆಯನ್ನು ಅನುಭವಿಸುತ್ತ ಉಜ್ವಲ ಭವಿಷ್ಯ ಕಾಣದೆ ಕರಾಳ ಕತ್ತಲೆಯಲ್ಲಿ ನರಳುತ್ತಿದ್ದಾರೆ. ಮದುವೆಯಾಗುವವರು ನಮ್ಮ ಮಕ್ಕಳು, ನಾವಲ್ಲ. ಜೀವನದಲ್ಲಿ ಬಾಳಬೇಕಾದವರು ಅವರು ಎಂದು ಹೆತ್ತವರು ಆಳವಾಗಿ ಚಿಂತಿಸಬೇಕು. ಅಲ್ಲದೇ ನಮ್ಮ ಸ್ವಜಾತಿ ಪದ್ಧತಿಯ ಮತ್ತೊಂದು ಕ್ರೂರ ಮುಖವೆಂದರೆ ವರದಕ್ಷಿಣೆ. ಇಂದು ಹೆಣ್ಣು ಹೆತ್ತವರ ನೋವನ್ನು ಹೇಳಲು ಅಸಾಧ್ಯ. ನಮ್ಮ ನಮ್ಮ ಜಾತಿ ಕುಲದಲ್ಲೇ ಹೆಣ್ಣು-ಗಂಡುಗಳು ಮದುವೆಯಾಗಬೇಕು. ಇಲ್ಲದೇ ಹೋದರೆ ನಮ್ಮ ಸಂಪ್ರದಾಯ, ಧರ್ಮ ಮುಕ್ಕಾಗಿ ಹೋಗುತ್ತದೆ ಎಂದು ತಿಳಿಯುತ್ತೇವೆ. ಹೀಗಾಗಿ ಹೆಣ್ಣು ಪರಿಸ್ಥಿತಿಗೆ ಕಟ್ಟುಬಿದ್ದು ಸ್ವಜಾತಿಯಲ್ಲಿಯೇ ಮದುವೆಯಾಗಬೇಕು. ಅಕಸ್ಮಾತ್ ತಂದೆ ಹಣವಂತನಾಗಿದ್ದು, ಕೇಳಿದ ವರದಕ್ಷಿಣೆ ಕೊಟ್ಟು ಮದುವೆ ಮಾಡಿದರಂತೂ ಸರಿಯೇ, ಹೆಣ್ಣಿನ ಜೀವನ ಒಂದು ದಂಡೆಗೆ ಹತ್ತುತ್ತದೆ. ಇಲ್ಲದೇ ಹೋದರೆ ಅವಳ ಗತಿ ಏನು? ಎಷ್ಟು ಜನ ಹೆಣ್ಣುಮಕ್ಕಳು ಇಂದು ಮದುವೆಯಿಲ್ಲದೆ ಮನೆಗಳಲ್ಲಿ ಕೊಳೆಯುತ್ತಿಲ್ಲ? ಎಷ್ಟು ದಿನ ಅವರು ಇಂದ್ರಿಯನಿಗ್ರಹ ಮಾಡಲು ಸಾಧ್ಯ? ಅದರ ಪರಿಣಾಮಗಳನ್ನು ಊಹಿಸಬಲ್ಲವೇನು? ಇದು ಯಾವ ಸಮಾಜಕ್ಕೆ ಘನತೆ ತರುವಂತಹ ಮಾತು? ನಾವು ವರದಕ್ಷಿಣೆಯನ್ನು ಕಿತ್ತು ಹಾಕಲಾರೆವು. ಹೆಣ್ಣು ತನಗೆ ಇಷ್ಟ ಬಂದವರನ್ನು ಮದುವೆಯಾಗಲು ಬಿಡೆವು. ಈ ಬಂಧನದಿಂದ ಸ್ತ್ರೀಗೆ ಎಂದು ಮುಕ್ತಿ? ಈ ದೃಷ್ಟಿಯಿಂದಲೇ ಭಾರತದ ಸರ್ಕಾರ ಅಂತರ್‌ಜಾತೀಯ ವಿವಾಹಗಳಿಗೆ ಕಾನೂನಿನ ರಕ್ಷಣೆಯನ್ನು ಒದಗಿಸುತ್ತದೆ, ಪ್ರೋತ್ಸಾಹ ನೀಡುತ್ತಿದೆ.

ನಾನಾ ಜಾತಿ ಕುಲಗಳಿಗಿಂತ ಮಾನವಜಾತಿ, ಮಾನವಧರ್ಮ ದೊಡ್ಡದು. ಸ್ತ್ರೀ ಇಂದು ಈ ದಿಶೆಯಲ್ಲಿ ಕ್ರಾಂತಿಕಾರಕ ಹೆಜ್ಜೆಯನ್ನು ಇಡದೇ, ಅವಳ ಬದುಕಿಗೆ ಪರಿಹಾರವಿಲ್ಲ. ಇಂದು ಮತಗಳನ್ನು ಬಿಟ್ಟು ಶುದ್ಧ ಮಾನವಮೌಲ್ಯದ ಹಿನ್ನೆಲೆಯಲ್ಲಿ ಆ ಸಮಸ್ಯೆಯನ್ನು ಬಿಡಿಸಬೇಕಾಗಿದೆ ಎಂದು 'ಭಾರತೀಯ ಸ್ತ್ರೀ ಅಂದು ಮತ್ತು ಇಂದು' ಲೇಖನದಲ್ಲಿ ಭಾರತೀಯ ಸ್ತ್ರೀಯರನ್ನು ಸಾಮಾಜಿಕ, ಆರ್ಥಿಕ, ಧಾರ್ಮಿಕವಾಗಿ ಕಡೆಗಣಿಸಿ, ಸ್ವಾತಂತ್ರವನ್ನು ಕೊಟ್ಟಿಲ್ಲ ಎಂದು ಕೃಷ್ಣಪ್ಪನವರು ಪ್ರತಿಪಾದಿಸುತ್ತಾರೆ.

೪.೩.೩. ಗ್ರಾಮದೇವತೆ ಹಬ್ಬ

ಪ್ರೊ.ಬಿ.ಕೃಷ್ಣಪ್ಪನವರು ಮಧ್ಯಕರ್ನಾಟಕದ ದಾವಣಗೆರೆಯ ಸುತ್ತಮುತ್ತ ಆಚರಣೆ ಮಾಡುವ ಗ್ರಾಮದೇವತೆ ಹಬ್ಬ ಕುರಿತು ಈ ಲೇಖನದಲ್ಲಿ ವಿಶ್ಲೇಷಿಸಿ ವಿಮರ್ಶಿಸಿದ್ದಾರೆ. ಗ್ರಾಮದೇವತೆಯ ಜಾತ್ರೆಯನ್ನು ೩ ವರ್ಷಕ್ಕೆ ಒಂದು ಬಾರಿ, ೫ ವರ್ಷಕ್ಕೆ ಒಂದು ಬಾರಿ, ಇಲ್ಲವೇ ೭ ವರ್ಷಕ್ಕೆ ಒಂದು

ಬಾರಿ ಆಚರಿಸುತ್ತಾರೆ. ಇದು ಖಾರದ ಹಬ್ಬ, ಬಲಿಪೂಜೆ, ಬ್ರಾಹ್ಮಣರು, ಲಿಂಗಾಯತರು ಮೊದಲಾದ ಮೇಲುವರ್ಗದ ಜನರನ್ನು ಬಿಟ್ಟರೆ, ಉಳಿದ ಹಿಂದುಳಿದ ಪಂಗಡದವರು ತಳವಾರರು, ಕುರುಬರು, ಮ್ಯಾಸಬ್ಯಾಡರು, ಹೊಲೆಯರು, ಮಾದಿಗರು ಪ್ರತಿಯೊಬ್ಬರೂ ಕ್ರಮವಾಗಿ ಮನೆಗೆ ಒಂದೊಂದು ಕುರಿಯನ್ನು, ಕೋಣವನ್ನು ಕಡಿಯಬೇಕು. ಬೇವನ್ನು ಉಡಬೇಕು. ಹಬ್ಬದ ದಿನದಲ್ಲಿ ಹೊಲೆಯರ ಮತ್ತು ಮಾದಿಗರ ಹಟ್ಟಿಯಲ್ಲಿ ಕಾಗೆಗಳು ರಣಹದ್ದುಗಳು ಆಕಾಶದಲ್ಲಿ ಅರಚುತ್ತಿರುತ್ತವೆ ಎಂದು ಕೃಷ್ಣಪ್ಪನವರು "ಗ್ರಾಮದೇವತೆ ಹಬ್ಬ" ಲೇಖನದಲ್ಲಿ ಹೇಳಿದ್ದಾರೆ.

'ಸಂದಿ ಗೊಂದಿಗಳಲ್ಲಿ ಕೋಣಗಳನ್ನು ಕೊಯ್ದು, ಸುಲಿದು ಸುತ್ತಿರುತ್ತಾರೆ. ಹೆಂಡ ಸಾರಾಯಿಗಳ ವಾಸನೆ ಗಪ್ಪನೆ ಮೂಗಿಗೆ ಬಡಿಯುತ್ತಿರುತ್ತದೆ." ಈ ರೀತಿಯಾಗಿ ಹಬ್ಬ ಮಾಡಿದ ಜನ ಹಬ್ಬಕ್ಕೆ ಮಾಡಿದ ಸಾಲವನ್ನು ತೀರಿಸಬೇಕಾದರೆ ಮತ್ತೊಂದು ಹಬ್ಬ ಬಂದಿರುತ್ತದೆ. ಮಳೆ ಬೆಳೆಗಳು ನಿಂತು ಹೋಗಿ ಹಳ್ಳಿಗಳಲ್ಲಿ ಬರಗಾಲ ಕಾಣಿಸಿಕೊಂಡಿತೆಂದರೆ ಜನರು "ಇದು ಊರ ದೇವತೆ ಕಾಟ" ಎನ್ನುತ್ತಾರೆ. ಮತ್ತೆ ಹಬ್ಬಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾರೆ. ಗ್ರಾಮದೇವತೆ ಹಬ್ಬ ಮಾಡಿದರೆ ಹಳ್ಳಿಗೆ ಕಾಲಕಾಲಕ್ಕೆ ಮಳೆ ಬರುತ್ತದೆ, ಬೆಳೆಯನ್ನು ಕೊಡುತ್ತದೆ ಎಂಬ ಭಾವನೆ ಇದೆ ಎಂದು ಕೃಷ್ಣಪ್ಪನವರು ಹೇಳುತ್ತಾರೆ.

ಗ್ರಾಮದೇವತೆ ಹಬ್ಬಕ್ಕೆ ಪೂರ್ವಭಾವಿಯಾಗಿ ೫ ದಿನ ಮುಂಚೆ ಇಲ್ಲವೆ ೩ ದಿನ ಮುಂಚೆ ಅಥವಾ ಒಂದು ದಿನ ಮುಂಚೆ ಅವರವರ ಭಕ್ತಿ ಅನುಸಾರವಾಗಿ "ಸಾರು" ಹಾಕುತ್ತಾರೆ. "ಸಾರು" ಹಾಕುವುದೆಂದರೆ ಅದೊಂದು ರೀತಿಯ ಊರ ಹುಲುಸು ಹೊರಗೆ ಹೋಗದಂತೆ ನೋಡಿಕೊಳ್ಳುವುದು. ಪರರ ಊರಿನಿಂದ ಆ ಗ್ರಾಮಕ್ಕೆ ಯಾರು ಬೇಕಾದರೂ ಎಷ್ಟು ಬೇಕಾದರೂ ದವಸ ಧಾನ್ಯ, ನಗ ನಾಣ್ಯ ಮುಂತಾದವುಗಳನ್ನು ತರಬಹುದು. ಆದರೆ ಆ ಗ್ರಾಮದಿಂದ ಯಾರೂ ಒಂದು ಹಿಡಿ ಜೋಳದ ಕಾಳು ಹೊರಗಡೆ ಹೋಗಕೂಡದು. ಹಾಗೆಯೇ ಯಾರೂ ಹೊರಗೆ ಏನನ್ನೂ ತೆಗೆದುಕೊಂಡು ಹೋಗದಂತೆ ಗ್ರಾಮದ ಸುತ್ತಲೂ ಬೇಲಿಯನ್ನು ಕಟ್ಟಿ ಎರಡು ಬಾಗಿಲನ್ನು ಮಾಡಿರುತ್ತಾರೆ. ಈ ಬಾಗಿಲುಗಳನ್ನು ತಳವಾರರು, ಮಾದಿಗರು ಹಗಲು ರಾತ್ರಿ ಪಾಳಿಯಂತೆ ಕಾಯುತ್ತಾರೆ. ಹಳ್ಳಿಗಳು ಚಿಕ್ಕವಾಗಿದ್ದರೆ ಬೇಲಿಯನ್ನು ಕಟ್ಟುತ್ತಾರೆ. ದೊಡ್ಡದಾಗಿದ್ದರೆ ಬೇಲಿಯನ್ನು ಕಟ್ಟುವುದಿಲ್ಲ. ಬದಲಾಗಿ ಹಳ್ಳಿಯ ನಾಲ್ಕು ದಿಕ್ಕಿನ ಹಾದಿಯಲ್ಲಿ ಮತ್ತು ಅಗಸೆ ಬಾಗಿಲಿನಲ್ಲಿ ಕಾವಲು ಕಾಯುತ್ತಾರೆ ಎಂದು ಗ್ರಾಮದೇವತೆಯ ಆಚರಣೆ ಹಬ್ಬದ ಬಗ್ಗೆ ಕೃಷ್ಣಪ್ಪನವರು ಹೀಗೆ ಹೇಳಿದ್ದಾರೆ.

"ಹಬ್ಬದ ದಿನ ಸೂರ್ಯೋದಯಕ್ಕೆ ಸರಿಯಾಗಿ ತಳವಂಶದ ಮನೆಯಿಂದ 'ಘಟೆ' ಬರುತ್ತದೆ. ಮಾದಿಗರ ಮನೆಯಿಂದಲೂ ಒಂದು ಘಟೆ ಹೊರಡುತ್ತದೆ. ಈ ಎರಡು ಘಟೆಗಳು ಹೊರಡುವ ಹೊರತು ಯಾವ ಕಾರ್ಯಕ್ರಮವೂ ಪ್ರಾರಂಭವಾಗುವುದಿಲ್ಲ. ಮಾದಿಗರ ಮನೆಯಿಂದ ಘಟೆ ಹೊರಡುವಾಗ

ಕೋಣವನ್ನು ಹಿಡಿದುಕೊಂಡು ಗಂಡುಗೊಡಲಿ ಕತ್ತಿ ದೊಣ್ಣೆಗಳನ್ನು ಮೇಲಕ್ಕೆ ಎತ್ತಿ ಹಿಡಿದುಕೊಂಡು ಬರುತ್ತಾರೆ.

"ಹಬ್ಬದಲ್ಲಿ ಕೋಣವನ್ನು ಬಲಿ ಕೊಡುವುದೇ ಚರಗ ಹರಿಯುವುದು. ಮೂವರಿಗೆ ಊರ ರೈತರೆಲ್ಲಾ ಸೇರಿ ಜೋಳವನ್ನು ಮನೆ ಮನೆಗೆ ಹೋಗಿ ಎತ್ತಿ ಕೂಡಿ ಹಾಕುತ್ತಾರೆ. ಅವುಗಳ ಚರಗದ ದಿನ ಕೊಪ್ಪರಿಗೆಗೆ ಹಾಕಿ, ಹಬ್ಬದ ಹಿಂದಿನ ದಿನ ರಾತ್ರಿಯಲ್ಲಿ ಬೇಯಿಸುತ್ತಾರೆ. ನಂತರ ಬೆಂದ ಗುಗ್ಗರಿಯಾಗುತ್ತದೆ. ದೇವತೆ ಮುಂದೆ ಕೋಣ ಕಡಿದ ನಂತರ ತಕ್ಷಣವೇ ರಕ್ತವನ್ನು ಮತ್ತು ಅದರ ಹೊಟ್ಟೆಯ 'ಕಸ'ವನ್ನು ತೆಗೆದು ಬೆಂದ ಜೋಳದ ಗುಗ್ಗರಿಯಲ್ಲಿ ಬೆರೆಸುತ್ತಾರೆ. ಇದೇ ಚರಗ. ಈ ಚರಗವನ್ನು ಊರಿನ ಸುತ್ತಾ ಗಡಿಯ ಉದ್ದಕ್ಕೂ ಚೆಲ್ಲಬೇಕು. ಚರಗವನ್ನು ಹೊರುವವರು ಮಾದಿಗರು. ದೊಡ್ಡ 'ಹೆಡಿಗೆ'ಗಳಲ್ಲಿ ಹೊತ್ತುಕೊಂಡು ಅವರು ಮುಂದೆ ನಡೆಯುತ್ತಿದ್ದರೆ ಉಳಿದ ಪಂಗಡವರು ಅದನ್ನು ಹರಡುತ್ತಾ, ಚೆಲ್ಲುತ್ತಾ ಹೋಗುತ್ತಾರೆ. ಚರಗ ಹರಿಯುವಾಗ ಗ್ರಾಮದ ಎಂಟು ದಿಕ್ಕುಗಳಲ್ಲಿಯೂ 'ಹರಿಮರಿ'ಯನ್ನು ಕಡಿಯುತ್ತಾರೆ. ಇದು ಅಷ್ಟ ದಿಕ್ಪಾಲ. ಹರಿ ಮರಿ ಎಂದರೆ ಚಿಕ್ಕ ಆಡುಮರಿ. ಮರಿಗಳಿಗೆ ಒಂದು ತಿಂಗಳೂ ತುಂಬಿರುವುದಿಲ್ಲ. ಎಳೆಯ ಮರಿಗಳನ್ನು ಕಡಿದ ತಕ್ಷಣವೇ ಕೈ ಕಾಲುಗಳನ್ನು ಹಿಡಿದುಕೊಂಡು ಆಕಾಶಕ್ಕೆ ತೂರಿ ಬಿಡುತ್ತಾರೆ. ಹಲಗೆ ಮುಂತಾದ ರಣವಾದ್ಯಗಳು ಅವರ ಕ್ರೂರ ವರ್ತನೆಗೆ ಮತ್ತಷ್ಟು ಹುರುಪು ಕೊಡುತ್ತವೆ. ಈ ಆಚರಣೆಗಳೆಲ್ಲ ಅತ್ಯಂತ ಕ್ರೂರವಾದ ಹಾಗೂ ಅಮಾನುಷವಾದ ಆಚರಣೆ ಎಂದರೆ "ಭೂತಬಲಿ"[೧೦] ಎಂದು ಕೃಷ್ಣಪ್ಪನವರು ಹೇಳಿದ್ದಾರೆ.

ತೀರಾ ಮೌಢ್ಯಯುತ ಅಮಾನುಷ ಆಚರಣೆ ಎಂದರೆ ಭೂತಬಲಿ ಎಂದು ಕೃಷ್ಣಪ್ಪನವರು 'ಗ್ರಾಮದೇವತೆ ಹಬ್ಬ' ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ. ಭೂತಬಲಿ ಕುರಿತು ಕೃಷ್ಣಪ್ಪ ಈ ಮುಂದಿನಂತೆ ಹೇಳಿದ್ದಾರೆ.

"ಹಿಂದೆ ಮಹಾಭಾರತದ ಕಾಲದಲ್ಲಿ ಏಕಚಕ್ರಪುರದ ನಿವಾಸಿಗಳು ಬಕಾಸುರನಿಗೆ ಬಂಡಿ ಅನ್ನವನ್ನು ತೆಗೆದುಕೊಂಡು ಹೋಗಲು ಸರದಿಯ ಪ್ರಕಾರ ಪ್ರತಿಯೊಂದು ಮನೆಗೂ ಒಬ್ಬೊಬ್ಬರನ್ನು ನೇಮಿಸುತ್ತಿದ್ದರಂತೆ. ಸರದಿ ಯಾರ ಪಾಲಿಗೆ ಬರುತ್ತಿತ್ತೋ ಅವರು ಹೋಗಬೇಕಿತ್ತು. ಭೂತಬಲಿ ಹೆಚ್ಚು ಕಡಿಮೆ ಅಂತಹುದೇ ಒಂದು ನಡೆ. ಅದನ್ನು ನಡೆಸುವವರು ಮಾದಿಗರು. ಸರದಿಯ ಪ್ರಕಾರ ಇಂತಹವರ ಮನೆ ಅಥವಾ ಇಂತಹವರ ಹೆಸರುಬಲ ಬಂದಿತೆಂದರೆ ಅವರು ಹೆಂಗಸಾಗಲಿ, ಗಂಡಸಾಗಲಿ ಹೋಗಿಯೇ ತೀರಬೇಕು. ಭೂತಬಲಿಗೆ ಹೆಸರು ಬಂದವರು ಗಂಡಸಾಗಲಿ, ಹೆಂಗಸಾಗಲಿ ಹಬ್ಬದ ಹಿಂದಿನ ದಿನದಿಂದಲೇ ಉಪವಾಸವಿರಬೇಕು. ಕೋಣಬಿದ್ದು ಚರಗ ಸಿದ್ಧವಾದೊಡನೆಯೇ ಅವರ ಮೈಮೇಲಿನ ಬಟ್ಟೆಯನ್ನು ತೆಗೆಯುತ್ತಾರೆ. ಗಂಡಸಾಗಿದ್ದರೆ ಉಡಿದಾರವನ್ನು ಕತ್ತರಿಸಿ ಹಾಕುತ್ತಾರೆ. ಅವರು ಹುಟ್ಟು ಮಾರ್ಗದಲ್ಲಿರಬೇಕು. ಅವರ ಗುಪ್ತಾಂಗಗಳನ್ನು ಮಾತ್ರ ಬಾಳೆಯ ಪಟ್ಟಿಯಿಂದ

ಬಿಗಿದು ಮುಚ್ಚುತ್ತಾರೆ. ಹೆಂಗಸಾಗಿದ್ದರೆ ಎದೆ ಪ್ರದೇಶ ಹಾಗೆಯೇ ತೆಗೆದಿರುತ್ತದೆ. ಕೂದಲನ್ನು ಚೆಲ್ಲು ಹೊಡೆದು ತಲೆಯ ಮೇಲೆ ಚಂದ್ರ ಭಂಡಾರವನ್ನು ಹೊಯ್ಯುತ್ತಾರೆ. ಬೇವಿನ ಎಸಳನ್ನು ಮುಡಿಸುತ್ತಾರೆ. ಎಡಗೈಯಲ್ಲಿ ಬೇವಿನ ಸೊಪ್ಪು ಬಲಗೈಯಲ್ಲಿ ಬಿಚ್ಚುಗತ್ತಿ ಇವುಗಳನ್ನು ಹಿಡಿದುಕೊಂಡು ಅವರು ಊರಿನ ಗಡಿಯ ಸುತ್ತ ನಡೆದು ಹೋಗಬೇಕು. ಅವರ ಹಿಂದೆ ಅರ್ಧ ಫರ್ಲಾಂಗಿನ ದೂರದಲ್ಲಿ ಚರಗ ಬರುತ್ತದೆ. ಭೂತಬಲಿ ಎಲ್ಲೆಲ್ಲಿ ಸುತ್ತುತ್ತದೆಯೋ ಅದನ್ನು ಹಿಂಬಾಲಿಸಿ ಚರಗ ಹರಿಯಬೇಕು. ಹೀಗೆ ಭೂತಬಲಿಗೆ ಗುರಿಯಾದವರು ಎಷ್ಟೋ ಜನ ರಾವು ಬಡಿದು ತಕ್ಷಣ ಸತ್ತಿದ್ದಾರೆ. ಗರಹೊಡೆದು ಜೀವ ಕಳೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಕೆಲವಾರು ವರ್ಷಗಳ ಹಿಂದೆ ನಡೆದುಹೋಗಿದೆ ಎಂದು ಹೇಳಲಾಗುತ್ತಿರುವ ಒಂದು ಪ್ರಸಂಗವನ್ನು ಹೇಳಲೇಬೇಕು. ಊರಿನ ಹೆಸರು ಬೇಡ, ಈ ಬಾರಿಯ ಗ್ರಾಮದೇವತೆಯ ಹಬ್ಬದಲ್ಲಿ ಯಾರು ಭೂತ ಬಲಿಯಾಗಬೇಕು ಎಂದು ಹೆಸರುಬಲವನ್ನು ತೆಗೆಸಿದಾಗ ಒಬ್ಬ ಹೆಣ್ಣು ಮಗಳಿಗೆ ಬಂದಿತಂತೆ. ಆಕೆ ತುಂಬುಗರ್ಭಿಣಿಯಾಗಿದ್ದಳು. ತುಂಬುಗರ್ಭಿಣಿ ತನ್ನಿಂದ ಈ ಕಾರ್ಯ ಸಾಧ್ಯವಿಲ್ಲ ಎಂದು ಆಕೆ ಗೌಡ, ಶಾನುಭೋಗ, ತಳವಾರ ಮುಂತಾದ ಊರ ಮುಖಂಡರನ್ನು ಸೆರಗು ಹಾಸಿ ಬೇಡಿಕೊಂಡಳು. ಅವರವರ ಪಾಲಿಗೆ ಬಂದದ್ದನ್ನು ಅವರವರು ಮಾಡಲೇಬೇಕು. ದೇವಿಗೆ ನಿನ್ನ ಮೇಲೆ ಮನಸ್ಸು ಬಂದಿದೆ. ಆಕೆಯ ಕೃಪಾಕಟಾಕ್ಷ ನಿನ್ನ ಮೇಲೆ ಬಿದ್ದಿದೆ. ಇದನ್ನು ಒಲ್ಲೆ ಎನ್ನಬಾರದು ಎಂದು ಮುಂತಾಗಿ ಆಕೆಗೆ ಉಪದೇಶ ಮಾಡಿ ಅವರು ಒಪ್ಪಿಸಿ ಕಳುಹಿಸಿದರು. ಹೆಣ್ಣು ಬಾಲೆಗೆ ಊರಿನ ಹಿರಿಯರು ಮರುಗಲಿಲ್ಲ. ತಾನಾದರೋ ಗರ್ಭಿಣಿ ಹುಟ್ಟು ಮಾರ್ಗದಲ್ಲಿ ಹೆಣ್ಣಾದವಳು, ಬಸುರಿ ಕೈಯಲ್ಲಿ ಕತ್ತಿಯನ್ನು ಹಿಡಿದು ಚರಗದ ಮುಂದೆ ನಡೆಯುವುದು ಏನು ಮಕ್ಕಳಾಟಿಕೆಯೆ? ಹುಚ್ಚಾಟವೇ? ಹೆಣ್ಣು ಜೀವ ತಲ್ಲಣಿಸಿ ಹೋಯಿತು. ಹಬ್ಬದ ದಿನ ಜನರ ಮುಂದೆ ನಗ್ನವಾಗಿ ನಿಲ್ಲಿಸಿ ಕೈಯಲ್ಲಿ ಕತ್ತಿಯನ್ನು ಕೊಟ್ಟಾಗ ನಾಚಿಕೆ, ಬೆದರಿಕೆಗಳಿಂದ ಅವಳು ದಿಗ್ಭ್ರಾಂತಳಾದಳು. ರಾಹು ಬಡಿಯಿತು. ನಿಂತಲ್ಲೇ ಕತ್ತರಿಸಿ ಹೋದಳು. "ಹೆಣ್ಣು ಜೀವಕ್ಕೆ ಇಂಥ ಕೊಲೆ ಬರಬಾರದು, ಏಳೇಳು ಜನ್ಮಕ್ಕೂ ಹೆಣ್ಣಾಗಿ ಹುಟ್ಟಬಾರದು" ಎಂದು ಶಾಪ ಹಾಕಿ ನಾಲ್ಕು ಹೆಜ್ಜೆ ಮುಂದಕ್ಕೆ ನಡೆಯಲಾರದೇ ಕೆಳಗೆ ಬಿದ್ದು ಪ್ರಾಣ ಬಿಟ್ಟಳಂತೆ. ಜನ ಆಕೆ ಬಿದ್ದ ಸ್ಥಳದಲ್ಲಿ ಸಮಾಧಿಯನ್ನು ಕಟ್ಟಿಸಿದ್ದಾರೆ. ಇಂದಿಗೂ ಆ ಊರಿನಲ್ಲಿ ಚರಗ ಹರಿಯಬೇಕಾದರೆ ಮೊದಲು ಆಕೆಯ ಸಮಾಧಿಗೆ ಪೂಜೆ ಮಾಡಿ ಅನಂತರವೇ ಹರಿಯುತ್ತಿದ್ದರಂತೆ" ಎಂದು ಬಿ.ಕೃಷ್ಣಪ್ಪನವರು ಗ್ರಾಮದೇವತೆಯ ಜಾತ್ರೆಯಲ್ಲಿ ನಡೆಯುವ ಅಮಾನುಷ ನಂಬಿಕೆಗಳನ್ನು ಖಂಡಿಸಿದ್ದಾರೆ. ಅನಾಗರಿಕವಾದ ಸಂಪ್ರದಾಯಗಳು ಭಾರತದಲ್ಲಿ ಈಗಲೂ ನಡೆಯುತ್ತವೆ. ಅವುಗಳನ್ನು ತಡೆಯಲು ಸರ್ಕಾರದ ಕಟ್ಟುನಿಟ್ಟಿನ ಕಾನೂನಿನ ಅಗತ್ಯವಿದೆ ಎಂದು ಹೇಳಬಹುದು.

ಕೋಣನ ರಕ್ತ, ಕಸದಿಂದ ಮಿಶ್ರಿತವಾದ ಗುಗ್ಗರಿ–ಚರಗ. ಅದು ಆ ಊರಿನ ಹುಲುಸು. ಅದನ್ನು ಊರಿನ ಗಡಿಯ ಸುತ್ತ ಚೆಲ್ಲುವುದರ ಉದ್ದೇಶ ಊರಿನ ಸುಭಿಕ್ಷವನ್ನು ಹೆಚ್ಚಿಸುವುದು ಮತ್ತು

ಯಾವುದೇ ಅನ್ಯ ವಿಪತ್ತಿನಿಂದ ಊರನ್ನು ಕಾಪಾಡುವುದೇ ಆಗಿದೆ ಎಂದು ಈ ಲೇಖನದ ಮೂಲಕ ಕೃಷ್ಣಪ್ಪ ಹೇಳಿದ್ದಾರೆ. ಯಾರಾದರೂ ಪರ ಊರಿನವರು ಕದ್ದರೆ ಈ ಊರಿನ ಹುಲುಸು ಆ ಊರಿಗೆ ಹೋದಂತೆ ಎಂಬ ನಂಬಿಕೆ ಜನರಲ್ಲಿದೆ. ಅದನ್ನು ಕದಿಯ ಹೋಗುವುದು, ಸಾವನ್ನು ಆಹ್ವಾನಿಸುವುದು ಎರಡೂ ಒಂದೇ. ಹಿಂದೆ ಯಾರೋ ಯಾವುದೋ ಜಿದ್ದಿಗಾಗಿ ಒಂದು ಹಳ್ಳಿಯ ಹುಲುಸನ್ನು ಪಕ್ಕದ ಹಳ್ಳಿಯವರು ಕದ್ದಿದ್ದಕ್ಕಾಗಿ ಕೊಡಲಿ ಕುಡಗೋಲುಗಳನ್ನು ಹಿಡಿದುಕೊಂಡು ಕಡಿದಾಡಿದರಂತೆ ಎಂದು ಬಿ.ಕೃಷ್ಣಪ್ಪ ಈ ಲೇಖನದಲ್ಲಿ ಹೇಳಿದ್ದಾರೆ.

ಗ್ರಾಮದೇವತೆಯ ಹಬ್ಬದಲ್ಲಿ ನಡೆಯುವ ಮತ್ತೊಂದು ಅಮಾನುಷ ಕೃತ್ಯವೆಂದರೆ, ಗಾವು ಸಿಗಿಯುವುದರ ಕುರಿತು. ಕೃಷ್ಣಪ್ಪನವರು ತಮ್ಮ ಗ್ರಾಮದೇವತೆ ಹಬ್ಬ ಲೇಖನದಲ್ಲಿ ಅನಾಗರಿಕ ಕೃತ್ಯವೆಂತಲೇ ಹೇಳಿದ್ದಾರೆ. ಗಾವು ಸಿಗಿಯುವುದು ಎಂದರೆ ದೇವತೆಯ ಮುಂದೆ ಜೀವಂತವಾಗಿದ್ದ ಆಡುಮರಿಯನ್ನು ಹಲ್ಲಿನಿಂದ ಕಚ್ಚಿ ಸಿಗಿದು ಹಾಕುವುದು. ಇದನ್ನು ಮಾಡುವವರು ಮ್ಯಾಸಬ್ಯಾಡರು. ಆಡುಮರಿಯನ್ನು ದೇವಿಯ ದೇವಾಲಯದ ಮುಂದೆ ಹಿಡಿದುತಂದು ಎತ್ತಿ ತೂರಾಡಿ ಆಗಲೇ ಅರೆಜೀವವಾದ ಆಡುಮರಿಯನ್ನು ಹಲ್ಲಿನಿಂದ ಕಚ್ಚಿ ಸಿಗಿಯುತ್ತಾರೆ. ಕೆಳತುಟಿ, ಮೇಲ್ತುಟಿ ಹಾಗೂ ನಾಲಿಗೆಯನ್ನು ಸಿಗಿದು ಹಾಕುತ್ತಾರೆ. ಆಡುಮರಿ ಒದ್ದಾಡಿ ಪ್ರಾಣಬಿಡುತ್ತದೆ. ಈ ಚಿತ್ರಹಿಂಸೆಯನ್ನು ಕಂಡ ಜನರಿಗೆ ಹೃದಯವೇ ಕಿತ್ತು ಬರುವಂತಾಗುತ್ತದೆ. ಜನ್ಮ ಜನ್ಮಕ್ಕೂ ಆಡಿನ ಜೀವ ಬೇಡ ಎನಿಸುತ್ತದೆ. ಮಾನವ ಪ್ರಾಣಿಗಿಂತ ಕ್ರೂರನಾಗಿರುತ್ತಾನೆ. ಕೊನೆಗೆ ಆಡುಮರಿಯನ್ನು ತಗ್ಗಿನಲ್ಲಿ ಹೂಳಿ ಮಣ್ಣು ಮುಚ್ಚುತ್ತಾರೆ. ಗಾವು ಸಿಗಿಯುವುದು ಒಂದು ಅನಾಗರಿಕ ಸಂಪ್ರದಾಯವಾಗಿದೆ. ಕೃಷ್ಣಪ್ಪನವರು ಈ ದೃಶ್ಯದ ಬಗ್ಗೆ ಹೀಗೆ ಹೇಳುತ್ತಾರೆ. "ಈ ದೃಶ್ಯ ದೇವರ ಕಣ್ಣಿನಲ್ಲೂ ನೀರು ತರಿಸುತ್ತವೆ." ಅಂದರೆ ಅಲ್ಲಿ ನಡೆಯುವ ಕ್ರೂರ ಆಚರಣೆಯು ನಾಗರಿಕ ಸಮಾಜದ ನೈತಿಕತೆಯನ್ನು ಪ್ರಶ್ನೆ ಮಾಡುವಂತದ್ದಾಗಿದೆ.

ಭಾರತ ಸರ್ಕಾರ ಗ್ರಾಮದೇವತೆಯ ಹಬ್ಬಗಳಲ್ಲಿ ಬಲಿ ಕೊಡುವುದನ್ನು ನಿಷೇಧಿಸಿದೆ. ಸರ್ಕಾರದ ಆಜ್ಞೆಗಳು ಏನೇ ಇದ್ದರೂ ಕೋಣ ಕಡಿಯುವುದನ್ನು ನಿಲ್ಲಿಸಿಲ್ಲ. ನಾಗರಿಕತೆಯ ಸೋಂಕೇ ಇಲ್ಲದ ಹಳ್ಳಿಗಳಲ್ಲಿ ಇನ್ನೂ ಅದು ಆಚರಣೆಯಲ್ಲಿ ಉಳಿದಿದೆ. ಗಾವು ಸಿಗಿಯುವುದು ಈಗಲೂ ಉಂಟು. ಶತಮಾನಗಳ ಕಾಲ ಮಾನವ ಸಂತತಿ ಸತತ ಪ್ರಯತ್ನ ಮಾಡಿ ಇಂದು ನಾಗರಿಕತೆಯ ತುತ್ತತುದಿಯನ್ನು ಮುಟ್ಟಿದೆ. ಆದರೆ ಅವರ ಈ ರಕ್ತ ಪಿಪಾಸೆ ಇನ್ನೂ ಕಡಿಮೆಯಾಗಿಲ್ಲ ಎಂದು ಕೃಷ್ಣಪ್ಪನವರು ಹೇಳಿದ್ದಾರೆ. ಅದೇ ರೀತಿ ಮನುಷ್ಯ ತಾನು ಮಾಡುವುದು ತಪ್ಪು ಎಂಬುದು ಗೊತ್ತಾಗುವವರೆಗೂ ಒಂದು ದೈವದ ಇಲ್ಲವೇ, ಸಮಾಜದ ಹೆಸರಿನಲ್ಲಿ ಇಂತಹ ಅನ್ಯಾಯಗಳನ್ನು ಮಾಡುತ್ತಿರುತ್ತಾನೆ ಎಂದು ಬಿ.ಕೃಷ್ಣಪ್ಪ ಅಭಿಪ್ರಾಯಪಟ್ಟಿದ್ದಾರೆ. ೭೦ರ ತರುವಾಯ ಚಳವಳಿಯ ಮೂಲಕ ಕರ್ನಾಟಕವನ್ನು ಜಾಗೃತ ಸ್ಥಿತಿಗೆ ತಂದ ಕೃಷ್ಣಪ್ಪನವರ ಲೇಖನ ಒಳ್ಳೆಯ ವೈಚಾರಿಕ ಚಿಂತನೆಯಿಂದ ಕೂಡಿದೆ.

ಗ್ರಾಮದೇವತೆ ಹಬ್ಬದ ಮೂಲಕ ಬಡವರನ್ನು ಬಡವರಾಗಿಡುವುದು, ಇದು ಮೂಲ ಉದ್ದೇಶವೆಂದು ಹಾಗೂ ಮೇಲುವರ್ಗದವರ ವಿಕೃತ ಮನಸ್ಥಿತಿಯೆಂದು ಈ ಲೇಖನದ ಮೂಲಕ ತಿಳಿಸಿದ್ದಾರೆ.

೪.೩.೪. ವೀರಶೈವ ಪರಂಪರೆ

ಪ್ರೊ.ಬಿ.ಕೃಷ್ಣಪ್ಪನವರು ೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡಿದ ವೀರಶೈವ ಧರ್ಮದ ಕುರಿತು ಚರ್ಚಿಸಿದ್ದಾರೆ. ವೀರಶೈವ ಧರ್ಮದ ಆರಂಭಿಕ ದಿನಗಳು, ನಂತರ ಬಸವಣ್ಣನವರ ಸಾಮಾಜಿಕ ಕ್ರಾಂತಿ ಮತ್ತು ವೀರಶೈವ ಧರ್ಮ ನಡೆದು ಬಂದ ದಾರಿ ಹಾಗೂ ಇಂದಿನ ಪ್ರಸ್ತುತ ವೀರಶೈವ ಧರ್ಮ, ಧಾರ್ಮಿಕ ನಂಬಿಕೆಗಳು, ಹಾಗೂ ವೀರಶೈವ ಧರ್ಮವು ಜಾತಿವಿನಾಶಕ ಧರ್ಮವಾಗಿ ಉದಯವಾಗಿ ಇಂದು ಅದು ಒಂದು ಜಾತಿಯಾಗಿ ಮಾರ್ಪಟ್ಟಿರುವುದನ್ನು ಬಿ.ಕೃಷ್ಣಪ್ಪನವರು ಈ ಲೇಖನದ ಮೂಲಕ ಗುರುತಿಸಿದ್ದಾರೆ.

ಶೈವರ ಆರಾಧ್ಯ ದೈವವು ಶಿವನು. ಶೈವ ಪಂಥದ ಲಾಂಛನವಾದ ಲಿಂಗವು ಯೂಪ ಸ್ತಂಭದ ಪ್ರತೀಕ ಮತ್ತು ವಿಭೂತಿಯು ಯಜ್ಞದ ಶೇಷವಾದ ರಕ್ಷೆಯ ಪ್ರತೀಕ. ಶಿವನ ಭಕ್ತರೆಲ್ಲ ಶೈವರಾದರು. ವೀರಶೈವವು ಉಗಮವಾಗುವುದಕ್ಕಿಂತ ಮುಂಚೆ, ಪ್ರಾಚೀನ ಕರ್ನಾಟಕದಲ್ಲಿದ್ದ ಶೈವ ಪಂಥಗಳು ಹಲವಾರು. ಕಾಳಾಮುಖ, ಲಕುಲೀಶ, ಪಾಶುಪತ, ನಾಥಪಂಥ ಇತ್ಯಾದಿಗಳು. ಈ ಶೈವ ಪಂಥಗಳಿಂಧ ಮುಂದೆ ವೀರಶೈವವು ಹೇಗೆ, ಯಾರಿಂದ, ಯಾವಾಗ, ಸ್ಥಾಪಿತವಾಯಿತು ಅಥವಾ ಜನ್ಮ ಪಡೆಯಿತು? ಇದಕ್ಕೆ ನಿಖರವಾದ ಮಾಹಿತಿ ಇಲ್ಲ. ಆದರೆ ಶೈವ ಪಂಥಗಳಿಂದಲೇ ವೀರಶೈವ ಪಂಥ ಜನ್ಮ ಪಡೆಯಿತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಕೃಷ್ಣಪ್ಪನವರು ಅಭಿಪ್ರಾಯಪಡುತ್ತಾರೆ.

ವೀರಶೈವ ಧರ್ಮ ಸ್ಥಾಪನೆಯಾಯಿತು ಎಂಬುದಕ್ಕೆ ಒಂದು ಕಥೆ ಹೇಳುತ್ತಾರೆ. ಅದನ್ನು ಬಿ.ಕೃಷ್ಣಪ್ಪನವರು ಹೀಗೆ ಹೇಳುತ್ತಾರೆ.

"ಶಿವನು ನಿರಾಕಾರ, ಅನಂತ, ಅಚಿಂತ್ಯ ಎಂದು ಹೇಳುವ ವೀರಶೈವರೇ ಶಿವನಿಗೆ ಪಂಚಮುಖಗಳಿವೆ ಎಂದು ಒಪ್ಪುತ್ತಾರೆ. ಶಿವನ ಈ ಐದು ಮುಖಗಳಿಂದ ೫ ಜನ ಮಹಾನುಭಾವರ ಉಗಮವಾಯಿತಂತೆ. ಬ್ರಹ್ಮನ ನಾಲ್ಕು ಮುಖಗಳಿಂದ ನಾಲ್ಕು ವೇದಗಳು ಉದ್ಭವವಾದವು ಎಂದು ಹೇಳುವಂತೆ! ಶಿವನ ಒಂದು ಮುಖದಿಂದ ರೇವಣಸಿದ್ಧರು, ಇನ್ನೊಂದರಿಂದ ಮರುಳಸಿದ್ದರು, ಮತ್ತೊಂದರಿಂದ ಏಕೋರಾಮರು, ಮಗದೊಂದರಿಂದ ಪಂಡಿತಾರಾಧ್ಯರು, ಉಳಿದದ್ದರಿಂದ ವಿಶ್ವಾರಾಧ್ಯರು ಜನಿಸಿದರಂತೆ. ಇವರನ್ನು ಪಂಚಾಚಾರ್ಯರು ಎಂದು ಕರೆಯುತ್ತಾರೆ. ಬ್ರಹ್ಮನ ನಾಲ್ಕು ಮುಖದಿಂದ ನಾಲ್ಕು ವೇದಗಳು ಹುಟ್ಟಿ ಬಂದವು ಎಂಬುದು ಎಷ್ಟರಮಟ್ಟಿಗೆ ಹಾಸ್ಯಾಸ್ಪದವೊ ಅಷ್ಟರಮಟ್ಟಿಗೆ ಶಿವನ

ಪಂಚಮುಖದಿಂದ ಪಂಚ ಆಚಾರ್ಯರು ಹುಟ್ಟಿದರು ಎಂಬುದು ಅವೈಜ್ಞಾನಿಕ. ಆದರೆ ವೇದಗಳಿರುವುದು ಎಷ್ಟರ ಮಟ್ಟಿಗೆ ವಾಸ್ತವ ಸತ್ಯವೋ, ಅಷ್ಟರಮಟ್ಟಿಗೆ ಈ ಪಂಚ ಆಚಾರ್ಯರು ಬದುಕಿದ್ದರು ಮತ್ತು ಪಂಚಮಠಗಳಿರುವುದು ಸತ್ಯ"[೧೧]ವೆಂದು ಕೃಷ್ಣಪ್ಪನವರು ತಮ್ಮ ಲೇಖನದಲ್ಲಿ ಹೇಳಿದ್ದಾರೆ.

ಪಂಚಾಚಾರ್ಯರು ಬದುಕಿರುವುದು ಸತ್ಯ. ಆದರೆ ಅವರನ್ನು ದೈವಿ ಪುರುಷರ ನೆಲೆಯಲ್ಲಿ ನೋಡಲಾಗುತ್ತದೆ ಎಂದು ಕೃಷ್ಣಪ್ಪನವರು ಹೇಳಿದ್ದಾರೆ. ವೀರಶೈವ ಧರ್ಮ ಯಾವಾಗ ಉಗಮವಾಯಿತು ಎಂಬುದು ಕತ್ತಲೆಯ ಗರ್ಭದಲ್ಲಿಯೇ ಉಳಿದುಬಿಟ್ಟಿದೆ ಎಂದು ಕೃಷ್ಣಪ್ಪನವರು ಅಭಿಪ್ರಾಯಪಡುತ್ತಾರೆ.

ಕೃಷ್ಣಪ್ಪನವರು ಶೈವರು ಮತ್ತು ವೀರಶೈವರ ವ್ಯತ್ಯಾಸವನ್ನು ಹೀಗೆ ಗುರುತಿಸುತ್ತಾರೆ.

"ಶೈವರಿಗೂ ವೀರಶೈವರಿಗೂ ಮೂಲಭೂತವಾಗಿ 'ಶಿವ' ಒಬ್ಬನೇ. ಅವರ ಆಚರಣೆಯಲ್ಲಿ, ತತ್ವಗಳಲ್ಲಿ ಅಜಗಜಾಂತರ ವ್ಯತ್ಯಾಸಗಳಿವೆ. ಪರಸ್ಪರ ಸಮಾಜ ವ್ಯವಸ್ಥೆಗಳು ಭಿನ್ನವಾಗಿವೆ. ಶೈವ ಪಂಥ ಕೇವಲ ಬ್ರಾಹ್ಮಣರ ಪಂಗಡದವರಿಗೆ ಮೀಸಲಾಗಿದ್ದು ವೀರಶೈವರಲ್ಲಿ ಎಲ್ಲ ಪಂಗಡದವರು ಇದ್ದಾರೆ. ಮೇಲು-ಕೀಳು, ಉಚ್ಚ-ನೀಚ ಈ ಭಾವನೆಗಳಿಗೆ ಅತೀತವಾಗಿ, ಎಲ್ಲ ವರ್ಣಗಳವರಿಗೂ ಸಮಾನವಾಗಿದೆ. ಈ ದೃಷ್ಟಿಯಿಂದ ವೀರಶೈವರಲ್ಲಿ ಯಾವುದೇ ಕುಲ ಪಂಗಡವಿಲ್ಲ. ಒಂದು ರೀತಿಯ ಜಾತ್ಯತೀತ ಸಮಾಜ ವ್ಯವಸ್ಥೆ, ಇಷ್ಟಲಿಂಗ ಪೂಜೆ, ಪಂಚ ಆಚಾರಗಳು, ಗುರು-ಲಿಂಗ-ಜಂಗಮ-ರತ್ನತ್ರಯಗಳು, ಷಟ್‌ಸ್ಥಲಗಳು ವೀರಶೈವರ ಧಾರ್ಮಿಕ ತತ್ವಗಳು. ಅವರು ಕಾಯಕದ ಮೂಲಕವೇ ಕೈಲಾಸ ಎಂದು ನಂಬಿದವರು. ಈ ತಾತ್ವಿಕ ಆಚಾರಗಳ ಹಿನ್ನೆಲೆಯಲ್ಲಿ ಶೈವಕ್ಕೂ ವೀರಶೈವಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬಹುದು. ಎಲ್ಲಕ್ಕಿಂತಲೂ ಮಿಗಿಲಾಗಿ ವೀರಶೈವವು ಜನಸಾಮಾನ್ಯರ ಧರ್ಮ."

ಈ ರೀತಿಯಾಗಿ ವೀರಶೈವ ಧರ್ಮವು ಜನಸಾಮಾನ್ಯರ ಜಾತ್ಯತೀತ ಧರ್ಮವಾಗಿತ್ತು. ಕಾಯಕದ ಮೂಲಕವೇ ಸ್ವರ್ಗವನ್ನು ಕಾಣುವಂತೆ, ಕೆಲಸದ ಮಹತ್ವವನ್ನು ಹೇಳುವ ಧರ್ಮವಾಗಿ ವೀರಶೈವ ಧರ್ಮ ರೂಪುಗೊಂಡಿರುವುದನ್ನು ಬಿ.ಕೃಷ್ಣಪ್ಪನವರು ವೀರಶೈವ ಪರಂಪರೆ ಲೇಖನದಲ್ಲಿ ತಮ್ಮ ವಿಚಾರವನ್ನು ವ್ಯಕ್ತಪಡಿಸಿದ್ದಾರೆ.

ಬಸವಣ್ಣನವರಿಗಿಂತ ಪ್ರಾಚೀನರಾದವರು ದೇವರ ದಾಸಿಮಯ್ಯ. ಈ ದೇವರ ದಾಸಿಮಯ್ಯ ತನಗಿಂತಲೂ ಪ್ರಾಚೀನರಾದ ಕೆಲವು ವ್ಯಕ್ತಿಗಳ ಹೆಸರನ್ನು ಹೇಳಿ "ಶರಣರ ಸೂಳ್ನುಡಿಯ ಒಂದರೆಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣ ರಾಮನಾಥ" ಎಂದಿದ್ದಾರೆ. ದೇವರ ದಾಸಿಮಯ್ಯ ಹೇಳುವ ಆ ವ್ಯಕ್ತಿಗಳು ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಕೊಂಡಗುಳಿ ಕೇಶಿರಾಜ ಇತ್ಯಾದಿ. ಇವರೆಲ್ಲ ಉಚ್ಚ ಕುಲದವರಲ್ಲ. ಕಕ್ಕಯ್ಯ ಚನ್ನಯ್ಯರು ಹರಿಜನರು. ದೇವರ ದಾಸಿಮಯ್ಯ ನೇಕಾರನು. ಹೀಗಾಗಿ ಬಸವಾದಿಗಳ ಕಾಲಕ್ಕಿಂತ ಹಿಂದೆಯೇ ವೀರಶೈವ ಧರ್ಮ ಎಲ್ಲ ವರ್ಣದವರಿಂದ ಕೂಡಿತ್ತು. ಉಚ್ಚ, ನೀಚ, ಮೇಲು ಕೀಳುಗಳ ಹೆಚ್ಚು ಕಡಿಮೆಗಳು ಅವರಲ್ಲಿ ಇರಲಿಲ್ಲ ಎಂಬುದನ್ನು ಬೋಧಿಸುತ್ತದೆ.

ಪಂಚ ಆಚಾರ್ಯರ ಕಾಲದಲ್ಲಿ ಈ ಮೇಲು ಕೀಳುಗಳ ಪ್ರಶ್ನೆ ಹೇಗಿತ್ತೋ ತಿಳಿಯುವುದು ಕಷ್ಟ ಎಂದು ಕೃಷ್ಣಪ್ಪನವರು ವೀರಶೈವ ಧರ್ಮದ ಬಸವಣ್ಣ ಕಾಲಕ್ಕೂ ಮುಂಚೆ ವರ್ಣಗಳಿಂದ ಮುಕ್ತವಾದ ವಾತಾವರಣವಿತ್ತು ಎಂದಿದ್ದಾರೆ.

ಬಸವಾದಿ ಕಾಲ ವೀರಶೈವ ಧಾರ್ಮಿಕ ಇತಿಹಾಸದಲ್ಲಿ ಪಾತ್ರ ವಹಿಸಿದೆ ಎಂದು ಕೃಷ್ಣಪ್ಪನವರು ಈ ರೀತಿಯಾಗಿ ಹೇಳಿದ್ದಾರೆ. "ಬಸವನ ಸಮಕಾಲೀನರಾದ ಪ್ರಭುದೇವ, ಸಿದ್ಧರಾಮ, ಚೆನ್ನ ಬಸವಣ್ಣ, ಸಕಲೇಶ, ಮಾದರಸ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ ಮುಂತಾದವರು ನುಡಿದಂತೆ ನಡೆದು, ವೀರಶೈವ ಧರ್ಮದ ಶಾಶ್ವತ ಮೌಲ್ಯಗಳಾಗಿ ಉಳಿದರು. ಎಲ್ಲ ಶರಣರು ಸ್ಥಾಪಿಸಿದ "ಅನುಭವ ಮಂಟಪ" ಧಾರ್ಮಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿತು. ಪ್ರಭುದೇವ ಮಂಟಪದ ಅಧ್ಯಕ್ಷ. ಆ ಮಂಟಪದಲ್ಲಿ ಚರ್ಚಿಸದ ವಿಚಾರವಿಲ್ಲ. ವೀರಶೈವ ಆಚಾರಗಳು, ಸ್ತ್ರೀ ಸ್ವಾತಂತ್ರ್ಯ, ಮೇಲು ಕೀಳಿನ ಪ್ರಶ್ನೆ, ಪೂಜಾ ವಿಧಾನ, ಅಂದಿನ ರಾಜಕೀಯ ಪರಿಸ್ಥಿತಿ ಇವೆಲ್ಲವೂ ಆ ಮಂಟಪದಲ್ಲಿ ಚರ್ಚಿಸಲ್ಪಡುತ್ತಿದ್ದವು. ಆ ಸಂಘದ ವಿಚಾರ ವೇದಿಕೆಯೂ, ವೀರಶೈವ ಸಂಘಟನೆಯ ಪ್ರತೀಕವೂ ಆಗಿತ್ತು. ಆಗಿನ ಶರಣರು ಕಾಶಿ, ಮಾರಿ ಎಕ್ಕನಾತಿ ಇತ್ಯಾದಿ ಕ್ರೂರ, ಅನಾಗರಿಕ, ಅಸಂಖ್ಯಾತ ದೇವರುಗಳನ್ನು ಖಂಡಿಸಿ ಶಿವ ಏಕದೇವತಾ ಉಪಾಸನೆಯನ್ನು ಸಾರಿದರು. ಸ್ತ್ರೀ ಸ್ವಾತಂತ್ರ್ಯವನ್ನು ಎತ್ತಿ ಹಿಡಿದರು. ಗುರುವಾಗಲಿ, ಜಂಗಮನಾಗಲಿ, ಯಾರೇ ಆಗಲಿ ಕಾಯಕದಿಂದಲೇ ಅವರಿಗೆ ಮುಕ್ತಿ ಎಂದು ಕಾಯಕದ ಮಹತ್ವವನ್ನು ಆಡಿದ್ದಲ್ಲದೆ, ಅದನ್ನು ಮಾಡಿಯೂ ತೋರಿಸಿದರು. ಶರಣರಿಗೆ ಜಾತಿ ಇಲ್ಲ ಎಂದು ಉದ್ಘೋಷಿಸಿದರು. ಬಹುಶಃ ಒಂದು ಕ್ಷೇತ್ರದಲ್ಲಿ ಅವರು ನಡೆಸಿದ ಕ್ರಾಂತಿ ಮುಂದೆ ಕಲ್ಯಾಣಕ್ರಾಂತಿಗೆ ನಾಂದಿಯಾಯಿತು. ವೀರಶೈವರ ಗುರಿ ಜಾತ್ಯತೀತ ಸಮಾಜವಾಗಿತ್ತು. ಹರಿಜನನಾದ ಹರಳಯ್ಯನ ಮಗನಿಗೆ ಬ್ರಾಹ್ಮಣರ ಮಧುವರಸನ ಮಗಳನ್ನು ಕೊಟ್ಟು ಶರಣರು ವಿವಾಹ ಮಾಡಿಸಿ ಇಂದಿನ ೨೦ನೆಯ ಶತಮಾನದಲ್ಲಿಯೂ ಸಾಧಿಸಲು ಅಸಾಧ್ಯವಾದ ಇಂತಹ ಅಂತರ್ಜಾತೀಯ ವಿವಾಹವನ್ನು ಈಗ್ಗೆ ೮೦೦ ವರ್ಷಗಳ ಹಿಂದೆ ಶರಣರಿಂದ ಮಾಡಲ್ಪಟ್ಟಿತ್ತು ಎಂದರೆ ಶರಣರು ತಮ್ಮ ಕಾಲಕ್ಕಿಂತ ೮೦೦ ವರ್ಷಗಳು ವಿಚಾರದಲ್ಲಿ ಮುಂದಿದ್ದರು. ವ್ಯಕ್ತಿ ಅವನವನ ಆಚಾರದಿಂದ ಕೀಳಾಗುತ್ತಾನೆಯೇ ಹೊರತು ಹುಟ್ಟಿನಿಂದಲ್ಲ ಎಂಬುದು ಅವರ ವಾದ. ಹೀಗೆ ಬಸವಾದಿಗಳು ಹರಿಜನ ಹಾಗೂ ಬ್ರಾಹ್ಮಣರ ಮಧ್ಯೆ ವಿವಾಹವೇರ್ಪಡಿಸಿದ್ದು ಉಳಿದ ಧರ್ಮದವರಿಗೆ ಹಿಡಿಸಲಿಲ್ಲ. ವೀರಶೈವರಿಂದಾಗಿ ಸಮಾಜದ ವ್ಯವಸ್ಥೆ ಹಾಳಾಗಿ ಹೋಗುತ್ತದೆ, ವರ್ಣಸಂಕರವಾಗುತ್ತದೆ ಎಂದು ಬಿಜ್ಜಳನಲ್ಲಿ ಮೊರೆಯಿಟ್ಟರು.

ಬಿಜ್ಜಳ ವರ್ಣಸಂಕರವನ್ನು ಮಾಡಿದ ಹರಳಯ್ಯ, ಮಧುವರಸರ ಕಣ್ಣುಗಳನ್ನು ಕಿತ್ತು ಹಾಕಿಸಿದ. ಶರಣರಿಗೆ ಆದ ಅನ್ಯಾಯವನ್ನು ಕೇಳಿ ಬಸವಣ್ಣ ಕೂಡಲಸಂಗಮದಲ್ಲಿ ಶಿವೈಕ್ಯನಾದ. ಚೆನ್ನಬಸವಾದಿಗಳು ಉಳುವಿಗೆ ಹೋದರು. ಜಗದೇವ, ಮಲ್ಲಿಬೊಮ್ಮ ಇವರು ಶಿವದ್ರೋಹವನ್ನು ಮಾಡಿದ ಬಿಜ್ಜಳನ

ಶಿರವನ್ನು ಕತ್ತರಿಸಿ ಹಾಕಿದರು. ರಾಜನ ಹತ್ಯೆಯಿಂದ ನಾಡಿನಲ್ಲಿ ಹಾಹಾಕಾರವೆದ್ದಿತು. ಶಿವಶರಣರ ಸಾಮೂಹಿಕ ಕೊಲೆಯಾಯಿತು. ವೀರಶೈವರು ದಿಕ್ಕುಗೆಟ್ಟರು. ಅವರ ಕೇಂದ್ರಶಕ್ತಿಯಾಗಿ, ಸ್ಫೂರ್ತಿಶಕ್ತಿಯಾಗಿ ಇದುವರೆಗೂ ಅವರ ಹತ್ತಿರವಿದ್ದ ಬಸವ ಲಿಂಗೈಕ್ಯನಾದ ಮೇಲೆ ಅವರು ಮಾರ್ಗದರ್ಶನವನ್ನು ಕಾಣದೇ ಆಸ್ತಿಯಾಗಿದ್ದ ವಚನಗಳನ್ನು ಕಟ್ಟಿಕೊಂಡು ಅವರು ದಿಕ್ಕು ದಿಕ್ಕಿಗೆ ಓಡಿ ಹೋದರು. ಜಾತೀಯತೆಯ ಮೂಲಬುಡವನ್ನೇ ಕತ್ತರಿಸಲು ಹೆಣಗಿದ ಬಸವಾದಿಗಳನ್ನೇ ಆ ಜಾತೀಯತೆಯೇ ಆಹುತಿ ತೆಗೆದುಕೊಂಡಿತು. ಅಂತೂ ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಯಾರೂ ಮಾಡದ ಈ ಕ್ರಾಂತಿ ಮತ್ತು ಅದರ ಕೀರ್ತಿ ಬಸವಾದಿಗಳಿಗೆ ಸಲ್ಲುತ್ತದೆ. ಈ ದೃಷ್ಟಿಯಲ್ಲಿ ಅವರು ಪೂಜ್ಯರು ಹಾಗೂ ಅನುಕರಣೀಯರು ಆಗಿದ್ದಾರೆ."

ಈ ರೀತಿಯಾಗಿ ಪ್ರೊ.ಬಿ.ಕೃಷ್ಣಪ್ಪನವರು ೮೦೦ ವರ್ಷಗಳ ಹಿಂದೆ ನಡೆದ ಸಾಮಾಜಿಕ ಕ್ರಾಂತಿ, ವಚನಚಳುವಳಿಯನ್ನು, ಅದರ ವೈಚಾರಿಕ ಚಿಂತನೆಯಾದ ಜಾತಿಯನ್ನು ವಿನಾಶ ಮಾಡುವುದು ಇಂದಿನ ಜನರಿಗಿಂತ ೮೦೦ ವರ್ಷಗಳ ಹಿಂದೆಯೇ ಅವರ ಆಲೋಚನೆಗಳು ಮುಂದಿದ್ದವು ಎಂದು ಹೇಳುತ್ತಾರೆ. ಹಾಗೆಯೇ ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಇಂಥ ಕ್ರಾಂತಿಯನ್ನು ಕರ್ನಾಟಕದಲ್ಲಿ ಬಸವಾದಿ ಶರಣರು ಮಾತ್ರ ಮಾಡಿದ್ದಾರೆ. ಅವರು ವೈಚಾರಿಕ ಚಿಂತನೆ ಮಾಡಿದರು. ಅನುಭವ ಮಂಟಪದ ಮೂಲಕ ಎಲ್ಲರ ಅನುಭವಗಳನ್ನು ವಿಚಾರಕ್ಕೆ ಒಳಪಡಿಸಿ, ಎಲ್ಲ ವಿಚಾರಗಳನ್ನು ಚರ್ಚಿಸುತ್ತಿದ್ದರು. ವೀರಶೈವ ಆಚಾರಗಳು ಸ್ತ್ರೀ ಸ್ವಾತಂತ್ರ್ಯ, ಮೇಲು ಕೀಳಿನ ಪ್ರಶ್ನೆ, ಪೂಜಾ ವಿಧಾನ ಹಾಗೂ ಅಂದಿನ ರಾಜಕೀಯ ಪರಿಸ್ಥಿತಿ ಮುಂತಾದವುಗಳನ್ನು ಚರ್ಚಿಸುತ್ತಿದ್ದರು ಎಂದು ಬಿ.ಕೃಷ್ಣಪ್ಪನವರು ಈ ಲೇಖನದಲ್ಲಿ ವಿವರಿಸಿದ್ದಾರೆ.

ನಂತರದ ಕಾಲಾವಧಿಯಲ್ಲಿ ವೀರಶೈವರನ್ನು ಪುನರ್ ಸಂಘಟಿಸಿ ವಚನಗಳನ್ನು ವ್ಯವಸ್ಥೆಗೊಳಿಸಿದ ಕೀರ್ತಿ ಇಬ್ಬರಿಗೆ ಸಲ್ಲಬೇಕು. ಉತ್ತರದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿದ್ದ ಜಕ್ಕಣಾರ್ಯ ಹಾಗೂ ದಕ್ಷಿಣದ ತೋಂಟದ ಸಿದ್ಧಲಿಂಗಯತಿಗಳು. ಇವರು ವೀರಶೈವ ಸಂಘಟನೆಯ ಕೇಂದ್ರಶಕ್ತಿಗಳಾಗಿ ನಿಂತು ಅದು ಬೆಳೆಯಲು ಸಕಲ ವಿಧದಲ್ಲಿ ಪ್ರಯತ್ನಪಟ್ಟರು ಎಂದು ಬಿ.ಕೃಷ್ಣಪ್ಪನವರು ಈ ಲೇಖನದಲ್ಲಿ ಹೇಳಿದ್ದಾರೆ. ಬಸವಾದಿಗಳ ಕಾಲದಲ್ಲಿ ವಚನಗಳ ಸೃಷ್ಟಿ 'ಎರಡೆಂಬತ್ತು ಕೋಟಿ' ಎಂದು ಬರುತ್ತದೆ. ಅಂದರೆ ಆ ಕಾಲದಲ್ಲಿ ರಚಿತವಾದ ವಚನಗಳ ಮೊತ್ತ ೧೬೦ ಕೋಟಿ. ಈಗ ನಮಗೆ ಲಭ್ಯವಾಗಿರುವ ವಚನಗಳ ಸಂಖ್ಯೆ ಅತಿ ಅಲ್ಪ. ಕೇವಲ ಕೆಲವೇ ಲಕ್ಷಗಳು ಅಂದರೆ ಉಳಿದ ವಚನಗಳು ಏನಾದವು? ಎಲ್ಲಿ ಹೋದವು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕಲ್ಯಾಣಕ್ರಾಂತಿ ಹಾಗೂ ಮಲ್ಲಿಕಾಫರನ ದಂಡಯಾತ್ರೆಗಳ ಕಾಲದಲ್ಲಿ ವೀರಶೈವರು ದಿಕ್ಕು ದಿಕ್ಕಿಗೆ ಓಡಿ ಹೋದಾಗ ಅವು ನಾಶವಾಗಿರಬೇಕು. ಇಲ್ಲವೇ ಅವನನ್ನು ರಕ್ಷಿಸಲು ಭೂಮಿಯಲ್ಲಿ ಬಚ್ಚಿಟ್ಟಾಗ ಗೆದ್ದಲು ತಿಂದು

ಹೋಗಿರಬೇಕು. ಇಲ್ಲವೇ ಶತ್ರುಗಳು ಅವನ್ನು ಸುಟ್ಟು ಹಾಕಿರಬೇಕು. ಇದು ವಚನ ಸಾಹಿತ್ಯಕ್ಕೆ ಆದ ಬಹಳ ದೊಡ್ಡ ನಷ್ಟ. ಆದರೆ ಒಂದು ಸಮಾಧಾನವಿದೆ. ಈಗ ಸಿಕ್ಕ ವಚನಗಳು ಸಾಹಿತ್ಯ ಗುಣದಿಂದ ಕೂಡಿ, ಸಾಹಿತ್ಯದ ಶ್ರೇಷ್ಠ ಉದಾಹರಣೆಗಳಾಗಿವೆ. ಈ ದೃಷ್ಟಿಯಿಂದ ಕನ್ನಡಿಗರು ಪುಣ್ಯಶಾಲಿಗಳು ಎಂದು ಕೃಷ್ಣಪ್ಪನವರು ಹೇಳುತ್ತಾರೆ. ಬಿಜ್ಜಳನ ಆಸ್ಥಾನದ ದಂಗೆ ಮತ್ತು ರಾಜ್ಯದಲ್ಲಿ ನಡೆದ ಹಾಹಾಕಾರದಿಂದ, ಶರಣರಿಗೆ ಸಂಕಷ್ಟ ಎದುರಾಯಿತೆಂದು, ಇದರಿಂದ ವಚನಗಳನ್ನು ಪೂರ್ತಿ ರಕ್ಷಣೆ ಮಾಡಲು ಸಾಧ್ಯವಾಗಲಿಲ್ಲ ಎಂದು ಕೃಷ್ಣಪ್ಪನವರು ಈ ಲೇಖನದಲ್ಲಿ ಹೇಳಿದ್ದಾರೆ. ಮಲ್ಲಿಕಾಫರ್‌ನ ದಂಡಯಾತ್ರೆಯಿಂದ ವಚನಗಳ ಹಸ್ತಪ್ರತಿಗೆ ಧಕ್ಕೆಯಾಯಿತೆಂದು ಅಭಿಪ್ರಾಯಪಟ್ಟಿದ್ದಾರೆ.

ವೀರಶೈವ ಪ್ರಸ್ತುತ ಕರ್ನಾಟಕದಲ್ಲಿ ಪ್ರಬಲ ಧರ್ಮವಾಗಿದೆ. ಈ ನಾಡಿನಲ್ಲಿ ವೈದಿಕ ಮಠಗಳಿವೆ. ಶೃಂಗೇರಿ ಮಠ, ಉಡುಪಿ ಮಠಗಳು, ಪರಕಾಲಮಠ, ಇತ್ಯಾದಿಗಳು. ಹಾಗೆಯೇ ಹುಂಚ ಅಥವಾ ಹೊಂಬುಜ ಮಠ, ಧರ್ಮಸ್ಥಳಮಠ, ಬೆಳಗೊಳ, ಮೂಡಬಿದಿರೆ ಮುಂತಾದೆಡೆಗಳಲ್ಲಿ ಜೈನ ಮಠಗಳಿವೆ. ಹಾಗೆಯೇ ವೀರಶೈವರ ಪಂಚಮಠಗಳಲ್ಲದೆ, ಇನ್ನೂ ಹಲವಾರು ವೀರಶೈವ ಮಠಗಳಿವೆ. ಉಜ್ಜಿನಿಯ ಸದ್ಧರ್ಮ ಸಿಂಹಾಸನದ ಒಂದು ಶಾಖೆಯಾದ ತರಳಬಾಳು ಮಠ, ಸಿರಿಗೆರೆ ಮುರುಘರಾಜೇಂದ್ರ ಮಠ, ಸಿದ್ಧಗಂಗಾ ಮಠ, ಸುತ್ತೂರು ಮಠ ಇತ್ಯಾದಿಗಳು. ಇಂದು ಈ ಮಠಗಳು ವೀರಶೈವರ ಸಂಘಟನೆಯ ಪ್ರತೀಕವಾಗಿರುವುದರ ಜೊತೆಗೆ ವಿದ್ಯಾಕೇಂದ್ರಗಳು ಆಗಿವೆ. ಇತ್ತೀಚೆಗೆ ಗುರು–ಲಿಂಗ–ಜಂಗಮ ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ. ಇಷ್ಟಲಿಂಗ ಪೂಜೆಯೂ ಮೂಲೆಗುಂಪಾಗುತ್ತಿದೆ. ಈ ಜನಾಂಗದವರಲ್ಲಿ ಬೆಳೆದಿರುವ ಇತ್ತೀಚಿನ ದೊಡ್ಡ ದುರಂತವೆಂದರೆ ಜಾತೀಯತೆ. ವೀರಶೈವ ಧರ್ಮ, ವರ್ಣವ್ಯವಸ್ಥೆ ವಿರೋಧಿಸಿ ಅದನ್ನು ಕಟ್ಟುವುದರಲ್ಲಿ ಬಸವಾದಿಗಳು ಪ್ರಯತ್ನಪಟ್ಟಿದ್ದರು ಮತ್ತು ಸಾಧಿಸಿದರು. ಅವರ ಪರಂಪರೆಯವರಾದ ವೀರಶೈವರು ಇಂದು ಬಸವಣ್ಣನವರ ದೃಷ್ಟಿಯನ್ನು ಮರೆತಿದ್ದಾರೆ. ಪಂಚಾಚಾರ್ಯ, ಸಾಧು, ನೊಣಬ ಮುಂತಾದ ಉಪಪಂಗಡಗಳನ್ನು ಸೃಷ್ಟಿಸಿಕೊಂಡು ತಾವೇ ಕಿತ್ತಾಡುತ್ತಿದ್ದಾರೆ. ಶೂದ್ರರೆಲ್ಲ ಸಾದರು ಹರಿಜನರೆಲ್ಲ ಸಾದರು ಎನ್ನುವ ವರ್ಗದಲ್ಲಿ ಉಳಿದುಬಿಟ್ಟರು. ವೀರಶೈವರು ಪೂರ್ಣ ಜಾತಿವಾದಿಗಳಾಗಿದ್ದಾರೆ. ಯಾವ ದೇವಸ್ಥಾನಗಳನ್ನು ಅವನು ವಿರೋಧಿಸಿದ್ದನೋ, ಅದೇ ದೇವಸ್ಥಾನಗಳನ್ನು ಅವನಿಗೆ ಕಟ್ಟಿಸಿದ್ದಾರೆ. ಅದೇ ರೀತಿ ಕೃಷ್ಣಪ್ಪ ಹೀಗೆ ಹೇಳುತ್ತಾರೆ.

"ಅವನ ಎಲ್ಲ ಕ್ರಾಂತಿಕಾರಿ ತತ್ವಗಳನ್ನು ಮೂಲೆಗುಂಪು ಮಾಡಿದ್ದಾರೆ. ಒಂದು ಕಡೆ ಅವನ ತತ್ತ್ವಗಳನ್ನೆಲ್ಲ ಕೊಲೆ ಮಾಡಿ, ಮತ್ತೊಂದು ಕಡೆ ಅವನ ಜಯಂತಿ ಆಚರಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಮೊದಲು ನಮ್ಮ ಮನಸ್ಸುಗಳಲ್ಲಿರುವ ಜಾತೀಯತೆಯನ್ನು ಕಿತ್ತು ಹಾಕಿರಿ, ಅದೇ ನಿಜವಾದ ಬಸವ ಜಯಂತಿ ಆಗುತ್ತದೆ." ಕೊನೆಯದಾಗಿ ಕೃಷ್ಣಪ್ಪನವರು ವೀರಶೈವರಿಗೆ ಬಸವತತ್ವದಲ್ಲಿ ನಂಬಿಕೆ ಇಡಿ ಎಂದು ಹೇಳಿದ್ದಾರೆ. ಅದೇ ನಿಜವಾದ ಸೇವೆ ಎಂದು ಹೇಳಿದ್ದಾರೆ.

೪.೩.೫. ಅಯ್ಯೋ ಜೋಗಪ್ಪ ಯಾರಿಗೆ ಬೇಕು ನಿನ್ನ ಹಾಡು ಪಾಡು?

ಪ್ರೊ.ಬಿ.ಕೃಷ್ಣಪ್ಪನವರು ಕರ್ನಾಟಕದ ಜಾನಪದ ಕತೆಗಾರರಾದ ಭೈರಜೋಗಿಗಳ ಕುರಿತು ಅವರ ವೃತ್ತಿ ಮತ್ತು ಜೀವನ ಕ್ರಮ, ಇತಿಹಾಸ, ಅವರ ಜಾನಪದ ವಿದ್ವತ್ತು ಮತ್ತು ಕಥನ ಕ್ರಮ ಹಾಗೂ ಪ್ರಸ್ತುತ ಅವರ ಗಾಳಿಗೋಪುರವಾದ ಜೀವನಮಟ್ಟ ಮುಂತಾದವುಗಳನ್ನು 'ಅಯ್ಯೋ ಜೋಗಪ್ಪ ಯಾರಿಗೆ ಬೇಕು ನಿನ್ನ ಹಾಡು ಪಾಡು?' ಲೇಖನದಲ್ಲಿ ಪ್ರಸ್ತುತಪಡಿಸಿದ್ದಾರೆ.

ಜಾನಪದ ಕತೆಗಾರರ ಪೈಕಿ ಭೈರಜೋಗಿಗಳು ಒಬ್ಬರು. ಭಿಕ್ಷಾಟನೆಯೇ ಇವರ ಜೀವನ ವೃತ್ತಿ. ಕಾವಿ ವಸ್ತ್ರಗಳನ್ನು ಧರಿಸಿ ಕೈಯಲ್ಲೊಂದು ಭೋರ ಕಿನ್ನರಿ ಹಿಡಿದು ಮೀಟುತ್ತಾ 'ಕಿವುಡು ಕೊಂತೆವ್ವ' ಮತ್ತು ಅವರ ಮಕ್ಕಳು ಪಾಂಡವರ ಕಷ್ಟಗಳನ್ನು ಕುರಿತು ಹಾಡುತ್ತ ಊರಲ್ಲಿ ಮನೆಯಿಂದ ಮನೆಗೆ ಅಲೆಯುತ್ತಾರೆ. ಇವರು ಅಲೆಮಾರಿಗಳು. ಆದರೆ ಇವರಿಗೂ 'ಸ್ವಾಸ್ತಿ' ಇದೆ. ವರ್ಷಕ್ಕೆ ಎರಡು ಸಾರಿ ಊರಿಗೆ ಹೋಗಿ ಬರುತ್ತಾರೆ. ಒಮ್ಮೆ 'ಮಾರ್ನಾಮಿ' ಮತ್ತೊಮ್ಮೆ 'ಉಗಾದಿ'ಗೆ ಹೋಗುತ್ತಿದ್ದರು. ಈ ಎರಡು ಹಬ್ಬದ ದಿನಗಳನ್ನು ಬಿಟ್ಟರೆ, ಉಳಿದ ಕಾಲಗಳಲ್ಲಿ ಊರುಗಳನ್ನು ಸುತ್ತುವುದು, ಜೀವನ ಸಾಗಿಸುವುದು, ಹೆಂಗಸರು ಭಿಕ್ಷೆಗೆ ಹೋಗುವುದಿಲ್ಲ. ತಾವು ಪಾಂಡವರ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರೆ ಎಂದು ಬಿ.ಕೃಷ್ಣಪ್ಪನವರು ಈ ಲೇಖನದಲ್ಲಿ ತಿಳಿಸಿದ್ದಾರೆ.

ಭೈರಜೋಗಿಗಳು ತಾವು ಪಾಂಡವರ ವಂಶಸ್ಥರು ಎಂದು ತಮ್ಮ ಹಿನ್ನೆಲೆಯನ್ನು ಹೇಳುತ್ತಾರೆ. ಪಾಂಡವರು ವನವಾಸದಲ್ಲಿರುವಾಗ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಕಳುವಾಗಿದೆ ಎಂದು ಅರ್ಜುನನ ಹತ್ತಿರ ಬಂದು, ಕಳ್ಳನನ್ನು ಶಿಕ್ಷಿಸಿ ತನ್ನ ವಸ್ತುಗಳನ್ನು ವಾಪಸ್ಸು ಕೊಡಿಸಿ ಕೊಡಬೇಕೆಂದು ವಿನಂತಿಸಿದನು. ಅವನಿಗೆ ಅಭಯ ಕೊಟ್ಟ ಅರ್ಜುನನು ಕಳ್ಳನನ್ನು ಹುಡುಕಲು ಹೊರಟಾಗ ಅರ್ಜುನನಿಗೆ ಆಯುಧಗಳು ಬೇಕಾದವು. ಆದರೆ ಆಯುಧಗಳು ಧರ್ಮರಾಯ ದ್ರೌಪದಿಯರ ಏಕಾಂತದಲ್ಲಿರುವ ಕೋಣೆಯಲ್ಲಿದ್ದವು. ಪಾಂಡವರಲ್ಲಿ ಒಬ್ಬೊಬ್ಬರು ದ್ರೌಪದಿಯ ಜೊತೆ ಏಕಾಂತದಲ್ಲಿರುವಾಗ ಉಳಿದವರು ನೋಡಕೂಡದು ಎಂಬುದು ನಿಯಮ. ಆದರೂ ಅರ್ಜುನ ಅದನ್ನು ಯೋಚಿಸದೆ ಒಳಗೆ ನುಗ್ಗಿ ಆಯುಧಗಳನ್ನು ಎತ್ತಿಕೊಂಡ. ಹೀಗೆ ನಿಯಮ ಉಲ್ಲಂಘಿಸಿದ್ದು ಧರ್ಮರಾಯನಿಗೆ ಕೋಪ ಬರುವಂತೆ ಮಾಡಿತು. ಧರ್ಮರಾಯ ಅರ್ಜುನನನ್ನು ವನಚಾರಿಯಾಗು ಎಂದು ಶಪಿಸಿಬಿಟ್ಟ. ಅಣ್ಣನ ಮಾತಿನಂತೆ ಹನ್ನೆರಡು ವರ್ಷ ಅರ್ಜುನ ಕಾಡಿನಲ್ಲಿ ಕಣ್ಮರೆಯಾದ.

ಹೀಗೆ ದೇಶಾಂತರಕ್ಕೆ ಹೋದವರು ಯಾರೇ ಆಗಲಿ ಮತ್ತು ಅವರು ಎಲ್ಲಿಯೇ ಇರಲಿ ಹನ್ನೊಂದನೆಯ ವರ್ಷಕ್ಕೆ ಯಾರಿಗೂ ತಿಳಿಯದಂತೆ ಬಂದು ತಮ್ಮ ಹೆತ್ತಮ್ಮನ ಹಾಗೂ ಸಂಬಂಧಿಗಳ ದರ್ಶನವನ್ನು ಮಾಡಬೇಕು. ಹನ್ನೆರಡು ವರ್ಷಕ್ಕೆ ಬಂದು ನೋಡುವುದು ಅಪಶಕುನವಂತೆ. ಆ ಕಾರಣದಿಂದ ಸಪ್ತಋಷಿಗಳ ಸಹಾಯದಿಂದ ವೇಷವನ್ನು(ಬೋರ ಕಿನ್ನರಿ ವೇಷವಾಗಿ) ಬದಲಿಸಿಕೊಂಡು

ಬಂದು ತನ್ನ ತಾಯಿಯನ್ನು ನೋಡಿ ನಂತರ ವೇದ ಬದಲಿಸಿ ಬಂದು ಭಿಕ್ಷೆಯನ್ನು ಒಲ್ಲೆ ಎಂದು ವರ ಕೇಳಿ ಸುಭದ್ರೆಯನ್ನು ಪಡೆಯುತ್ತಾನೆ. ಸುಭದ್ರೆ ಅರ್ಜುನ ಎಂದು ಪತ್ತೆ ಮಾಡುತ್ತಾಳೆ. ಗುಟ್ಟಾಗಿ ತಾನು ಬಂದ ವಿಷಯವನ್ನು ತಿಳಿಸಿ ರಹಸ್ಯವಾಗಿಟ್ಟರು. ಇನ್ನೊಂದು ವರ್ಷ ತಿರುಗಿ ಬರುತ್ತೇನೆ ಎಂದು ತಿಳಿಸಿ ಹೊರಟು ಹೋಗುತ್ತಾನೆ. ಹನ್ನೆರಡು ವರ್ಷ ತುಂಬಿದ ನಂತರ ಅರ್ಜುನ ತನ್ನ ತಾಯಿ ಸಹೋದರರನ್ನು ಕೂಡಿಕೊಳ್ಳಲು ಹೊರಟು ನಿಂತ. ಆದರೆ ತಾನು ಧರಿಸಿದ್ದ ಭೈರಾಗಿಯ ವೇಷದಲ್ಲಿಯೇ ಹಿಂತಿರುಗುವಂತಿಲ್ಲ. ಆದ್ದರಿಂದ ಆ ವೇಷವನ್ನು ತೆಗೆದು ಗಂಟುಕಟ್ಟಿ ನೀರಿನಲ್ಲಿ ತೇಲಿ ಬಿಡಲು ಸಮುದ್ರದ ದಂಡೆಯ ಕಡೆಗೆ ಹೋದ, ಸಮುದ್ರ ದಂಡೆಯಲ್ಲಿ ಅರ್ಜುನ, ಒಬ್ಬ ತಾಯಿ ಹಾಗೂ ಐದು ಜನ ಮಕ್ಕಳು ಹೊಟ್ಟೆಗಿಲ್ಲದೆ ಬಿದ್ದು ನರಳುತ್ತಿರುವುದನ್ನು ಕಂಡ. ಆಗ ಅವರು ಅರ್ಜುನನಿಂದ ಭೈರಾಗಿ ವೇಷವನ್ನು ಕೇಳಿ ಪಡೆಯುತ್ತಾರೆ ಈ ರೀತಿಯಾಗಿ ಉಡುಪಿನಿಂದ ಅವರು ತಾವು ಪಾಂಡವರ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರೆ.

ಹಳ್ಳಿಗಳಲ್ಲಿ ಗುಡಿ ಸಿಕ್ಕರೆ ಗುಡಿ, ಇಲ್ಲದೆ ಹೋದರೆ ಊರ ಹೊರಗೆ ಗುಡಾರಗಳಲ್ಲಿ ಇವರು ವಾಸಿಸುತ್ತಾರೆ. ಅರ್ಜುನ ಜೋಗಿಯ ವೇಷವನ್ನು ಧರಿಸಿ ಭಿಕ್ಷೆಗೆ ಹೊರಟರೆಂದರೆ ಪುನಃ ಅವರು ತಿರುಗಿ ಬರುವುದು ಸಂಜೆ. ಭಿಕ್ಷೆ ಬೇಡುವಾಗ ಜೋಳ, ರಾಗಿ, ಅಕ್ಕಿ ಮುಂತಾದವುಗಳನ್ನು ಸ್ವೀಕರಿಸುತ್ತಾರೆ. ಅನ್ನ, ರೊಟ್ಟಿಯನ್ನು ಮುಟ್ಟುವುದಿಲ್ಲ. ಭಿಕ್ಷೆ ಬೇಡುವಾಗ ಅವರಿಗೆ ಯಾವುದೇ ಜಾತಿ, ಶೀಲವಿಲ್ಲದಿದ್ದರೂ ಊಟ, ಉಪಚಾರಕ್ಕೆಲ್ಲ ಶೀಲವಿದೆ. ಪರಿಶಿಷ್ಟ ವರ್ಗದವರಿಗಿಂತ ಉತ್ತಮರು ಎಂಬ ಭಾವನೆ ಅವರಿಗಿದೆ ಎಂದು ಈ ಲೇಖನದಲ್ಲಿ ಹೇಳಿದ್ದಾರೆ. ಭಿಕ್ಷೆ ಬೇಡುವಾಗ ಗುಂಪಿನಲ್ಲಿ ಅತಿ ಕಡಿಮೆಯೆಂದರೆ ಇಬ್ಬರು ಇರುತ್ತಾರೆ. ಜಾಸ್ತಿಯೆಂದರೆ ನಾಲ್ಕು ಜನ. ಎಡಗೈ ಹೆಬ್ಬೆರಳುಗಳಿಗೆ 'ಗಗ್ಗರ'ವನ್ನು ಹಾಕಿಕೊಂಡು ಭೋರ ಕಿನ್ನರಿ ಹಿಡಿದು, ಬಲಗೈ ಬೆರಳಿನಿಂದ ತಂತಿಗಳನ್ನು ಮೀಟುತ್ತಾ ಹಾಡುತ್ತಾರೆ. ಭೋರಕಿನ್ನರಿಯ ಒಂದು ಬಿದಿರು ಕೋಲಿಗೆ ಚಿಕ್ಕದಾದ ಮೂರು ಸೋರೆಕಾಯಿಗಳನ್ನು ಸ್ವಲ್ಪ ಸ್ವಲ್ಪ ಅಂತರದಲ್ಲಿ ಕಟ್ಟಿರುತ್ತಾರೆ.

ಅವುಗಳ ಮುಂಭಾಗದಲ್ಲಿ ಒಂದು ಅಥವಾ ಎರಡು ಉಕ್ಕಿನ ತಂತಿಗಳನ್ನು ಬಿಗಿದಿರುತ್ತಾರೆ. ಕಿನ್ನರಿಯ ಮೇಲ್ಭಾಗದಲ್ಲಿ ಶ್ರುತಿ ಕಟ್ಟೆಗೆ ಇರುತ್ತದೆ. ಕಮ್ಮಿ ರಾಗಕ್ಕೆ ಅನುಗುಣವಾಗಿ ತಂತಿಗಳನ್ನು ಬಿಗಿದು ಶ್ರುತಿ ಮಾಡುತ್ತಾರೆ. ಭೋರಕಿನ್ನರಿ ನವಿಲುಗರಿ ಹಾಗೂ ಮಣಿಗಳಿಂದ ಅಲಂಕೃತ ವಾಗಿರುತ್ತಾರೆ. ಎಡಗೈ ಹೆಬ್ಬೆರಳಿಗೆ ಗಗ್ಗರದಿಂದ ಸೋರೆಕಾಯಿಗೆ ಏಟು ಹಾಕುತ್ತಾರೆ. ಗೆಜ್ಜೆನಾದ ಕೊಡುತ್ತ ಹಾಡನ್ನು ಲಯಬದ್ಧವಾಗಿ ಹಾಡಿಕೊಂಡು ಹೋಗುತ್ತಾರೆ. ಜಾನಪದ ಮಟ್ಟುಗಳು ಹಾಡಿಗೆ ತಕ್ಕಹಾಗೆ ಲಯವಿರುತ್ತದೆ. ಪಾಂಡವರ ಗೋಳು ಅನಂತವಾಗಿದ್ದಂತೆ ಇವರ ಹಾಡು ಕೊನೆ ಇಲ್ಲದೆ ಅನಂತವಾಗಿ ಸಾಗುತ್ತದೆ. ಪ್ರತಿ ಮನೆಯಲ್ಲಿ ಭಿಕ್ಷೆಯನ್ನು ತಂದು ನೀಡಿದ ಮೇಲೆ 'ಕೊಟ್ಟಂತ ಮನೆಗೆ ಜಯವಾಗಲಿ' ಎಂದು

ಜಯಕಾರವನ್ನು ಹಾಡಿ ಮುಂದಿನ ಮನೆಯ ಬಾಗಿಲಿನಲ್ಲಿ ಅದೇ 'ಕಿವುಡು ಕುಂತೆವ್ವ'ನ ಪಡಿಪಾಟಲಿನ ಹಾಡು ಶುರುವಾಗುತ್ತದೆ. ಅವರು ಆ ಹಾಡನ್ನು ಎಂದಿಗೂ ಮುಗಿಸುವುದಿಲ್ಲವೆಂದು ತೋರುತ್ತದೆ ಎಂದು ಕೃಷ್ಣಪ್ಪನವರು ಭೋರ ಕಿನ್ನರಿಯ ಜೋಗಪ್ಪನನ್ನು ಸಾಂಪ್ರದಾಯಿಕ ಜಾನಪದ ಕಲೆಯ ನೆಲೆಯನ್ನು ಈ ಲೇಖನದಲ್ಲಿ ವೈಶಿಷ್ಟ್ಯಪೂರ್ಣವಾಗಿ ವಿವರಿಸಿದ್ದಾರೆ.

ಕೃಷ್ಣಪ್ಪನವರು ಭೋರಕಿನ್ನರಿಯವರ ಕುರಿತು ಈ ಮುಂದಿನಂತೆ ಹೇಳಿದ್ದಾರೆ. "ಕೇವಲ ಭಿಕ್ಷೆಗಾಗಿ ಮನೆಯಿಂದ ಮನೆಗೆ ಹಾಡುತ್ತ ಹೋಗುವುದರಲ್ಲಿ ಭೈರ ಜೋಗಿಗಳ ವೈಶಿಷ್ಟ್ಯವಿಲ್ಲ. ಸುಗ್ಗಿಯ ಕಾಲದ ತಿಂಗಳ ಬೆಳಕಿನಲ್ಲಿ ಹಳ್ಳಿಗರ ಅಪೇಕ್ಷೆಯ ಮೇರೆಗೆ ಹರಿಕಥೆ ದಾಸರಂತೆ ಕಥಾ ಕಾಲಕ್ಷೇಪಗಳನ್ನು ಅಲ್ಲಿಯೇ ಮಾಡುತ್ತಾರೆ."

"ಅವರು ಹಾಡುವ ಕತೆಗಳನ್ನು ಮೂರು ಗುಂಪುಗಳಾಗಿ ಮಾಡಬಹುದು.

೧. ಅರ್ಜುನ ಜೋಗಿ ಹಾಡುಗಳು, ಪಾಂಡವರಿಗೆ ಸಂಬಂಧಿಸಿದವು.

೨. ಜಾನಪದ ಕತೆಗಳು. ಇವುಗಳನ್ನು ಒಂದು ರೀತಿಯ ಮಹಾಕಾವ್ಯಗಳೆಂದು ಕರೆಯಬಹುದು. ಅವುಗಳಲ್ಲಿ ಕೆಲವು ಇಂತಿವೆ.

ಅ. ಲಾಲಾ ಸೇನನ ಕಥೆ

ಆ. ರಾಜ ರಾಸ್ತಾವಳಿ ಕಥೆ

ಇ. ಲಕ್ಷಾಪತಿ ಮಹಾರಾಜನ ಕಥೆ

ಈ. ಪತಿವ್ರತೆ ಪದ್ಮಾವತಿ ಕಥೆ

ಉ. ಚೋೞರಾಜನ ಕಥೆ

ಊ. ರಾಜಹಂಸ ಪರಮಹಂಸನ ಕಥೆ

ಋ. ಬಸವಕುಮಾರ ಲೋಹಿತಕುಮಾರ ಕಥೆ

ಎ. ಚಿತ್ರಶೇಖರ ಸೋಮಶೇಖರನ ಕಥೆ

ಏ. ಪತಿ ಧರ್ಮ ಶೀಲಾವತಿಯ ಕಥೆ

ಐ. ಸತ್ಯ ಸುಲೋಚನ ಕಥೆ

ಒ. ನೀಲಂಜಿ ಕುಮಾರನ ಕಥೆ

ಓ. ಬಗನೀ ಹೂವಿನ ಕಥೆ

ಔ. ಅರಣ್ಯ ಕುಮಾರನ ಕಥೆ ಇತ್ಯಾದಿ.

೩. ಜೀ ಪದಗಳು ಅಂದರೆ ಲಾವಣಿ ಪದಗಳು.

ಇವು ಒಂದು ರೀತಿಯಲ್ಲಿ ಪದ್ಯಗಳಲ್ಲಿ ಕಥೆಯ ಮಧ್ಯೆ ಯಾರಾದರೂ ಚೇಷ್ಟೆ ಮಾಡಿದರೆ ಅಥವಾ ಗದ್ದಲ ಮಾಡಿದರೆ, ಅಂತಹವರನ್ನು ಕುರಿತು ನಿಂತ ಕಾಲ ಮೇಲೆ ಪದ್ಯ ಕಟ್ಟಿ ಹಾಡುತ್ತಾರೆ."[೧೨]

ಕೆಟ್ಟ ನಡತೆಯನ್ನು ಟೀಕಿಸುವುದು, ಒಳ್ಳೆಯದನ್ನು ಎತ್ತಿ ಹೇಳುವುದು ಅವುಗಳ ಉದ್ದೇಶ. ಸಮಾಜದ ಕಟುವಾದ ವಿಮರ್ಶೆ ಆ ಹಾಡುಗಳ ವಸ್ತುವಾಗಿರುತ್ತದೆ. ಈ ರೀತಿಯಾಗಿ ಬಿ.ಕೃಷ್ಣಪ್ಪನವರು ಭೈರಜೋಗಿಯರು ಹಾಡುವ ಕತೆಗಳು, ಅವುಗಳ ವಿಧಗಳನ್ನು ಹೇಳಿದ್ದಾರೆ. ಅದೇ ರೀತಿಯಲ್ಲಿ ಮಹಾಕಾವ್ಯವನ್ನು ಜೋಗಿಗಳ ಬಾಯಿಯ ಮೂಲಕವೇ ಹೇಳುವುದು ಜೋಗಿಗಳ ಪ್ರತಿಭೆಗೆ ಸಾಕ್ಷಿಯಾಗಿದೆ. ಹಾಗೂ ನಿಂತಲೇ ತಕ್ಷಣ ಪದ್ಯ ಕಟ್ಟುವಷ್ಟರ ಮಟ್ಟಿಗೆ ಪ್ರತಿಭಾವಂತರು ಎಂದು ಕೃಷ್ಣಪ್ಪನವರು ಗುರುತಿಸಿದ್ದಾರೆ.

ಸಾಮಾನ್ಯವಾಗಿ ಅವರು ಹಾಡುವುದು ಜಾನಪದ ಕಥೆಗಳನ್ನು. ಕಥೆ ಕೇಳಿ ಕೇಳಿ ಬೇಸರವಾದಾಗ ಮಧ್ಯ ಮಧ್ಯ ಒಂದೊಂದು ಜೀ ಪದಗಳನ್ನು ಹಾಡಿ ಜನರ ಮನಸ್ಸನ್ನು ನಗೆಗಡಲಿನಲ್ಲಿ ತೇಲಿಸುತ್ತಾರೆ. ರಾತ್ರಿ ಊಟ ಮುಗಿಸಿ ಹತ್ತು ಗಂಟೆಯ ಸುಮಾರಿಗೆ ಕಥೆ ಪ್ರಾರಂಭವಾದರೆ ಅದು ಮುಗಿಯುವುದು ಕೋಳಿ ಕೂಗಿ ಚುಮು ಚುಮು ಬೆಳಕು ಹರಿದಾಗಲೇ, ಶಿವ ಕಾಳಿಂಗ ಮಹಾರಾಜನ ಕಥೆ ಮುಂತಾದವು ಎರಡು ಮೂರು ರಾತ್ರಿಗಳು ದೀರ್ಘವಾಗಿ ನಡೆಯುತ್ತವೆ. ಆಶ್ಚರ್ಯವೆಂದರೆ ಎರಡು ಮೂರು ರಾತ್ರಿಗಳು ದೀರ್ಘವಾಗಿ ಹಾಡಿದರೂ ಅವರ ಧ್ವನಿ ಹೆಚ್ಚು ಕಡಿಮೆಯಾಗುವುದಿಲ್ಲ. ಅವರು ಹೇಳುವ ಕಥೆಗಳಿಗೆ ಬರವಣಿಗೆ ಇಲ್ಲ. ಅವು ಶ್ರುತಿಗಳು. ಕೇವಲ ಜ್ಞಾಪಕಶಕ್ತಿಯಿಂದ ಹಾಡುತ್ತಾರೆ. ಯಾವನೋ ಅಜ್ಞಾತ ಅಮರ ಕವಿ ಕಟ್ಟಿದ ಕಥೆಗಳನ್ನು ಅವರು ವಂಶ ಪಾರಂಪರ್ಯವಾಗಿ ಹಾಡುತ್ತ ಬಂದಿದ್ದಾರೆ. ಮೂಲ ಕಥೆಯಲ್ಲಿ ಕೆಲವು ಅಂಶಗಳು ಬಿಟ್ಟಿರಬಹುದು. ಹೊಸದಾಗಿ ಕೆಲವನ್ನು ಸೇರಿಸಿರಲೂಬಹುದು. ಇದು ಹೀಗೆ ಎಂದು ಪತ್ತೆಮಾಡಲು ಬರುವುದಿಲ್ಲ.

ಕಥಾ ನಿರೂಪಣೆಯ ದೃಷ್ಟಿಯಿಂದ ಭೈರಜೋಗಿಗಳನ್ನು ಎರಡು ಗುಂಪು ಮಾಡಬಹುದು. ೧. ಕಥೆಗಾರರು, ೨. ಹಿಮ್ಮೇಳದವರು

ಸಾಮಾನ್ಯವಾಗಿ ಕಥೆ ಹೇಳುವಾಗ ಅತಿ ಜಾಸ್ತಿಯೆಂದರೆ ನಾಲ್ಕು ಜನರಿರುತ್ತಾರೆ. ಕಡಿಮೆಯೆಂದರೆ ಮೂರು ಜನರಿರುತ್ತಾರೆ. ಅವರಲ್ಲಿ ಒಬ್ಬ ಕತೆಗಾರ. ಉಳಿದವರು ಹಿಮ್ಮೇಳದವರು. ಕಥೆಗಾರ ಕಚ್ಚೆ ಪಂಚೆ, ಷರಾಯಿಯನ್ನು ತೊಟ್ಟು, ತಲೆಗೆ ಕೆಂಪು ಇಲ್ಲವೇ ಹಸಿರು ರೇಷ್ಮೆಯ ರುಮಾಲನ್ನು ಸುತ್ತಿ, ಕರಿ ಕೋಟನ್ನು ಧರಿಸಿ ಕಾಲುಗಳಿಗೆ ಗೆಜ್ಜೆಗಳನ್ನು ಬಿಗಿದುಕೊಂಡು ಕೈಯಲ್ಲಿ ಭೋರ ಕಿನ್ನರಿ ಹಿಡಿದು ನಿಂತಿರುತ್ತಾನೆ. ಹಿಮ್ಮೇಳದವರು ಸದಾ ಉಡುಪು ಧರಿಸಿ ತಲೆಗೆ ಬಿಳಿ ವಲ್ಲಿ ಸುತ್ತಿಕೊಂಡು ಭೋರ ಕಿನ್ನರಿ ಹಿಡಿದು ಸಜ್ಜಾಗಿರುತ್ತಾರೆ. ಕಥೆಗಾರ ಕುಳಿತಂಥ ಎಲ್ಲ ಜನರಿಗೂ ಕೈಮುಗಿದು ಪ್ರಾರ್ಥನೆಯನ್ನು ಆರಂಭಿಸುತ್ತಾನೆ. ಪ್ರತಿಯೊಂದು ಕತೆಗೂ ಆರಂಭದಲ್ಲಿ ಪ್ರಾರ್ಥನೆ ಹಾಗೂ ಮುಕ್ತಾಯದಲ್ಲಿ ಮಂಗಳಾರತಿ

ಇರುತ್ತದೆ. ಅವರು ಹಾಡುವ ಕಥೆ ಪೂರ್ತಿ ಹಾಡಿನ ರೂಪದಲ್ಲಿದ್ದರೂ. ಮಧ್ಯ ಮಧ್ಯ ಅದನ್ನು ಸಂಭಾಷಣೆಯ ರೂಪಕ್ಕೆ ತಿರುಗಿಸುತ್ತಾರೆ. ಕಥೆಗಾರ ನಾಯಕನಾಗುತ್ತಾನೆ. ಹಿಮ್ಮೇಳದವರಲ್ಲಿ ಒಬ್ಬ ನಾಯಕಿಯೋ, ತಂದೆಯೂ ಆಗಿ ಕಥೆ ನಾಟಕೀಯವಾಗುತ್ತದೆ. ದುಃಖ, ಆಕ್ರೋಶ, ಉತ್ಸಾಹ, ಅತಿ ಹರ್ಷ ಮುಂತಾದವುಗಳನ್ನು ಕಥೆಯ ಮಧ್ಯ ಮಧ್ಯ ಅಭಿನಯಿಸಿ ತೋರಿಸುತ್ತಾರೆ. ಇವು ಸೋಪೋಕ್ಲಿಸನ ಕಾಲದ ಗ್ರೀಕ್ ನಾಟಕಗಳ ಜಾಯಮಾನ ಅಲ್ಲಿ ಕಾಣಬರುತ್ತದೆ ಎಂದು ಬಿ.ಕೃಷ್ಣಪ್ಪನವರು ಹೇಳಿದ್ದಾರೆ. ಹಾಗೂ ನಿಮ್ಮ ಕಥನರೀತಿ ನಾಟಕದಂತೆಯೇ ಇದೆ ಎಂದು ತಿಳಿಸಿಕೊಟ್ಟರೆ, ಅದಕ್ಕೆ 'ಹಂಗೇನು' ಎಂದು ಹೆಮ್ಮೆಪಡುತ್ತಾರೆ ಎಂದು ಹೇಳಿದ್ದಾರೆ.

ಕೃಷ್ಣಪ್ಪನವರು ಭೈರಜೋಗಿಗಳಿಗೆ ನಿಮ್ಮ ಕಥೆಗಳು ನೀತಿ ಬೋಧಕಗಳು, ಈ ಕಥೆಗಳನ್ನು ಹಾಡುವುದರ ಮುಖಾಂತರ ಜನರಲ್ಲಿ ನೀವು ಧರ್ಮಜಾಗೃತಿಯನ್ನು ಮಾಡುತ್ತೀರಿ, ನಿಮ್ಮ ಕಾರ್ಯ ಪವಿತ್ರವಾದುದ್ದು, ಒಂದು ದೃಷ್ಟಿಯಲ್ಲಿ ನೀವು ಧರ್ಮ ಪ್ರಚಾರಕರಂತೆ ಅಲ್ಲವೇ? ಎಂದು ಪ್ರಶ್ನೆ ಮಾಡಿದರೆ, "ಹೌದು ನಾವೇನೂ ಕಥೆಯಲ್ಲಿ ಪಾಪ ಮಾಡಬಾರದು, ಸತ್ಯದಿಂದ ನಡೆಯಬೇಕು ಅಂತ ಹೇಳುತ್ತೇವೆ. ಆದರೆ ಎಷ್ಟು ಜನ ಹಾಗೆ ನಡೆದುಕೊಳ್ಳುತ್ತಾರೆ? ಮುಖ್ಯ ನಾವು ಹಾಡುವುದು ಈ ಹಾಳು ಹೊಟ್ಟೆಯ ಪಾಡಿಗಾಗಿ" ಎಂದು ಉತ್ತರ ಕೊಡುತ್ತಾರಂತೆ.

ಬದುಕಿನ ಅನಿವಾರ್ಯತೆಯಿಂದಾಗಿ ಶತಮಾನಗಳ ಉದ್ದಕ್ಕೂ ಇಂತಹ ಕಲೆಯನ್ನು ಅವರು ರೂಢಿಸಿಕೊಂಡು ಬಂದಿದ್ದಾರೆ. ಕಡುಬಡತನವು ಇಂತಹ ಜಾನಪದ ಕಲೆಗೆ ಪ್ರೇರಕ ಶಕ್ತಿಯಾಗಿರುವುದು ಗಮನೀಯ ಅಂಶವೆಂದು ಬಿ.ಕೃಷ್ಣಪ್ಪ ಈ ಲೇಖನದ ಮೂಲಕ ಕಂಡಿದ್ದಾರೆ.

ಜೋಗಿಗಳು ಕಥೆಯ ಮುಕ್ತಾಯದಲ್ಲಿ ಮಂಗಳಾರತಿ ಹಾಡಿ "ಕಾಲಕಾಲಕ್ಕೆ ಮಳೆರಾಯ, ಮಳೆಯನ್ನು ಬರಿಸಲಿ, ಭೂತಾಯಿ ಸುಭಿಕ್ಷವಾಗಿ ಬೆಳೆಯನ್ನು ಕೊಡಲಿ, ಶಂಕರಗಂಡ ಅನ್ನದೇವರು ಎಲ್ಲ ಮನೆಯಲ್ಲಿಯೂ ನಕ್ಕು ನಲಿದಾಡಲಿ, ಜನರ ಕಷ್ಟಗಳು ಕಳೆದು ಸುಖ ಶಾಂತಿಯಿಂದ ಬದುಕಲಿ, ಧರ್ಮಕ್ಕೆ ಮೇಲಾಗಲಿ" ಎಂದು ಹಾರೈಸುತ್ತಾರೆ ಎಂದು ಬಿ.ಕೃಷ್ಣಪ್ಪನವರು ಅವರ ಜನಪರವಾದ ಕಾಳಜಿಯನ್ನು ಗುರುತಿಸಿದ್ದಾರೆ.

ಜನಪ್ರಿಯ ಕಂಪನಿ ನಾಟಕಗಳು, ಚಲನಚಿತ್ರಗಳು ಹಳ್ಳಿಗಳನ್ನು ಪ್ರವೇಶಿಸಿ ಜೋಗಿಗಳ ಕಥೆಗಳು ಹಿಡಿಸದಾಗಿವೆ. ಇದರಿಂದಾಗಿ ಜೋಗಿಗಳ ಬದುಕು ದುರ್ಭರವಾಗಿದೆ. ಹಿಂದೆ ಸುಗ್ಗಿ ಕಾಲದಲ್ಲಿ ಹುಡುಕಿಕೊಂಡು ಹೋಗಿ ವೀಳ್ಯವನ್ನು ಕೊಡುತ್ತಿದ್ದರು. ಆದರೆ ಈಗ ಅವರೇ ಹಳ್ಳಿಗರ ಮನೆಯ ಬಾಗಿಲಿಗೆ ಬಂದರೂ ಅವರನ್ನು ಕೇಳುವವನೇ ಇಲ್ಲ. ಹಿಂದೆ ಮನೆಯ ಮುಂದೆ ಕೂಡಿಸಿ ಅವನಿಂದ ಗಂಟೆಗಟ್ಟಲೇ ಹಾಡಿಸಿ ಕೇಳುತ್ತಿದ್ದ ಜನರೇ ಇಂದು 'ನಮ್ಮ ಮನೆ ರೇಡಿಯೋ ತಿರುಗಿಸಿದರೆ ಸೊಗಸಾದ ಹಾಡುಬರುತ್ತದೆ. "ಅಯ್ಯೋ ಜೋಗಪ್ಪ ನಿನ್ನ ಹಾಡು ಯಾರಿಗೆ ಬೇಕು" ಎನ್ನುತ್ತಿದ್ದಾರೆ. ಇದರಿಂದಾಗಿ ಕೆಲವು ಜೋಗಿಗಳು ದಿನಗೂಲಿ ಮಾಡಲು ಶಕ್ತಿ ಇಲ್ಲದೇ, ಗೈಯ್ಯಲು ಭೂಮಿ

ಇಲ್ಲದೇ ಕಾಡುಪಾಲಾದ ಪಾಂಡವರಂತೆ ಅಂತರ್‌ಪಿಶಾಚಿಯಾಗಿ ಒಪ್ಪೊತ್ತಿನ ಕೂಳಿಗಾಗಿ ಊರು ಊರು, ಬೀದಿ ಬೀದಿ ಅಲೆಯುತ್ತಿದ್ದಾರೆ ಎಂದು ಕೃಷ್ಣಪ್ಪನವರು ಪ್ರಸ್ತುತ ಪರಿಸ್ಥಿತಿಯು ಭೈರ ಜೋಗಿಗಳಿಗೆ ತುಂಬಾ ಕಷ್ಟಕರವಾಗಿದೆ ಎಂದು ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. ಕೃಷ್ಣಪ್ಪನವರು "ರಾಮಚಂದ್ರಪ್ಪ ಎಂಬ ಭೈರಜೋಗಿಯನ್ನು ಭೇಟಿ ಮಾಡಿದರು. ಅವರು ಕಣ್ಣಲ್ಲಿ ನೀರು ತಂದು ಸ್ವಾಮಿ ಬದುಕು ಬಾರಿ ಕಷ್ಟ ಆತು, ಜನ ನಮ್ಮ ಕೈ ಬಿಟ್ರು, ನಮ್ಮನ್ನ ಹಿಂದುಳಿದವರ ಪಂಗಡದಲ್ಲಿ ಸೇರಿಸಿಲ್ಲ, ಸರ್ಕಾರಕ್ಕೆ ಹೇಳಿ ಎಲ್ಲಾದ್ರು ಒಂದಿಷ್ಟು ಭೂಮಿ ಕೊಡಿಸಿದ್ರೆ ಬೆಳಕೊಂಡು ಬದುಕ್ತಿವೆ. ನಮ್ಮ ಕಿನ್ನರಿ ವೇಷ ಅಟ್ಟ ಸೇರಿದ್ದು, ಧೂಳು ಹತ್ತಿ ನುಸಿ ಹಿಡಿದ್ಯಾವ"[೧೩] ಎಂದರು.

ಈ ರೀತಿಯಾಗಿ ಶತಶತಮಾನಗಳ ಕಾಲ ಕಲೆಯನ್ನು ಉಳಿಸಿಕೊಂಡು ಬಂದಂತಹ ಭೈರ ಜೋಗಿಗಳು ಇಂದು ಚಲನಚಿತ್ರ, ರೇಡಿಯೋ, ದೂರದರ್ಶನ ಮುಂತಾದ ಮಾಧ್ಯಮಗಳ ಪ್ರಭಾವದಿಂದ ಜಾನಪದ ಕಲೆಗಳನ್ನು ಕಳೆದುಕೊಳ್ಳುವಷ್ಟು ಪರಿಣಾಮ ಬೀರಿವೆ ಎಂದು ಕೃಷ್ಣಪ್ಪನವರು ಚರ್ಚಿಸಿದ್ದಾರೆ. ಇಂದು ಪ್ರಸ್ತುತದಲ್ಲಿ ಅವರು ಪೂರ್ತಿಯಾಗಿ ತಮ್ಮ ಕಲೆಯನ್ನು ಕಳೆದುಕೊಂಡರು ಅಂತಲೇ ಹೇಳಬಹುದು.

ಶತಶತಮಾನಗಳಿಂದ ಬೆಳೆದುಕೊಂಡು ಬಂದಿದ್ದ ಕರ್ನಾಟಕ ಜಾನಪದ ಕಲೆಯೊಂದು ನಾಶವಾಗುವುದರಲ್ಲಿದೆ. ರಾಜ್ಯದ ಸಂಗೀತ ಸಾಹಿತ್ಯ ಅಕಾಡೆಮಿಯವರು ಹಾಗೂ ಜನತೆ ಇತ್ತ ಕಡೆ ಗಮನ ಹರಿಸಿ ಈ ಕಲೆಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಅದಕ್ಕೆ ರಕ್ಷಣೆಯನ್ನು ಒದಗಿಸಬೇಕು.

೪.೪. ಸಾಹಿತ್ಯ ಚಿಂತನೆ

ಪ್ರೊ.ಬಿ.ಕೃಷ್ಣಪ್ಪನವರು ಇಲ್ಲಿ ಪ್ರಮುಖವಾಗಿ ಸಾಹಿತ್ಯ ಚಿಂತನೆಗೆ ಮಹತ್ವ ನೀಡಿದ್ದಾರೆ. 'ಕವಿ ಕಾವ್ಯ ದೃಷ್ಟಿ'ಯಲ್ಲಿ ಕವಿಯ ಪ್ರತಿಭೆ ಹಾಗೂ ಕಾವ್ಯವು ಯಾವ ರೀತಿ ಉನ್ನತವಾಗಿರುತ್ತದೆ ಎಂಬುದನ್ನು ಹೇಳಿದ್ದಾರೆ. ಕವಿ ತನ್ನ ಸ್ವಂತ ತೃಪ್ತಿಗೆ ಕಾವ್ಯ ಬರೆದರೂ ಅದರ ಸಂತೋಷ ಇತರರಿಗೂ ಸಿಕ್ಕಲಿ, ಇತರರೂ ಅದನ್ನು ಮೆಚ್ಚಲಿ ಎಂದು ಪ್ರಕಟಗೊಳಿಸುತ್ತಾರೆ ಎಂದು ಕೃಷ್ಣಪ್ಪನವರು ತಿಳಿಸಿದ್ದಾರೆ.

'ಭಾಷೆಯ ಸ್ವರೂಪಗಳು' ಕುರಿತು ಚರ್ಚಿಸುತ್ತಾ ಭಾಷೆಯು ಮನುಷ್ಯನಿಗೆ ಹೇಗೆಲ್ಲ ಉಪಯುಕ್ತವಾಗಿದೆ ಎಂಬುದನ್ನು ತಿಳಿಸಿದ್ದಾರೆ. ಭಾಷೆ ಇಲ್ಲದೇ ಹೋದರೆ ಮಾನವ ಬದುಕು ಕತ್ತಲೆಯಾಗಿರುತ್ತಿತ್ತು. ಪ್ರಾಚೀನ ಕಾಲದಿಂದಲೂ ಮಾನವ ಸಂಸ್ಕೃತಿ ಹಾಗೂ ನಾಗರಿಕತೆಗಳು ಉಳಿದು ಬಂದಿರುವುದು ಭಾಷೆಯಿಂದಲೇ ಎಂದು ಕೃಷ್ಣಪ್ಪನವರು ತಿಳಿಸಿದ್ದಾರೆ.

'ಡಿ.ಎಲ್.ಎನ್. ಮತ್ತು ಹೊಸ ಕಾವ್ಯ' ಕುರಿತು ಬಿ.ಕೃಷ್ಣಪ್ಪನವರು ಚರ್ಚಿಸಿದ್ದಾರೆ. ಡಿ.ಎಲ್.ಎನ್. ಅವರು ಹಳೆಗನ್ನಡ ಸಾಹಿತ್ಯದ ಮೇಲೆ ತುಂಬ ವಿದ್ವತ್ತನ್ನು ಹೊಂದಿದ್ದರು. ಆದರೆ ಹೊಸಗನ್ನಡ

ಸಾಹಿತ್ಯವನ್ನು ಅಷ್ಟಾಗಿ ನೆಚ್ಚಿಕೊಂಡಿದ್ದಿಲ್ಲ ಎಂದು ಕೆಲವರ ಅಭಿಪ್ರಾಯವನ್ನು ಕೃಷ್ಣಪ್ಪನವರು ಈ ಲೇಖನದ ಮೂಲಕ ತಳ್ಳಿಹಾಕಿದ್ದಾರೆ. ಡಿ.ಎಲ್.ಎನ್. ಅವರು ಹೊಸಗನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ಹೊಂದಿದ್ದರು ಎಂದು ಸ್ವತಃ ಶಿಷ್ಯರಾದ ಬಿ.ಕೃಷ್ಣಪ್ಪನವರು ಹೇಳಿದ್ದಾರೆ.

'ಪಂಪಭಾರತ–ಒಂದು ಸನ್ನಿವೇಶ' ಲೇಖನದಲ್ಲಿ ಪ್ರೊ.ಬಿ.ಕೃಷ್ಣಪ್ಪನವರು ಅರ್ಜುನನ್ನು ವಧಿಸಲು ಕರ್ಣ ಸರ್ಪಾಸ್ತ್ರ ಪ್ರಯೋಗಿಸಿದ ಸಂದರ್ಭವನ್ನು ಕುರಿತು ಹಾಗೂ ಅರ್ಜುನನ ವ್ಯಕ್ತಿತ್ವವನ್ನು ಕುರಿತು ಚರ್ಚಿಸಿದ್ದಾರೆ. ತನ್ನ ಅಜ್ಜ ಭೀಷ್ಮ ಹಾಗೂ ಗುರು ದ್ರೋಣಾಚಾರ್ಯರನ್ನು ಕೊಂದವನಿಗೆ ಅಣ್ಣ ಎಂಬ ಮಮಕಾರವಿರುವುದಿಲ್ಲ. ಆದರೇ ಕವಿಯ ಹೆಚ್ಚುಗಾರಿಕೆಯಿಂದ ಕರ್ಣನ ಮೇಲೆ ಮಮಕಾರವಿದೆ ಎಂದು ಚರ್ಚಿಸಿದ್ದಾರೆ.

ಕೃಷ್ಣಪ್ಪನವರ 'ಕುರುಬಲದ ಅನೈಕ್ಯ–ಕೌರವರೇಕೆ ಸೋತರು?' ಎಂಬ ಲೇಖನದಲ್ಲಿ ಕೃಷ್ಣಪ್ಪನವರು ಕೌರವರ ಕಡೆ ಬಲ ಹೆಚ್ಚಿದ್ದರೂ, ಕಡಿಮೆ ಬಲ ಹೊಂದಿರುವ ಕಡೆ ತಂತ್ರಗಾರ ಶ್ರೀಕೃಷ್ಣ ಇರುವನು. ಕೌರವರ ಕಡೆ ದುರ್ಯೋಧನನಿಗೆ ಯಾರು ಪೂರ್ಣ ಪ್ರಮಾಣದಲ್ಲಿ ಸೇವೆ ಸಲ್ಲಿಸಲಿಲ್ಲವೆಂದು ಕೃಷ್ಣಪ್ಪ ತಿಳಿಸುತ್ತಾರೆ. ಭೀಷ್ಮ, ದ್ರೋಣರು ಸಹ ಮೊಮ್ಮಕ್ಕಳು ಹಾಗೂ ಶಿಷ್ಯರಾದ ಕಾರಣಕ್ಕೆ ಸರಿಯಾಗಿ ಯುದ್ಧ ಮಾಡಲಿಲ್ಲ. ಅಶ್ವತ್ಥಾಮ, ಕರ್ಣರು ಸಹ ಸರಿಯಾದ ರೀತಿಯಲ್ಲಿ ಯುದ್ಧ ಮಾಡಲಿಲ್ಲ. ಎಲ್ಲ ರೀತಿಯಿಂದ ಪಾಂಡವರಿಗೆ ಜಯವಾಗಿತ್ತು ಎಂದು ಹೇಳಿದ್ದಾರೆ.

'ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಕ್ರ' ಈ ಲೇಖನವು ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗಿರುವುದಾಗಿದೆ. ಕನ್ನಡ ಸಾಹಿತ್ಯದಲ್ಲಿ ಅಗ್ರಮಾನ್ಯ ಲೇಖಕರಲ್ಲಿ ಕುವೆಂಪು ಕೂಡ ಒಬ್ಬರು.

ಬ್ರಾಹ್ಮಣಶಾಹಿಯನ್ನು ಪ್ರತಿಭಟಿಸುವ ಭರದಲ್ಲಿ ಕುವೆಂಪು ಅವರಿಗೆ ಶೂದ್ರರಿಗಿಂತ ಕೆಳಮಟ್ಟದಲ್ಲಿರುವ ದಲಿತರು ಕಾಣದೇ ಹೋದರು. ಒಂದು ಕಡೆ ಶೋಷಣೆಯನ್ನು ಪ್ರತಿಭಟಿಸಿದ ಕವಿ ಮತ್ತೊಂದು ಕಡೆ ಶೋಷಣೆಯನ್ನು ಮೌನವಾಗಿ ಒಪ್ಪಿಕೊಂಡರು ಎಂದು ಬಿ.ಕೃಷ್ಣಪ್ಪನವರು ಹೇಳಿದ್ದಾರೆ.

ಈ ಮೇಲಿನಂತೆ ಪ್ರೊ.ಬಿ.ಕೃಷ್ಣಪ್ಪನವರ ಹಲವು ಲೇಖನಗಳು ಸಮಾಜದ ನಿಲುವುಗಳನ್ನು ವೈಚಾರಿಕ ಚಿಂತನೆಯ ಮೂಲ ಪ್ರತಿಭಟನೆಯಾಗಿ ನಿಲ್ಲುತ್ತದೆ. ಬಿ.ಕೃಷ್ಣಪ್ಪನವರು ಎಲ್ಲ ಲೇಖನಗಳಲ್ಲಿ ಶೋಷಣೆಯ ಪರವಾಗಿ, ಅನ್ಯಾಯದ ಪರವಾಗಿ ತಮ್ಮ ಸಾಹಿತ್ಯವನ್ನು ರೂಪಿಸಿದ್ದಾರೆ.

೪.೪.೧. ಕವಿಕಾವ್ಯ ದೃಷ್ಟಿ

ಪ್ರೊ.ಬಿ.ಕೃಷ್ಣಪ್ಪನವರು ಕವಿ ಕಾವ್ಯದೃಷ್ಟಿ ಕುರಿತು ಹೀಗೆ ಹೇಳಿದ್ದಾರೆ. "ಕಾವ್ಯ ಕವಿ ಹೃದಯದ ಕೂಗು, ಕಾವ್ಯದ ಆಂತರ್ಯದಲ್ಲಿ ಕವಿಹೃದಯವಿರುತ್ತದೆ. ಅದು ಎಷ್ಟು ಶುಚಿ ಉನ್ನತವಾಗಿದ್ದಾರೆ ಕಾವ್ಯವು ಅಷ್ಟು ಉನ್ನತವಾಗಿರುತ್ತದೆ. ಕಾವ್ಯದಲ್ಲಿ ಕವಿಯ ಹಿಂದಿನ ಸಂಸ್ಕಾರ, ಆತ್ಮಶಕ್ತಿ, ಆಗಿನ ಸ್ಥಿತಿ,

ಆತನ ಕೃತಿಗೆ ಕಳೆ ಕೊಟ್ಟು ಕಾವ್ಯದಲ್ಲಿ ಕವಿಯ ಮುದ್ರೆ ಒತ್ತುತ್ತದೆ. ಸಣ್ಣ ಕವಿತೆ, ದೊಡ್ಡ ಕವಿತೆ, ಅದಕ್ಕೆ ಅನುಗುಣವಾಗಿ ಆವೇಶಗಳನ್ನು ನಿಗ್ರಹಿಸಿಕೊಳ್ಳಬೇಕು. ಕವಿ ಜೀವನ ಒಂದು ತಪಶ್ಚರ್ಯೆ. ದೊಡ್ಡ ಕವಿತೆಯಲ್ಲಿ ದೊಡ್ಡ ಹೃದಯ ಗುಣ, ಬುದ್ಧಿ ಸೇರಿ ಬರೆಯುವವನನ್ನು ಸಂಸ್ಕರಿಸಬಹುದು. ಕವಿಗೆ ಸೌಂದರ್ಯವನ್ನು ಕಾಣುವ ದೃಷ್ಟಿ ಬೇಕು. ಕವಿಯ ಹೃದಯಕ್ಕೆ ಸತತವಾಗಿ ಮಿಡಿಯುವ ಶಕ್ತಿ ಇರುತ್ತದೆ. ಸೂರ್ಯನ ಬೆಳಕು ಬಿದ್ದಂತೆ ಅದನ್ನು ಧಾರಣೆ ಮಾಡುವ ಎಲೆಗಳಂತೆ, ಹೂವಂತೆ, ಸತ್ಯ, ಸೌಂದರ್ಯ, ಕವಿ ಅದನ್ನು ಸವಿದು ಕಾವ್ಯದಲ್ಲಿ ಅದನ್ನು ಇಡುತ್ತಾನೆ"[೧೪] ಎಂದು ಕೃಷ್ಣಪ್ಪನವರು ಹೇಳಿದ್ದಾರೆ. ಹಾಗೆಯೇ ಕವಿಯ ಕಲ್ಪನೆ, ಕಲ್ಪನೆಗೆ ಬೇಕಾದ ಪರಿಸರ, ತಪಸ್ಸಿನಂತಹ ಜೀವನ ಎಲ್ಲವೂ ಕವಿಗಳ ಸೃಜನಶೀಲತೆಗೆ ಪ್ರೇರಕವಾಗಿದೆ. ಸತ್ಯ ಮತ್ತು ಸೌಂದರ್ಯ ಕಾವ್ಯದಲ್ಲಿ ಶಕ್ತಿಯಾಗಿ ನಿಲ್ಲುತ್ತದೆ.

ಕವಿ ಕಾವ್ಯವನ್ನು ಆತ್ಮಸಂತೋಷಕ್ಕಾಗಿ ಬರೆದರೂ ಅವರ ಸಂತೋಷ ಪ್ರತಿಯೊಬ್ಬರಿಗೂ ಸಿಗಲಿ ಹಾಗೂ ಮೆಚ್ಚಲಿ ಎಂಬುದು ಅವನ ಬಯಕೆಯಾಗಿರುತ್ತದೆ. ಉತ್ತಮ ಸಾಹಿತ್ಯ ಉತ್ತಮ ಜೀವನಕ್ಕೆ ಸಾಧನವಾಗಿದೆ.

ಪ್ರಕೃತಿಯಲ್ಲಿನ ಸಾಮಗ್ರಿಗಳು ಚಿತ್ತವೇದ್ಯವಾಗಿ ಕವಿಯ ಹೃದಯವನ್ನು ಕೆರಳಿಸುತ್ತದೆ, ಮೋಹಿಸುತ್ತದೆ. ಆಗ ಅವನು ಹೊರ ಪ್ರಪಂಚದ ಚಿತ್ರ, ಸೌಂದರ್ಯ, ವೈಭವ, ಕಠಿಣತೆ, ಇವುಗಳನ್ನು ಕುರಿತು ಹಾಡುತ್ತಾನೆ. ಇವು ಅವನ ಕೃತಿಯಲ್ಲಿ ಸೌಂದರ್ಯ ರೂಪವನ್ನು ತಾಳುತ್ತವೆ. ಓದುಗರ ಹೃದಯದಲ್ಲಿ ಅಡಗಿರುವ ಹೊಸ ಹರುಷವನ್ನು ಹೊರಕ್ಕೆ ತರುವುದು.

ಮುಂದುವರಿದು ಬಿ.ಕೃಷ್ಣಪ್ಪನವರು ಹೀಗೆ ಹೇಳಿದ್ದಾರೆ. "ಕವಿ ಈ ಪ್ರಪಂಚವನ್ನು ಹೃದಯ ತುಂಬಿ ನೋಡಬೇಕಾ? ಇಲ್ಲಿ ಎಲ್ಲವೂ ತಿಳಿದಿದೆ. ಕಂಡಿದೆ, ಕೇಳಿದೆ, ತಿಳೀಯಬೇಕಾದುದು ಇನ್ನಾವುದು ಉಳಿದಿಲ್ಲ ಎಂದು ಜಗತ್ತೇ ತೃಪ್ತಿಪಟ್ಟುಕೊಂಡಿದಿಯೋ ಅಲ್ಲಿಗೆ ಒಂದು ಹೊಸ ನೋಟವನ್ನು, ಭಾವವನ್ನು, ಅನುಭವವನ್ನು, ಉದಾತ್ತತೆಯನ್ನು ತಂದು ಅಚ್ಚರಿಗೊಳಿಸಬೇಕು, ಎಲ್ಲೆಲ್ಲಿಯೂ ಸಂತೋಷ ಶ್ರದ್ಧೆ, ಧೈರ್ಯ, ವೀರ್ಯಗಳನ್ನು ಎರೆಯಬೇಕು. ಇಹವು ಸ್ವರ್ಗದ ಬೀಡಿನಂತಾಗುವ ಸೌಮ್ಯವನ್ನು ಬಿತ್ತಿ ಬೆಳೆಯಬೇಕು. ಕಾವ್ಯದಲ್ಲಿ ಅಪ್ರಾಮಾಣಿಕತೆಗೆ ಎಡೆಯಿಲ್ಲ. ಭಾವದಾಸ್ಯ, ಕೃತಕ ಸೌಂದರ್ಯ, ಧರ್ಮ, ದೌರ್ಬಲ್ಯ ಇದಕ್ಕೆ ಅವಕಾಶವಿಲ್ಲ. ಸನ್ನಿವೇಶ ಎಂತಹುದೇ ಇರಲಿ ಕೀಳು ಕಲ್ಪನೆ, ಅನ್ಯಾಯ, ವಿಕಾರ, ಅಸತ್ಯ, ಔದಾರ್ಯ ಇದನ್ನು ಕವಿ ದೂರವಿರಿಸಬೇಕು. ಈ ಕೆಲಸ ಎಲ್ಲ ಕಾವ್ಯದ, ಕಲೆಯ, ಶಾಸ್ತ್ರ, ಧರ್ಮ, ಮತದ ಅಷ್ಟೇ ಏಕೆ ಎಲ್ಲ ಮಾನವೋದ್ಯಮದ ಪರಮ ಉದ್ದೇಶವೆನ್ನುತ್ತಾರೆ ವಿಮರ್ಶಕರು." ಕವಿ ತನ್ನ ಪ್ರತಿಮೆಯ ಮೂಲಕ ಸುತ್ತಮುತ್ತಲ ಸಾಮಾಜಿಕ ನಡವಳಿಕೆಯನ್ನು ಸರಿಪಡಿಸಬೇಕು ಎಂಬುದು ಕೃಷ್ಣಪ್ಪನವರ ಅಭಿಪ್ರಾಯವಾಗಿದೆ.

ಸಮಾಜದಲ್ಲಿ ಎಲ್ಲಿಯವರೆಗೆ ಕೆಟ್ಟತನಗಳು ಇರುತ್ತವೊ ಅಲ್ಲಿಯವರೆಗೆ ಕವಿಯು ನೆಮ್ಮದಿಯಾಗಿರುವುದಿಲ್ಲ. ಕವಿಯು ಎಲ್ಲ ರೀತಿಯಿಂದ ಸಮಾಜವನ್ನು ಸರಿಪಡಿಸಬೇಕು. ಸತ್ಯ,

ನ್ಯಾಯ, ನೈತಿಕತೆಯ ಪ್ರತಿಪಾದಕನಾಗಬೇಕು. ಮನುಷ್ಯನ ಕೆಟ್ಟತನವನ್ನು ಅಳಿಸಿ ಹೊಸಬಾಳಿಗೆ ಬದುಕನ್ನು ಹಸನುಗೊಳಿಸಬೇಕು ಹಾಗೂ ಕವಿಯಾಗುವುದು ಪುಣ್ಯದ ಕೆಲಸ ಎಂದು ಕೃಷ್ಣಪ್ಪನವರು ಈ ಲೇಖನದಲ್ಲಿ ಹೇಳಿದ್ದಾರೆ.

೪.೪.೨. ಭಾಷೆಯ ಸ್ವರೂಪಗಳು

ಭಾಷೆ ಎನ್ನುವುದು ಮಾನವನ ಸಂವಹನ ಮಾಧ್ಯಮವಾಗಿದೆ. ಭಾಷೆ ಮಾನವ ಅಭಿವ್ಯಕ್ತಿಯ ಸಾಧನವಾಗಿದ್ದರೂ ಅದು ಅವನಲ್ಲಿ ಉಂಟಾಗುವ ಎಲ್ಲ ರೀತಿಯ ಸಂವೇದನೆಗಳನ್ನು ಹೊರ ಹಾಕಲಾರದು. ಮನುಷ್ಯನಿಗೆ ನೋವು ಉಂಟಾದಾಗ ಉದ್ಗಾರ ತೆಗೆಯಬಹುದು. ಸಂತೋಷವಾದಾಗ ನಮಗೆ ಮಾತೇ ಹೊರಡುವುದಿಲ್ಲ ಎನ್ನುವಂತೆ, ಎಲ್ಲ ಹೊಯ್ದಾಟಗಳು ಸಮರ್ಥವಾದ ವಾಹಕವಾಗಲಾರದು. ಆದರೆ ಭಾಷೆಯ ಲೋಪಗಳು ಇದ್ದರೂ ಭಾಷೆ ಮಾನವನಿಗೆ ಬೇಕು. ಭಾಷೆ ಇಲ್ಲದಿದ್ದರೆ ಮಾನವನ ಬದುಕು ಕತ್ತಲೆಯಾಗುತ್ತದೆ. ಪ್ರಾಚೀನ ಕಾಲದಿಂದಲೂ ಮಾನವನ ಸಂಸ್ಕೃತಿ ಹಾಗೂ ನಾಗರಿಕತೆಗಳು ಉಳಿದುಬಂದಿರುವುದು ಭಾಷೆಯಿಂದಲೇ ಎಂದು ಪ್ರೊ.ಬಿ.ಕೃಷ್ಣಪ್ಪನವರು 'ಭಾಷೆಯ ಸ್ವರೂಪಗಳು' ಲೇಖನದಲ್ಲಿ ಹೇಳಿದ್ದಾರೆ.

ವಿದ್ವತ್ ಜಗತ್ತಿನಲ್ಲಿ ಭಾಷೆಯನ್ನು ಎರಡು ರೀತಿಯಲ್ಲಿ ವ್ಯವಹರಿಸುತ್ತದೆ. ಒಂದು ಕಾವ್ಯ ಭಾಷೆಯಾಗಿ ಹಾಗೂ ಎರಡನೆಯದು ಶಾಸ್ತ್ರ ಭಾಷೆಯಾಗಿ ಬಳಸುತ್ತಾರೆ. ಭಾಷೆಯು ಕಾವ್ಯದಲ್ಲಾಗಲಿ, ಶಾಸ್ತ್ರದಲ್ಲಾಗಲಿ ಹೊಂದಿಕೊಂಡು ಭಿನ್ನ ಭಿನ್ನ ಸ್ವರೂಪವನ್ನು ತಾಳುತ್ತದೆ. ಸಂದರ್ಭಕ್ಕೆ ಅನುಗುಣವಾಗಿ ರೂಪಾಂತರ ಹೊಂದುತ್ತದೆ.

ಶಾಸ್ತ್ರ ಭಾಷೆ ಎಂದರೆ ಯಾವುದಾದರೂ ಒಂದು ವಸ್ತುವಿನ ಸ್ವಭಾವ ಇಲ್ಲವೇ ರಚನೆಯನ್ನು ಕುರಿತು ವಿವರವಾಗಿ ವಿಶ್ಲೇಷಿಸಿ, ವಿಂಗಡಿಸಿ ನಿಷ್ಕೃಷ್ಟವಾಗಿ, ನಿಖರವಾಗಿ, ಯಾವ ಅನುಮಾನಗಳಿಗೂ ಆಸ್ಪದವಿಲ್ಲದಂತೆ, ಅಧ್ಯಯನ ಮಾಡುವುದಾಗಿದೆ.

ಕಾವ್ಯದ ಭಾಷೆ ಎಂದರೇನು? ಇದರಲ್ಲಿ ಸ್ಪಷ್ಟತೆ ಕಡಿಮೆ. ಸ್ಪಷ್ಟತೆ ಇಲ್ಲದಿರುವುದೇ ಕಾವ್ಯಭಾಷೆಯ ಒಂದು ಗುಣವಾಗಿದೆ. ಅನಂದವರ್ಧನನು ತನ್ನ ಧನ್ಯಾಲೋಕದಲ್ಲಿ ಕಾವ್ಯದಲ್ಲಿ ಒಂದು ಶಬ್ದಕ್ಕೆ ಮೂರು ಅರ್ಥಗಳಿವೆ. ವಾಚ್ಯಾರ್ಥ, ಸೂಚ್ಯಾರ್ಥ ವ್ಯಂಗ್ಯಾರ್ಥ ಎಂದು ಹೇಳಿದ್ದಾನೆ. 'ಧ್ವನಿಯೇ ಕಾವ್ಯದ ಆತ್ಮ ಮತ್ತು ಜೀವಾಳ' ಎಂದು ಹೇಳಿದ್ದಾನೆ.

"ಶಾಸ್ತ್ರದ ಭಾಷೆ ಎಷ್ಟು ಸ್ಪಷ್ಟವೋ, ನಿರ್ದಿಷ್ಟವೋ, ಕಾವ್ಯದ ಭಾಷೆ ಅಷ್ಟೇ ಅಸ್ಪಷ್ಟ ಹಾಗೂ ಧ್ವನಿಪೂರ್ಣ. ಸ್ಪಷ್ಟತೆ. ನಿಖರತೆ ಶಾಸ್ತ್ರಭಾಷೆಗೆ ಗುಣಗಳಾದರೆ, ಅದೇ ಗುಣಗಳು ಕಾವ್ಯದ ಭಾಷೆಗೆ ದೋಷಗಳಾಗಿವೆ. ಇದೇ ರೀತಿ ಅಸ್ಪಷ್ಟತೆ, ಧ್ವನಿ ಕಾವ್ಯಭಾಷೆಗೆ ಗುಣಗಳಾದರೆ, ಶಾಸ್ತ್ರಕ್ಕೆ ಅವು ದೋಷಗಳಾಗುತ್ತವೆ. ಒಂದೊಂದರ ಸ್ವಭಾವ ಭಾಷೆಯನ್ನು ಬಳಸುವುದೇ ಆಗಲಿ, ಕಾವ್ಯವನ್ನು ಬರೆಯುವ ಕವಿ ಶಾಸ್ತ್ರದ ಭಾಷೆಯನ್ನು ಬಳಸುವುದೇ ಆಗಲಿ, ಆಯಾ ಕ್ಷೇತ್ರಕ್ಕೆ ಹೊಂದತಕ್ಕುದ್ದಲ್ಲ.

ಶಾಸ್ತ್ರ ಶುದ್ಧಶಾಸ್ತ್ರವಾಗಿ ಉಳಿಯಬೇಕಾದರೆ, ಕಾವ್ಯ ಶುದ್ಧಕಾವ್ಯವಾಗಿ ಉಳಿಯಬೇಕಾದರೆ ಈ ರೀತಿಯ ವರ್ಣಸಂಕರ ಸರ್ವತ್ರ ವರ್ಜ್ಯ ಹಾಗೂ ಹೊಲ್ಲ."[೧೫] ಈ ಮೇಲಿನಂತೆ ಬಿ.ಕೃಷ್ಣಪ್ಪನವರು ಶಾಸ್ತ್ರ ಭಾಷೆಯ ಕುರಿತು ಹೇಳಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ಸಾವಿರದ ಐದು ನೂರು ವರ್ಷಗಳ ಇತಿಹಾಸವಿದೆ. ಕನ್ನಡ ಸಾರಸ್ವತ ಲೋಕದಲ್ಲಿ ಶಾಸ್ತ್ರಜ್ಞರ ಸಂಖ್ಯೆಗಿಂತ ಕವಿಗಳ ಸಂಖ್ಯೆಯೇ ಹೆಚ್ಚು. ಕವಿಗಳು ಕನ್ನಡ ಭಾಷೆಯನ್ನು ಕಾವ್ಯಭಾಷೆಯನ್ನಾಗಿ ಮಾಡಲು ಪ್ರಯತ್ನ ಮಾಡಿದ್ದಾರೆ. ವಚನಕಾರರು, ದಾಸರು, ಕುಮಾರವ್ಯಾಸ ಮುಂತಾದವರು ಕಾವ್ಯಕ್ಕೆ ಮಹತ್ವ ಕೊಟ್ಟಿದ್ದಾರೆ.

ಕೇಶಿರಾಜನು ಶಾಸ್ತ್ರವನ್ನು ಬರೆಯುತ್ತಿದ್ದರೂ ಕಾವ್ಯಕ್ಕೆ ಮಹತ್ವ ನೀಡಿದ್ದಾನೆ. ತಾನೂ ವೈಯ್ಯಾಕರಣಿ ಎಂದು ಹೆಮ್ಮೆ ಪಟ್ಟುಕೊಳ್ಳುವುದಕ್ಕಿಂತ ಹೆಚ್ಚಾಗಿ 'ಕವಿ ಕೇಶವನಂ' ಎಂದು ತೃಪ್ತಿ ಹೊಂದಿದ್ದಾನೆ ಎಂದು ಬಿ.ಕೃಷ್ಣಪ್ಪನವರು ಕೇಶಿರಾಜನ ಕುರಿತು ಹೇಳಿದ್ದಾರೆ.

ಯಾವುದು ಶುದ್ಧ ಶಾಸ್ತ್ರೀಯವಾಗಿರಬೇಕೋ ನಿಷ್ಕೃಷ್ಟವಾಗಿರಬೇಕೋ ಅಂತಹುದರಲ್ಲಿ ಕಾವ್ಯದ ಅಲಂಕಾರ ಧ್ವನಿಯನ್ನು ತರುವುದು ಯಾರಿಗೂ ಒಪ್ಪದ ವಿಚಾರ. ಕಾವ್ಯ ಮತ್ತು ಶಾಸ್ತ್ರವು ಬೇರೆ ಬೇರೆಯಾಗಿರಬೇಕು ಎಂಬುದು ಬಿ.ಕೃಷ್ಣಪ್ಪನವರ ನಿಲುವಾಗಿದೆ.

೪.೪.೩. ಡಿ.ಎಲ್.ಎನ್. ಮತ್ತು ಹೊಸ ಕಾವ್ಯ

ಡಿ.ಎಲ್.ನರಸಿಂಹಾಚಾರ್ ಅವರು ಕನ್ನಡ ಸಾರಸ್ವತಲೋಕದ ವಿದ್ವತ್‌ಪೂರ್ಣ ವಿದ್ವಾಂಸರು. ಹಳೆಗನ್ನಡದ ಬಗ್ಗೆ ತುಂಬ ವಿದ್ವತ್ ಇರುವ ವ್ಯಕ್ತಿಯಾಗಿದ್ದರು ಹಾಗೂ ಹೊಸಗನ್ನಡದ ಬಿ.ಎಂ.ಶ್ರೀ ಯವರ ಪ್ರಭಾವಕ್ಕೆ ಒಳಗಾಗಿದ್ದವರು ಎಂದು ಪ್ರೊ.ಬಿ.ಕೃಷ್ಣಪ್ಪನವರು ಹೇಳಿದ್ದಾರೆ.

ಡಿ.ಎಲ್.ಎನ್. ಕುರಿತು ಪ್ರೊ.ಬಿ.ಕೃಷ್ಣಪ್ಪನವರು ಹೀಗೆ ಹೇಳಿದ್ದಾರೆ. "ನಾನು ಅವರ ವಿದ್ಯಾರ್ಥಿ. ಅವರು ಪಾಠವನ್ನು ಹೇಳುವಾಗ ಪ್ರಾಸಂಗಿಕವಾಗಿ ಶ್ರೀ ಕುವೆಂಪು, ಶ್ರೀ ಬೇಂದ್ರೆ ಮುಂತಾದವರ ಪದ್ಯಗಳನ್ನು ಹೇಳುತ್ತ ಬಾಯಿ ಚಪ್ಪರಿಸಿದ್ದುಂಟು. ಉದಾಹರಣೆಗೆ ಕಾವ್ಯಕಲ್ಪನೆಯ ಸೌಂದರ್ಯವನ್ನು ಕುರಿತು ಅವರು ಶ್ರೀ ಕುವೆಂಪು ಅವರ ಪದ್ಯವನ್ನು ಆಗಾಗ ಹೇಳುತ್ತಿದ್ದರು.

'ತಾರೆಗಳ ದಿಬ್ಬಣವು
ಗಗನದಿಂದಿಳಿ ತಂದು
ಬೆಟ್ಟ ತುದಿಯೊಳು ತಳುವಿ
ಸೋಪಾನಗಳನಿಳಿದ
ತಪ್ಪಲಲಿ ಮೇಳವಿಸಿ

ಕಿಕ್ಕಿರಿದು ನೆರೆದಂತೆ

ಭುವಿ ಬೆಸಲೆಯಾದಂತೆ"[೧೬]

ಅರಮನೆಯ ದೀಪೋತ್ಸವ ಕಾಣುವಂತೆ 'ಪದ್ಯವನ್ನು ಬರೆದರೆ ಹೇಗೆ ಬರೀಬೇಕು ಹೀಗೆ ಬರೀಬೇಕು ಕಣ್ರಯ್ಯ' ಎನ್ನುತ್ತಿದ್ದರು. ಶ್ರೀ ಬೇಂದ್ರೆಯವರ 'ಹಕ್ಕಿ ಹಾರುತಿದೆ ನೋಡಿದಿರಾ' ಮುಂತಾದ ಕವನಗಳು ಅವರಿಗೆ ತುಂಬಾ ಮೆಚ್ಚಿಕೆಯಾಗಿದ್ದವು. ಹಳೆಗನ್ನಡ ಪಂಪ ಮುಂತಾದವರ ಪದ್ಯಗಳನ್ನು ಹೇಗೆ ಬಾಯಿಯಲ್ಲಿ ನಿರರ್ಗಳವಾಗಿ ಹೇಳುತ್ತಿದ್ದರೋ ಹಾಗೆಯೇ ಹೊಸಗನ್ನಡ ಪದ್ಯಗಳನ್ನು ನಿರರ್ಗಳವಾಗಿ ಹೇಳುತ್ತಿದ್ದರು. ಇದನ್ನು ಕಂಡು ನಾವು ಎಷ್ಟೋ ಸಾರಿ ಬೆರಗು ಪಟ್ಟಿದ್ದುಂಟು."

ಸ್ವತಃ ಡಿ.ಎಲ್.ಎನ್. ಅವರ ಶಿಷ್ಯರಾಗಿದ್ದ ಕೃಷ್ಣಪ್ಪನವರು ಅವರ ವಿದ್ವತ್ತನ್ನು ಮೆಚ್ಚಿಕೊಂಡಿದ್ದರು. ಹಾಗೆಯೇ ಹಳೆಗನ್ನಡ ಮತ್ತು ಹೊಸಗನ್ನಡ ಎರಡರಲ್ಲಿಯೂ ಪಾಂಡಿತ್ಯ ಪೂರ್ಣವಾಗಿದ್ದರು. ಡಿ.ಎಲ್.ಎನ್ ಅವರು ಒಂದು ಸಾರಿ ಶ್ರೀ ಪರಮೇಶ್ವರ ಭಟ್ಟರನ್ನು ಕುರಿತು ಹೀಗೆ ಕೇಳಿದ್ದರು. 'ಏನಯ್ಯ ಭಟ್ಟಾ, ನನಗೆ ಈ ನವ್ಯ ಕಾವ್ಯ ಎಷ್ಟು ಓದಿದರೂ ಅರ್ಥವಾಗುತ್ತಿಲ್ಲ. ನೀನಾದರೂ ಹೇಳಿಕೊಡಬಾರದೆ' ಎಂದಿದ್ದರು ಎಂದು ಬಿ.ಕೃಷ್ಣಪ್ಪನವರು ಹೇಳಿದ್ದಾರೆ. ಡಿ.ಎಲ್.ಎನ್.ಅವರು ಹಳೆಗನ್ನಡದ ಪಂಪಾದಿಗಳನ್ನು ಹೇಗೆ ಮೆಚ್ಚಿಕೊಳ್ಳುತ್ತಿದ್ದರೋ ಹಾಗೆಯೇ ಪೊನ್ನ ಮುಂತಾದವರನ್ನು ಕಳಪೆ ಎಂದು ಹೇಳುತ್ತಿದ್ದರು. ಅದೇ ರೀತಿ ಹೊಸಕಾವ್ಯದಲ್ಲಿ ರಸವಿದೆ ಎಂಬುದನ್ನು ಮೆಚ್ಚಿಕೊಳ್ಳುತ್ತಿದ್ದರು ಎಂದು ಬಿ.ಕೃಷ್ಣಪ್ಪನವರು ಹೇಳಿದ್ದಾರೆ.

ಡಿ.ಎಲ್.ಎನ್. ಹಳೆಗನ್ನಡಕ್ಕೆ ಮನಸೋತರು. ಹಳಗನ್ನಡದಲ್ಲಿ ಗಂಟೆಗಟ್ಟಲೇ ಮಾತನಾಡಬಲ್ಲ ಶಕ್ತಿ ಇತ್ತು. ಇಂಥವರು ಹೊಸಗನ್ನಡ ಕಾವ್ಯವನ್ನು ಮೆಚ್ಚಿಕೊಂಡಿದ್ದರು. ಅವರ ಪಾಂಡಿತ್ಯ ಸಂಕುಚಿತ ವಾದುದಲ್ಲ. ಜ್ಞಾನ ಯಾವ ದಿಕ್ಕಿನಿಂದ ಬಂದರೂ ಅದನ್ನು ಹೃತ್ಪೂರ್ವಕವಾಗಿ ಬರಮಾಡಿಕೊಳ್ಳುವ ತೆರೆದ ಹೃದಯ ಡಿ.ಎಲ್.ಎನ್. ಅವರದಾಗಿತ್ತು.

೪.೪.೪. ಪಂಪಭಾರತ–ಒಂದು ಸನ್ನಿವೇಶ

ಪ್ರೊ.ಬಿ.ಕೃಷ್ಣಪ್ಪನವರು ತಮ್ಮ ಪ್ರಾಚೀನ ಕತೆ, ಕಾವ್ಯಗಳನ್ನು ಹೊಸ ವೈಚಾರಿಕ ದೃಷ್ಟಿಯಿಂದ ವಿಶ್ಲೇಷಿಸಿದ್ದಾರೆ. ಅವುಗಳ ಅಂತಃಸತ್ವ, ಮೌಲಿಕ ಸತ್ಯಗಳು ಮುಂತಾದ ಅಂಶಗಳನ್ನು ಚರ್ಚಿಸಿದ್ದಾರೆ.

ಅರ್ಜುನನ ಮೇಲೆ ಕರ್ಣ ಪ್ರಯೋಗಿಸಿದ ಸರ್ಪಾಸ್ತ್ರ ವಿಫಲವಾಯಿತು. ಕರ್ಣ ತನ್ನ ಮಾತು ಕೇಳಲಿಲ್ಲ ಎಂದು ಶಲ್ಯ ತಾನು ರಥವನ್ನು ನಡೆಸುವುದಿಲ್ಲ ಎಂದು ಬಿಟ್ಟು ಮಧ್ಯದಲ್ಲಿ ಹೊರಟು ಹೋಗುತ್ತಾನೆ. ಕರ್ಣನಿಗೆ ಸಾರಥಿ ಇಲ್ಲವಾಗಿ, ತನ್ನ ತೋಳುಬಲ ಮತ್ತು ಬಿಲ್ಲುಗಳೇ ನನ್ನ ಸಹಾಯಕರು ಎಂದು ಭಾವಿಸಿ ಮುಂದೆ ನಡೆಯುತ್ತಾನೆ. ಆಗ ಅರ್ಜುನನು ಎದುರಾದ ಸಂದರ್ಭದಲ್ಲಿ ಕೆಸರಲ್ಲಿ ಕರ್ಣನ ರಥದ ಗಾಲಿ ಸಿಲುಕಿಕೊಳ್ಳುತ್ತದೆ. ಕರ್ಣ ರಥದಿಂದ ಇಳಿದು ಗಾಲಿಗಳನ್ನು ಎತ್ತುವುದರಲ್ಲಿ ಮಗ್ನನಾಗುತ್ತಾನೆ. ಈ ಕಡೆ ಕೃಷ್ಣ ಇದೇ ತಕ್ಕ ಸಮಯವೆಂದು ತಿಳಿದು 'ಕರ್ಣನನ್ನು

ಈಗಲೇ ಕೊಲ್ಲು, ಇಲ್ಲದೇ ಹೋದರೆ, ಅನಂತರ ಅವನನ್ನು ನೀನು ಗೆಲ್ಲಲಾರೆ' ಎಂದು ಅರ್ಜುನನ್ನು ಪ್ರಚೋದಿಸುತ್ತಾನೆ. ಆಗ ಅರ್ಜುನ ಶ್ರೀಕೃಷ್ಣನಿಗೆ ಹೇಳುತ್ತಾನೆ. ಕರ್ಣನ ಕೈಯಲ್ಲಿ ಆಯುಧವಿಲ್ಲ, ಸಾರಥಿಯಿಲ್ಲ, ಮೈಗೆ ಮರೆಯಾಗಿ ಕವಚವಿಲ್ಲ, ಹೊಡೆಯಲು ಕೈಯೇಳದು. ಏತಕ್ಕೋ ನಾನರಿಯೇ. ಮುಂಚಿನ ವೈರತ್ವವನ್ನು ಮರೆತುಬಿಟ್ಟದೆ ಎಂದು ಅರ್ಜುನ ತನ್ನ ಮನಸ್ಸಿನ ತೊಳಲಾಟವನ್ನು ಹೇಳುತ್ತಾನೆ. ಆಗ ಅರ್ಜುನನಲ್ಲಿ ಎರಡು ದೌರ್ಬಲ್ಯಗಳು ಕಾಣಿಸಿಕೊಂಡಿವೆ. ಒಂದು ಕರ್ಣನ ಬಗ್ಗೆ ಉಂಟಾದ ಅತೀವ ವ್ಯಾಮೋಹ ಮತ್ತೊಂದು ಮಾನಸಿಕ ವಿಕಾರವು ದೈಹಿಕವಾಗಿ ಪ್ರವಹಿಸಿ ಬಿಲ್ಲನ್ನು ಎತ್ತಿ ಹಿಡಿದು ಯುದ್ಧ ಮಾಡುವಷ್ಟು ಕೈಗಳಲ್ಲಿ ಶಕ್ತಿ ಇಲ್ಲವಾಗಿದೆ.

"ಕರ್ಣ ತನ್ನ ಶತ್ರು. ಅವನು ಪಾಂಡವರಿಗೆ ಮಾಡಿರುವ ಅನ್ಯಾಯಕ್ಕೆ ಅರೆಕೊಯುಂಟೆ? ಕೊಟ್ಟ ಕಷ್ಟಗಳಿಗೆ ಲೆಕ್ಕವುಂಟೆ, ಇಂಥವನ ದುಃಸ್ಥಿತಿಯನ್ನು ಕಂಡು ಆನಂದ ಪಡಬೇಕಾಗಿರುವಾಗ ಈ ತರದ ಸಂಕಟವೇಕಾಗಬೇಕು? ಕರುಳು ಇರಿಯವಂತಹ ವೇದನೆ! ಇದಕ್ಕೇನು ಕಾರಣ? ಅರ್ಜುನ ಕೃಷ್ಣನಿಂದ ಅಂತಹ ಕಾರಣವನ್ನು ತಿಳಿಯಲು ಇಚ್ಚಿಸುತ್ತಾನೆ. ಆದರೆ ಕರ್ಣ–ಪಾಂಡವರು ಅಣ್ಣತಮ್ಮಂದಿರು ಎಂದು ಹೇಳಬೇಕಾಗಿದ್ದ ಕಾಲ ಮೀರಿ ಹೋಗಿದೆ. ಅಲ್ಲದೇ ಅರ್ಜುನನಿಗೆ ಕರ್ಣ ನಿನ್ನ ಅಣ್ಣ ಎಂದು ಹೇಳುವುದರಿಂದ ಬರಬಹುದಾದ ಲಾಭಕ್ಕಿಂತ, ಕರ್ಣನನ್ನು ಕೊಲ್ಲಿಸುವುದರಿಂದ ಬರಬಹುದಾದ ಲಾಭವೇ ಜಾಸ್ತಿ. ಅಧಿಕ ಲಾಭಕ್ಕಾಗಿ ಅಲ್ಪ ಲಾಭವನ್ನು ತ್ಯಜಿಸುವುದು ವೀರನ ಲಕ್ಷಣ. ಒಂದು ಪಕ್ಷ ಕೃಷ್ಣ ಅರ್ಜುನನಿಗೆ ಕರ್ಣ ನಿನ್ನ ಅಣ್ಣ ಎಂದು ಹೇಳಿದ್ದರೂ ಅರ್ಜುನ ಅವನನ್ನು ಕೊಲ್ಲುತ್ತಿರಲಿಲ್ಲ ಎಂಬುದಕ್ಕೆ ನಮಗೆ ಯಾವ ನಂಬಿಕೆಯೂ ಇಲ್ಲ. ಏಕೆಂದರೆ ತಮ್ಮನ್ನು ಚಿಕ್ಕಂದಿನಿಂದಲೂ ಎತ್ತಿ ಮುದ್ದಾಡಿ, ತಂದೆಯಿಲ್ಲದ ಮಕ್ಕಳು ಎಂದು ಸಾಕಿದ ಭೀಷ್ಮರನ್ನೇ ಅವರು ಬಿಡಲಿಲ್ಲ, ಹೀಗಿರುವಾಗ ಎಲ್ಲಿಯೋ ಹುಟ್ಟಿ, ಹೇಗೋ ಬೆಳೆದು ಇಷ್ಟು ವರ್ಷಗಳು ತನ್ನ ಮೇಲೆ ಮಾತ್ಸರ್ಯವನ್ನು ಕಾರಿ, ತನ್ನ ಮಗನನ್ನು ಕೊಂದ ಕರ್ಣನನ್ನು 'ನಿನ್ನ ಅಣ್ಣ' ಎಂದ ಮಾತ್ರಕ್ಕೆ ಬಿಟ್ಟು ಬಿಡುತ್ತಿದ್ದರೆ? ಪಾಂಡವರ ದೃಷ್ಟಿಯಲ್ಲಿ ಪಿತಾಮಹ ಭೀಷ್ಮರ ಜೀವಕ್ಕೆ ಇರುವಷ್ಟು ಪೂಜ್ಯತೆ ಹಾಗೂ ಬೆಲೆ ಕರ್ಣನ ಜೀವಕ್ಕೆ ಇಲ್ಲ."[೧೭] ಈ ಸನ್ನಿವೇಶವು ಎಷ್ಟರ ಮಟ್ಟಿಗೆ ಅರ್ಜುನನ ಸತ್ವಪರೀಕ್ಷೆಯ ಕಾಲವೋ, ಅಷ್ಟರ ಮಟ್ಟಿಗೆ ಕೃಷ್ಣನ ಸತ್ವ ಪರೀಕ್ಷೆಯ ಕಾಲವು ಹೌದು. ಆಗ ಕೃಷ್ಣ ಈ ರೀತಿ ಹೇಳುತ್ತಾನೆ. ಕರ್ಣ ನಿನ್ನ ಮಗನನ್ನು ಕೊಂದವನು ಮತ್ತು ನಿನ್ನ ಅಣ್ಣ ಧರ್ಮರಾಯನನ್ನು ಬೆದರುವಂತೆ ಹೊಡೆದವನು. ಈ ವಿಷಯ ಕೇಳಿ ಮತ್ತೆ ಅರ್ಜುನನ ಸಿಟ್ಟು ಜಾಗೃತವಾಗುತ್ತದೆ. ಮತ್ತೆ ಕೃಷ್ಣ 'ನೀನು ಸೂತ ಸುತನಿಗೆ ಹೆದರಿದ್ದೀಯ, ರಥ ನಡೆಸುವುದನ್ನು ಬಿಟ್ಟು ಈ ಚಕ್ರದಿಂದ ನಾನೇ ಅವನನ್ನು ಕೊಲ್ಲುತ್ತೇನೆ. ನನ್ನ ಕೀರ್ತಿ ಪ್ರಪಂಚಕ್ಕೆಲ್ಲ ಹಬ್ಬುತ್ತದೆ. ಜಯಾಂಗನೆಗೆ ನಾನೇ ಗಂಡನಾಗುತ್ತೇನೆ' ಎಂಬ ಮಾತುಗಳು ತ್ರಿಲೋಕ ವೀರನಾದ ಅರ್ಜುನನಿಗೆ ಹಿಡಿಸಲಿಲ್ಲ. ಆಗ ಅರ್ಜುನ ರಾಹುವಿನ ಹಿಡಿತದಿಂದ ಬಿಡಿಸಿಕೊಂಡು ಬಂದ ಸೂರ್ಯನಂತೆ ಅವನು ಚೇತೋಹಾರಿಯಾದ, ಅರ್ಜುನನಿಂದ ಕರ್ಣನ ಕೊಲೆಯಾಯಿತು.

ಈ ರೀತಿಯಾಗಿ ಕೃಷ್ಣಪ್ಪನವರು ಅರ್ಜುನನು ಕರ್ತವ್ಯ ಮರೆಯದಂತೆ ಶ್ರೀಕೃಷ್ಣ ಚಾಲಕ ಶಕ್ತಿಯಾಗಿ ಕಾರ್ಯ ನಿರ್ವಹಿಸುವುದನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

೪.೪.೫. ಕುರುಬಲದ ಅನೈಕ್ಯ–ಕೌರವರೇಕೆ ಸೋತರು?

ಪ್ರೊ.ಬಿ.ಕೃಷ್ಣಪ್ಪನವರು ಪಾಂಡವರಿಗಿಂತ ಪ್ರಬಲವಾದ ಕೌರವರ ಪಡೆ ಏಕೆ ಸೋತಿತು ಎಂಬುದನ್ನು ವಾಸ್ತವಿಕ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಐಕ್ಯ ಎಂಬ ಶಬ್ದಕ್ಕೆ ಒಂದು ಗುರಿ ಸಾಧನೆಗೆ ಪರಸ್ಪರರಲ್ಲಿ ಇರಬೇಕಾದ ಒಮ್ಮತ, ಒಗ್ಗಟ್ಟು, ಒಕ್ಕೂಟ, ಸಂಘಟನೆ, ಭಿನ್ನಭಾವವಿಲ್ಲದ ಏಕತೆ. ಎಂದು ಹೇಳುಬಹುದು. ಅದೇ ರೀತಿ ಅನೈಕ್ಯ ಎಂದರೆ ಗುರಿ ಸಾಧಕರಲ್ಲಿ ಪರಸ್ಪರ ಸಂಘಟನೆ, ಒಗ್ಗಟ್ಟು ಇಲ್ಲದಿರುವಿಕೆ ಎಂದು ಕೃಷ್ಣಪ್ಪನವರು ಐಕ್ಯ, ಅನೈಕ್ಯ ಪದದ ಅರ್ಥದ ಮೂಲಕ ಲೇಖನವನ್ನು ಬರೆದಿದ್ದಾರೆ.

ಅನೈಕ್ಯ ಸ್ವಬಲವನ್ನು ಕುಗ್ಗಿಸುತ್ತದೆ. ಅದೇ ರೀತಿ ಶತ್ರುವಿನ ಬಲವನ್ನು ವೃದ್ಧಿಸುತ್ತದೆ. ಪ್ರಬಲವಾದ ಕೌರವ ಸೈನ್ಯ ಸರ್ವನಾಶವನ್ನು ಹೊಂದಿತು ಎಂಬುದನ್ನು ಬಿಡಿಸಿ ಈ ಲೇಖನದ ಮೂಲಕ ಕೃಷ್ಣಪ್ಪನವರು ಹೇಳಿದ್ದಾರೆ.

ಹಿರಿಯ ಮಗ ಧೃತರಾಷ್ಟ್ರ ಕುರುಡನಾಗಿದ್ದುದರಿಂದ ಸಿಂಹಾಸನದ ರಾಜ್ಯಭಾರವು ಪಾಂಡುವಿನ ಪಾಲಿಗೆ ಬಂದಿತು. ಸಮರ್ಥ ರಾಜನಾಗಿದ್ದ ಪಾಂಡು ಶಾಪಗ್ರಸ್ತನಾಗಿ ಅವನು ಮಡಿದ ನಂತರ, ಧೃತರಾಷ್ಟ್ರ ಸಿಂಹಾಸನವನ್ನು ಏರಿದ. ಕುರು ಸಿಂಹಾಸನಕ್ಕೆ ಬಾಧ್ಯರಾದ ಹಿರಿಯ ಮಕ್ಕಳನ್ನು ಕುಂತಿ ಹೆತ್ತಾಗ, ಕುರುಕುಲ ಸಿಂಹಾಸನಕ್ಕೆ ಹಕ್ಕುದಾರರಾಗದ ಈ ಪಿಂಡಗಳನ್ನು ಹೆತ್ತು ಫಲವೇನು? ಎಂಬುದಾಗಿ ಗಾಂಧಾರಿ ತನ್ನ ಗರ್ಭವನ್ನು ಹೊಸೆದು ಹಾಕಿ ವ್ಯಾಸನ ಆಗ್ರಹಕ್ಕೆ ಗುರಿಯಾದಳು ಎಂಬುದಾಗಿ ಕೃಷ್ಣಪ್ಪನವರು ವರ್ಣಿಸಿದ್ದಾರೆ.

ಕೌರವರು–ಪಾಂಡವರು ಪ್ರಾಪ್ತವಯಸ್ಕರಾದ ಮೇಲೆ ಧೃತರಾಷ್ಟ್ರ, ವಿದುರ, ದ್ರೋಣ ಮತ್ತು ಉಳಿದ ರಾಜನ ಸಮಕ್ಷಮದಲ್ಲಿ ಭೀಷ್ಮ ಪಿತ್ರಾರ್ಜಿತವಾದ ಕುರುಮಂಡಲವನ್ನು ಇಬ್ಬರಿಗೂ ಹಂಚಿಕೊಟ್ಟು ಧರ್ಮವಂತರಾಗಿ ಬಾಳಿ ಎಂದು ಹರಸಿ ಕಳುಹಿಸಿದ. ಕೌರವರು ಹಸ್ತಿನಾವತಿಯನ್ನು, ಪಾಂಡವರು ಇಂದ್ರಪ್ರಸ್ಥವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡತೊಡಗಿದರು. ನಂತರ ಪಾಂಡವರು ಧರ್ಮದಿಂದ ಆಡಳಿತ ಮಾಡಿ ರಾಜಸೂಯಯಾಗ ಮಾಡಿ ಇದರ ಕೀರ್ತಿ ದಶ ದಿಕ್ಕುಗಳಲ್ಲಿ ಹಬ್ಬಿತು. ಇದು ಕೌರವರ ಅಸೂಯೆಗೆ ಕಾರಣವಾಗಿ ಸ್ನೇಹದ ಸೋಗಿನಲ್ಲಿ ಜೂಜಾಡಿ ವಂಚನೆಯಿಂದ ಅರ್ಧ ರಾಜ್ಯವನ್ನು ಕಬಳಿಸಿದರು. ದ್ರೌಪದಿಗೆ ಅವಮಾನ ಮಾಡಿದರು. ಪಾಂಡವರು ಹನ್ನೆರಡು ವರ್ಷ ವನವಾಸವನ್ನು ಒಂದು ವರ್ಷ ಅಜ್ಞಾತವಾಸವನ್ನು ಮಾಡಿದ ನಂತರ ಅರ್ಧರಾಜ್ಯ ಕೊಡುವ ಒಪ್ಪಂದವಾಯಿತು.

ವನವಾಸ, ಅಜ್ಞಾತವಾಸಗಳನ್ನು ಮುಗಿಸಿದ ಪಾಂಡವರಿಗೆ ರಾಜ್ಯ ಕೊಡುವುದಿಲ್ಲವೆಂದು ದುರ್ಯೋಧನ ತಿರುಗಿಬಿದ್ದ. ಒಂದು ಸೂಜಿಯ ಮೊನೆಯಷ್ಟು ಭೂಮಿಯನ್ನು ಕೊಡುವುದಿಲ್ಲ. ಹಾಗೂ ಯುದ್ಧ ಮಾಡಿ ಹೋರಾಡಿ ರಾಜ್ಯವನ್ನು ಪಡೆಯಲಿ ಎಂದು ಹೇಳಿದ. ಈ ಕಾರಣದಿಂದ ಕುರುಕ್ಷೇತ್ರ ಯುದ್ಧ ಆರಂಭವಾಯಿತು.

ಪಾಂಡವರು ಕೌರವರು ತಮ್ಮ ತಮ್ಮ ಬಲಗಳನ್ನು ಕೂಡಿ ಹಾಕಿಕೊಂಡರು. ಕೌರವರ ಸೈನ್ಯದ ಬಲವನ್ನು ಕುರಿತು ಬಿ.ಕೃಷ್ಣಪ್ಪನವರು ಹೀಗೆ ಹೇಳುತ್ತಾರೆ.

"ಕುರುಭೂಮಿಯಲ್ಲಿ ನೆರೆದ ಒಟ್ಟು ಹದಿನೆಂಟು ಅಕ್ಷೋಹಿಣಿ ಸೈನ್ಯದಲ್ಲಿ ಹನ್ನೊಂದು ಅಕ್ಷೋಹಿಣಿ ಸಂಖ್ಯೆ ಕುರುರಾಯನದು. ಪಾಂಡವರ ಪಕ್ಷದ ಸಂಖ್ಯೆಗಿಂತ ಒಂದೂವರೆ ಪಟ್ಟು ಜಾಸ್ತಿಯಿದೆ. ಹೆಚ್ಚು ಕಡಿಮೆ ಪಾಂಡವ ಸೈನ್ಯದ ಒಬ್ಬ ಯೋಧನಿಗೆ ಕೌರವನ ಸೈನ್ಯದಲ್ಲಿ ಇಬ್ಬರಿದ್ದಾರೆ. ಈ ಮಾತು ಹಸ್ತಿ, ಅಶ್ವರಥ, ಪದಾತಿ, ಚತುರಂಗ ಬಲಕ್ಕೂ ಅನ್ವಯಿಸುತ್ತದೆ. ಸೈನ್ಯ ಸಂಖ್ಯೆಯಲ್ಲಿ ಪಾಂಡವರು ಕೌರವರನ್ನು ಸರಿಗಟ್ಟಲಾರರು. ಇನ್ನು ಕೌರವನ ಕಡೆ ನಿಂತು ಹೋರಾಡುವ ವೀರರ ಮೊತ್ತ ಅದೂ ಕೂಡ ಪಾಂಡವರ ಪಕ್ಷಕ್ಕಿಂತ ಸಂಖ್ಯೆಯಲ್ಲಿ ಶಕ್ತಿಯಲ್ಲಿ ದ್ವಿಗುಣವಾಗಿದೆ. ಭೀಷ್ಮ, ದ್ರೋಣ, ಕರ್ಣ, ಅಶ್ವತ್ಥಾಮ, ಶಲ್ಯ, ಕೃಪ ಅವರ ಹೆಸರು ಕೇಳಿದರೆ ರೋಮಾಂಚನವಾಗುತ್ತದೆ. ಅವರು ಅಸಮ ಸಾಹಸರು. ಅದ್ವಿತೀಯ ವೀರರು, ಆದ್ದರಿಂದಲೇ ವ್ಯಾಸ ಯುದ್ಧದ ಯಾವ ಪರ್ವಕ್ಕೂ ಪಾಂಡವ ಪಕ್ಷದ ವೀರರ ಹೆಸರನ್ನು ಕೊಡುವುದಕ್ಕೆ ಬದಲಾಗಿ, ಭೀಷ್ಮಪರ್ವ, ದ್ರೋಣಪರ್ವ, ಕರ್ಣಪರ್ವ, ಶಲ್ಯ ಪರ್ವ ಎಂದು ಮುಂತಾಗಿ ಕುರು ವೀರರ ಹೆಸರನ್ನು ಕೊಟ್ಟಿದ್ದಾನೆ. ವೀರರಿಗೆ ಉಚಿತ ಸ್ಥಾನ ಕೊಟ್ಟು ಗೌರವಿಸಿದ್ದಾನೆ. ಕುರು ಪಾಂಡವರನ್ನು ತೋಳುಗಳಲ್ಲಿ ಎತ್ತಿ ಆಡಿಸಿ ಮುದ್ದಿಟ್ಟು ಬೆಳೆಸಿದ ಆಜಾನುಬಾಹು ಭೀಷ್ಮ ಎಲ್ಲರಿಗಿಂತಲೂ ಉನ್ನತ ಶ್ರೇಣಿಯಲ್ಲಿದ್ದಾನೆ. ಅವನಿಗೆ ಬಂದಿರುವ ಮುಪ್ಪು ಸಿಂಹಕ್ಕೆ ಬರುವ ಮುಪ್ಪು ಒಂದೇ. ಇಪ್ಪತ್ತೊಂದು ಬಾರಿ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯ ಕುಲವನ್ನೇ ನಾಶ ಮಾಡಿದ. ತನ್ನ ಗುರು ಪರಶುರಾಮನನ್ನೇ ಸೋಲಿಸಿದವನು. ಅವನು ಇಚ್ಛಾಮರಣಿ, ಚಿರಂಜೀವಿ. ಭಾರತದ ಹದಿನೆಂಟು ದಿವಸಗಳ ಯುದ್ಧದಲ್ಲಿ ಹತ್ತು ದಿನಗಳ ಯುದ್ಧವನ್ನು ಒಬ್ಬನೇ ಮಾಡಿ ಅಜೇಯನಾದ ಅವನ ಶಕ್ತಿಗೆ ಎದುರುಂಟೆ? ಅಸಮಾನವಾದ ಅವನ ದೈತ್ಯಶಕ್ತಿಯ ಮುಂದೆ ಪಾಂಡವರು ಕೇವಲ ಹುಲ್ಲೆ ಮರಿಗಳು. ದ್ರೋಣ, ಪಾಂಡವರ, ಕೌರವರ ಬಿಲ್ಲೋಜ. ಅರ್ಜುನನಂತಹ ತ್ರಿಲೋಕ ವೀರನ ಗುರು. ತ್ರಿಲೋಕ ವೀರನ ಪಟ್ಟ ಅರ್ಜುನನಿಗೆ ಸಿದ್ಧಿಸಿದ್ದು ದ್ರೋಣನಿಂದಲೇ. ಅವನು ಲೋಕ ವಿಖ್ಯಾತ ಬಿಲ್ವಾಣ. ಪಿನಾಕಿಯೂ ಅವನ ಎದುರಿಗೆ ನಿಂತು ಹೋರಾಡಲಾರ. ಹೀಗಿರುವಾಗ ಉಳಿದವರ ಪಾಡೇನು? ಕರ್ಣ ಸೂರ್ಯನ ಮಗ, ಪರಶುರಾಮನ ಶಿಷ್ಯ. ಇಂದ್ರನಿಂದ ವರ ಪಡೆದವನು. ಪ್ರಪಂಚ ಪರಾಕ್ರಮಿ. ಅತುಲ ಭುಜಬಲಿ. ಅರ್ಜುನನ ಹೊಯ್ ಕಯ್ಯಾದವನು ಅರ್ಜುನನಿಗೆ ನಾಶವೇ ತನ್ನ ಗುರಿ ಎಂದು ತಿಳಿದವನು. ಅರ್ಜುನನ್ನು ಉಳಿದು ಪಾಂಡವ ಪಕ್ಷದಲ್ಲಿ ಅವನಿಗೆ ಎದುರಾಳಿಗಳೇ ಇಲ್ಲ. ಶಲ್ಯ ಪಾಂಡವರ ಮಾವ. ಅಸಮ ಸಾಹಸಿ. ಅಶ್ವತ್ಥಾಮ ಬಿಲ್ಲೋಜನ

ಮಗ. ರುದ್ರನ ಅವತಾರ. ಪ್ರಚಂಡ ಶಕ್ತಿವಂತ, ಇಚ್ಛಾಮರಣಿ. ಶೀಘ್ರಕೋಪಿಯಾದ ಅವನು ಕೇಣಿಗೊಂಡರೆ ಪ್ರಪಂಚವನ್ನೆ ಸುಟ್ಟು ಉರಿಸಬಲ್ಲ ಶಕ್ತಿಯುಳ್ಳವನು. ಇದರ ಜೊತೆ ಕೃಪ, ಕೃತವರ್ಮ, ಶಕುನಿ, ಭಗದತ್ತ, ಹಾಗೂ ದುಶ್ಯಾಸನ ಮುಂತಾದವರಿಂದ ಕೂಡಿದ ದುರ್ಯೋಧನನ ಸೈನ್ಯ ಶಕ್ತಿಯ ಮುಂದೆ ಪಾಂಡವ ಶಕ್ತಿಯನ್ನು ತೂಗಿ ನೋಡಿದರೆ, ಸಮಪ್ರಮಾಣವೇ ಕಾಣದು. ಭೀಮಾರ್ಜುನರು ಒಬ್ಬ ದುಷ್ಟದ್ಯುಮ್ನ, ಇನ್ನುಳಿದ ಘಟೋತ್ಕಜ, ಅಭಿಮನ್ಯು ಚಿಕ್ಕ ಹುಡುಗರು. ಇವರನ್ನು ಬಿಟ್ಟರೆ ಪಾಂಡವರ ಪಕ್ಷದಲ್ಲಿ ಹೇಳಿಕೊಳ್ಳುವಂತಹ ವೀರರು ಯಾರಿದ್ದಾರೆ? ಪಂಪನಲ್ಲಿ ಒಂದು ಕಡೆ ಹೀಗೆ ಬರುತ್ತದೆ. ಯುದ್ಧದ ಹಿಂದಿನ ದಿನ ದುರ್ಯೋಧನ ತನ್ನ ಆಯುಧಗಳನ್ನು ಆನೆ ಕುದುರೆಗಳನ್ನು ಪೂಜಿಸಿ ಧರ್ಮರಾಯನಿಗೆ "ನಿನ್ನ ಪಕ್ಷದ ಆಯಧಗಳನ್ನು ಆನೆಗಳನ್ನು ಪೂಜೆ ಮಾಡಿ ಸಿದ್ಧ ಮಾಡಿಕೊ, ಎಂದು ಚಾರರ ಮೂಲಕ ಹೇಳಿ ಕಳುಹಿಸುತ್ತಾನೆ. ದುರ್ಯೋಧನನ ಈ ವ್ಯಂಗ್ಯೋಕ್ತಿಗಳ ಹಿನ್ನೆಲೆಯನ್ನು ಅರಿತು ಧರ್ಮರಾಯನು ನಸುನಕ್ಕು 'ನನಗೆ ಪೂಜೆ ಮಾಡಲು ಬೇರೆ ಯಾವ ಆನೆಗಳು ಇಲ್ಲ. ನನ್ನ ತಮ್ಮಂದಿರೆ ನಾಲ್ಕು ಆನೆಗಳು. ಅವುಗಳನ್ನೇ ಪೂಜೆ ಮಾಡಿ ಬಿಡುತ್ತೇನೆ."[೧೮]

ಈ ತೆರನಾದ ಸೈನ್ಯ ಹೊಂದಿದ್ದ ಕೌರವಪಡೆ ಕೊನೆಗೆ ಸೋತು, ಕೌರವ ತೊಡೆ ಮುರಿದು ಸತ್ತ ಕಾರಣವೆಂದರೆ, ಅದು ಅವರಲ್ಲಿದ್ದ ಒಳಜಗಳಗಳಿಂದ. ಪಕ್ಷಪಾತಗಳಿಂದ, ಅನೈಕ್ಯತೆಯಿಂದ. ಕೃಷ್ಣನಂತ ಚಾಲಕ ಶಕ್ತಿ ಕೌರವ ಪಕ್ಷದಲ್ಲಿ ಇರಲಿಲ್ಲ. ಪಾಂಡವರು ವೈಯಕ್ತಿಕ ಭಿನ್ನತೆ ಇಲ್ಲದೆ ಯುದ್ಧ ಮಾಡಿದರು. ಆದರೆ ಕೌರವರು ವೈಯಕ್ತಿಕ ಪ್ರತಿಷ್ಠೆಗಳಿಗೆ ಮುಖ್ಯವಾದರು. ನಾಯಕನಾದವನು ಹಿರಿಯನಾಗಿರಬೇಕು, ಶೂರನಾಗಿರಬೇಕು. ಆದರೆ ಭೀಷ್ಮ, ದ್ರೋಣ, ಕರ್ಣ, ಶಲ್ಯ, ಕೃಪಾದಿಗಳು ಅವನಿಗಿಂತಲೂ ದೊಡ್ಡವರು ಮತ್ತು ಶೂರರು. ಪಾಂಡವರನ್ನು ಗೆದ್ದು ಕೊಡಬೇಕೆಂದು ಎಲ್ಲರನ್ನು ಬೇಡಿಕೊಂಡನು. ಅವರು ತನ್ನ ಋಣದಲ್ಲಿ ಬದುಕಿದ್ದಾರೆ. ತನ್ನ ಉಪ್ಪನ್ನು ಉಂಡಿದ್ದಾರೆ ಎಂಬ ಒಂದು ವಿಚಾರವನ್ನು ಬಿಟ್ಟರೆ ಅವರ ಮೇಲೆ ಹಕ್ಕನ್ನು ಚಲಾಯಿಸಲು ಅವನಿಗೆ ಯಾವ ಶಕ್ತಿಯೂ ಇಲ್ಲ. ಭೀಷ್ಮ, ದ್ರೋಣ, ಕರ್ಣ, ಶಲ್ಯ, ಅಶ್ವತ್ಥಾಮರು ಪರಸ್ಪರ ಕಿತ್ತಾಡಿದರು. ಒಬ್ಬರಿಗೆ ಕಟ್ಟಿದ ಸೇನಾಪತಿ ಪಟ್ಟವನ್ನು ಮತ್ತೊಬ್ಬರು ವಿರೋಧಿಸಿದರು. ಎಲ್ಲರೂ ತಾನೇ ವೀರ ಎಂಬ ಅಹಂ ಅವರಲ್ಲಿತ್ತು. ಅವರು ಒಗ್ಗಟ್ಟಾಗಿ ಹೋರಾಟಲಿಲ್ಲ ಹಾಗೂ ಏಕಾಂಗಿಯಾಗಿ ಹೋರಾಡಿದರು. ಮನಃ ಪೂರ್ವಕವಾಗಿ ಹೋರಾಡಲಿಲ್ಲ ಎಂದು ಕೃಷ್ಣಪ್ಪನವರು ಕೌರವರ ಅನೈಕ್ಯವನ್ನು ಹೇಳಿದ್ದಾರೆ.

ಕೌರವರ ಪರ ಹೋರಾಡಿದವರ ಕುರಿತು ಬಿ.ಕೃಷ್ಣಪ್ಪನವರು ಈ ರೀತಿಯಾಗಿ ಹೇಳಿದ್ದಾರೆ. "ದುರ್ಯೋಧನನ ಅನ್ನದ ಋಣವನ್ನು ತಿಂದದ್ದರಿಂದ ಅವರ ದೇಹವೇನೊ ಕೌರವ ಪಕ್ಷದಲ್ಲಿತ್ತು, ಆದರೆ ಮನಸ್ಸೆಲ್ಲವೂ ಪಾಂಡವರ ಗೆಲುವಿಗಾಗಿ ಆಸೆ ಪಟ್ಟಿತ್ತು. ದೇಹ ಇಲ್ಲಿ, ಮನಸ್ಸು ಅಲ್ಲಿ. ಪಾಂಡವರು ಧರ್ಮ ಮಾರ್ಗಿಗಳು, ಧರ್ಮ ಉಳಿಸಲು ಭೀಷ್ಮ ದ್ರೋಣಾದಿಗಳು ಹಾಗೆ ನಡೆದುಕೊಳ್ಳುವ ಅನಿವಾರ್ಯತೆ ಇತ್ತು ಎನ್ನಬಹುದು. ಒಟ್ಟಿನಲ್ಲಿ ಅವರು ಕುರುರಾಯನಿಗೆ ಅನ್ಯಾಯವನ್ನು ಮಾಡಿದರೆಂದೇ ಅರ್ಥವಲ್ಲವೇ? ಪಾಂಡವರು ಭೀಷ್ಮನ ಪ್ರೀತಿಯ ಮೊಮ್ಮಕ್ಕಳು. ದ್ರೋಣನ ಪ್ರೀತಿಯ ಶಿಷ್ಯರು.

ಕರ್ಣನ ರಕ್ತವನ್ನು ಹಂಚಿಕೊಂಡು ಹುಟ್ಟಿದ ತಮ್ಮಂದಿರು, ಶಲ್ಯನ ಅಳಿಯಂದಿರು. ಹೀಗೆ ಒಂದಲ್ಲ ಒಂದು ವಿಧದಿಂದ ಸಂಬಂಧ ಅವರನ್ನು ಬಿಗಿಸಲ್ಪಟ್ಟಿತ್ತು. ಭೀಷ್ಮನ ಎದುರು ಶಿಖಂಡಿಯನ್ನು ತಂದು ಭೀಷ್ಮನನ್ನು ಕೊಂದರು. ದ್ರೋಣನಿಗೆ ಎಷ್ಟೇ ಸಾಮರ್ಥ್ಯವಿದ್ದರೂ ಧರ್ಮರಾಯನನ್ನು ಹಿಡಿಯಲಿಲ್ಲ. ಅರ್ಜುನ ಎದುರಾಗಿ ನಿಲ್ಲಲಿಲ್ಲ, 'ಅಶ್ವತ್ಥಾಮೋ ಹತಃ ಕುಂಜರ' ಎಂದು ದ್ರೋಣರನ್ನು ಕೊಂದರು. ಹಾಗೂ ತಾನು ಪಾಂಡವರ ಅಣ್ಣ ಎಂದು ತಿಳಿದಾಗ ಕರ್ಣನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಸರ್ಪಾಸ್ತ್ರವನ್ನು ಮರುಪ್ರಯೋಗ ಮಾಡದೇ ತಾನೇ ಅರ್ಜುನನಿಂದ ಹತನಾದ. ಶಲ್ಯ ಸಹ ಅದೇ ರೀತಿ ಪಕ್ಷಪಾತಿಯಾದ. ಈ ತೆರನಾದ ಕೌರವರ ಪಕ್ಷಪಾತ ಗುಣವು ಹಾಗೂ ಒಳಜಗಳಗಳು, ತಮ್ಮ ತಮ್ಮಲ್ಲೇ ಕಿತ್ತಾಟದಿಂದ ಪಾಂಡವರ ಶಕ್ತಿ ವೃದ್ಧಿಸಿತು. ಹಾಗೆ ಕೌರವರ ಶಕ್ತಿ ನಾಶ ಹೊಂದಿತು ಎಂದು ಬಿ.ಕೃಷ್ಣಪ್ಪನವರು ಇದರಲ್ಲಿ ವಾಸ್ತವಿಕವಾದ ದೃಷ್ಟಿಯಿಂದ ಚರ್ಚೆ ಮಾಡಿದ್ದಾರೆ.

ಒಂದು ರೀತಿಯಲ್ಲಿ ಪಾಂಡವರ ಪರವಾಗಿ ಕೌರವರ ಜೊತೆ ಇರುವವರೆ ದುರ್ಯೋಧನನಿಗೆ ಅನ್ಯಾಯವನ್ನು ಮಾಡಿದರು. ಐಕ್ಯತೆಯಿಂದ ಪಾಂಡವರು ಗೆದ್ದರು, ಅನೈಕ್ಯತೆಯಿಂದ ಕೌರವರು ಸೋತರು. ಕೌರವನಿಗೆ ಮಾಡಿದ ಅನ್ಯಾಯವನ್ನು ಧರ್ಮ ರಕ್ಷಣೆ ಎಂದು ಹೇಳಲಾಗಿದೆ.

೫.೬.೬. ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಕ್ರ

ಪ್ರೊ.ಬಿ.ಕೃಷ್ಣಪ್ಪನವರ ಈ ಲೇಖನವು ಕನ್ನಡ ಸಾಹಿತ್ಯದಲ್ಲಿ ಬಹಳ ಚರ್ಚೆಯಾಗಿರುವಂತಹದ್ದು. ಕನ್ನಡದ ಶ್ರೇಷ್ಠ ಸಾಹಿತಿಗಳಾದ ಕುವೆಂಪು ಅವರ ಕಾದಂಬರಿಗಳಲ್ಲಿ ಬರುವ ದಲಿತ ಪಾತ್ರಗಳ ಜೀವನ ಚಿತ್ರಣವನ್ನು ಕೃಷ್ಣಪ್ಪನವರು ಚರ್ಚಿಸಿದ್ದಾರೆ.

ಕೃಷ್ಣಪ್ಪನವರು ಕುವೆಂಪು ಸೃಷ್ಟಿ ವಿಧಾನದಲ್ಲಿರುವ ಸಂದಿಗ್ಧಗಳನ್ನು ಹೀಗೆ ಹೇಳಿದ್ದಾರೆ.

೧. "ಶೂದ್ರರಾದರು ರಾಮಕೃಷ್ಣಾಶ್ರಮದಲ್ಲಿ ಬೆಳೆದು, ರಾಮಕೃಷ್ಣ, ಅರವಿಂದ ಮುಂತಾದವರ ತತ್ವಶಾಸ್ತ್ರದಲ್ಲಿ ಆಳವಾದ ನಂಬಿಕೆಯನ್ನಿಟ್ಟು, ಹಿಂದೂಧರ್ಮವನ್ನು ಒಪ್ಪಿಕೊಳ್ಳುವುದು. ಅದೇ ಕಾಲಕ್ಕೆ ಆ ಮತದ ಈ ಮತದ ಕೊಳೆ ಸಾಕಿನ್ನು ಬನ್ನಿ ಮನುಜ ಮತಕೆ ಎಂದು ಕೈಬೀಸಿ ಕರೆಯುವುದು.

೨. ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು ಎಂದು ಸಮಾಜವಾದಿ ತತ್ವವನ್ನು ಒಪ್ಪಿಕೊಳ್ಳುವುದು. ಅದೇ ಸಂದರ್ಭಕ್ಕೆ ಸಮಾಜವಾದದ ವಿರುದ್ಧವಾದ ಜಮೀನುದಾರಿ ಊಳಿಗಮಾನ್ಯ ಪದ್ಧತಿಯನ್ನು ಬೆಂಬಲಿಸುವುದು.

೩. ಹಿಂದೂ ಜಾತಿವ್ಯವಸ್ಥೆಯ ಬ್ರಾಹ್ಮಣಶಾಹಿಯನ್ನು ವಿರೋಧಿಸುವುದು. ಅದಕ್ಕೆ ಶೂದ್ರರು ದಲಿತ ಶೋಷಣೆಯನ್ನು ಮೌನವಾಗಿ ಒಪ್ಪಿಕೊಳ್ಳುವುದು."[೧೯]

ಕೃಷ್ಣಪ್ಪನವರು ಕುವೆಂಪು ಕಾದಂಬರಿಗಳಲ್ಲಿ ಮೇಲಿನ ತೆರನಾದ ಅಂಶಗಳನ್ನು ಚರ್ಚಿಸಿದ್ದಾರೆ. ಸಾಮಾಜಿಕವಾಗಿ ಪ್ರಧಾನವಾಗಿ ನಾಲ್ಕು ಜಾತಿಗಳು ಕಾದಂಬರಿಯಲ್ಲಿ ಕಂಡುಬರುತ್ತವೆ. ೧, ಬ್ರಾಹ್ಮಣರು, ೨. ಗೌಡರು–ಒಕ್ಕಲಿಗರು, ೩. ಮುಸ್ಲಿಮರು ೪. ಕ್ರಿಶ್ಚಿಯನ್ನರು.

ಬ್ರಾಹ್ಮಣರು ಹಳ್ಳಿಗಳಿಗೆ ಮೌಢ್ಯವನ್ನೇ ಉಪದೇಶ ಮಾಡಿ, ಬೂದಿ, ಕುಂಕುಮ ಹಚ್ಚಿ ಮಂತ್ರ ಹಾಕುವುದು ಈ ತೆರನಾದ ತಂತ್ರಗಳಿಂದ ಜನರನ್ನು ಶೋಷಣೆ ಮಾಡುತ್ತಾರೆ. ವೇದ-ಶಾಸ್ತ್ರ ಪುರಾಣಗಳು ಇವರಿಗೆ ಬಂಡವಾಳ. ಇವರು ಜಾತಿಶ್ರೇಣಿಯ ಮೇಲುವರ್ಗದವರಾಗಿದ್ದಾರೆ. ಬ್ರಾಹ್ಮಣ ಬೌದ್ಧಿಕ ಶೋಷಣೆಯ ಮುಖ.

ಒಕ್ಕಲಿಗರು ಅಥವಾ ಗೌಡರು ಭೂಮಾಲೀಕರಾಗಿದ್ದಾರೆ. ಬ್ರಾಹ್ಮಣರನ್ನು ಬಿಟ್ಟರೆ, ನಾವು ಉತ್ತಮ ಜಾತಿಯವರು ಎಂದುಕೊಂಡಿದ್ದಾರೆ. ಬಿಲ್ಲವರು, ಹಸಲರು, ಕುಂಬಾರರು, ಹಳೆಪೈಕದವರು ಇತ್ಯಾದಿ ಕೆಳಗಿನವರು ಮತ್ತು ಎಲ್ಲ ಅಸ್ಪೃಶ್ಯರು ಇವರ ಹೊಲ ಗದ್ದೆಯಲ್ಲಿ ದುಡಿಯುವ ವರ್ಗಗಳಾಗಿವೆ. ಗೌಡರು ಆಸ್ತಿಯನ್ನು ಭಾಗ ಮಾಡಿಕೊಳ್ಳುವಂತೆ ದಲಿತರನ್ನು ಭಾಗ ಮಾಡಿಕೊಳ್ಳುತ್ತಿದ್ದರು. ಗೌಡ ಆರ್ಥಿಕ ಶೋಷಣೆಯ ಮುಖವಾಗಿದ್ದಾನೆ.

ಮುಸ್ಲಿಮರಾದರೋ ವ್ಯಾಪಾರ, ಕಳ್ಳತನ, ದರೋಡೆಗಳಲ್ಲಿ ತೊಡಗಿರುವ ಇವರು ಹೊನ್ನಾಳಿ ಹೊಡೆತಕ್ಕೆ ಪ್ರಸಿದ್ಧರಾಗಿದ್ದಾರೆ. ಇವರನ್ನು ಕಂಡರೆ ಎಲ್ಲರಿಗೂ ಭೀತಿ. ಹಣಕ್ಕಾಗಿ ಏನು ಬೇಕಾದರೂ ಮಾಡುವ ಇವರನ್ನು ಗೌಡರು ತಮ್ಮ ಸ್ವಾರ್ಥಕ್ಕೆ ಅಸ್ತ್ರಗಳನ್ನಾಗಿ ಮಾಡಿಕೊಂಡಿದ್ದಾನೆ.

ಕ್ರೈಸ್ತರು ಧರ್ಮಪ್ರಚಾರದಲ್ಲಿ ತೊಡಗಿದ್ದರು ಎಂಬುದು ಕಂಡುಬರುತ್ತದೆ ಎಂದು ಕೃಷ್ಣಪ್ಪನವರು ಹೇಳಿದ್ದಾರೆ.

ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ ಕಂಡುಬರುವ ದಲಿತ ಪಾತ್ರಗಳು ಬೌದ್ಧಿಕ, ಮಾನಸಿಕ ಮತ್ತು ದೈಹಿಕ ಆರ್ಥಿಕ ದಿವಾಳಿತನಕ್ಕೆ ಬ್ರಾಹ್ಮಣರು ಪರೋಕ್ಷವಾಗಿಯೂ, ಗೌಡರು ಪ್ರತ್ಯಕ್ಷವಾಗಿಯೂ ಜಾತಿಯ ಪಿರಮಿಡ್ ರಚನೆಯಲ್ಲಿ ಬ್ರಾಹ್ಮಣನ ಪಾದ ಶೂದ್ರನ ತಲೆಯ ಮೇಲಿದ್ದರೆ, ಶೂದ್ರನ ಪಾದಗಳು ದಲಿತನ ತಲೆಯ ಮೇಲಿದೆ. ದಲಿತರು ಮೇಲಿನ ಬ್ರಾಹ್ಮಣರಿಗಿಂತ ಶೂದ್ರನಿಂದ ನೇರ ಶೋಷಣೆಗೆ ಒಳಗಾಗುತ್ತಿದ್ದಾರೆ. ಈ ಕಾದಂಬರಿಯ ದಲಿತ ಪಾತ್ರಗಳು ಕೇವಲ ಹೆಂಡ-ಮಾಂಸ, ಕಾಮ ಇತ್ಯಾದಿ ಮಣ್ಣಿನ ಸ್ಥಿರದಲ್ಲಿಯೇ ಬದುಕಿ ಪ್ರತಿಭಟಿಸದೆ ಘರ್ಷಿಸದೆ ಹೋಗುತ್ತದೆ. ಕುವೆಂಪು ಒಡೇರದಿಣ್ಣೆ ಮೇಲೆ ನಿಂತು ದಲಿತ ಬದುಕನ್ನು ನೋಡಲು ಸಾಧ್ಯವೇ ಹೊರತು, ಹೊಲೆಯರ ಗುಡಿಸಲಿನಲ್ಲಿ ಕುಂತು ನೋಡಲಾರರು ಎಂದು ಬಿ.ಕೃಷ್ಣಪ್ಪನವರು ವಿಶ್ಲೇಷಿಸಿದ್ದಾರೆ.

ಊಳಿಗಮಾನ್ಯಪದ್ಧತಿ ಮುಂತಾದ ಅಂಶಗಳ ಕುರಿತು ಕೃಷ್ಣಪ್ಪನವರು ಹೀಗೆ ಹೇಳಿದ್ದಾರೆ. "ಜೀತ ಉಳಿಗಮಾನ್ಯ ಪದ್ಧತಿಯ ಒಂದು ಮುಖವಾದರೆ, ಲೈಂಗಿಕ ಶೋಷಣೆ ಅದರ ಇನ್ನೊಂದು ಮುಖ. ಹಣವಂತರು, ಭೂಮಾಲೀಕರು ದಲಿತ ಹೆಣ್ಣುಮಕ್ಕಳನ್ನು ತಮ್ಮ ತೀಟೆ ತೀರಿಸಿಕೊಳ್ಳಲು ಪತ್ರಾವಳಿಯಂತೆ ಬಳಸಿಕೊಳ್ಳುತ್ತಾರೆ. ಬೇರೆ ಸಂದರ್ಭಗಳಲ್ಲಿ ಕಾಡುವಂತೆ ಮಡಿ, ಮೈಲಿಗೆ, ಅಸ್ಪೃಶ್ಯತೆಗಳು ಆಗ ಅವರನ್ನು ಕಾಡುವುದಿಲ್ಲ. ಗದ್ದೆಯ ಬದು, ಹೊಟ್ಟಿನ ಬಣವೆ ಸಂದು ಇವೇ ವಿಹಾರ

ಸ್ಥಳವಾಗುತ್ತದೆ. ಕುಳವಾಡಿ ಸಣ್ಣಮಗಳು ಪುಟ್ಟಿಯನ್ನು ಬಣವೆ ಸಂದಿನಲ್ಲಿ ತಿಮ್ಮಪ್ಪ ಹೆಗ್ಗಡೆ ಕೆಡಿಸಿದಾಗ ಲೇಖಕರು ಹೀಗೆ ಬರೆಯುತ್ತಾರೆ. 'ಚೆನ್ನಾಗಿ ಮೇಯಿಸಿ ಶುಚಿಯಾಗಿಟ್ಟು ಒಳ್ಳೆಯ ಆಹಾರ ತಿನ್ನಿಸಿ ಸಾಕಿದ್ದ ಮನೆಯ ಚೀನಿ ನಾಯಿ ಸೆಣಬಿನ ಸಮಯ ಬಂದಾಗ ದದ್ದು ಹಿಡಿದು ವಿಕಾರವಾಗಿದ್ದರೂ ಲೆಕ್ಕಿಸದೆ ಬೀದಿ ನಾಯಿಯ ಸಂಗ ಬಯಸಿ ಸರಪಣಿ ಕಾಂಪೌಂಡುಗಳಿಂದ ನುಣುಚಿಕೊಂಡು ಪೋಲಿ ಬೀಳುವಂತೆ ತಿಮ್ಮ ಕೀಳುಜಾತಿಯವರ ಹಟ್ಟಿ, ಬಿಡಾರ ಗುಡಿಸಲು ಜೋಪಡಿಗಳಲ್ಲಿಯೂ ಸುಖವನ್ನರಸಿ ಪಡೆದಿದ್ದನು.' "ತಿಮ್ಮಪ್ಪನನ್ನು ಶುಚಿಯಾದ ಚೀನಿ ನಾಯಿಗೂ, ಪುಟ್ಟಿ ಸಮೇತ ಉಳಿದ ಎಲ್ಲ ದಲಿತ ಹೆಣ್ಣುಗಳನ್ನು ದದ್ದು ಹಿಡಿದ ವಿಕಾರವಾದ ಬೀದಿ ನಾಯಿಗಳಿಗೂ ಹೋಲಿಸಿರುವ ಲೇಖಕರ ಹೀನೋಪಮೆ ಖಂಡನೀಯ ಅಲ್ಲದೆ, ದಲಿತ ಹೆಣ್ಣುಮಕ್ಕಳ ಮಾನಭಂಗಕ್ಕಿಂತ, ಗೌಡರ ಹುಡುಗನ ಪಾವಿತ್ರ್ಯತೆ ಹಾಳಾಯಿತಲ್ಲ ಎಂದು ಲೇಖಕರ ಕಳಕಳಿ ಇಡೀ ಮಾನವೀಯತೆಯ ಮುಖಕ್ಕೆ ಮಸಿ ಬಳಿದಂತಾಗಿದೆ"[೨೦] ಎಂದು ಬಿ.ಕೃಷ್ಣಪ್ಪನವರು ಕುವೆಂಪು ಅವರ ಕಾದಂಬರಿಯ ಚಿತ್ರಣವನ್ನು ಕೊಟ್ಟಿದ್ದಾರೆ. ಸೇಸಿ ಮಗನನ್ನು ಕಾಪಾಡಿದ ಪ್ರಸಂಗವನ್ನು ದುರಾಲೋಚನೆ ಎಂದು ಕರೆದಿರುವುದು, ಗುತ್ತಿ ಕಾವೇರಿಯನ್ನು ನೋಡಿರುವುದನ್ನು ಹರೆಯದ ಕೊಂಬಿನ ಹೋರಿ ಹಂದಿ ಉಪಮೆಗಳನ್ನು ಕೊಟ್ಟಿರುವುದು ಮುಂತಾದ ಅಂಶಗಳು ದಲಿತರನ್ನು ಶೋಷಣೆಗೆ ಒಳಪಡಿಸು ವಂತವಾಗಿರುವುದನ್ನು ಕಾದಂಬರಿಯಲ್ಲಿ ನಾವು ನೋಡಬಹುದು.

ಕನ್ನಡದ ಶ್ರೇಷ್ಠ ಲೇಖಕರಾದ ಕುವೆಂಪು ಅವರು ದಲಿತರ ಪಾತ್ರಗಳನ್ನು ನೈಜವಾಗಿ ಹೇಳುವ ಬದಲು ಕೆಟ್ಟ ಹಾಗೂ ಹೊಲಸುಗಳಿಗೆ ಹೋಲಿಕೆ ಮಾಡಿದ್ದಾರೆ. ಇದು ಅವರ ಊಳಿಗಮಾನ್ಯ ಪದ್ಧತಿಯ ಪ್ರತೀಕವಾಗಿ ನಿಲ್ಲುತ್ತದೆ. ಜಮೀನ್ದಾರ ವ್ಯವಸ್ಥೆಯ ಪರವಾದ ಅಭಿಪ್ರಾಯಗಳನ್ನು ಸಹ ಈ ಕಾದಂಬರಿಗಳು ಹೊಂದಿವೆ. ಕೊನೆಯದಾಗಿ ಬಿ.ಕೃಷ್ಣಪ್ಪನವರು ಹೀಗೆ ಹೇಳಿದ್ದಾರೆ. "ಶೋಷಣೆ, ಅನ್ಯಾಯ, ಪಕ್ಷಪಾತಗಳನ್ನು ಮೆಚ್ಚಿ ಖುಷಿಪಡುವುದಾದರೆ, ಅದು ಅತ್ಯಂತ ಕೀಳುಮಟ್ಟದ ಅಭಿರುಚಿ, ಕೀಳುದರ್ಜೆಯ ಸಂಸ್ಕೃತಿ, ಇದು ಜನತಾವಿರೋಧಿ ಅಮಾನುಷ ಪ್ರವೃತ್ತಿಯಲ್ಲವೇ? ಶೋಷಣೆ ಅನ್ಯಾಯಗಳ ಬಗ್ಗೆ ಚಕಾರವನ್ನು ಎತ್ತದೇ ರಸಾನಂದದ ಹೆಸರಿನಲ್ಲಿ ಇವರು ಭಯಂಕರ ತಪ್ಪು ಮಾಡುತ್ತಿದ್ದಾರೆ. ಹೇಸಿಗೆಯನ್ನು ರೇಷ್ಮೆಯಲ್ಲಿ ಕಟ್ಟಿಟ್ಟು ರೇಷ್ಮೆಯ ಕಲಾವಂತಿಕೆಯನ್ನು ಹೊಗಳುವ ಹೆಡ್ಡರಿಗೂ ಇವರಿಗೂ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಕಲೆಗಿಂತ ಬದುಕು ದೊಡ್ಡದು. ಮೂಗು ದೊಡ್ಡದೇ ಹೊರತು ಮೂಗುತಿಯಲ್ಲ. ಬದುಕಿನ ಬಗ್ಗೆ ಕಾಳಜಿ ವಹಿಸಿದ ಸಾಹಿತ್ಯಸೃಷ್ಟಿ ಹಾಗೂ ವಿಮರ್ಶೆ ಎರಡು ಅಪಾಯಕಾರಿ ಹಾಗೂ ಹೊಣೆಗೇಡಿ"[೨೧]ಎಂದು ಬಿ.ಕೃಷ್ಣಪ್ಪನವರು ಅಭಿಪ್ರಾಯ ಪಟ್ಟಿದ್ದಾರೆ.

ಅಡಿಟಿಪ್ಪಣಿಗಳು

೧. ಪ್ರೊ.ಬಿ.ಕೃಷ್ಣಪ್ಪ, ೧೯೯೯, **ಪ್ರೊ.ಬಿ.ಕೃಷ್ಣಪ್ಪ ಚಿಂತನೆಗಳು–ಬರಹಗಳು,** ಪು.೨

೨. ಅದೇ, ಪು.೭

೩. ಅದೇ, ಪು.೧೨

೪. ಅದೇ, ಪು.೧೪

೫. ಅದೇ, ಪು.೨೪

೬. ಅದೇ, ಪು.೩೮

೭. ಅದೇ, ಪು.೪೮

೮. ಅದೇ, ಪು.

೯. ಅದೇ, ಪು.೮೨

೧೦. ಅದೇ, ಪು.೯೩

೧೧. ಅದೇ, ಪು.೯೯

೧೨. ಅದೇ, ಪು.೧೧೫

೧೩. ಅದೇ, ಪು.೧೨೨

೧೪. ಅದೇ, ಪು.೧೬೧

೧೫. ಅದೇ, ಪು.೧೬೬

೧೬. ಅದೇ, ಪು.೧೭೦

೧೭. ಅದೇ, ಪು.೧೯೨

೧೮. ಅದೇ, ಪು.೧೯೮

೧೯. ಅದೇ, ಪು.೨೧೨

೨೦. ಅದೇ, ಪು.೨೨೮

ಅಧ್ಯಾಯ ಐದು

ಪ್ರೊ.ಬಿ.ಕೃಷ್ಣಪ್ಪ: ಜೀವನ–ಸಾಧನೆ

ಅಧ್ಯಾಯ ಐದು

ಪ್ರೊ.ಬಿ.ಕೃಷ್ಣಪ್ಪ: ಜೀವನ–ಸಾಧನೆ

ಪ್ರೊ.ಬಿ.ಕೃಷ್ಣಪ್ಪನವರ ಜೀವನ ಮತ್ತು ಸಾಧನೆಯನ್ನು ಅಥವಾ ವ್ಯಕ್ತಿತ್ವ ಹಾಗೂ ಬರಹಗಳನ್ನು ನೋಡುವುದಾದರೆ ಕರ್ನಾಟಕ ದಲಿತ ಚಳುವಳಿಯ ಚಿಂತನೆ ಮಾಡಿದಂತೆಯೇ ಆಗುತ್ತದೆ. ಅಷ್ಟರ ಮಟ್ಟಿಗೆ ಕೃಷ್ಣಪ್ಪನವರ ಬದುಕು–ಬರಹ ದಲಿತ ಚಳುವಳಿಯೊಂದಿಗೆ ಬೆಸೆದುಕೊಂಡಿದೆ. ದಲಿತ ಚಳುವಳಿಯ ಕ್ರಿಯಾಶೀಲತೆಗೆ ಕಾರಣವಾದ ಕೃಷ್ಣಪ್ಪನವರು ಬಹಳಷ್ಟು ಹೋರಾಟಗಳನ್ನು ಮಾಡುತ್ತಾ ಶೋಷಣೆಗೆ ಒಳಗಾದ ಜನರ ಶಕ್ತಿಯಾಗಿದ್ದರು.

ಸತತ ಮೂರು ದಶಕಗಳ ಕಾಲ ದಲಿತ ವರ್ಗದವರ ಗಟ್ಟಿದನಿಯಾಗಿದ್ದ ಬಿ.ಕೃಷ್ಣಪ್ಪನವರು ಎಪ್ಪತ್ತರ ದಶಕದಲ್ಲಿ ದಲಿತ ಸಂಘರ್ಷ ಸಮಿತಿಯನ್ನು ಹುಟ್ಟು ಹಾಕುವುದರ ಜೊತೆಗೆ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಅಪಮಾನಕರವಾದ ಧಾರ್ಮಿಕ ಕಟ್ಟುಪಾಡುಗಳು, ಜಾತಿಪದ್ಧತಿ, ಮಲ ಹೊರುವ ಪದ್ಧತಿ, ಆರ್ಥಿಕ ಅಸಮಾನತೆ ಹಾಗೂ ಸಾಮಾಜಿಕ ವೈಷಮ್ಯಗಳನ್ನು ಕಿತ್ತೊಗೆಯಲು ಅವಿರತವಾಗಿ ಶ್ರಮಿಸಿದರು. ಈ ಕಾರಣಕ್ಕಾಗಿ ಹಲವು ಸಾಮಾಜಿಕ ಚಳುವಳಿ, ಹೋರಾಟಗಳನ್ನು ಮಾಡಿ ದಲಿತ–ಹಿಂದುಳಿದ–ಅಲ್ಪಸಂಖ್ಯಾತ ಸಮುದಾಯಗಳನ್ನು ಸಂಘಟಿಸುವಲ್ಲಿ ಯಶಸ್ವಿಯಾಗಿ "ಕರ್ನಾಟಕದ ಅಂಬೇಡ್ಕರ್" ಎಂದು ಖ್ಯಾತಿ ಪಡೆದಿದ್ದರು.

ಕಟ್ಟಾ ಅಂಬೇಡ್ಕರ್‌ವಾದಿಯಾಗಿ ಈ ನಾಡ ದಲಿತರ ನೋವಿನೊಂದಿಗೆ ಸ್ಪಂದಿಸಿದ ಪ್ರಮುಖ ವ್ಯಕ್ತಿಗಳಲ್ಲಿ ಕೃಷ್ಣಪ್ಪನವರು ಒಬ್ಬರು. ಅಂಬೇಡ್ಕರ್‌ವಾದವೊಂದೇ ದಲಿತರ ವಿಮೋಚನೆಗೆ ದಾರಿ ಎಂದು ಹೇಳಿದ್ದರು. ಅವರ ಜೀವನ ಮತ್ತು ಸಾಧನೆ ಈ ಮುಂದಿನಂತಿದೆ.

ಪ್ರೊ.ಬಿ.ಕೃಷ್ಣಪ್ಪನವರ ಜನನ–ಕುಟುಂಬದ ಹಿನ್ನೆಲೆ

ಪ್ರೊ.ಬಿ.ಕೃಷ್ಣಪ್ಪನವರ ತಂದೆ ತಾಯಿಗಳಾದ ದಾಸಪ್ಪ ಹೆಚ್. ಬಸಪ್ಪ ಚೌಡಮ್ಮ ದಂಪತಿಗಳು ದಾವಣಗೆರೆಯ ಜಿಲ್ಲೆ ಹರಿಹರದ ಗುತ್ತೂರು ಗ್ರಾಮದಲ್ಲಿ ವಾಸವಾಗಿದ್ದರು. "ಡಿ.ಹೆಚ್.ಬಸಪ್ಪನವರು

ಸ್ವಾತಂತ್ರ್ಯ ಪೂರ್ವದಲ್ಲಿ ಮಿಲಿಟರಿಗೆ(ದಂಡು ಪ್ರದೇಶದಲ್ಲಿದ್ದ ಸೈನಿಕರಿಗೆ) ಆಹಾರ ಸಾಮಗ್ರಿಗಳನ್ನು ಸರಬರಾಜು”[೧] ಮಾಡುವ ಕೆಲಸ ಮಾಡುತ್ತಿದ್ದರು. ಅವರ ತಾಯಿಯು ಗೃಹಿಣಿಯಾಗಿದ್ದರು. ಈಕೆ ದೈವ ಭಕ್ತೆಯಾಗಿದ್ದರು. ಹರಿಹರದ ಹರಿಹರೇಶ್ವರ ಆಕೆಯ ಇಷ್ಟದೈವ. ಬಡತನದಲ್ಲೂ ಉತ್ಸಾಹದಿಂದಲೇ ಜೀವನ ನಡೆಸುತ್ತಿದ್ದರು. ಅವರದು ದೊಡ್ಡ ಕುಟುಂಬವಾಗಿತ್ತು. ಬಡತನದ ಮಧ್ಯೆಯೂ ತಮ್ಮ ಮಕ್ಕಳನ್ನು ಚೆನ್ನಾಗಿ ಓದಿಸಬೇಕು ಎಂದು ಹಗಲಿರುಳು ಶ್ರಮಿಸಿದರು.

ಕೃಷ್ಣಪ್ಪನವರು “೧೯೩೮ ಜೂನ್ ೯ರಂದು ದಾವಣಗೆರೆ ಗುತ್ತೂರು ಗ್ರಾಮದಲ್ಲಿ ಬಸಪ್ಪ-ಚೌಡಮ್ಮ ಅವರಿಗೆ ೧೪ ಜನ ಮಕ್ಕಳಲ್ಲಿ ಮೊದಲ ಮಗನಾಗಿ ಜನಿಸಿದರು.”[೨] ದೇಶಕ್ಕೆ ೧೯೪೭ರಲ್ಲಿ ಸ್ವಾತಂತ್ರ್ಯ ಬಂದ ನಂತರ ದಂಡಿನವರು ಇಲ್ಲದಿದ್ದರಿಂದ ಬಸಪ್ಪನವರಿಗೆ ಕೆಲಸವಿಲ್ಲದಂತಾಗಿ ಅವರು ಕೂಲಿ ಮಾಡಿ ಸಂಸಾರ ನಿರ್ವಹಣೆ ಮಾಡುತ್ತಿದ್ದರು.

ಶಿಕ್ಷಣ : ಕೃಷ್ಣಪ್ಪನವರು ಹರಿಹರದ ಪ್ರಾಥಮಿಕ ಶಾಲೆಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಆರಂಭಿಸಿದರು. ಓದಿನಲ್ಲಿ ಸದಾ ಮುಂದಿರುತ್ತಿದ್ದ ಕೃಷ್ಣಪ್ಪನವರು ಶಾಲೆಯಲ್ಲಿ ಶಿಕ್ಷಕರ ಪ್ರೀತಿಗೆ ಪಾತ್ರರಾಗಿದ್ದರು. ತಾಯಿಯ ಪ್ರಭಾವದಿಂದ ಭಜನೆ ಪದಗಳನ್ನು ಕಲಿತು, ಸುಲಲಿತವಾಗಿ ಇಂಪಾಗಿ ಹಾಡುತ್ತಿದ್ದ ಬಾಲಕ ಕೃಷ್ಣಪ್ಪನನ್ನು ಕಂಡರೆ ನೆರೆಹೊರೆಯವರಿಗೆ ಹೆಚ್ಚು ಇಷ್ಟ.

ಕೃಷ್ಣಪ್ಪನವರನ್ನು “ಪ್ರೌಢಶಾಲಾ ಶಿಕ್ಷಣಕ್ಕಾಗಿ ದಾವಣಗೆರೆಯ ಡಿ.ಆರ್.ಎಂ. ಪ್ರೌಢಶಾಲೆಗೆ ಸೇರಿಸಿದರು. ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿದ ನಂತರ ಕೃಷ್ಣಪ್ಪನವರನ್ನು ಪಿ.ಯು.ಸಿ. ಕಾಲೇಜು ಶಿಕ್ಷಣಕ್ಕೆ ಚಿತ್ರದುರ್ಗದಲ್ಲಿ ಸೇರಿಸಲಾಯಿತು.”[೩] ಪಿ.ಯು.ಸಿ. ಪಾಸು ಮಾಡಿದ ನಂತರ ಡಾಕ್ಟರ್ (ಎಂ.ಬಿ.ಬಿ.ಎಸ್.) ಕೋರ್ಸಿಗೆ ಪ್ರಯತ್ನಿಸಿ ವಿಫಲರಾದ ಮೇಲೆ ಬಿ.ಎಸ್ಸಿ. ಪದವಿಯನ್ನು ಚಿತ್ರದುರ್ಗದಲ್ಲಿ ಪ್ರಥಮದರ್ಜೆ ಕಾಲೇಜಿನಲ್ಲಿ ಶಿಕ್ಷಣ ಮುಂದುವರಿಸಿದರು. ಸಾಹಿತ್ಯದ ಒಲವು ಹೆಚ್ಚಾಗಿ ಕಾಡಿದ್ದರಿಂದಲೋ ಏನೋ ಬಿ.ಎಸ್ಸಿ. ತೊರೆದು ಬಿ.ಎ. ಸೇರಿದರು. ಬಿ.ಎ. ಪದವಿ ಪೂರ್ಣಗೊಳಿಸಿದ ಮೇಲೆ ಸ್ನಾತಕೋತ್ತರ(ಎಂ.ಎ. ಕನ್ನಡ) ಪದವಿಯನ್ನು ಮೈಸೂರಿನಲ್ಲಿ ಪಡೆದರು.

ಕೃಷ್ಣಪ್ಪನವರ ಬಾಲ್ಯದಲ್ಲಿ ನಡೆದ ಘಟನೆಗಳು

ಒಂದನೇ ಘಟನೆ

ಹರಿಹರ ನಗರದಲ್ಲಿ ಕೆಲವು ದಲಿತ ಕುಟುಂಬಗಳು “ಹರಿಹರೇಶ್ವರ ದೇವಾಲಯದ ದೀಪಕ್ಕೆ ಎಣ್ಣೆ ಕೊಡುವ ಸಂಪ್ರದಾಯದವರಾಗಿದ್ದರು. ಪ್ರತಿ ಶನಿವಾರ ಮನೆಯಿಂದ ಎಣ್ಣೆ ತೆಗೆದುಕೊಂಡು ದೇವಾಲಯಕ್ಕೆ ಹೋಗಿ ದೇವಾಲಯದಲ್ಲಿ ಚಪ್ಪಲಿ ಬಿಡುವ ಸ್ಥಳದಲ್ಲಿ ನಿಂತುಕೊಂಡಿದ್ದು, ಅಲ್ಲಿಗೆ ಪುರೋಹಿತರು ತರುತ್ತಿದ್ದ ದೇವರ ದೀಪಕ್ಕೆ ಎಣ್ಣೆ ಸುರಿದು ಭಕ್ತಿ ತೋರುವ ರೂಢಿ ದಲಿತರದ್ದಾಗಿತ್ತು.”[೪] ಪುರೋಹಿತರಿಗೆ ಈ ಪದ್ಧತಿಯು ಕ್ರಮೇಣ ಕಿರಿಕಿರಿ ಅನಿಸಿದೆ. ಕೇವಲ ದಲಿತರ ಎಣ್ಣೆ ಹಾಕುವ

ಭಕ್ತಿಯಿಂದ ನನಗೆ ಯಾವ ಲಾಭ? ಎಂದು ತಿಳಿದು ಒಂದು ದಿನ ಪುರೋಹಿತ ಯೋಚನೆಯನ್ನು ಕಾರ್ಯ ರೂಪಕ್ಕೆ ತಂದಿದ್ದಾನೆ. ಇದು ದಲಿತರ ಎಣ್ಣೆಭಕ್ತಿಗೆ ಸಂಚಕಾರ ತಂದಿತು. ರಾಮದಾಸ ಅನ್ನುವ ಒಬ್ಬ ಬ್ರಾಹ್ಮಣ ಎಣ್ಣೆ ತಂದ ದಲಿತರಿಗೆ ನಿಂದಿಸಿದ. ಅದೂ ಅಲ್ಲದೇ ಎಣ್ಣೆಯನ್ನು ಬಹಿಷ್ಕರಿಸಿದ. ಹೊಲೆ–ಮಾದಿಗರು ಅಂತೆಲ್ಲಾ ಬೈದಾಡಿದನು. ಹಾಗೆ ದಲಿತರ ಆತ್ಮಬಲವೇ ಕುಗ್ಗಿ ಹೋಗಿದೆ. ಚಿಕ್ಕ ವಯಸ್ಸಿನ ಬಿ.ಕೃಷ್ಣಪ್ಪನವರಿಗೆ ದಲಿತ ಅಪಮಾನವು ಕಳವಳಕ್ಕೆ ಕಾರಣವಾಯಿತು. ತಕ್ಷಣದಲ್ಲಿ ದಲಿತ ಕೇರಿಯ ಕೆಲವು ಯುವಕರನ್ನು ಒಗ್ಗೂಡಿಸಿ ಸಂಘಟಿತ ದಲಿತರನ್ನು ಮೆರವಣಿಗೆಯ ಮೂಲಕ ದೇವಾಲಯದ ಬಳಿಗೆ ಬಂದು ಅಸ್ಪೃಶ್ಯತೆಯ ವಿರುದ್ಧ ಪ್ರತಿಭಟಿಸಿದರು. ಪುರೋಹಿತಶಾಹಿಗಳು ಸಹ ಬೀದಿಗಿಳಿದು ದಲಿತರ ವಿರುದ್ಧ ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿತು. ಎರಡೂ ಕಡೆ ಹಿರಿಯರ ಮಧ್ಯಸ್ಥಿಕೆಯಿಂದ ಪ್ರತಿಭಟನೆ ಶಾಂತವಾಯಿತು.

ಎರಡನೆಯ ಘಟನೆ

ಕೃಷ್ಣಪ್ಪನವರ ಪ್ರೌಢಶಾಲಾ ಶಿಕ್ಷಣದ ಅವಧಿಯಲ್ಲಿ ನಡೆದ ಘಟನೆಯಿದು. ಭಾರತ ದೇಶ ಸ್ವಾತಂತ್ರ್ಯ ಬಂದು ಇನ್ನೂ ದಶಕವೂ ಆಗಿರಲಿಲ್ಲ. ಅವರಿಗೆ ೧೩–೧೪ ವರ್ಷ ವಯಸ್ಸು. ಇಂದೂ ಸಹ ಅಸ್ಪೃಶ್ಯತೆ ಜೀವಂತವಾಗಿರುವಾಗ, ಇನ್ನು ಅಂದು ಇವತ್ತಿನ ನೂರುಪಟ್ಟು ತೀಕ್ಷ್ಣವಾಗಿತ್ತು. "ದಾವಣಗೆರೆ ನಗರವಾಗಿದ್ದರೂ ಅಲ್ಲಿನ ಸಾರ್ವಜನಿಕ ಸ್ಥಳಗಳಲ್ಲಿ ವಿಶೇಷವಾಗಿ ಹೋಟೆಲ್‌ಗಳಲ್ಲಿ ಅಸ್ಪೃಶ್ಯತೆ ಆಚರಣೆಯು ತೀವ್ರವಾಗಿತ್ತು. ರೈಲ್ವೇಸ್ಟೇಷನ್ ಬಳಿಯ ಒಂದು ಹೋಟೆಲ್‌ನಲ್ಲಿ ದಲಿತರು ಕಡು ಅವಮಾನಕ್ಕೆ ಒಳಗಾಗುತ್ತಿದ್ದರು. ಅಲ್ಲಿ ಕಾಫಿ, ಟೀ ಮತ್ತು ತಿಂಡಿಯನ್ನು ದಲಿತರಿಗೆ ತೆಂಗಿನ ಚಿಪ್ಪಿನಲ್ಲಿ ಕೊಡುತ್ತಿದ್ದರು."[೫] ಅದು ಅನೇಕ ವರ್ಷಗಳಿಂದ ರೂಢಿಯಾಗಿತ್ತು. ಅದರ ವಿರುದ್ಧ ದಲಿತರಾಗಲಿ ಅಥವಾ ದಲಿತೇತರರಾಗಲಿ ಆಕ್ಷೇಪಿಸಿರಲಿಲ್ಲ. ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದ ಕೃಷ್ಣಪ್ಪನವರಿಗೆ ಅಸ್ಪೃಶ್ಯತೆಯ ಬಿಸಿ ತಟ್ಟಿತು. ಅವರು ಜಾಗೃತಗೊಂಡು ಅಸ್ಪೃಶ್ಯತೆಯ ವಿರುದ್ಧ ಪ್ರತಿಭಟಿಸಿದರು. ಸಹಪಾಠಿ ದಲಿತ ವಿದ್ಯಾರ್ಥಿಗಳನ್ನು ಮತ್ತಿತರನ್ನು ಸಂಘಟಿಸಿ ಹೋಟೆಲ್ ಮಾಲೀಕನ ಅಸ್ಪೃಶ್ಯತೆಯ ಆಚರಣೆ ವಿರುದ್ಧ ಪ್ರತಿಭಟಿಸಿದರು. ಅವರು ತಕ್ಷಣವೇ ಎಚ್ಚರಗೊಂಡು ತಡ ಮಾಡದೆ, ದಲಿತರ ಬಳಕೆಗಿಟ್ಟ ತೆಂಗಿನ ಚಿಪ್ಪುಗಳನ್ನು ಮತ್ತು ಪ್ರತ್ಯೇಕ ಲೋಟಗಳನ್ನು ಹೊರಕ್ಕೆ ಬಿಸಾಡಿದರು. ಚಿಕ್ಕ ವಯಸ್ಸಿನ ಕೃಷ್ಣಪ್ಪನವರ ಪ್ರತಿಭಟನೆಗೆ ಫಲ ದಕ್ಕಿತು. "ಬೆಳೆಯುವ ಸಿರಿ ಮೊಳಕೆಯಲ್ಲಿ" ಎನ್ನುವ ಹಾಗೆ ಕೃಷ್ಣಪ್ಪನವರ ಹೋರಾಟದ ಬದುಕು ಚಿಕ್ಕ ವಯಸ್ಸಿನಲ್ಲಿ ಪ್ರಾರಂಭವಾಯಿತು.

ಮೂರನೆಯ ಘಟನೆ

ಬಿ.ಕೃಷ್ಣಪ್ಪನವರ ಮನೆಯೊಳಗೆ ಘಟಿಸಿದ ಮೂರನೇ ಘಟನೆ ಮುಂದೆ ಕೃಷ್ಣಪ್ಪನವರ ವೈಚಾರಿಕ ಚಿಂತನೆಗೆ ಒಳಪಡಿಸಿದಂತಹ ಘಟನೆ ಎಂದು ಹೇಳಬಹುದು. ಒಂದು ದಿನ ಕೃಷ್ಣಪ್ಪನವರ ತಾಯಿ

ಮತ್ತು ತಂಗಿ ಹೊಲಕ್ಕೆ ಶೇಂಗಾ ಕೀಳಲು ಹೋಗಿದ್ದರು. ಮನೆಯಲ್ಲಿ ಮತ್ತೊಬ್ಬ ತಂಗಿಯೊಡನೆ ಕೃಷ್ಣಪ್ಪ ಮನೆಯಲ್ಲಿದ್ದರು. ಆ ಸಮಯದಲ್ಲಿ ತಂಗಿಯು ಆಕಸ್ಮಿಕವಾಗಿ ಉರಿಯುವ ಒಲೆಯ ಮೇಲೆ ಬಿದ್ದಳು. ತಕ್ಷಣವೇ ಬೆಂಕಿಯ ಕೆನ್ನಾಲಿಗೆಯು ಮೈಯನ್ನು ಆವರಿಸಿತು. ಗಾಬರಿಯಲ್ಲಿ ಕೃಷ್ಣಪ್ಪನವರು ತಂಗಿಯನ್ನು ಎದೆಗವಚಿಕೊಂಡು ಆಸ್ಪತ್ರೆಗೆ ಹೋದರು. ಕೇರಿಯ ಜನರು ಹಿಂಬಾಲಿಸಿದರು. ಹೊಲಕ್ಕೆ ಹೋಗಿದ್ದ ತಾಯಿಗೆ ವಿಷಯ ತಿಳಿಯಿತು. ತಕ್ಷಣವೇ ಮನೆಗೆ ಹಿಂತಿರುಗಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದ ತಂಗಿ ಮರಣ ಹೊಂದಿದಳು.

ಅಂತ್ಯಸಂಸ್ಕಾರ ಮುಗಿಸಿದ ನಂತರ ಹರಿಜನ ಕೇರಿಯ ಜನ ಬಸಪ್ಪ–ಚೌಡಮ್ಮರೊಂದಿಗೆ ಜೋಯಿಸರ ಬಳಿ ಹೋಗಿ ತಮಗೆ ಕೇಡು ಏಕಾಯಿತೆಂದು ವಿಚಾರಿಸಿದರು. ಅದಕ್ಕೆ "ಜೋಯಿಸರು ನೀವು ಹೊಲೆ–ಮಾದಿಗರು ಮಾಂಸ ತಿನ್ನುವವರು. ನಿಮ್ಮ ಮನೆಯಲ್ಲಿ ಶಿವಲಿಂಗ ಇರಬಾರದು. ಪೂಜೆಯನ್ನಂತೂ ಮಾಡಲೇಬಾರದು"[೧] ಆದ್ದರಿಂದ ಇಂದು ನಿಮ್ಮ ಮಗಳು ಸತ್ತಿದ್ದಾಳೆ. ನಾಳೆ ನಿಮ್ಮ ಮನೆಗೆ ಬೆಂಕಿ ಬೀಳುತ್ತೆ, ನಾಳಿದ್ದು ನಿಮ್ಮ ಕೇರಿಯೇ ಬೆಂಕಿ ಹತ್ತಿ ಉರಿಯುತ್ತೆ. ಆದ್ದರಿಂದ ಮೊದಲು ಆ ಶಿವಲಿಂಗವನ್ನು ನಿಮ್ಮ ಮನೆಯಿಂದ ಹೊರಗೆ ತನ್ನಿ. ನದಿಗೆ ಬಿಡಿ ಎಂದು ಹೇಳಿದರು.

ಬಾಲಕ ಕೃಷ್ಣಪ್ಪ ತಂಗಿಯ ಸಾವಿಗೂ ಮತ್ತು ಶಿವಲಿಂಗಕ್ಕೂ ಯಾವುದೇ ಸಂಬಂಧವಿಲ್ಲ ಎಂದು ವಾದಿಸಿದರು. ಆದರೆ ಮಗುವಿನ ಸಾವಿನಿಂದ ದುಃಖತಪ್ತವಾಗಿದ್ದ ಕುಟುಂಬಕ್ಕೆ ಹಾಗೂ ನೆರೆಹೊರೆಯವರ ಒತ್ತಾಯಕ್ಕೆ ಮಣಿದು ಕಡೆಗೂ ಬಾಲಕ ಕೃಷ್ಣಪ್ಪ ಒಲ್ಲದ ಮನಸ್ಸಿನಿಂದ ವಿಭೂತಿ ಶಿವಲಿಂಗ ಹಾಗೂ ಶಿವಲಿಂಗದ ಮೇಲಿನ ರುದ್ರಾಕ್ಷಿಯನ್ನು ತುಂಗಾ ನದಿಯಲ್ಲಿ ಬಿಟ್ಟು ನಮಸ್ಕಾರ ಮಾಡಿದರು. ಈ ಘಟನೆ ಕೃಷ್ಣಪ್ಪ ಅವರ ಮನಸ್ಸನ್ನು ವೈಚಾರಿಕ ಚಿಂತನೆ ಕಡೆಗೆ ವರ್ಗಾಯಿಸಿತು.

ವೃತ್ತಿ ಜೀವನ

ಶಿಕ್ಷಣ ಮುಗಿದ ನಂತರ ಅಂದರೆ ಎಂ.ಎ. ಮುಗಿದ ನಂತರ ಕೃಷ್ಣಪ್ಪನವರು ಬದುಕು ಸಾಗಿಸಲು ಆರಿಸಿಕೊಂಡಿದ್ದು ಅಧ್ಯಾಪಕ ವೃತ್ತಿಯನ್ನು. ಕೃಷ್ಣಪ್ಪನವರು ಮೊದಲು ವೃತ್ತಿ ಜೀವನವನ್ನು ೧೯೬೭ರಲ್ಲಿ ಕನ್ನಡ ಅಧ್ಯಾಪಕರಾಗಿ ಮಂಡ್ಯ ಜಿಲ್ಲೆಯ ಕೆ.ಆರ್.ನಗರದಲ್ಲಿ ಆರಂಭಿಸಿದರು. ನಂತರ ಶಿವಮೊಗ್ಗ ಜಿಲ್ಲೆಯ ಸಾಗರದ 'ಲಾಲ್ ಬಹದ್ದೂರ್ ಶಾಸ್ತ್ರಿ' ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದರು. ಆಗ ಅಲ್ಲಿ ಕನ್ನಡದ ಹೆಸರಾಂತ ಕವಿ ಗೋಪಾಲಕೃಷ್ಣ ಅಡಿಗರು ಪ್ರಿನ್ಸಿಪಾಲರಾಗಿದ್ದರು.[೨] ರಾಜರತ್ನಂ, ಬೇಂದ್ರೆಯವರ ಪದ್ಯಗಳನ್ನು ಮನಮುಟ್ಟುವಂತೆ ಹಾಡುತ್ತಿದ್ದ ಅಧ್ಯಾಪಕ ಕೃಷ್ಣಪ್ಪನವರು ಅವರ ಭಾವಾರ್ಥವನ್ನು ವಿದ್ಯಾರ್ಥಿಗಳಿಗೆ ಸರಳವಾಗಿ ಹೇಳುತ್ತಿದ್ದರಿಂದ ಬಹಳ ಬೇಗ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದರು.

ಲಾಲ್ ಬಹದ್ದೂರ್ ಶಾಸ್ತ್ರಿ ಕಾಲೇಜಿನ ಒಳ ರಾಜಕೀಯದಿಂದ ಬೇಸತ್ತು ಅಡಿಗರು ಪ್ರಾಂಶುಪಾಲರ ಹುದ್ದೆ ಬಿಟ್ಟರು. ಬಿ.ಕೃಷ್ಣಪ್ಪನವರು ಸಹ ಆ ಕಾಲೇಜು ಬಿಟ್ಟು ಭದ್ರಾವತಿಯ ಸರ್.ಎಂ.ವಿಶ್ವೇಶ್ವರಯ್ಯ

ಕಾಲೇಜಿಗೆ ಅಧ್ಯಾಪಕರಾಗಿ ಸೇರಿದರು. ನಂತರ ಸರ್.ಎಂ.ವಿ. ಕಾಲೇಜಿನಲ್ಲಿ ರೀಡರ್, ಪ್ರೊಫೆಸರ್, ವೈಸ್ ಪ್ರಿನ್ಸಿಪಾಲ್, ಪ್ರಿನ್ಸಿಪಾಲರಾಗಿ ಕಾರ್ಯ ನಿರ್ವಹಿಸಿದ ಕೃಷ್ಣಪ್ಪನವರು ಪ್ರಿನ್ಸಿಪಾಲರಾಗಿದ್ದ ವೇಳೆಯಲ್ಲಿ ಕುವೆಂಪು ವಿಶ್ವವಿದ್ಯಾಲಯದ ಶೈಕ್ಷಣಿಕ ಸಂಯೋಜನಾ ಸಮಿತಿಯ ಅಧ್ಯಕ್ಷರಾಗಿ, ಶೈಕ್ಷಣಿಕ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು. ಅವರು ಏಪ್ರಿಲ್ ೩೦, ೧೯೯೫ರಲ್ಲಿ ಸ್ವಯಂ ನಿವೃತ್ತಿ ಪಡೆದು ಬೆಂಗಳೂರಿಗೆ ಬಂದು ನೆಲೆಸಿದರು.

ವಿವಾಹ ಮತ್ತು ಕೌಟುಂಬಿಕ ಜೀವನ

ಪ್ರೊ.ಬಿ.ಕೃಷ್ಣಪ್ಪನವರ ಕೌಟುಂಬಿಕ ಬದುಕು ಅರ್ಥಪೂರ್ಣವಾದುದು. ಪ್ರೀತಿ, ವಾತ್ಸಲ್ಯ ನೆಲೆಯಲ್ಲಿ ರೂಪಿತವಾಗಿತ್ತು. ಕುಟುಂಬದ ಸದಸ್ಯರ ಸಹಕಾರ ಮತ್ತು ಸ್ನೇಹಕ್ಕೆ ಯಾವ ತೊಂದರೆಯಿರಲಿಲ್ಲ. ಪ್ರಬುದ್ಧ ತಿಳುವಳಿಕೆಯ ಹೊಂದಾಣಿಕೆಯು ಅವರ ಕುಟುಂಬದಲ್ಲಿ ತುಂಬಿತ್ತು. ಹುಟ್ಟೂರು ಹರಿಹರ ಬಿಟ್ಟು ಎಷ್ಟೋ ವರ್ಷಗಳಾಗಿದ್ದರೂ ಕೂಡ ತಮ್ಮ ಮೂಲ ಕುಟುಂಬದೊಡನೆ ಸಂಪರ್ಕದಲ್ಲಿ ಯಾವ ವ್ಯತ್ಯಯವಾಗಿರಲಿಲ್ಲ. ಹುಟ್ಟೂರಿನ ಬೇರುಗಳು ಆಳವಾಗಿ ತಳವೂರಿದ್ದವು. ಕೃಷ್ಣಪ್ಪನವರು ಅಣ್ಣ ತಮ್ಮಂದಿರು, ಅಕ್ಕತಂಗಿಯರ ಬಗ್ಗೆ ಅಪಾರ ಗೌರವ ಘನತೆ ಹೊಂದಿದ್ದರು. ಕೃಷ್ಣಪ್ಪನವರದು ದೊಡ್ಡ ಕುಟುಂಬ. ಮೂವರು ತಮ್ಮಂದಿರು ಬಿ.ಶೇಖರಪ್ಪ, ಬಿ.ಮಾರುತಿ ಹಾಗೂ ಹರಿಹರಪ್ಪ ಮತ್ತು ಮೂವರು ತಂಗಿಯರಾದ ಹಾಲಮ್ಮ, ಗಂಗಮ್ಮ, ರೇಣುಕ ಕುಟುಂಬದ ಸದಸ್ಯರಾಗಿದ್ದರು.

ವಿವಾಹ

ಕೃಷ್ಣಪ್ಪನವರು ಅಧ್ಯಾಪಕ ವೃತ್ತಿಗೆ ೧೯೬೮-೬೯ರಲ್ಲಿ ಸರ್.ಎಂ.ವಿ. ಕಾಲೇಜಿಗೆ ಸೇರಿದಾಗ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳಲ್ಲಿ ಇಂದಿರಾ ಎಂಬುವರು ಇದ್ದರು. ಇತರ ವಿದ್ಯಾರ್ಥಿಗಳಂತೆ ಇಂದಿರಾ ಸಹ ಕೃಷ್ಣಪ್ಪನವರ ನಿರರ್ಗಳ ಬೋಧನಾ ಶೈಲಿ, ವೈಚಾರಿಕತೆ, ಭಾಷಾಜ್ಞಾನ, ಅಪಾರ ವಿದ್ಯಾಸಂಪತ್ತು, ಪಾಂಡಿತ್ಯ ಹಾಗೂ ಶಿಸ್ತಿಗೆ ಮಾರುಹೋದರು. ೧೯೭೧ರ ವೇಳೆಗೆ ಕೃಷ್ಣಪ್ಪನವರು ವಿದ್ಯಾರ್ಥಿಗಳ ಆರಾಧ್ಯ ಆದರ್ಶ ಶಿಕ್ಷಕರಾಗಿದ್ದರು. ಇವರ ಜನಪ್ರಿಯತೆಯನ್ನು ಸಹಿಸದ ಕೆಲವು ಸಹ ಅಧ್ಯಾಪಕರು ಇವರ ಮುಂಗೋಪ, ನೇರ ನುಡಿಗಳನ್ನು ನೆಪ ಮಾಡಿಕೊಂಡು ಕೃಷ್ಣಪ್ಪನವರ ಮಾತುಗಳಿಂದ ತಮಗೆಲ್ಲ ತುಂಬಾ ನೋವಾಗುತ್ತಿದೆ ಎಂದು ಅಳಲು ವ್ಯಕ್ತಪಡಿಸಿದರು. ಇದರಿಂದ ಮನನೊಂದು ಕೃಷ್ಣಪ್ಪನವರು ಕಾಲೇಜು ಬಿಡುತ್ತಾರೆ ಎಂಬ ಸುದ್ದಿ ಕಾಲೇಜಿನಲ್ಲಿ ಹರಡಿತು.

ಇದನ್ನು ಕೇಳಿದ ಇಂದಿರಾ ಅವರಿಗೆ ತುಂಬಾ ದುಃಖವಾಯಿತು. ಉತ್ತಮ ಅಧ್ಯಾಪಕರೊಬ್ಬರು ಕಾಲೇಜು ಬಿಟ್ಟು ಹೋಗುವುದು ಅವರಿಗೆ ಇಷ್ಟವಾಗಲಿಲ್ಲ. ಹಾಗೆಂದು ನೇರವಾಗಿ ಹೋಗಿ ಹೇಳುವ ಧೈರ್ಯವಾಗಲಿಲ್ಲ. ಹಾಗಾಗಿ ಇಂದಿರಾ ಅವರು ಕೃಷ್ಣಪ್ಪನವರಿಗೆ ಒಂದು ಪತ್ರ ಬರೆದು ವಿದ್ಯಾರ್ಥಿಗಳ ಒತ್ತಡ್ಯಷ್ಟಿಯಿಂದ ಕಾಲೇಜನ್ನು ಬಿಡಬಾರದೆಂದು ಕೇಳಿಕೊಂಡರು. ಕೃಷ್ಣಪ್ಪನವರು ಸಹ ವಿದ್ಯಾರ್ಥಿಗಳ ಒತ್ತಡ್ಯಷ್ಟಿಯಿಂದ ಕಾಲೇಜನ್ನು ಬಿಡಲಿಲ್ಲ. ಹೀಗೆ ಆರಂಭವಾದ ಇಂದಿರಾ-ಕೃಷ್ಣಪ್ಪನವರ ಪರಿಚಯ

ಮುಂದೆ ಪ್ರೇಮವಾಗಿ ಮಾರ್ಪಟ್ಟಿತು. ಇಂದಿರಾ ಮೂರು ವರ್ಷದ ಪದವಿಯ ವ್ಯಾಸಂಗದ ನಂತರ ೧೯೭೧ರಲ್ಲಿ ಕಾಲೇಜನ್ನು ಬಿಟ್ಟರು. ಅನಂತರ ಅವರು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು.

ಕೃಷ್ಣಪ್ಪನವರು ಭದ್ರಾವತಿಯಲ್ಲಿ 'ಸಾಹಿತ್ಯ ಚಿಂತನೆ' ಎಂಬ ವೇದಿಕೆ ಸ್ಥಾಪಿಸಿದರು. ಇಂದಿರಾ ಸಹ ಅದರ ಸದಸ್ಯರಾದರು. ವೇದಿಕೆಯಲ್ಲಿ ಸಾಹಿತ್ಯ ಕುರಿತಂತೆ ಉಪನ್ಯಾಸ, ಚರ್ಚೆ ನಡೆಸುತ್ತಿದ್ದರು. ಈ ವೇದಿಕೆಯಲ್ಲಿ ಶಿವರಾಮ ಕಾರಂತ, ಎಸ್.ಎಲ್.ಭೈರಪ್ಪ, ಸಿ.ಪಿ.ಕೃಷ್ಣಕುಮಾರ್ ಅವರಂತಹ ದೊಡ್ಡ ಬರಹಗಾರರನ್ನು ಕರೆಸಿ ಚರ್ಚೆ ನಡೆಸುತ್ತಿದ್ದರು.

ಆ ವೇಳೆಗಾಗಲೇ ಇಂದಿರಾ-ಕೃಷ್ಣಪ್ಪನವರ ಸ್ನೇಹ ಗಾಢಪ್ರೇಮಕ್ಕೆ ತಿರುಗಿತ್ತು. ಆಕಸ್ಮಾತ್ತಾಗಿ ಇಂದಿರಾ ಬಚ್ಚಿಟ್ಟ ಪ್ರೇಮಪತ್ರಗಳು ಕುಟುಂಬಕ್ಕೆ ಗೊತ್ತಾಗಿ, ಇಂದಿರಾ ಅವರ ಮನೆಯಲ್ಲಿ ಜ್ವಾಲಾಮುಖಿ ಸ್ಫೋಟಗೊಂಡಿತು. ಆಗ ಇಂದಿರಾ ಅವರನ್ನು ಅಜ್ಞಾತವಾಸಕ್ಕೆ ತಳ್ಳುವರು. ಇಂದಿರಾ ಅವರಿಗೆ ಹೊರ ಜಗತ್ತಿನ ಎಲ್ಲಾ ಸಂಪರ್ಕಗಳನ್ನು ಕಡಿತಗೊಳಿಸಿದರು.

ಜಾತಿಯ ಒಳಗೆ ಮದುವೆ ಮಾಡುವ ಪ್ರಯತ್ನ ಜೋರಾಗಿ ನಡೆಯಿತು. ಆದರೆ ಇಂದಿರಾ ಗೆಳತಿಯ ಸಹಾಯದಿಂದ ಕೃಷ್ಣಪ್ಪನವರಿಗೆ ಪತ್ರ ಕಳುಹಿಸಿ, ತಮಗೆ ಬಲವಂತದಿಂದ ಮದುವೆ ಮಾಡಲು ಮನೆಯವರು ಪ್ರಯತ್ನ ಮಾಡುತ್ತಿರುವುದಾಗಿಯೂ, ಅದು ತಮಗೆ ಇಷ್ಟವಿಲ್ಲವೆಂದು ತಮ್ಮನ್ನು ಬಂಧನದಿಂದ ಮುಕ್ತಗೊಳಿಸುವಂತೆಯೂ ಕೋರಿದರು. ಅನಂತರ ಇಂದಿರಾ ಅವರು ದೃಢನಿಶ್ಚಯ ಮಾಡಿ ತಂದೆ-ತಾಯಿ ಎಲ್ಲರನ್ನು ಬಿಟ್ಟು ಉಟ್ಟ ಬಟ್ಟೆಯಲ್ಲೇ ಯಾರಿಗೂ ಗೊತ್ತಾಗದ ಹಾಗೆ ಮನೆಯಿಂದ ಹೊರಬಂದರು.

ಕಡೂರು ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಬಿ.ಕೃಷ್ಣಪ್ಪನವರು ಇಂದಿರಾ ಅವರನ್ನು ವಿವಾಹವಾದರು. ಇದು ಆ ದಿನಗಳಲ್ಲಿ ದೊಡ್ಡ ಸಂಚಲನವನ್ನು ಉಂಟುಮಾಡಿತು. ಇದರಿಂದ ಸ್ಫೂರ್ತಿಗೊಂಡು ಅನೇಕ ಯುವಕ-ಯುವತಿಯರು ಪ್ರೇಮವಿವಾಹ ಮಾಡಿಕೊಂಡರು. ಆಗ ಯುವಜನ ಸಭಾದಲ್ಲಿದ್ದ 'ಕೆ.ಪಿ.ಪೂರ್ಣಚಂದ್ರ ತೇಜಸ್ವಿ'ಯವರು ತಮಾಷೆಯಗಿ "ಏನ್ರಪ್ಪಾ ಸಮಾಜವಾದಿ ಕಾರ್ಯಕ್ರಮ ಮಾಡಿ ಅಂದ್ರೆ ಭದ್ರಾವತಿಯವರು ಬರೇ ಮದುವೆ ಸಮಸ್ಯೆ ಹಿಡ್ಕೊಂಡು ಬರ್‍ತೀರಲ್ಲಪ್ಪ" ಎಂದಿದ್ದರಂತೆ. ಆ ಮಟ್ಟಿಗೆ ಬಿ.ಕೃಷ್ಣಪ್ಪ ಮತ್ತು ಇಂದಿರಾ ಅವರ ಮದುವೆ ಯುವಪ್ರೇಮಿಗಳಿಗೆ ಪ್ರೇರಣೆಯಾಯಿತು. ೭೦ರ ದಶಕದಲ್ಲಿ ಆದ ಅಂತರಜಾತಿ ವಿವಾಹ ಅದು ಕೃಷ್ಣಪ್ಪನವರು ಬ್ರಾಹ್ಮಣ ಜಾತಿಯ ಹೆಣ್ಣುಮಗಳನ್ನು ಮದುವೆಯಾಗಿ ಜಾತಿವಾದಿಗಳ ನಿದ್ದೆಗೆಡಿಸಿದ್ದರು ಎಂದು ಹೇಳಬಹುದು.

ಸಾಂಸಾರಿಕ ಜೀವನ

ಮದುವೆಯಾದ ಹೊಸತರಲ್ಲಿ ಈ ಜೋಡಿಯು ಸಂಬಂಧಿಕರನ್ನು, ಸಮಾಜವನ್ನು ಎದುರು ಹಾಕಿಕೊಂಡು ಬಾಳಬೇಕಾದ್ದರಿಂದ ಕೆಲ ಬಗೆಯ ಕಷ್ಟಗಳು ಎದುರಾದವು. ದೃಢಚಿತ್ತರಾದ ಕೃಷ್ಣಪ್ಪ-

ಇಂದಿರಾ ಆ ಸವಾಲುಗಳನ್ನು ಎದುರಿಸಿ ಯಶಸ್ವಿಯಾಗಿ ತಮ್ಮ ಜೀವನ ಸಾಗಿಸಿದರು. ತಮ್ಮ ಮದುವೆಯಾದ ನಂತರದ ದಿನಗಳನ್ನು ನೆನಪಿಸಿಕೊಳ್ಳುತ್ತ ಇಂದಿರಾ ಅವರು ಹೀಗೆ ಹೇಳುತ್ತಾರೆ.

"ನಮಗೆ ಬಂಗಲೆ, ಕಾರು, ಸೈಟು, ವಜ್ರ-ವೈಡೂರ್ಯಗಳ ಆಕಾಂಕ್ಷೆಗಳಾವುವೂ ಇರಲಿಲ್ಲ. ತುಂಬಾ ಸರಳವಾದ ಹಾಗೂ ಸ್ಪಷ್ಟವಾದ ಮತ್ತು ಅತಿ ಪ್ರಾಮಾಣಿಕವಾದ ಬದುಕು ನಮ್ಮದಾಗಿತ್ತು. ಅವರ ಜೀವನದಲ್ಲಿ ಸಂಘಟನೆ, ಹೋರಾಟ, ಬರವಣಿಗೆ ಇವುಗಳಲ್ಲಿ ತೊಡಗುತ್ತಿದ್ದರು. ಯಾವ ವೇಳೆಯಲ್ಲೇ ಆಗಲಿ ಆರೋಗ್ಯವನ್ನು ಲೆಕ್ಕಿಸದೆ ಮಳೆ, ಬಿಸಿಲು, ಗಾಳಿ, ಚಳಿ ಎನ್ನದೆ, ಹಗಲು ರಾತ್ರಿಯೆನ್ನದೇ ಒಂದು ಮಂಕಿಕ್ಯಾಪ್, ಸ್ವೆಟರ್, ಹೆಗಲು ಚೀಲ ಮತ್ತು ಸಣ್ಣ ಸೂಟ್‌ಕೇಸ್‌ನೊಂದಿಗೆ ಹೊರಟುಬಿಡುತ್ತಿದ್ದರು" ಎಂದು ಇಂದಿರಾ ಅವರು ತಮ್ಮ ಗಂಡನ ಬಗೆಗಿನ ಹೋರಾಟದ ಜೀವನವನ್ನು ಬಿಚ್ಚಿಡುತ್ತಾರೆ. ತಮಗೆ ಬರುವ ಸಂಬಳದ ಬಹುಪಾಲು ಅವರ ಓಡಾಟದ ಖರ್ಚು-ವೆಚ್ಚಗಳಿಗೆ ಆಗುತ್ತಿತ್ತು ಎಂದು ಅಂದಿನ ನೆನಪನ್ನು ಬಿಚ್ಚಿಡುತ್ತಾರೆ.

ಬಿ.ಕೃಷ್ಣಪ್ಪ-ಇಂದಿರಾ ದಂಪತಿಗೆ ಇಬ್ಬರು ಪುತ್ರಿಯರು. ಅವರಿಗೆ ಉತ್ತಮ ಶಿಕ್ಷಣವನ್ನು ಕೊಟ್ಟು ಒಳ್ಳೆಯ ನಾಗರಿಕರನ್ನಾಗಿ ಮಾಡಿದ್ದಾರೆ. ಮೊದಲ ಮಗಳು ಸೀಮಾ ಖ್ಯಾತ ಭರತನಾಟ್ಯ ಕಲಾವಿದೆಯಾಗಿದ್ದಾರೆ. ಎರಡನೇ ಮಗಳು ಶಾಲಿನಿ ನೌಕರಿಯಲ್ಲಿ ಇದ್ದಾಳೆ. ಮಕ್ಕಳ ವಿದ್ಯಾಭ್ಯಾಸ ಹಾಗೂ ಅವರ ಸಮಾಜೀಕರಣದ ಕ್ರಿಯೆಯಲ್ಲಿ ತಾಯಿ ಇಂದಿರಾ ಅವರ ಪಾತ್ರ ಪ್ರಮುಖವಾಗಿದೆ. ಸದಾ ಹೋರಾಟದ ಬಗ್ಗೆ ಕಾಳಜಿಯಿದ್ದ ಕೃಷ್ಣಪ್ಪನವರಿಗೆ ಮನೆ ಹಾಗೂ ಮಕ್ಕಳ ಜವಾಬ್ದಾರಿ ಹೊರೆಯಾಗದ ಹಾಗೆ ಇಂದಿರಾ ಕೃಷ್ಣಪ್ಪನವರು ಸರಿದೂಗಿಸಿಕೊಂಡು ಹೋದರು.

ಚಳುವಳಿ ಮತ್ತು ಹೋರಾಟದ ಬದುಕು

ಪ್ರೊ.ಬಿ.ಕೃಷ್ಣಪ್ಪನವರು ದಲಿತ ಚಳುವಳಿಯನ್ನು ಸ್ಥಾಪಿಸಿದ ತರುವಾಯ ಅವರ ಓಡಾಟವು ರಾಜ್ಯದೆಲ್ಲೆಡೆ ನಡೆಯುತ್ತಿತ್ತು. ಕಾಲೇಜಿನ ರಜಾದಿನಗಳನ್ನು ಸಾರ್ವಜನಿಕ ರಜೆಗಳನ್ನು ಮತ್ತು ಪ್ರತಿ ಭಾನುವಾರಗಳಲ್ಲಿ ಕೃಷ್ಣಪ್ಪನವರು ತಮ್ಮ ಹೆಗಲಿಗೆ ಬ್ಯಾಗ್ ಹಾಕಿಕೊಂಡು ದಲಿತರ ನೋವುಗಳ, ಸಮಸ್ಯೆಗಳ ಪರಿಹಾರಕ್ಕೆ ಹೊರಡುತ್ತಿದ್ದರು. ಕೃಷ್ಣಪ್ಪನವರಿಗೆ ರಾಜ್ಯದಾದ್ಯಂತ ಅಸಂಖ್ಯಾತ ಜನರ ಸಂಪರ್ಕವಿತ್ತು. ಭೂ-ಹೋರಾಟಗಳು, ಕ್ಯಾಸಿನಕೆರೆ ಹೋರಾಟ, ಮಾಪುರ ದೇವರ ಹೆಸರಿನಲ್ಲಿ ದಲಿತ ಹೆಣ್ಣುಮಕ್ಕಳ ಶೋಷಣೆ, ಚಂದ್ರಗುತ್ತಿಯ ಬೆತ್ತಲೆಸೇವೆಯ ನಿಷೇಧಕ್ಕಾಗಿ ಹೋರಾಟ, ಬೆಂಡಿಗೇರಿ ಮಲ ತಿನಿಸಿದುದರ ವಿರುದ್ಧ ಹೋರಾಟ ಮುಂತಾದ ಹೋರಾಟಗಳನ್ನು ಮಾಡಿದರು.

ಬಿ.ಕೃಷ್ಣಪ್ಪನವರ ಕೊನೆಯ ಗಳಿಗೆ

ಬಿ.ಕೃಷ್ಣಪ್ಪನವರು ೩೦-೪-೧೯೯೭ರಂದು ಅಂಬೇಡ್ಕರ್ ಜನ್ಮ ದಿನಾಚರಣೆಯಲ್ಲಿ ಭಾಗವಹಿಸಲು ಗದಗಕ್ಕೆ ತೆರಳಿದಾಗ ಅವರಿಗೆ ಹೃದಯಾಘಾತವಾಯಿತು. ಕೂಡಲೇ ಅವರನ್ನು ಅಲ್ಲಿನ

ಡಾ.ಎಸ್.ಎಸ್.ಬೂದಿಹಾಳ್ ನರ್ಸಿಂಗ್ ಹೋಂಗೆ ಸೇರಿಸಿದರು. ಚಿಕಿತ್ಸೆ ಫಲಕಾರಿಯಾಗದೆ ಅವರು ಮರಣ ಹೊಂದಿದರು.

ಹೋರಾಟದ ಜೀವಿ ಕೊನೆಗೆ ಹೋರಾಟದ ಹಾದಿಯಲ್ಲೇ ಕೊನೆಯುಸಿರೆಳೆದರು. ಇಂಥ ನಾಯಕನನ್ನು ಕಳೆದುಕೊಂಡ ಬಗ್ಗೆ ಬಿ.ಎಸ್.ಪಿ. ರಾಷ್ಟ್ರೀಯ ಅಧ್ಯಕ್ಷರಾದ ಕಾನ್ಷಿರಾಮ್ ಅವರು ದಕ್ಷಿಣ ಭಾರತದ ಒಬ್ಬ ಸಮರ್ಥ ನಾಯಕನನ್ನು ಪಕ್ಷ ಕಳೆದುಕೊಂಡಿತು ಎಂದು ಶೋಕ ವ್ಯಕ್ತಪಡಿಸಿದರು.

ಬಿ.ಕೃಷ್ಣಪ್ಪನವರ ನಿಧನದ ಸುದ್ದಿಯನ್ನು ಕೇಳಿ ರಾಜ್ಯಾದ್ಯಂತ ಅಪಾರ ಅಭಿಮಾನಿಗಳು, ಹಿತೈಷಿಗಳು ಮತ್ತು ಅನುಯಾಯಿಗಳು, ಸ್ನೇಹಿತರು ಜಾತಿಭೇದವಿಲ್ಲದೆ ಅವರ ಅಂತಿಮ ದರ್ಶನಕ್ಕೆ ಬಂದಿದ್ದರು. ಜನಸಾಗರವೇ ಅವರ ಅಂತ್ಯ ಸಂಸ್ಕಾರಕ್ಕೆ ಹರಿದುಬಂದಿತು.

ಕರ್ನಾಟಕ ರಾಜ್ಯದ ಅಂದಿನ ಮುಖ್ಯಮಂತ್ರಿಯಾದ ಜೆ.ಎಚ್.ಪಟೇಲ್ ಅವರು, ಉಪ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ, ರಾಷ್ಟ್ರದ ಹಿರಿಯ ನಾಯಕರೆಲ್ಲರೂ ಕೃಷ್ಣಪ್ಪನವರ ನಿಧನಕ್ಕೆ ತೀವ್ರ ಶೋಕ ವ್ಯಕ್ತಪಡಿಸಿದರು. ಕೃಷ್ಣಪ್ಪನವರ ಸಮಾಧಿಯನ್ನು ಹರಿಹರ ತಾಲ್ಲೂಕಿನ 'ಹನಗವಾಡಿ'ಯಲ್ಲಿ ನಿರ್ಮಿಸಲಾಗಿದೆ. ಸಮಾಧಿಗೆ 'ಮೈತ್ರಿವನ' ಎಂದು ಕರೆಯಲಾಗಿದೆ.

ಹೋರಾಟದ ದಾರಿ

ಬಿ.ಕೃಷ್ಣಪ್ಪನವರು ದಲಿತ ಸಂಘರ್ಷ ಸಮಿತಿಯ ಹೋರಾಟದ ಮಾರ್ಗವನ್ನು ಪ್ರಜಾಪ್ರಭುತ್ವ ಚೌಕಟ್ಟಿನ ಒಳಗೆ ಅಹಿಂಸಾತ್ಮಕವಾಗಿಯೇ ಇರಬೇಕೆಂದು ರೂಪುರೇಷೆ ಮಾಡಿದರು.

ಬಿ.ಕೃಷ್ಣಪ್ಪನವರು ದಲಿತ ಸಂಘರ್ಷ ಸಮಿತಿಯ ಹೋರಾಟ ಯಾರ ವಿರುದ್ಧ, ಅದರ ಶತ್ರುಗಳು ಯಾರು, ಮಿತ್ರರು ಯಾರು ಎಂಬುದನ್ನು ಹೀಗೆ ಪ್ರಸ್ತಾಪಿಸುತ್ತಾರೆ.

"ನಮ್ಮ ಹೋರಾಟ ಜಾತಿ, ಬಂಡವಾಳ-ಭೂಮಾಲೀಕರ ವಿರುದ್ಧ, ಜಾತಿವಾದಿಗಳು, ಭೂಮಾಲೀಕರು ನಮ್ಮ ಶತ್ರುಗಳು. ಜಾತಿಯಿಂದ ನೊಂದವರು, ಶೋಷಣೆ ಅನುಭವಿಸುತ್ತಿರುವವರು, ಕೃಷಿ ಕೂಲಿಕಾರರು, ಭೂಹೀನರು, ಸಣ್ಣ ಹಿಡುವಳಿದಾರರು, ಬಡ ರೈತರು ನಮ್ಮ ಮಿತ್ರರು" ಎಂದು ಕೃಷ್ಣಪ್ಪನವರು ಹೇಳಿದ್ದರು.

ಶ್ರೀಮಂತ ರೈತರು ಕೇವಲ ಪುರೋಹಿತಶಾಹಿಗಳು. ಅವರು ದಲಿತರನ್ನು ಅಜ್ಞಾನದಲ್ಲಿ ಕೆಡವಿ ಅವರನ್ನು ಹೀನವೃತ್ತಿಗೆ ಹಚ್ಚಿದರು ಎಂಬ ಸತ್ಯದ ಜೊತೆಗೆ ಅದೇ ಅಜ್ಞಾನವನ್ನೇ ಬಳಸಿಕೊಂಡು ಹಳ್ಳಿಯ ಭೂಮಾಲೀಕ ವರ್ಗ ದಲಿತರನ್ನು ತಮ್ಮ ಊಳಿಗಕ್ಕೆ, ಜೀತಕ್ಕೆ ಬಳಸಿಕೊಳ್ಳುವ ಸತ್ಯ ನಮಗೆ ಮನವರಿಕೆಯಾಯಿತು. ಮಾರಿಹಬ್ಬದ ಸಂದರ್ಭದಲ್ಲಿ ಪಟ್ಟಣದಿಂದ ಹಳ್ಳಿಯ ಕಡೆಗೆ ಗತಿ ಬದಲಾಯಿಸಿದ ದಲಿತ ಚಳುವಳಿ ಜಾತಿ ಹೋರಾಟದೊಂದಿಗೆ, ಅಷ್ಟೇ ಮೂಲಭೂತವಾದ ಹಸಿವು, ಬಡತನ ಇದರ

ವಿರುದ್ಧ ಹೋರಾಡುವ ಅನಿವಾರ್ಯತೆ ಕಂಡುಕೊಂಡಿತು. ದಲಿತರಲ್ಲಿ ತಾಂಡವವಾಡುತ್ತಿದ್ದ ಬಡತನ ತೀವ್ರ ಗಮನ ಸೆಳೆಯಿತು. ಜೀತ-ಕೃಷಿಕೂಲಿ-ದಲಿತರಿಗಾಗಿ ಭೂಮಿ ಬಿಡುಗಡೆ ಇತ್ಯಾದಿ ಆರ್ಥಿಕ ಹೋರಾಟದ ಕಡೆಗೆ ದಲಿತ ಸಂಘರ್ಷ ಸಮಿತಿ ತನ್ನ ಗಮನ ಹರಿಸಿತು. ಕೂಲಿ ಹೆಚ್ಚಳಿಕೆಗಾಗಿ ಚಳುವಳಿ, ಜೀತ ಮುಕ್ತರಿಗೆ ಪುನರ್‌ವ್ಯವಸ್ಥೆ, ಭೂಹೀನರಿಗೆ ಭೂಮಿ, ಬಗರ್ ಹುಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿ, ದಲಿತರ ಭೂ ಕಬಳಿಸಿದ ಶ್ರೀಮಂತ ರೈತರಿಂದ ಭೂಮಿ ಬಿಡಿಸಲು ಚಳುವಳಿ, ಭೂ ಆಕ್ರಮಣ ಚಳುವಳಿ, ನಿವೇಶನ ವಸತಿಗಾಗಿ ಚಳುವಳಿ ಇವನ್ನೆಲ್ಲ ತೀವ್ರಗೊಳಿಸಲಾಯಿತು."

ಬಿ.ಕೃಷ್ಣಪ್ಪನವರು ಸಂಘಟಿಸಿದ ಮುಖ್ಯ ಹೋರಾಟಗಳು

ಬಿ.ಕೃಷ್ಣಪ್ಪನವರ ಮುಖಂಡತ್ವದಲ್ಲಿ ನಡೆದ ಕೆಲವು ಹೋರಾಟಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

೧. ಭೂಹೋರಾಟಗಳು: ಹೊನ್ನಾಳಿ ತಾಲ್ಲೂಕಿನ ಕ್ಯಾಸನಕೆರೆ ಭೂಹೋರಾಟ, ೧೯೭೫ರಲ್ಲಿ ಸಿದ್ದಲೀಪುರ ಭೂಹೋರಾಟ(ಭದ್ರಾವತಿ), ಧಾರವಾಡ ಜಿಲ್ಲೆಯ ದುಮ್ಮೀಹಾಳ ಭೂಹೋರಾಟ (೧೯೭೬), ಹಾಸನ ಜಿಲ್ಲೆಯ ಬಿದರೆಯಲ್ಲಿ ಭೂಹೋರಾಟ(೧೯೭೬), ಹೆಗ್ಗಡದೇವನಕೋಟೆ ತಾಲ್ಲೂಕಿನ ದೇವಲಾಪುರ ಭೂ ಹೋರಾಟ(೧೯೮೫), ಕಾಳನಕಟ್ಟೆ, ಚಂಡೆಗೂಡು (ಚಿಕ್ಕಮಗಳೂರು), ದೊಡ್ಡ ಚರವತ್ತಿ, ಕರ್ನಾಟಕಾದ್ಯಂತ ನಡೆದ ಬಗರ್ ಹುಕುಂ ಸಾಗುವಳಿ, ತೋಟಿತಳವಾರರ ಇನಾಮತಿ ಜಮೀನು, ಪ್ಲಾಂಟೇಷನ್ ಜಮೀನು ಚಳುವಳಿಗಳು, ಒತ್ತುವರಿ ಜಮೀನು ಹೋರಾಟಗಳು, ಹೆಚ್ಚುವರಿ ಭೂಮಿ ವಿತರಣೆ ಹೋರಾಟಗಳು ಇತ್ಯಾದಿ.

೨. ನಿವೇಶನ ಹೋರಾಟಗಳು : ತಗಡೂರು, ಕರಡಗೂರು, ಹರಮಘಟ್ಟ-ಭದ್ರಾವತಿ ಎನ್.ಎಂ.ಸಿ., ಕಿಟ್ಟಿಗೇನಹಳ್ಳಿ.

೩. ದಲಿತ ಕ್ರೈಸ್ತರಿಗೆ ಮೀಸಲಾತಿ ಆಂದೋಲನ

೪. ಬೆತ್ತಲೆಸೇವೆ ನಿಷೇಧಕ್ಕಾಗಿ ಹೋರಾಟಗಳು-ಚಂದ್ರಗುತ್ತಿ, ಚಿಂಚನಸೂರು.

೫. ಕುಡಿಯುವ ನೀರಿಗಾಗಿ ಹೋರಾಟ

೬. ದೇವಸ್ಥಾನ ಪ್ರವೇಶದ ಹೋರಾಟಗಳು

೭. ಅಸ್ಪೃಶ್ಯತೆ ಮತ್ತು ಸಾಮಾಜಿಕ ಬಹಿಷ್ಕಾರಗಳ ವಿರುದ್ಧ ಸಂಘಟಿಸಿದ ಹೋರಾಟಗಳು.

೮. ಬೆಂಡಿಗೇರಿ : ಬಲವಂತವಾಗಿ ಮಲ ತಿನಿಸಿದ ಪ್ರಕರಣದ ವಿರುದ್ಧ ಹೋರಾಟ.

೯. ವಿದ್ಯಾರ್ಥಿನಿಲಯ ಹೋರಾಟಗಳು

೧೦. ಕೊಲೆ ಪ್ರಕರಣಗಳ ಬಗ್ಗೆ ಹೋರಾಟ : ಶಿವಮೊಗ್ಗ ಜಿಲ್ಲೆಯ ಹರಬೋನಹಳ್ಳಿ, ಮೈಸೂರಿನ ದೇವರಸನ ಹಳ್ಳಿ, ತುಮಕೂರಿನ ಕುಂದೂರು, ಇಡಕದಿಬ್ಬನಹಳ್ಳಿ, ಮಂಡ್ಯದ ಕಾಡುಕೋತಿನಹಳ್ಳಿ,

ಕೋಲಾರದ ಕೇತಗಾನಹಳ್ಳಿ, ಬೆಳಗಾವಿಯ ಬೆಲ್ಲದ ಬಾಗೇವಾಡಿ, ಜಗಳೂರಿನ ಗಿಡ್ಡನಕಟ್ಟೆ, ಭದ್ರಾವತಿ ತಾಲ್ಲೂಕಿನ ಅರಕೆರೆ ಗ್ರಾಮದ ಪತ್ರೆ ಸಂಗಪ್ಪನ ಕೊಲೆ.

೧೧. ಸ್ತ್ರೀ ಮಾನಭಂಗದ ವಿರುದ್ಧ ಹೋರಾಟಗಳು : ಅ. ಅನಸೂಯಮ್ಮ, ಬಿ. ನಾಗಮ್ಮ, ಚಿಂತಾಮಣಿ, ಸಿ. ಹಾಸನದ ಮಕ್ಕೆಲಿ ತಾಯಮ್ಮ, ಡಿ. ಶಿವಮೊಗ್ಗದ ಯಶೋಧಮ್ಮ, ಇ. ಭದ್ರಾವತಿಯ ಅಪ್ರಾಪ್ತ ವಯಸ್ಸಿನ ಬಾಲಕಿ.

೧೨. ದಲಿತರ ಕೇರಿ ಧ್ವಂಸ ವಿರುದ್ಧ ಚಳುವಳಿಗಳು–ಸೋಮನಾಯ್ಕನ ಹಳ್ಳಿ

೧೩. ಇತರೆ ಹೋರಾಟಗಳು

ಅ. ಹೋಟೆಲ್‌ಗಳಲ್ಲಿ ದಲಿತರ ತಾರತಮ್ಯ ವಿರುದ್ಧ ಹೋರಾಟ

ಆ. ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಮೆರವಣಿಗೆ.

ಭೂಹೋರಾಟಗಳು

ಈ ದೇಶದಲ್ಲಿ ಈಗಲೂ ಶೇ.೬೦ರಷ್ಟು ಜನ ಕೃಷಿಯನ್ನು ತಮ್ಮ ಜೀವನೋಪಾಯಕ್ಕಾಗಿ ನಂಬಿದ್ದಾರೆ. ದಲಿತರಲ್ಲಿ ಶೇ.೮೦ರಷ್ಟು ಜನರು ಕೃಷಿಯನ್ನು ತಮ್ಮ ಜೀವನೋಪಾಯಕ್ಕಾಗಿ ನೇರವಾಗಿ ಹಾಗೂ ಪರೋಕ್ಷವಾಗಿ ನಂಬಿದ್ದಾರೆ. ಕರ್ನಾಟಕದಲ್ಲಿ ೨೦೦೪ರಲ್ಲಿ ಶೇ.೪೮.೮ರಷ್ಟು ದಲಿತ ಕುಟುಂಬಗಳು ಜಮೀನನ್ನು ಹೊಂದಿದ್ದವು, ಆದರೆ ಅವುಗಳಲ್ಲಿ ಸಣ್ಣ ಮತ್ತು ಅತಿಸಣ್ಣ ಹಿಡುವಳಿಗಳ ಸಂಖ್ಯೆ ಶೇ.೮೨ರಷ್ಟು. ಇನ್ನು ದಲಿತರ ಬಳಿ ಇರುವ ನೀರಾವರಿ ಜಮೀನು ಕೇವಲ ಶೇ.೧೧.೩೪ರಷ್ಟು.

ಒಂದೆಡೆ ಹಣದ, ಬೀಜ, ಗೊಬ್ಬರದ ಸಮಸ್ಯೆಯಾದರೆ ಇನ್ನೊಂದೆಡೆ ಸವರ್ಣೀಯರ ಶೋಷಣೆ. ಇನ್ನು ಕೃಷಿ ಕಾರ್ಮಿಕರ ಪಾಡಂತೂ ಹೇಳತೀರದು, ಭೂರಹಿತ ಕೃಷಿಕರ ಭೂಮಿಯ ಕನಸು ನನಸು ಮಾಡಲು ಎರಡು ದಶಕಗಳ ಕಾಲ ಭೂಹೋರಾಟದಲ್ಲಿ ಕೃಷ್ಣಪ್ಪನವರ ನಾಯಕತ್ವದಲ್ಲಿ ನಡೆದ ಹೋರಾಟಗಳು ಸುಮಾರು ೬ ಲಕ್ಷ ಎಕರೆ ಜಮೀನನ್ನು ಹೊಲೆಯ, ಮಾದಿಗ, ಭೋವಿ, ಲಂಬಾಣಿ, ಕುರುಬ, ಅಗಸ, ಕುಂಬಾರ, ಮೇದಾರ ಜನಾಂಗದ ಭೂರಹಿತ ಕೃಷಿಕರಿಗೆ ಸಿಗುವಂತೆ ಮಾಡಿದವು.

ತೋಟಿ, ತಳವಾರ, ನೀರಗಂಟಿ, ಇನಾಂ ಜಮೀನುಗಳನ್ನು ಭೂಸುಧಾರಣಾ ಕಾನೂನಿನ ಅಡಿಯಲ್ಲಿ ಬಿಟ್ಟುಕೊಡುವಂತೆ ಬಿ.ಕೃಷ್ಣಪ್ಪನವರು ೧೯೭೭ರಲ್ಲಿ ಚಳುವಳಿಗಳನ್ನು ಹಮ್ಮಿಕೊಂಡರು. ಅಮೃತ್‌ಮಹಲ್ ಕಾವಲ್ ಜಮೀನನ್ನು ಕಡುಬಡವರಿಗೆ ಕೊಡಿಸಲು ಶ್ರಮಿಸಿದ ಚಳುವಳಿಗಳು, "ಸರ್ಕಾರಿ ಜಮೀನು ನಮ್ಮ ಜಮೀನು" ಚಳುವಳಿಗಳು ಅತಿ ಯಶಸ್ಸು ಕಂಡ ಚಳುವಳಿಗಳು. ೧೯೭೫ರಿಂದ ೧೯೭೬ರವರೆಗೆ ೧೬ ತಿಂಗಳು ಕಾಲ ನಡೆದ ಭದ್ರಾವತಿ ತಾಲ್ಲೂಕಿನ ಸಿದ್ದಲಿಪುರ

ಭೂಹೋರಾಟ ಕರ್ನಾಟಕದಲ್ಲಿ ೧೯೭೭ರಲ್ಲಿ ಭೂ ಪರಭಾರೆ ನಿಷೇಧ ಕಾಯ್ದೆಯ ಜಾರಿಗೆ ಕಾರಣವಾಯಿತು.

ಪ್ರೊ.ಬಿ.ಕೃಷ್ಣಪ್ಪನವರು ಈ ಎಲ್ಲಾ ಭೂಹೋರಾಟಗಳಿಗೆ ಸವರ್ಣೀಯರಿಂದ ಅತಿಯಾದ ಪ್ರತಿರೋಧವನ್ನು ಎದುರಿಸಬೇಕಾಯಿತು. ದಲಿತರ ಮೇಲೆ ಹಲ್ಲೆ, ದೌರ್ಜನ್ಯಗಳು ಹೆಚ್ಚಾದವು. ಆದರೆ ಪ್ರೊ.ಬಿ.ಕೃಷ್ಣಪ್ಪನವರ ನಾಯಕತ್ವದಿಂದಾಗಿ ದಲಿತರು ಈ ಎಲ್ಲಾ ಶೋಷಣೆಯನ್ನು ಮೆಟ್ಟಿ ನಿಲ್ಲುವ ದೃಢವಿಶ್ವಾಸವನ್ನು ಹಂತಹಂತವಾಗಿ ಮೈಗೂಡಿಸಿಕೊಂಡು ಸಂಘಟಿತರಾಗಲು ಸಿದ್ಧರಾದರು. ಕೆಲವು ಭೂಹೋರಾಟಗಳಲ್ಲಿ ಮೇಲ್ಜಾತಿಗೆ ಸೇರಿದ ಬಡವರಿಗೂ ಅದರಿಂದ ಅನುಕೂಲವಾಯಿತು. ಶಿವಮೊಗ್ಗ ಜಿಲ್ಲೆಯ ಕ್ಯಾಸನಕೆರೆ ಭೂಹೋರಾಟದಲ್ಲಿ ಕುಂಬಾರ, ಕುರುಬ, ಮರಾಠ, ಅಗಸ, ದಲಿತರು ಹಾಗೂ ಲಿಂಗಾಯಿತ ಭೂರಹಿತ ಬಡವರಿಗೂ ಅನುಕೂಲವಾಯಿತು. ಇನ್ನೂ ಅನೇಕ ಹೋರಾಟಗಳಲ್ಲಿ ಎಲ್ಲ ವರ್ಗದ ಬಡವರಿಗೂ ಅನುಕೂಲವಾದ ಹಲವು ಹತ್ತು ಉದಾಹರಣೆಗಳಿವೆ.

ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಟ

ದಲಿತರ ಮೇಲಿನ ದೌರ್ಜನ್ಯಗಳನ್ನು ಖಂಡಿಸಿ ಅವುಗಳ ವಿರುದ್ಧ ಹೋರಾಟವನ್ನು ದಲಿತ ಸಂಘರ್ಷ ಸಮಿತಿ ಪ್ರೊ.ಬಿ.ಕೃಷ್ಣಪ್ಪನವರ ನಾಯಕತ್ವದಲ್ಲಿ ಮಾಡಿತ್ತು. ಅವುಗಳಲ್ಲಿ ಕಂಚಿನಹಾಳು ಮತ್ತು ಗೊಪ್ಪೇನಹಳ್ಳಿ ನಡೆದ ದೌರ್ಜನ್ಯಗಳ ವಿರುದ್ಧದ ಹೋರಾಟಗಳು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಮುಖವಾದವು.

ಶಿವಮೊಗ್ಗ ಜಿಲ್ಲೆಯ ಚನ್ನಗಿರಿಯ ತಾಲ್ಲೂಕಿನ ಕಂಚಿನಹಾಳು ಹಾಗೂ ಗೊಪ್ಪೇನಹಳ್ಳಿಯಲ್ಲಿ ದಲಿತರೇ ಹೆಚ್ಚಾಗಿ ವಾಸವಾಗಿದ್ದರು. ಲಿಂಗಾಯತರು ಅಲ್ಪಸಂಖ್ಯಾತರಾಗಿದ್ದರೂ ತಮ್ಮ ಹಣ ಮತ್ತು ಜಾತಿ ಬಲದಿಂದ ದಲಿತರ ಮೇಲೆ ನಿರಂತರ ಶೋಷಣೆ ಮಾಡುತ್ತಿದ್ದರು. ಅವರು ಮಾಡಿದ ಕೆಲವು ಶೋಷಣೆಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

ಒಮ್ಮೆ ಲಂಬಾಣಿ ಜನಾಂಗದ ಕನ್ನಾನಾಯ್ಕನ ಹೆಂಡತಿಯ ಮೇಲೆ ಲಿಂಗಾಯತ ಭೂಮಾಲೀಕನು ಅತ್ಯಾಚಾರ ಮಾಡಿದ. ಕನ್ನಾನಾಯ್ಕ ಪ್ರತಿಭಟಿಸಿದಾಗ ಲಿಂಗಾಯತರೆಲ್ಲಾ ಒಟ್ಟುಗೂಡಿ ಅವನನ್ನು ಥಳಿಸಿ ದೌರ್ಜನ್ಯವೆಸಗಿದರು. ಮತ್ತೊಂದು ಬಾರಿ ಬೇಡರ ಹುಡುಗ ತೋಟದಲ್ಲಿ ತೆಂಗಿನಕಾಯಿ ಕದ್ದನೆಂದು ಆರೋಪಿಸಿ ಪಂಚಾಯಿತಿಗೆ ಬಾ ಎಂದು ಲಿಂಗಾಯಿತರು ಕರೆದಾಗ ಆತ ಸಿಟ್ಟಿನಿಂದ "ಪಂಚಾಯಿತಿ ಇಡಿಸಿ ಏನು ಹರಕೋತೀರೇನು?" ಎಂದ. ಆಗ ಲಿಂಗಾಯತರು ಅವನನ್ನು ಎಳೆದುಕೊಂಡು ಹೋಗಿ ಕಂಬಕ್ಕೆ ಕಟ್ಟಿ ಹಾಕಿ, ಅವನ ಬಟ್ಟೆ ಬಿಚ್ಚಿಸಿ ಅವನ ಒಂದೊಂದೇ ಶ್ಯಾಟಗಳನ್ನು ಹರಿದು ಕಿತ್ತು ಹಾಕಿದರು. ಅವನು ನೋವಿನಿಂದ ಕುಸಿದು ಬಿದ್ದನು.

ಇನ್ನೊಂದು ಬಾರಿ, ಮಾಂಸಾಹಾರಿಗಳಾದರೂ ಕೋಳಿ ಸಾಕದ, ಅದನ್ನು ತಿನ್ನದ ಲಂಬಾಣಿ ಹೆಣ್ಣುಮಕ್ಕಳು ಹಬ್ಬದಲ್ಲಿ ಕುಣಿಯುತ್ತಿದ್ದರೆ ಸವರ್ಣೀಯ ಹುಡುಗನೊಬ್ಬ ಕೋಳಿಯ ಕತ್ತು ಕುಯ್ದು ಅವರ ಮೇಲೆ ಬಿಸಾಡಿಬಿಟ್ಟ ಹೆಣ್ಣುಮಕ್ಕಳು ದಿಕ್ಕಾಪಾಲಾಗಿ ಓಡಿದರು. ಇದನ್ನು ಪ್ರತಿಭಟಿಸಲು ಹೋದವರನ್ನು ಸವರ್ಣೀಯರು ಚೆನ್ನಾಗಿ ಹೊಡೆದು ಊರು ಬಿಡುವಂತೆ ಮಾಡಿದರು. ಸವರ್ಣೀಯರ ಅಟ್ಟಹಾಸದ ಸದ್ದು ಅಡಗಿಸಲು ಬಿ.ಕೃಷ್ಣಪ್ಪನವರು ಅಲ್ಲಿ ಹೋರಾಟ ನಡೆಸಿದರು. ದಲಿತರಲ್ಲಿ ಹುದುಗಿಹೋದ ಚೈತನ್ಯ ಶಕ್ತಿ ಅರಳಿ ಅವರ ಬಾಳು ಹಸನಾಯ್ತು.

ಕೋಲಾರ ಜಿಲ್ಲೆಯಲ್ಲಿ ನಡೆದ ದೌರ್ಜನ್ಯಗಳ ವಿರುದ್ಧ ಹೋರಾಟ

ಚಿನ್ನ, ರೇಷ್ಮೆ ಮತ್ತು ಹಾಲಿಗೆ ಹೆಸರಾದ ಕೋಲಾರ ಜಿಲ್ಲೆಯಲ್ಲಿ ಶೇ.೩೦ರಷ್ಟು ದಲಿತರಿದ್ದಾರೆ. ಇಲ್ಲಿಯೂ ಇತರೆಡೆಯಂತೆ ಅವರ ಮೇಲೆ ಸವರ್ಣೀಯರ ದೌರ್ಜನ್ಯ ನಿರಂತರವಾಗಿ ನಡೆಯುತ್ತಲೇ ಇತ್ತು ಅವುಗಳಲ್ಲಿ ಕೆಲವು ಘಟನೆಗಳು ಇವು:

೧. ೧೯೭೪–೭೫ರಲ್ಲಿ ಮುಳಬಾಗಿಲು ತಾಲ್ಲೂಕಿನಿಂದ ದಲಿತ ವಿದ್ಯಾರ್ಥಿ ಮುನಿವೆಂಕಟಪ್ಪ ಹಾಗೂ ರೆಡ್ಡಿ ಜನಾಂಗದ ವಿದ್ಯಾರ್ಥಿಯೊಬ್ಬ ಕೋಲಾರದ ಸರ್ಕಾರಿ ಕಾಲೇಜಿನಲ್ಲಿ ಪಿ.ಯು.ಸಿ. ವಿಜ್ಞಾನಕ್ಕೆ ಸೇರಿದರು. ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಮುನಿವೆಂಕಟಪ್ಪ ಪ್ರಥಮದರ್ಜೆಯಲ್ಲಿ ಪಾಸಾದರೆ, ರೆಡ್ಡಿ ಹುಡುಗ ಅನುತ್ತೀರ್ಣನಾದ. ಇದು ಅಪಮಾನದ ಸಂಕೇತವೆಂದು ಭಾವಿಸಿದ ಕೆಲವು ರೆಡ್ಡಿಗಳು ಮುನಿವೆಂಕಟಪ್ಪನನ್ನು ಕೊಲೆ ಮಾಡಿ ಕೋಲಾರಮ್ಮನ ಕೆರೆಗೆ ಎಸೆದು ಬಿಟ್ಟರು.

೨. ಚಿಂತಾಮಣಿ ತಾಲ್ಲೂಕಿನ ದೊಡ್ಡಿಹಳ್ಳಿ ಗ್ರಾಮಕ್ಕೆ ಸೇರಿದ ದಲಿತ ಮಹಿಳೆ ಚೆನ್ನಮ್ಮಳ ಮೇಲೆ ಸವರ್ಣೀಯರು ಸಾಮೂಹಿಕ ಅತ್ಯಾಚಾರ ಮಾಡಿ ಕೊಲೆ ಮಾಡಿ ಹೆಣವನ್ನು ಬಾವಿಯಲ್ಲಿ ಎಸೆದರು.

೩. ಚಿಂತಾಮಣಿಯ ಗುಟ್ಟಹಳ್ಳಿಯಲ್ಲಿ ೧೯೭೬ರಲ್ಲಿ ನಾಗಮ್ಮ ತನ್ನ ಗಂಡನೊಂದಿಗೆ ಸೌದೆ ತರಲು ನೆಲಗಟ್ಟಿ ಬೆಟ್ಟಕ್ಕೆ ಹೋದಳು. ಪಾನಮತ್ತರಾಗಿದ್ದ ಸವರ್ಣೀಯರು ನಾಗಮ್ಮನ ಗಂಡನನ್ನು ಕಟ್ಟಿಹಾಕಿ ಅವನ ಎದುರೇ ಅವಳ ಮೇಲೆ ಅತ್ಯಾಚಾರವೆಸಗಿದರು.

ಇಂತಹ ಘಟನೆಗಳು ಕೋಲಾರದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದನ್ನು ಕಂಡ ಬಿ.ಕೃಷ್ಣಪ್ಪನವರು ಕೋಲಾರದ ದಲಿತರನ್ನು ಒಗ್ಗೂಡಿಸಿ, ಶೋಷಿಸುವ ಜನರ ವಿರುದ್ಧ ಹೋರಾಟವನ್ನು ಹಮ್ಮಿಕೊಂಡರು. ದಲಿತರು ಜಾಗೃತರಾದ ಮೇಲೆ ಅವರ ಮೇಲಿನ ದೌರ್ಜನ್ಯ ಕಡಿಮೆಯಾಯಿತು. ಆದರೆ ಕೃಷ್ಣಪ್ಪನವರು ವಿಧಿವಶವಾದ ನಂತರ ಕೋಲಾರ ಜಿಲ್ಲೆಯ ಕಂಬಾಲಪಲ್ಲಿಯಲ್ಲಿ ನಡೆದ ಹತ್ಯಾಕಾಂಡ ಎಂತಹವರ ಕಣ್ಣಿನಲ್ಲೂ ರಕ್ತ ಬರಿಸುತ್ತದೆ.

ಬಟ್ಟರಗಾ ಸಾಮಾಜಿಕ ಬಹಿಷ್ಕಾರದ ವಿರುದ್ಧ ಹೋರಾಟ

ದಲಿತರ ಮೇಲೆ ನಿರಂತರ ದೌರ್ಜನ್ಯವನ್ನು ಎಸಗುವುದೇ ತಮ್ಮ ಹಕ್ಕು ಎಂದು ಭಾವಿಸುವ ಸವರ್ಣೀಯರು ಸಾಮಾಜಿಕ ಬಹಿಷ್ಕಾರದ ಗುಮ್ಮವನ್ನು ದಲಿತರ ಮೇಲೆ ಹೇರುತ್ತಾರೆ. ಮಧ್ಯಮ ಮತ್ತು ದೊಡ್ಡ ಭೂಹಿಡುವಳಿಗಾರರು ಈಗಲೂ ಸವರ್ಣೀಯರ ಬಳಿಯೇ ಇರುವುದರಿಂದ ಗ್ರಾಮಗಳಲ್ಲಿ ಈಗಲೂ ಬಹಿಷ್ಕಾರದ ಪಿಡುಗು ತಲೆ ಎತ್ತಿ ನಿಲ್ಲುತ್ತಲೇ ಇದೆ. ೧೯೮೨ರಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಬಟ್ಟರಗಾ ಗ್ರಾಮದಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ಸವರ್ಣೀಯರು ಹಾಗೂ ದಲಿತರ ನಡುವೆ ಜಗಳ ನಡೆಯಿತು. ಕುಪಿತಗೊಂಡ ಸವರ್ಣೀಯರು ದಲಿತರಿಗೆ ಸಾಮಾಜಿಕ ಬಹಿಷ್ಕಾರವನ್ನು ಹಾಕಿದರು. ಅದರಂತೆ ದಲಿತ ಕೃಷಿ ಕಾರ್ಮಿಕರಿಗೆ ಸವರ್ಣೀಯರು ಕೆಲಸವನ್ನು ನಿರಾಕರಿಸಿದರು. ಕಿರಾಣಿ ಅಂಗಡಿಗಳಲ್ಲಿ ದಿನಸಿಯನ್ನು ದಲಿತರಿಗೆ ಮಾರಲು ನಿರಾಕರಿಸಲಾಯಿತು. ಹಿಟ್ಟಿನ ಗಿರಣಿಗಳಲ್ಲಿ ದಲಿತರು ತಂದ ಜೋಳವನ್ನು ಬೀಸದಂತೆ ತಡೆ ಒಡ್ಡಿದ್ದರು. ಊರಿನ ಸಾಮಾನ್ಯ ಕುಡಿಯುವ ನೀರಿನ ತಾಣಗಳಾದ ಕೆರೆ, ಬಾವಿ ಬೋರ್‌ವೆಲ್‌ಗಳಿಂದ ದಲಿತರು ನೀರು ತೆಗೆದುಕೊಳ್ಳುವುದನ್ನು ನಿಷೇಧಿಸಲಾಯಿತು.

ನಾಗರಿಕ ಸಮಾಜ ತಲೆ ತಗ್ಗಿಸಿ ನಿಲ್ಲುವಂತೆ ಮಾಡುವ ಇಂತಹ ಬಹಿಷ್ಕಾರಗಳು ಮನುಷ್ಯತ್ವದ ಬಗ್ಗೆಯೇ ಪ್ರಶ್ನೆ ಏಳುವಂತೆ ಮಾಡುತ್ತವೆ. ಇಂತಹ ಸನ್ನಿವೇಶದಲ್ಲಿ ದಲಿತರು ನಷ್ಟ, ಸಂಕಷ್ಟಕ್ಕೆ ಒಳಗಾಗುತ್ತಾರೆ. ದಿನದ ದುಡಿತಕ್ಕೆ ಕಲ್ಲು ಬಿದ್ದರೆ ಮನೆ ಮಂದಿಗೆಲ್ಲಾ ಉಪವಾಸ; ಹಾಗೆಂದು ಸವರ್ಣೀಯರಿಗೆ ತಲೆ ಬಾಗಿದರೆ ಅವರ ಮೇಲಿನ ಶೋಷಣೆ ಅವ್ಯಾಹತವಾಗಿ ನಡೆಯುತ್ತದೆ. ಇಂತಹ ಸನ್ನಿವೇಶದಲ್ಲಿ ಪ್ರೊ.ಬಿ.ಕೃಷ್ಣಪ್ಪನವರು ಬಟ್ಟರಗಾ ಸಾಮಾಜಿಕ ಬಹಿಷ್ಕಾರದ ವಿರುದ್ಧ ಹೋರಾಟ ಮಾಡಿದ್ದರು. ಅಲ್ಲಿನ ದಲಿತರ ಸ್ಥೈರ್ಯ ಹೆಚ್ಚಿಸಿ, ಸವರ್ಣೀಯರ ಬಹಿಷ್ಕಾರ ವಾಪಸ್ಸು ಪಡೆಯುವಂತೆ ಮಾಡಿದ್ದರು. ಈಗಲೂ ಆಗಾಗ್ಗೆ ತಲೆ ಎತ್ತುವ ಇಂತಹ ಬಹಿಷ್ಕಾರದ ಪಿಡುಗನ್ನು ನಾಗರಿಕ ಸಮಾಜ ಖಂಡಿಸಿ, ಪ್ರಗತಿಪರ ಚಿಂತಕರು, ಸವರ್ಣೀಯರು, ದಲಿತರು, ಸರ್ಕಾರ ಎಲ್ಲರೂ ಕೈ ಜೋಡಿಸಿ ಸಾಮಾಜಿಕ ಬಹಿಷ್ಕಾರವನ್ನು ಮಾನವ ಸಮಾಜದಿಂದಲೇ ಬಹಿಷ್ಕರಿಸಬೇಕಾಗಿದೆ.

ಬೆಂಡಿಗೇರಿ: ಮಲ ತಿನ್ನಿಸಿದವರ ವಿರುದ್ಧ ಹೋರಾಟ

೧೯೮೭ರಲ್ಲಿ ಒಂದು ಕ್ಷುಲಕ ನೆಪ ಒಡ್ಡಿ ಬೆಂಡಿಗೇರಿಯ ಸವರ್ಣೀಯರು ಐದು ಜನ ದಲಿತರಿಗೆ ಬಲವಂತವಾಗಿ ಮಲವನ್ನು ತಿನ್ನಿಸಿದ್ದರು. ಬಿ.ಕೃಷ್ಣಪ್ಪನವರು ಈ ಪ್ರಕರಣದ ವಿರುದ್ಧ ಪ್ರತಿಭಟನೆ ಕೈಗೊಂಡರು. ಈ ಹೋರಾಟವು ಕೇವಲ ದಲಿತರಿಗಾಗಿ ಮಾತ್ರ ನಡೆಯಲಿಲ್ಲ. ಇದು ಮನುಷ್ಯತ್ವದ ಅಳಿವು ಉಳಿವಿನ ಹೋರಾಟವಾಗಿತ್ತು ಹಾಗೂ ತಪ್ಪು ಮಾಡಿದ ಸವರ್ಣೀಯರಿಗೆ ಶಿಕ್ಷೆಯೂ ಆಯಿತು.

ಬೆತ್ತಲೆಸೇವೆಯ ಶೋಷಕ ಪರಂಪರೆ

ಸ್ತ್ರೀಯರನ್ನು ದೇವರೆಂದು, ಶಕ್ತಿಯ ಸಂಕೇತವೆಂದು ಪೂಜಿಸುವ ಈ ನಾಡು ಸ್ತ್ರೀಯರನ್ನು ಪ್ರತಿಘಟ್ಟದಲ್ಲೂ ಶೋಷಣೆ ಮಾಡುತ್ತಲೇ ಬಂದಿದೆ. ಅದು ಸ್ವಾತಂತ್ರ್ಯ ಬಂದ ನಂತರ ಕ್ರಮೇಣ ಕಡಿಮೆಯಾಗಿದ್ದರೂ ಸತಿಪದ್ಧತಿಯ ಬದಲಾಗಿ ಮಹಿಳೆಯನ್ನು ಗಂಡನೇ ಸೀಮೆ ಎಣ್ಣೆ ಸುರಿದು ಸಾಯಿಸುತ್ತಾನೆ. ಪ್ರತಿ ಗಂಟೆಯೂ ನೂರಾರು ದೌರ್ಜನ್ಯಗಳು ಯಥೇಚ್ಛವಾಗಿ ನಡೆಯುತ್ತಿವೆ. ಗರ್ಭದಲ್ಲಿರುವಾಗಲೇ ಗಂಡು ಲಿಂಗವನ್ನು ಕಂಡುಹಿಡಿದು ಆಕೆಯನ್ನು ನಾಶ ಮಾಡುತ್ತಾನೆ. ಇದು ಸಾಮಾನ್ಯ ಮಹಿಳೆಯ ಕಥೆಯಾದರೆ, ಇನ್ನು ದಲಿತ ಮಹಿಳೆಯರ ಕಥೆಯಂತೂ ಇನ್ನೂ ಶೋಚನೀಯ. ಇದೆಲ್ಲದರ ಜೊತೆಗೆ ದೇವರ ಹೆಸರಿನಲ್ಲಿ, ಮೌಢ್ಯತೆಯ ಅಫೀಮು ಕೊಟ್ಟು ಆಕೆಯನ್ನು ಬೆತ್ತಲೆ ಮೆರವಣಿಗೆ ಮಾಡುತ್ತಾರೆ. ದೇವದಾಸಿಯನ್ನಾಗಿಸುತ್ತಾರೆ. ಈಗ ಸರ್ಕಾರದ ಸುತ್ತೋಲೆಗಳಲ್ಲಿ ಇವು ಪೂರ್ಣವಾಗಿ ನಿಷೇಧವಾಗಿದ್ದರೂ ಅಲ್ಲಲ್ಲಿ ಇವು ಮರಳಿ ಪ್ರವೇಶಿಸಿ ಮಾನವಕುಲ ತಲೆ ತಗ್ಗಿಸುವಂತೆ ಮಾಡಿದೆ. ಪ್ರೊ.ಬಿ.ಕೃಷ್ಣಪ್ಪನವರು ಎರಡು ಪ್ರಮುಖ ಹೋರಾಟಗಳನ್ನು ಮಾಡಿ ಬೆತ್ತಲೆಸೇವೆ ನಿಷೇಧ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವುಗಳೆಂದರೆ ೧. ಚಂದ್ರಗುತ್ತಿ ಬೆತ್ತಲೆಸೇವೆ ನಿಷೇಧ, ೨. ಚಿಂಚನಸೂರು ದಲಿತ ಹೆಣ್ಣುಗಳ ಬೆತ್ತಲೆ ಮೆರವಣಿಗೆಯ ವಿರುದ್ಧ ಹೋರಾಟ.

ಚಂದ್ರಗುತ್ತಿ : ಬೆತ್ತಲೆಸೇವೆ ನಿಷೇಧಕ್ಕಾಗಿ ಹೋರಾಟ

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಚಂದ್ರಗುತ್ತಿ ಎಂಬ ಗ್ರಾಮದಲ್ಲಿ ರೇಣುಕ ಯಲ್ಲಮ್ಮನ ಜಾತ್ರೆ ಪ್ರತಿವರ್ಷ ನಡೆಯುತ್ತಿತ್ತು. ಆದರೆ ಇಲ್ಲಿ ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಬೆತ್ತಲೆಪೂಜೆ ಎಂತವರನ್ನೂ ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡುತ್ತಿತ್ತು. ಆದರೆ ದೈವದ ಹೆಸರಿನ ಕಾರಣಕ್ಕೋ, ಇಲ್ಲವೇ ಪಟ್ಟಭದ್ರ ಹಿತಾಸಕ್ತಿಗಳ ವ್ಯವಸ್ಥಿತ ಸಂಚಿನಿಂದಾಗಿಯೋ ಇದು ನೂರಾರು ವರ್ಷಗಳಿಂದ ಯಾರೂ ಪ್ರತಿಭಟಿಸದೆ ಹಾಗೆಯೇ ನಡೆಯುತ್ತಿತ್ತು. ೧೯೮೮ರ ಜಾತ್ರೆಯ ವೇಳೆಗೆ ಆ ಹೃದಯವಿದ್ರಾವಕ ಘಟನೆಯನ್ನು ಕಣ್ಣಾರೆ ನೋಡಿದ ಪ್ರೊ.ಬಿ.ಕೃಷ್ಣಪ್ಪನವರು ಅದರ ವಿರುದ್ಧ ಚಳುವಳಿ ಮಾಡುತ್ತಾರೆ.

"...ದೈವದ ಅಫೀಮು ಎಷ್ಟು ಕ್ರೂರ ಎನಿಸುತ್ತದೆ. ದೇವತೆಯ ಅರ್ಚಕರು ಬ್ರಾಹ್ಮಣರು ಮೇಳು ಕೀಳೆನ್ನದೆ ಎಲ್ಲಾ ಜಾತಿಯ ಜನ ದೇವರಿಗೆ ನಡೆದುಕೊಳ್ಳುತ್ತಾರೆ. ಆದರೆ ಬೆತ್ತಲೆ ಮೆರವಣಿಗೆ ಹೋಗುವವರೆಲ್ಲಾ ಕೆಳಜಾತಿಯ ದೀವರು ಮತ್ತು ಹರಿಜನರು. ಕೊರಳಿನಲ್ಲಿ ಒಂದು ಹಾರ, ಸೊಂಟದ ಸುತ್ತ ಒಂದು ಹಾರ, ಬಾಯಲ್ಲಿ ಬೇವಿನ ಸೊಪ್ಪು, ಬೆಟ್ಟಕ್ಕೆ ಸುಮಾರು ಮೂರು ಕಿಲೋ ಮೀಟರ್ ದೂರವಿರುವ ವರದಾ ನದಿಯಿಂದ ಕಾಲನಡಿಗೆಯಲ್ಲಿ ಈ ಮೆರವಣಿಗೆ ಸಾಗುತ್ತದೆ. ಅರೆಹೊಟ್ಟೆಯ ಈ ಬಡಕಲು ದೇಹಗಳು ಕಾಡುದಾರಿಯಲ್ಲಿ ಬೇತಾಳಗಳಂತೆ ಸಾಗುತ್ತವೆ. ಕೆಲವರು ಒಂಟಿಯಾಗಿ, ಕೆಲವರು ಜೋಡಿಯಾಗಿ, ಕೆಲವರು ಗುಂಪುಗುಂಪುಗಳಾಗಿ ಬರುತ್ತಾರೆ. ಕೆಲವರು ಆವೇಶದಿಂದ ಕುಣಿಯುತ್ತಾರೆ. ಕೆಲವರು "ಉಧೋ ಉಧೋ" ಎಂದು ಕೇಕೆ ಹಾಕುತ್ತಾರೆ ಮತ್ತು

ಕೆಲವರು ಆವೇಶದಿಂದ ಓಡುತ್ತಾರೆ. ಕೆಲವರು ಬೇವು ಉಟ್ಟುಕೊಂಡು, ಮತ್ತೆ ಕೆಲವರು ದಿಂಡು ಉರುಳು ಹಾಕುತ್ತಾ ಬರುತ್ತಾರೆ. ಇಲ್ಲಿ ಗಂಡಸರೂ ಬೆತ್ತಲೆಸೇವೆ ಮಾಡುತ್ತಾರೆ. ಆದರೆ ಬೆತ್ತಲೆಸೇವೆ ಮಾಡುವವರಲ್ಲಿ ಶೇ.೯೦ ಭಾಗ ಹೆಂಗಸರೇ ಇರುವುದು ಪುರುಷರ ಎಣೆಯಿಲ್ಲದ ಕ್ರೌರ್ಯಕ್ಕೆ ಜೀವಂತ ನಿಧರ್ಶನವೆನಿಸುತ್ತದೆ.

ಇವರೆಲ್ಲಾ ಸ್ವಯಂಸ್ಫೂರ್ತಿಯಿಂದ ಬೆತ್ತಲೆಸೇವೆ ಮಾಡುತ್ತಿದ್ದಾರೆ ಎಂದು ನಮಗೆ ಅನ್ನಿಸಲಿಲ್ಲ. ಕೆಲವು ಕಡೆ ಬಲವಂತ ಎದ್ದು ಕಾಣುತ್ತಿತ್ತು. ಒಂದು ಕಡೆ ಹೊಸದಾಗಿ ಮದುವೆಯಾದ ದಂಪತಿಗಳು: ಗಂಡ ಹೆಂಡತಿಯನ್ನು ಬಲವಂತ ಪಡಿಸುತ್ತಿದ್ದ. ಆದರೆ ಹೆಂಡತಿ ಒಲ್ಲೆ ಎಂದು ಅಳುತ್ತಿದ್ದಳು.

ನದಿಯ ದಂಡೆಯಲ್ಲಿ ನಡೆಯುತ್ತಿದ್ದ ದೃಶ್ಯ ಇನ್ನೂ ಅಮಾನುಷವಾಗಿತ್ತು. ಬೆತ್ತಲೆಸೇವೆ ಮಾಡುವವರು ನದಿಯಲ್ಲಿ ಮಿಂದು, ಪೂಜಾ ಕಾರ್ಯಗಳನ್ನು ಮುಗಿಸಿಕೊಂಡು ಹೊರಡಬೇಕು. ಸ್ನಾನ ಮಾಡಿಸುವ ಸಂದರ್ಭದಲ್ಲಿ ತಂದೆ ಮಗಳ ಸೀರೆಯನ್ನು, ಮಕ್ಕಳು ತಾಯಿಯ ಸೀರೆಯನ್ನು, ಗಂಡ ಹೆಂಡತಿಯ ಸೀರೆಯನ್ನು ಬಲವಂತವಾಗಿ ಕಳಚುವ ದೃಶ್ಯ ನಮ್ಮ ಮೂರನೇ ದರ್ಜೆ ಸಿನಿಮಾಗಳಲ್ಲಿ ಖಳನಾಯಕ ನಡೆಸುವ ರೇಪ್ ದೃಶ್ಯದಂತೆ ಕಾಣಿಸುತ್ತಿತ್ತು. ಒಬ್ಬ ಹುಡುಗ "ನೀನು ನನ್ನ ತಾಯಿಯಲ್ಲ, ನಮ್ಮವ್ವ ಬೆಟ್ಟದಾಗ ಇದ್ದಾಳೆ, ನೀನು ನಡಿ" ಎಂದು ತಾಯಿಗೆ ಹೇಳುತ್ತಿದ್ದ. ಮತ್ತೊಂದು ಕಡೆ ಮಧ್ಯ ವಯಸ್ಸಿನ ಹೆಂಗಸೊಬ್ಬಳು "ನನಗೆ ಗಂಧದ ಉಡಿಗೆ ಉಡಿಸಿರೋ(ಅಂದರೆ ಬೆತ್ತಲೆಸೇವೆ), ಆ ಬಟ್ಟೆ ತೆಗೀರೋ" ಎಂದು ಮಕ್ಕಳಿಗೆ ಆಜ್ಞೆ ಮಾಡುತ್ತಾ, ಮೈ ಮೇಲಿನ ಬಟ್ಟೆಗಳನ್ನು ಕೀಳುತ್ತಿದ್ದಳು. ಇದನ್ನೆಲ್ಲಾ ನೋಡುತ್ತಿದ್ದ ನಮಗೆ ಗಂಡು ಹೆಣ್ಣುಗಳ ಬಗ್ಗೆ ಇದ್ದ ಗೌರವ ಕಿಂಚಿತ್ತೂ ಉಳಿಯದೆ ಜುಗುಪ್ಸೆಯಿಂದ ವಾಕರಿಸುವಂತಾಯಿತು.

ಈ ಬೆತ್ತಲೆಸೇವೆಯಲ್ಲಿ ಹೆಚ್ಚಿನವರು ದಲಿತ ಹುಡುಗಿಯರು ಹಾಗೂ ಮಹಿಳೆಯರು. ೧೧ರಿಂದ ೧೫ ವರ್ಷದ ಹುಡುಗಿಯರು, ೨೦ ವರ್ಷದ ನವಯುವತಿಯರು, ಗೃಹಿಣಿಯರಿಂದ ೬೦ ವರ್ಷದ ಮುದುಕಿಯರವರೆಗೆ ರೇಣುಕಾ ಯಲ್ಲಮ್ಮನ ಹೆಸರಿನಲ್ಲಿ ಬೆತ್ತಲೆಪೂಜೆ ಮಾಡುತ್ತಿದ್ದರು. ಇದು ಪ್ರೊ.ಬಿ.ಕೃಷ್ಣಪ್ಪನವರಿಗೆ ಕಾಡುಮನುಷ್ಯರ ಅನಾಗರಿಕ ಬದುಕನ್ನು ನೆನಪಿಗೆ ತರುವಂತಿತ್ತು. ಆದರೆ ಸರ್ಕಾರಕ್ಕೆ ಸರ್ಕಾರಿ ಅಧಿಕಾರಿಗಳಿಗೆ ಮಾತ್ರ ಅದರಲ್ಲಿ ತಪ್ಪೇನೂ ಕಾಣಿಸಲಿಲ್ಲ. ಅವರು ಬೆತ್ತಲೆಸೇವೆಯಲ್ಲಿ ಬಾಗಿಯಾಗುವವರಿಗೆ ವಿಶೇಷ ಬಸ್ ವ್ಯವಸ್ಥೆ, ಬೆತ್ತಲೆಸೇವೆ ನಡೆಸಲು ಎಲ್ಲ ವ್ಯವಸ್ಥೆ ಮಾಡುತ್ತಿದ್ದರು.

ಇದನ್ನೆಲ್ಲಾ ನೋಡಿ ಮನನೊಂದ ಬಿ.ಕೃಷ್ಣಪ್ಪನವರು ಈ ಸಂಪೂರ್ಣ ಘಟನೆಯನ್ನು ಕುರಿತು ಯಥಾವತ್ತಾಗಿ ಒಂದು ಲೇಖನ ಬರೆದು, ಬೆತ್ತಲೆಸೇವೆಯ ಫೋಟೋ ಸಮೇತ 'ಲಂಕೇಶ್ ಪತ್ರಿಕೆ'ಗೆ ಕೊಟ್ಟರು. 'ಲಂಕೇಶ್ ಪತ್ರಿಕೆ' ಇದನ್ನು ಪ್ರಕಟಿಸಿದ ನಂತರ ರಾಜ್ಯ ವಿಧಾನಸಭೆಯಲ್ಲಿ ದೊಡ್ಡ ವಾಗ್ವಾದವೇ ನಡೆಯಿತು. ಕಡೆಗೂ ರಾಜ್ಯದ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆ ಮತ್ತು ಮಂತ್ರಿಗಳಾದ ಜೆ.ಎಚ್. ಪಟೇಲರು 'ಬೆತ್ತಲೆಸೇವೆ ನಿಲ್ಲಿಸುತ್ತೇವೆ' ಎಂದು ಹೇಳಿಕೆ ಕೊಟ್ಟರು.

೧೯೮೫ರ ಜಾತ್ರೆಯ ವೇಳೆಗೆ ಸರ್ಕಾರ ಮತ್ತೆ ಜಾಣಕಿವುಡು ಪ್ರದರ್ಶಿಸಿತ್ತು. ದಲಿತ ಸಂಘರ್ಷ ಸಮಿತಿ ಕರಪತ್ರ ಹಾಕಿ ಬೆತ್ತಲೆಸೇವೆಯಂಥ ಬರ್ಬರ ಪದ್ಧತಿಯನ್ನು ಕೈ ಬಿಡಬೇಕೆಂದು ಭಕ್ತಾದಿಗಳಲ್ಲಿ ಮನವಿ ಮಾಡಿಕೊಂಡಿತ್ತು. ಆಗ ಸ್ಥಳೀಯ ಪ್ರಭಾವಿ ಶಾಸಕರಾಗಿದ್ದ ಬಂಗಾರಪ್ಪನವರು ಸಹ ಬಹಿರಂಗವಾಗಿ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ. ಕರ್ನಾಟಕದಾದ್ಯಂತ ಸಮಾಜವಾದದ ಚಿಂತಕರಾಗಿ ಖ್ಯಾತರಾದ ಅದೇ ಜಿಲ್ಲೆಯ ಜೆ.ಎಚ್.ಪಟೇಲ್, ಎಸ್.ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಮೌನಕ್ಕೆ ಶರಣಾಗಿದ್ದು ಆಶ್ಚರ್ಯ ತರುವಂತಿತ್ತು. ಪ್ರೊ.ಬಿ.ಕೃಷ್ಣಪ್ಪನವರ ನೇತೃತ್ವದಲ್ಲಿ ದ.ಸಂ.ಸ. ಬೃಹತ್ ಮೆರವಣಿಗೆ ನಡೆಸಿ ಈ ಬರ್ಬರ ಪದ್ಧತಿಯನ್ನು ಖಂಡಿಸಿತು. ಆದರೆ ಇದ್ಯಾವುದರ ಪರಿವೆಯೇ ಇಲ್ಲದಂತೆ ಬೆತ್ತಲೆಸೇವೆ ಆ ವರ್ಷವೂ ನಿರಾತಂಕವಾಗಿ ನಡೆಯಿತು.

೧೯೮೬ರ ವೇಳೆಗೆ ಎಚ್ಚೆತ್ತುಕೊಂಡು ಸರ್ಕಾರ ಬೆತ್ತಲೆಸೇವೆ ನಿಲ್ಲಿಸಲು ಸೂಕ್ತ ಕ್ರಮ ಕೈಗೊಂಡಿತ್ತು. ಬಿ.ಕೃಷ್ಣಪ್ಪನವರು 'ಬೆತ್ತಲೆಸೇವೆ ವಿರೋಧ ಸಮಿತಿ' ರಚಿಸಿ, ಜಾತ್ರೆಗೆ ತಿಂಗಳ ಮುಂಚೆಯೇ ಸೊರಬ ತಾಲ್ಲೂಕಿನಾದ್ಯಂತ ಜನಸಂಪರ್ಕ ಸಭೆ ನಡೆಸಿ ಕರಪತ್ರಗಳನ್ನು ಹಂಚಿ, ಭಿತ್ತಿ ಪತ್ರಗಳನ್ನು ಅಂಟಿಸಿ ಜಾಗೃತಿ ಮೂಡಿಸಿದ್ದರು. ದಲಿತ ಕಲಾಮಂಡಳಿಯ ಎರಡು ನಾಟಕ ತಂಡಗಳು ಜನ ಜಾಗೃತಿ ಮೂಡಿಸಿದವು.

ಪ್ರೊ.ಬಿ.ಕೃಷ್ಣಪ್ಪನವರು ಯಾವುದೇ ಕಾರಣಕ್ಕೂ ಬೆತ್ತಲೆಸೇವೆ ನಡೆಸಲು ಅನುವಾಗದಂತೆ ಗೃಹಮಂತ್ರಿಗಳನ್ನು, ಶಿವಮೊಗ್ಗದ ಜಿಲ್ಲಾಧಿಕಾರಿಗಳನ್ನು, ಪೋಲಿಸ್ ವರಿಷ್ಠಾಧಿಕಾರಿಗಳನ್ನು ಭೇಟಿ ಮಾಡಿ ನಿಷೇಧದ ಜಾರಿಗೆ ಆಗ್ರಹಿಸಿದರು. ಜಿಲ್ಲಾಧಿಕಾರಿಯವರು ಶಿವಮೊಗ್ಗದ ಎಲ್ಲಾ ಅಧಿಕಾರಿಗಳ ಹಾಗೂ ಸಮಾಜ ಕಾರ್ಯಕರ್ತರ ಸಭೆ ಕರೆದು ಚರ್ಚಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸೂಕ್ತ ರಕ್ಷಣೆ, ಬಂದೋಬಸ್ತ್ ಮಾಡುವುದಾಗಿ ಆಶ್ವಾಸನೆ ಕೊಟ್ಟರು. ಜಾತ್ರೆಗೆ ಒಂದು ತಿಂಗಳ ಮುಂಚಿನಿಂದಲೂ ಜಾಗೃತಿ ಮೂಡಿಸಲು ಪ್ರೊ.ಬಿ.ಕೃಷ್ಣಪ್ಪನವರು ಹಾಗೂ ಸರ್ಕಾರದ ಹಲವು ಇಲಾಖೆಗಳು ಹಾಗೂ ವಿಚಾರವಂತರು ಶ್ರಮಿಸಿದ್ದರು.

ಇದೆಲ್ಲದಕ್ಕೂ ಪಟ್ಟಭದ್ರ ಹಿತಾಸಕ್ತರಿಂದ ಬಾರಿ ವಿರೋಧ ಉಂಟಾಯಿತು. ಬೆತ್ತಲೆಸೇವೆ ನಿಂತರೆ ಜಾತ್ರೆ ನಿಲ್ಲುತ್ತದೆ. ಆಗ ಚಂದ್ರಗುತ್ತಿಗೆ ಮಹತ್ವ ಕಡಿಮೆಯಾಗಿ ಭಕ್ತಾದಿಗಳ ಸಂಖ್ಯೆ ಇಳಿಮುಖವಾಗುತ್ತದೆ. ಅದರಿಂದ ದೇವಸ್ಥಾನದ ಧರ್ಮದರ್ಶಿಯೂ ಸೇರಿದಂತೆ ಹಲವರಿಗೆ ಆರ್ಥಿಕವಾಗಿ ಬಾರಿ ನಷ್ಟವುಂಟಾಗುತ್ತದೆ. ಇನ್ನೂ ಕೆಲವು ಮೂಲಭೂತವಾದಿಗಳು, ಪಟ್ಟಭದ್ರ ಹಿತಾಸಕ್ತಿಗಳೂಡಗೂಡಿ ಬೆತ್ತಲೆಸೇವೆ ಭಕ್ತರನ್ನು 'ಇಂದು ಬೆತ್ತಲೆಸೇವೆ ಬೇಡ ಎಂದು ಹೇಳುತ್ತಾರೆ, ನಾಳೆ ದೇವರ ಪೂಜೆಯೇ ಬೇಡ ಎನ್ನುತ್ತಾರೆ' ಎಂದು ಪ್ರಚೋದಿಸಿದ್ದರು. "ಫೋಟೋ ಏಕೆ ತೆಗೀತೀರಿ, ಬೆತ್ತಲೆ ಹೋಗಬೇಡಿ ಎಂದರೆ ಬಟ್ಟೆ ಕೊಡಿ, ಜೈನ ಸನ್ಯಾಸಿಗಳನ್ನೇಕೆ ತಡೆಯುತ್ತಿಲ್ಲ? ಕ್ಯಾಬರೆ ಏಕೆ ತಡೆಯಬಾರದು? ಗೋವಾ ಬೀಚಿನ ಹಿಪ್ಪಿಗಳನ್ನು ಹಿಡಿಯಿರಿ" ಎಂದು ಈ ಮೂಲಭೂತವಾದಿಗಳು, ಪಟ್ಟಭದ್ರಹಿತಾಸಕ್ತಿಗಳು ಪ್ರಚೋದಿಸಿದ್ದರು.

ಪಟ್ಟಭದ್ರ ಹಿತಾಸಕ್ತರ ಸಂಚುಗಳಿಂದಾಗಿ ಜಾತ್ರೆಯ ವೇಳೆ ಗಲಭೆಗೆ ಕಾರಣವಾಯಿತು. ಕೆಲವು ಪುಂಡರು ಗಲಭೆ ನಡೆದ ಸಂದರ್ಭದಲ್ಲಿ ಪ್ರೊ.ಬಿ.ಕೃಷ್ಣಪ್ಪನವರ ಮೇಲೆ ಮಾರಣಾಂತಿಕ ಹಲ್ಲೆ ಮಾಡಲೂ ಯತ್ನಿಸಿದರು. ಅದೃಷ್ಟವಶಾತ್ ಸ್ವಲ್ಪದರಲ್ಲಿ ಬಿ.ಕೃಷ್ಣಪ್ಪನವರು ಪಾರಾದರು. ಪಟ್ಟಭದ್ರ ಹಿತಾಸಕ್ತರು ಹಾಗೂ ಪೊಲೀಸರ ನಿಷ್ಕ್ರಿಯತೆಯಿಂದಾಗಿ ಆ ವರ್ಷವೂ ಬೆತ್ತಲೆಸೇವೆ ನಡೆಯಿತು.

ಇದಾದ ನಂತರ ಬಿ.ಕೃಷ್ಣಪ್ಪನವರು ಸರ್ಕಾರವನ್ನು ಆಗ್ರಹಪೂರ್ವಕವಾಗಿ ಹೇಳಿದರು, "ಇದು ಯಾವ ನಾಗರಿಕ ಸಮಾಜಕ್ಕೂ ಶೋಭೆ ತರುವ ವಿಚಾರವಲ್ಲ. ಕೆಲವು ಬಾರಿ ಮಾತಿನಿಂದ ಸರಿಪಡಿಸಲಾಗದಿರುವುದನ್ನು ಕಾನೂನಿನಿಂದ ಸರಿಪಡಿಸಬೇಕಾಗುತ್ತದೆ. ಪಟ್ಟಭದ್ರ ಹಿತಾಸಕ್ತಿಗಳನ್ನು ಹತ್ತಿಕ್ಕಬೇಕಾಗುತ್ತದೆ. ಔಷಧಿ ನುಂಗಲು ಹಠ ಮಾಡುವ ಮಗುವಿಗೆ ತಾಯಿ ಮೂಗು ಹಿಡಿದು ಸ್ವಲ್ಪ ಹಿಂಸೆಯಾದರೂ ಔಷಧಿ ಕುಡಿಸುವಂತೆ, ಕಠಿಣವಾದರೂ ಕಾನೂನಿನ ಕ್ರಮವನ್ನು ಜರುಗಿಸಿ ಈ ಅನಿಷ್ಟ ಪದ್ಧತಿಯನ್ನು ನಿಲ್ಲಿಸಬೇಕು. ಪ್ರಥಮ ಹಂತವಾಗಿ ತಾತ್ಕಾಲಿಕವಾಗಿಯಾದರೂ ಜಾತ್ರೆಯನ್ನು ಕೆಲವು ವರ್ಷಗಳವರೆಗೆ ರದ್ದುಗೊಳಿಸಬೇಕೆಂದು ಒತ್ತಾಯಿಸುತ್ತೇನೆ."[೯]

ಇವೆಲ್ಲ ಪ್ರಯತ್ನಗಳ ಫಲವಾಗಿ ಜಾತ್ರೆಯಲ್ಲಿ ಬೆತ್ತಲೆಸೇವೆ ನಿಷೇಧವನ್ನು ಸರ್ಕಾರ ಜಾರಿಗೆ ತಂದಿತು. ಈ ಹೋರಾಟದ ಮೂಲಕ ನಿಜವಾದ ಅರ್ಥದಲ್ಲಿ ದಲಿತ ಹೆಣ್ಣುಮಕ್ಕಳ ಅಂಧಕಾರದ ಬೆತ್ತಲೆಯನ್ನು ತೊಲಗಿಸಿ ಜ್ಞಾನದ ಬಟ್ಟೆ ಉಡಿಸಿ, ಮಾನ ಮುಚ್ಚಿ ಅವ್ವನ ಪಾತ್ರವನ್ನು ಕೃಷ್ಣಪ್ಪನವರು ನಿರ್ವಹಿಸಿದರು.

ಚಿಂಚನಸೂರು: ದಲಿತ ಹೆಣ್ಣುಗಳ ಬೆತ್ತಲೆ ಮೆರವಣಿಗೆಯ ವಿರುದ್ಧ ಹೋರಾಟ

ಗುಲ್ಬರ್ಗಾದಿಂದ ಕೇವಲ ೨೦ ಮೈಲಿ ದೂರದಲ್ಲಿ ಚಿಂಚನಸೂರ ಎಂಬ ಹಳ್ಳಿಯಿದೆ. ಅಲ್ಲಿ ಶೇ.೩೦ರಷ್ಟು ಮನೆಗಳು ದಲಿತರವು. ಅದರಲ್ಲಿ ಕೇವಲ ಶೇ.೧೬ ಜನಕ್ಕೆ ಭೂಮಿಯನ್ನು, ಇನ್ನುಳಿದ ಶೇ.೮೪ರಷ್ಟು ಕುಟುಂಬಗಳು ಬಡವರ ಒಪ್ಪೊತ್ತಿನ ಗಂಜಿಗೂ ಕಷ್ಟಪಡುವವರಾಗಿದ್ದಾರೆ. ಆ ಊರಿನಲ್ಲಿ ಮಾಪೂರ ತಾಯಿಯ ದೇವಸ್ಥಾನವಿದೆ. ಅಲ್ಲಿ ಹರಕೆ ಕಟ್ಟಿಕೊಂಡ ಸವರ್ಣೀಯ ಮಹಿಳೆಯರು ಬೇವಿನ ಸೊಪ್ಪನ್ನು ತಮ್ಮ ಗುಪ್ತಾಂಗಗಳಿಗೆ ಮುಚ್ಚಿಕೊಂಡು ಮೆರವಣಿಗೆ ಹೋಗುತ್ತಾರೆ. ಮುಂದೆ ಈ ದಲಿತ ಹೆಣ್ಣುಮಕ್ಕಳನ್ನು ದೇವದಾಸಿಯಾಗಿಯೂ ಇಲ್ಲವೇ ಜೋಗತಿಯಾಗಿಯೂ ಮಾಡಲಾಗುತ್ತದೆ. ಇದನ್ನು ತಿಳಿದು ಪ್ರೊ.ಬಿ.ಕೃಷ್ಣಪ್ಪನವರು ಅಲ್ಲಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು. ಅದನ್ನು ಅವರು ತಮ್ಮ ಲೇಖನದಲ್ಲಿ ಸ್ತ್ರೀಯರ ಬೆತ್ತಲೆ ಮೆರವಣಿಗೆ ನಡೆಯುತ್ತಿದೆ ಎಂದರೆ ಯಾವ ನಾಗರಿಕನೂ ನಾಚಿಕೆಯಿಂದ ತಲೆ ತಗ್ಗಿಸಬೇಕಾದ ಪ್ರಸಂಗವಾಗಿದೆ. ಜನ ನಾಚಿಕೆಯಿಂದ ತಲೆ ತಗ್ಗಿಸುವಂತಿಲ್ಲ. ಈ ಸ್ತ್ರೀಯರ ಬೆತ್ತಲೆ ಮೆರವಣಿಗೆ ನೋಡಲು ನೂರಾರು ಮೈಲಿಗಳಿಂದ ಕಿಕ್ಕಿರಿದು

ಬರುತ್ತಾರೆ. ಅಂಥ ಜಾತ್ರೆಗೆ ಸರ್ಕಾರ ವಿಶೇಷ ಬಸ್ ವ್ಯವಸ್ಥೆ ಮಾಡುತ್ತದೆ. ಪೊಲೀಸ್ ರಕ್ಷಣೆ ಕೊಡುತ್ತದೆ. ನೀರಿನ ವ್ಯವಸ್ಥೆ, ಹೆಂಡ ಸಾರಾಯಿ ಸರಬರಾಜು ವಿಶೇಷವಾಗಿ ಮಾಡಲಾಗಿರುತ್ತದೆ. ಆ ಹೆಣ್ಣು ಮಕ್ಕಳು ಬ್ರಾಹ್ಮಣ-ಲಿಂಗಾಯತ-ಮತ್ಯಾವುದೇ ಉನ್ನತ ಜಾತಿಯವರಾಗಿದ್ದರೆ ಆ ಮಾತು ಬೇರೆ. ಆದರೆ ಅಂಥ ಹೆಣ್ಣುಮಕ್ಕಳೆಲ್ಲಾ ಹೊಲೆ ಮಾದಿಗರು."[೧೦]

ಈ ಕುರಿತು ಎಲ್ಲಾ ಮಾಹಿತಿಯನ್ನು ಕಲೆಹಾಕಿದ ಪ್ರೊ.ಬಿ.ಕೃಷ್ಣಪ್ಪನವರು ಹಾಗೂ ಚೆನ್ನಣ್ಣ ವಾಲೀಕಾರ ಅವರು ಆಗ ಗುಲ್ಬರ್ಗಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ವಿಜಯ ಸಾಸನೂರರ ಹತ್ತಿರ ಹೋದರು. ಆದರೆ ಪೊಲೀಸ್ ವರಿಷ್ಠಾಧಿಕಾರಿಗಳು 'ಈಗ ಅಂಥ ಪದ್ಧತಿ ಇಲ್ಲ, ಎಲ್ಲ ನಿಂತಿದೆ, ನಾನು ಮತ್ತು ಗುಲ್ಬರ್ಗಾ ಸ್ನಾತಕೋತ್ತರ ಸಮಾಜಶಾಸ್ತ್ರದ ಅಧ್ಯಾಪಕರು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿ ಈ ನಿರ್ಧಾರಕ್ಕೆ ಬಂದಿದ್ದೇವೆ' ಎಂದು ಹೇಳಿದರು. ಆಗ ಪ್ರೊ.ಬಿ.ಕೃಷ್ಣಪ್ಪನವರು ತಾವು ಕಳೆದ ವರ್ಷ ಕಣ್ಣಾರೆ ಕಂಡು ಜನರನ್ನು ಭೇಟಿ ಮಾಡಿದ್ದನ್ನು ತಿಳಿಸಿ, ಈಗಲೂ ಅವರು ಒಪ್ಪದಿದ್ದರೆ ಕರಪತ್ರ ಹಂಚಿ, ಪತ್ರಿಕೆ ಹೇಳಿಕೆ ಕೊಡುತ್ತೇವೆ ಎಂದು ಹೇಳಿದರು. ಅದಕ್ಕೆ ಅಲ್ಲಿನ ಪೊಲೀಸ್ ಅಧಿಕಾರಿಯೊಬ್ಬರು 'ಅದರಿಂದ ಏನು ಪ್ರಯೋಜನ? ಅವರೆಲ್ಲ ದಡ್ಡ ಜನ, ಅವರಿಗೆ ಅರ್ಥ ಆಗುವುದಿಲ್ಲ' ಎಂದು ಹೇಳಿದರು. ಅದಕ್ಕೆ ಪ್ರೊ.ಬಿ.ಕೃಷ್ಣಪ್ಪ ನವರು "ಅತೀ ನಿರ್ಗತಿಕರಾದ್ದರಿಂದ ಹೊಟ್ಟೆಗಿಲ್ಲದೆ ಜನ ಈ ಪದ್ಧತಿಗೆ ಬಲಿಯಾಗಿದ್ದಾರೆ. ಆದ್ದರಿಂದ ನಾವು ಜಿಲ್ಲಾಧಿಕಾರಿಯವರನ್ನು ಭೇಟಿಯಾಗುತ್ತೇವೆ. ನೀವೂ ಕೂಡಾ ಜಿಲ್ಲಾಧಿಕಾರಿಯವರಿಗೆ ಒಂದು ಮಾತನ್ನು ಹೇಳಿ ಹರಿಜನರಿಗೆ ತಲಾ ಒಂದೊಂದು ಎಕರೆ ಭೂಮಿ ಕೊಟ್ಟರೆ ಬಹುಶಃ ಜನ ಈ ಪದ್ಧತಿ ಬಿಡಬಹುದು." ಅದಕ್ಕೆ ಪೊಲೀಸ್ ಅಧಿಕಾರಿಗಳು ಒಪ್ಪಲಿಲ್ಲ. ಪ್ರೊ.ಬಿ.ಕೃಷ್ಣಪ್ಪನವರು ಆ ಸ್ಥಿತಿಗೆ ಮರುಗಿ ಅಲ್ಲಿನ ವಿಚಾರವಂತರೊಂದಿಗೆ ಚರ್ಚಿಸಿ ಮರಳಿ ಬಂದರು.

ಚಿತ್ರದುರ್ಗ ಜಿಲ್ಲೆಯ ಹೋರಾಟಗಳು

ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಸುತ್ತಮುತ್ತ ಬಹುತೇಕ ಹಳ್ಳಿಗಳಲ್ಲಿ ಸವರ್ಣೀಯ ಜಾತೀಯತೆ ಹೆಚ್ಚು. ಇವರ ಜಮೀನಿನಲ್ಲಿ ನೂರಾರು ವರ್ಷಗಳಿಂದ ದಲಿತರು ಜೀತದಾಳುಗಳಾಗಿ ದುಡಿಯುತ್ತಿದ್ದರು. ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತಂದರು. ಅದರಲ್ಲಿ ಪ್ರಮುಖವಾಗಿ ಜೀತ ವಿಮೋಚನೆಯು ಒಂದು. ಇದನ್ನು ಅರಿತ ಕೆಲವು ದಲಿತರು ಕಾನೂನುರೀತ್ಯ ಜೀತ ಬಿಡಲು ಆರಂಭಿಸಿದರು. ಇದು ಎಲ್ಲೆಡೆ ವ್ಯಾಪಿಸಿತ್ತು. ಇದರಿಂದ ಸವರ್ಣೀಯರು ಸಿಟ್ಟಿಗೆದ್ದು ದಲಿತರ ಮೇಲೆ ದೌರ್ಜನ್ಯವೆಸಗಿದರು. ದಾವಣಗೆರೆ ತಾಲ್ಲೂಕಿನ ಕುರುಡಿಯಲ್ಲಿ ಸವರ್ಣೀಯರು ಮಾದಿಗನ ಕೇರಿಗೆ ನುಗ್ಗಿ ಹಲ್ಲೆ ನಡೆಸಿದರು. ಇವು ಬಹುತೇಕ ಹಳ್ಳಿಗಳಲ್ಲಿ ಸಾಮಾನ್ಯವಾಗತೊಡಗಿದ್ದಾಗ ದಲಿತರು ಸಂಘಟಿತರಾಗಿ ಹೋರಾಟ ಮಾಡಲು ಆರಂಭಿಸಿದ್ದರು. ಅದಕ್ಕೆ ಪ್ರೊ.ಬಿ.ಕೃಷ್ಣಪ್ಪನವರ ಚಿಂತನೆ ಸ್ಫೂರ್ತಿಯಾಗಿತ್ತು.

ಜಗಳೂರು ತಾಲ್ಲೂಕಿನ ಗಿಡ್ಡನಕಟ್ಟೆಯ ದಲಿತರ ಕೊಲೆ ಪ್ರಕರಣವನ್ನು ಕೈಗೆತ್ತಿಕೊಂಡು ದಲಿತ ಸಂಘರ್ಷ ಸಮಿತಿಯವರು ೪೫ ಕಿ.ಮೀ. ಕಾಲ್ನಡಿಗೆ ಮಾಡಿದರು. ಅದರಲ್ಲಿ ಪ್ರೊ.ಬಿ.ಕೃಷ್ಣಪ್ಪನವರ ಪಾತ್ರವು ಪ್ರಮುಖವಾಗಿತ್ತು. ಕೊಲೆಗಡುಕರಿಗೆ ಶಿಕ್ಷೆಯಾಯಿತು.

ಕೆಲವು ಸವರ್ಣೀಯರು ತಾವು ಬೇಡ ಜಂಗಮರೆಂದು ಸುಳ್ಳು ಪ್ರಮಾಣಪತ್ರ ನೀಡಿ ಹಲವು ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದರು. ನಿಡುಮಾಮಿಡಿ ಸ್ವಾಮೀಜಿಯ ಸಹೋದರನಾದ ಸದಾನಂದಯ್ಯ ಎಂಬುವವರು ಸುಳ್ಳು ಜಾತಿ ಪ್ರಮಾಣಪತ್ರ ನೀಡಿ ಮೀಸಲು ಕ್ಷೇತ್ರದಿಂದ ಜಿಲ್ಲಾ ಪಂಚಾಯಿತಿ ಸದಸ್ಯರಾದರು. ಪ್ರೊ.ಬಿ.ಕೃಷ್ಣಪ್ಪನವರ ನೇತೃತ್ವದಲ್ಲಿ ದ.ಸಂ.ಸ. ಉಗ್ರವಾದ ಹೋರಾಟ ಮಾಡಿತು. ಇದರಿಂದ ಖೋಟಾ ಮೀಸಲು ಕದಿಯುವ ಜನ ಕಡಿಮೆಯಾದರು. ದಲಿತರಿಗೆ ಯಾವುದೇ ರೀತಿಯ ಅನ್ಯಾಯವಾದರೂ ಪ್ರೊ.ಬಿ.ಕೃಷ್ಣಪ್ಪನವರು ಸಹಿಸುತ್ತಿರಲಿಲ್ಲ.

ದಲಿತ ವಿದ್ಯಾರ್ಥಿ ಒಕ್ಕೂಟ

ದಲಿತ ವಿದ್ಯಾರ್ಥಿಗಳ ಕಷ್ಟ ಕಾರ್ಪಣ್ಯಗಳನ್ನು ಹೋಗಲಾಡಿಸಲು ಹಾಗೂ ದಲಿತಪ್ರಜ್ಞೆಯನ್ನು ಮೂಡಿಸಲು ಬಿ.ಕೃಷ್ಣಪ್ಪನವರು ೧೯೮೫ರಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟವನ್ನು ಸ್ಥಾಪಿಸಿದರು. ಅವರು ೧೯೮೦ರಲ್ಲಿ ಸಂಘಟಿಸಿದ "ಹೆಂಡ-ಸಾರಾಯಿ ಬೇಡ, ಆಶ್ರಮ ಶಾಲೆ ಕೊಡಿ" ಹೋರಾಟ ದಲಿತ ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತಮ ಬುನಾದಿಯನ್ನು ಹಾಕುವಲ್ಲಿ ಯಶಸ್ವಿಯಾಯಿತು. ಸರ್ಕಾರ ತನ್ನ ಯೋಜನೆಯಡಿಯಲ್ಲಿ ಆಶ್ರಯಶಾಲೆಗಳನ್ನು ತೆರೆಯಿತು.

ಅಡಿಟಿಪ್ಪಣಿಗಳು

೧. ಲಿಂಗಪ್ಪ ಎಚ್., **ಹೋರಾಟಗಾರ ಬಿ.ಕೃಷ್ಣಪ್ಪ,** ಪು.೧೦

೨. ಅದೇ, ಪು.೧೧

೩. ಅದೇ, ಪು.೧೦

೪. ಕೇಶವ ಎಸ್.ಆರ್., **ಪ್ರೊ.ಬಿ.ಕೃಷ್ಣಪ್ಪ ದಲಿತರ ಮನೆ ಮನೆಯ ಜ್ಯೋತಿ,** ಪು.೬

೫. ಅದೇ, ಪು.೭

೬. ಅದೇ, ಪು.೮

೭. ಅದೇ, ಪು.೯

೮. ಮಹೇಶ ಸಿ.ಕೆ., **ಶೋಷಿತರ ಹಣತೆ ಪ್ರೊ.ಬಿ.ಕೃಷ್ಣಪ್ಪ,** ಪು.೨೯

೯. ಕೇಶವ ಎಸ್.ಆರ್., **ಪೋರ್ವೋಕ್ತ** ಪು.೩೦

೧೦. ಅದೇ, ಪು.೩೧

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ದಲಿತ ಸಮುದಾಯದ ಉನ್ನತಿಗಾಗಿ ಅವಿಶ್ರಾಂತವಾಗಿ ದುಡಿದ ಪ್ರೊ.ಬಿ.ಕೃಷ್ಣಪ್ಪ ಅವರು ಸಾಮಾಜಿಕ ಚಳುವಳಿಗಳ ಇತಿಹಾಸದಲ್ಲಿ ಮರೆಯಲಾಗದ ವ್ಯಕ್ತಿಯಾಗಿದ್ದಾರೆ. ಚಳುವಳಿಯ ಭಾಗವಾಗಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಕುರಿತು ವಿಶೇಷ ಅರಿವುಳ್ಳವರಾಗಿದ್ದರು. ಪ್ರೊ.ಬಿ.ಕೃಷ್ಣಪ್ಪ ಅವರು ವೃತ್ತಿಯಲ್ಲಿ ಕನ್ನಡ ಪ್ರಾಧ್ಯಾಪಕ. ಪ್ರವೃತ್ತಿಯಲ್ಲಿ ಚಿಂತನಶೀಲ, ಕ್ರಿಯಾಶೀಲ ಸಾಮಾಜಿಕ ಚಿಂತಕರಾಗಿದ್ದಾರೆ. ಈ ದೇಶದ ಜಾತಿಪದ್ಧತಿ, ಆರ್ಥಿಕ ಅಸಮಾನತೆ, ಸಾಮಾಜಿಕ ವೈಷಮ್ಯ, ರಾಜಕೀಯ ಸ್ಥಿತಿಗತಿಯನ್ನು ತಮ್ಮ ಸಾಹಿತ್ಯದಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಸಮಾಜವನ್ನು ಕಾಡುವ ನಾನಾ ಬಗೆಯ ಪಿಡುಗುಗಳನ್ನು ಅಳಿಸಿಹಾಕಬೇಕೆಂಬ ಪ್ರಾಮಾಣಿಕ ಹಾಗೂ ತೀವ್ರ ಕಾಳಜಿ ಹೊಂದಿದ್ದರು. ಅವರು ಕೆಳವರ್ಗದ ವಿದ್ಯಾರ್ಥಿಗಳಿಗೆ ಸಾಮಾಜಿಕ ಹೋರಾಟ ಮತ್ತು ಸಾಹಿತ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರು. ಸಾಮಾಜಿಕ, ಅರ್ಥಿಕ, ರಾಜಕೀಯ ಅಜ್ಞಾತದಲ್ಲಿ ಮೈಮರೆತ ಮುಗ್ಧ ಕೆಳವರ್ಗ ಹಾಗೂ ದಲಿತ ಜನತೆಯಲ್ಲಿ ಪ್ರಜ್ಞೆಯನ್ನು ಮೂಡಿಸಿದರು.

ಪ್ರೊ.ಬಿ.ಕೃಷ್ಣಪ್ಪ ಅವರು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮುಂಚೂಣಿ ನಾಯಕರಾಗಿದ್ದರು. ಮೇಲುವರ್ಗದವರ ದೌರ್ಜನ್ಯಗಳ ಮತ್ತು ದಬ್ಬಾಳಿಕೆಗಳ ವಿರುದ್ಧ, ಸರ್ಕಾರದ ಅನ್ಯಾಯ ಅಸಮಾನತೆಗಳ ವಿರುದ್ಧ ಹಾಗೂ ಜಾತಿವ್ಯವಸ್ಥೆ, ಬೆತ್ತಲಸೇವೆ, ಲಂಚ, ಕುಡಿತ, ಭ್ರಷ್ಟಾಚಾರ ಮುಂತಾದ ಸಾಮಾಜಿಕ ಪಿಡುಗುಗಳ ವಿರುದ್ಧ ಅವರು ಸಂಘಟಿಸಿದ ಹೋರಾಟಗಳು ನೂರಾರು. ಅವರ ಅವಿರತ ಹೋರಾಟದ ಫಲವಾಗಿ ದಲಿತ ಸಂಘರ್ಷ ಸಮಿತಿಯ ಮೂಲಕ ಒಗ್ಗೂಡಿ ತಮ್ಮ ನ್ಯಾಯಸಮ್ಮತವಾದ ಸಾಮಾಜಿಕ ನ್ಯಾಯ ಮತ್ತು ಕೆಳವರ್ಗದವರಿಗೆ ಇರುವ ಹಕ್ಕುಗಳ ಕುರಿತು ಎಚ್ಚರವನ್ನು ನೀಡಲು ಪ್ರಯತ್ನಿಸಿದರು.

ಪ್ರೊ.ಬಿ.ಕೃಷ್ಣಪ್ಪ ಅವರ ವೈಚಾರಿಕ ನೆಲೆಗಟ್ಟಿನ ಮೇಲೆ ರೂಪಿಸಿದ ಸಾಹಿತ್ಯ, ಬೋಧನೆ, ಲೇಖನ, ಬರಹ, ಭಾಷಣ, ಪ್ರತಿಭಟನೆ ಮುಂತಾದವುಗಳ ಮೂಲಕ ಹಲವು ಹೋರಾಟಗಳನ್ನು ಹಮ್ಮಿಕೊಂಡು ಕರ್ನಾಟಕದಲ್ಲಿ ಕೆಳವರ್ಗಕ್ಕೆ ಹಾಗೂ ದಲಿತರಿಗೆ ಸ್ವಾಭಿಮಾನವನ್ನು ತುಂಬಲು ಯಶಸ್ವಿಯಾದರು.

ಸಾಹಿತ್ಯ, ರಾಜಕಾರಣ, ಜಾತಿವಿನಾಶ, ಶಿಕ್ಷಣ, ಮೀಸಲಾತಿ, ಕಾವ್ಯ ವಿಮರ್ಶೆ ಮುಂತಾದ ಕ್ಷೇತ್ರಗಳನ್ನು ಕುರಿತು ಪ್ರೊ.ಬಿ.ಕೃಷ್ಣಪ್ಪನವರು ಬರೆದ ಲೇಖನಗಳು ಮಹತ್ವವಾದ ಸಾಹಿತ್ಯಿಕ ಕೊಡುಗೆಯಾಗಿವೆ. ಬಿ.ಕೃಷ್ಣಪ್ಪನವರು ಬರೆದ 'ಕುವೆಂಪು ಕಾದಂಬರಿಗಳಲ್ಲಿ ದಲಿತ ಪಾತ್ರ ಚಿತ್ರಣ' ಲೇಖನವು ಈ ಹೊತ್ತಿಗೂ ಗಮನಾರ್ಹವಾಗಿ ಉಳಿದಿದೆ. ದಲಿತ ಸಾಹಿತ್ಯ ವಿಮರ್ಶೆಗೆ ನೆಲೆಯನ್ನು ಒದಗಿಸಿದ ಲೇಖನವಿದು.

ಫುಲೆ, ನಾರಾಯಣಗುರು, ಅಂಬೇಡ್ಕರ್, ಲೋಹಿಯಾ, ಜಯಪ್ರಕಾಶ್ ನಾರಾಯಣ, ಅಂಥವರ ಪ್ರಭಾವ ಬಿ.ಕೃಷ್ಣಪ್ಪನವರ ಮೇಲಿತ್ತು. ಅಂಬೇಡ್ಕರ್ ಅವರ ತತ್ವಸಿದ್ಧಾಂತಗಳಲ್ಲಿ ನಂಬಿಕೆಯನ್ನು ಹೊಂದಿದ್ದ ಕೃಷ್ಣಪ್ಪನವರು ದಲಿತರು ಉದ್ಧಾರವಾಗಬೇಕಾದರೆ ಶಿಕ್ಷಣ ಅವಶ್ಯಕ, ಶಿಕ್ಷಣದಿಂದಲೇ ದಲಿತರು ಶಿಕ್ಷಿತರಾಗಿ, ವಿಚಾರವಂತರಾಗಿ ಶೋಷಣೆಯ ವಿರುದ್ಧ ಹೋರಾಡಿ ಸಮಾನತೆಯನ್ನು ಪಡೆಯುತ್ತಾರೆ ಎಂಬ ನಂಬಿಕೆಯನ್ನು ಹೊಂದಿದ್ದರು.

ಗಾಂಧೀಜಿಯವರು ಅಸ್ಪೃಶ್ಯರನ್ನು 'ಹರಿಜನ' ಎಂದು ಕರೆದಿದ್ದರು. ಅಂಬೇಡ್ಕರ್ ಅವರು 'ಹರಿಜನ' ಎಂಬ ಪದವನ್ನು ವಿರೋಧಿಸಿದರು. 'ಅಸ್ಪೃಶ್ಯರು ದೇವರ ಮಕ್ಕಳಾದರೆ, ಸ್ಪೃಶ್ಯರು ರಾಕ್ಷಸರ ಮಕ್ಕಳೇ' ಎಂದು ಕೇಳಿದ್ದರು. 'ಅಸ್ಪೃಶ್ಯರನ್ನು ಅಸ್ಪೃಶ್ಯ' ಎಂದು ಕರೆಯಿರಿ. ಏಕೆಂದರೆ ದಲಿತರಿಗೆ ಅಂಟಿದ ಈ ಪದ ಅಳಿಸಿ ಹೋಗಬೇಕೆಂದು ಅಸ್ಪೃಶ್ಯ ಎಂಬ ಪದದ ಬದಲಾಗಿ ಹರಿಜನ ಎಂಬ ಇನ್ನೊಂದು ಶಬ್ದವನ್ನು ಉಳಿಸಿಕೊಂಡರು. ದಲಿತರಿಗೆ ಇರುವ ಅವಮಾನ ಮಾತ್ರ ತಪ್ಪುತ್ತಿರಲಿಲ್ಲ. ಅಂಬೇಡ್ಕರ್ ಅವರು ಸರಿಯಾದ ಚಿಂತಕರಾಗಿದ್ದರೆಂದು ಬಿ.ಕೃಷ್ಣಪ್ಪನವರು ಅವರ ಚಿಂತನೆಗಳನ್ನು ಸಮಕಾಲೀನ ಭಾರತದ ಮತ್ತು ಕರ್ನಾಟಕದ ದಲಿತರ ಸಂದರ್ಭದಲ್ಲಿ ಅರ್ಥೈಸಲು ಪ್ರಯತ್ನಿಸುತ್ತಿದ್ದರು. ಕೆಟ್ಟದನ್ನು ಕೆಟ್ಟದಾಗೆ ಕರೆದರೆ, ರೋಗಿಯನ್ನು ರೋಗಿ ಎಂದು ಕರೆಯಬೇಕು. ಕಾರಣ ರೋಗಿಗೆ ತನ್ನ ಕಾಯಿಲೆ ಬಗ್ಗೆ ತಿಳುವಳಿಕೆ ಬರುತ್ತದೆ.

ಅಂಬೇಡ್ಕರ್ ಅವರು ಹೇಳಿದಂತೆ 'ಭಾರತದಲ್ಲಿ ಅಸ್ಪೃಶ್ಯರು ಗುಲಾಮಗಿರಿಯ ಸ್ಥಿತಿಯಲ್ಲಿದ್ದಾರೆ. ಆದರೆ ಅವರ ಅರಿವು ಅವರಿಗಿಲ್ಲ. ಆದ್ದರಿಂದ ಒಬ್ಬ ಗುಲಾಮನಿಗೆ ಅವನು ಗುಲಾಮ ಎಂಬ ಅರಿವು ಹೇಳಿ ಕೊಡಿ. ಅವನು ಗುಲಾಮಗಿರಿಯ ವಿರುದ್ಧ ಹೋರಾಡುತ್ತಾನೆ' ಅಸ್ಪೃಶ್ಯರಾದ ಒಂದೇ ಕಾರಣಕ್ಕೆ ಮೇಲುವರ್ಗದವರ ಅನ್ಯಾಯ, ಅಸಮಾನತೆ, ದೌರ್ಜನ್ಯ, ಶೋಷಣೆಗೆ ಗುರಿಯಾಗುತ್ತಿದ್ದಾರೆ. ಶೋಷಣೆ ಅಸಮಾನತೆಯನ್ನು ಅನುಭವಿಸುತ್ತಿರುವ ಶೋಷಿತರೆಲ್ಲರೂ ಸಂಘಟಿತರಾಗಿ ಹೋರಾಟಕ್ಕೆ ಮುಂದಾಗಬೇಕು. ತಮ್ಮ ನ್ಯಾಯಯುತವಾದ ಬೇಡಿಕೆಯನ್ನು ಪಡೆದುಕೊಳ್ಳಬೇಕೆಂಬುದು ಕೃಷ್ಣಪ್ಪನವರ ಧ್ಯೇಯವಾಗಿತ್ತು.

ಹಿಂದೂ ಧರ್ಮದ ವರ್ಣವ್ಯವಸ್ಥೆ ಮತ್ತು ಜಾತಿವ್ಯವಸ್ಥೆ ವಿರುದ್ಧ ಪ್ರತಿರೋಧವೊಡ್ಡಲು ದಲಿತರು ಮತಾಂತರಗೊಳ್ಳುತ್ತಿದ್ದಾರೆ. ಯಾವ ಧರ್ಮವು ಮನುಷ್ಯರನ್ನು ಸಮಾನವಾಗಿ ಕಾಣುವುದಿಲ್ಲವೋ ಅಂಥ ಧರ್ಮದಲ್ಲಿ ಇರುವುದಕ್ಕಿಂತ ಬೇರೆ ಧರ್ಮಕ್ಕೆ ಮತಾಂತರವಾಗುವುದು ಭಾರತೀಯ ಅಸ್ಪೃಶ್ಯರಿಗೆ ಅನಿವಾರ್ಯವಾದ ಆಯ್ಕೆಯಾಗಿದೆ. ಅದೇ ರೀತಿ ಅಂಬೇಡ್ಕರ್ ಅವರು 'ಹಿಂದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ' ಎಂದು ಹೇಳಿದ್ದಾರೆ. ಇದು ಕೃಷ್ಣಪ್ಪನವರ ಚಿಂತನೆಗೆ ಹತ್ತಿರವಾಗಿದೆ.

ಭಾರತ ದೇಶದಲ್ಲಿ ವರ್ಗರಹಿತ, ವರ್ಣರಹಿತ, ಅಸ್ಪೃಶ್ಯತೆ, ಅಸಮಾನತೆಗಳು ಹೋಗ ಬೇಕಾದರೆ ಜಾತಿ ವಿನಾಶವಾಗಬೇಕು ಎಂದು ಪ್ರೊ.ಬಿ.ಕೃಷ್ಣಪ್ಪನವರು ಹೇಳಿದ್ದಾರೆ. ಮೀಸಲಾತಿಯನ್ನು ಸಾಮಾಜಿಕವಾಗಿ ಆರ್ಥಿಕವಾಗಿ ಶ್ರೇಣೀಕೃತ ಹಿಂದೂ ಧರ್ಮದಲ್ಲಿ ಶೋಷಣೆಗೆ ಒಳಗಾದ ದಲಿತರಿಗೆ ಅಸ್ಪೃಶ್ಯರಿಗೆ ಕೆಳವರ್ಗದವರಿಗೆ ಮೀಸಲಾತಿ ಸೌಲಭ್ಯಗಳು ಸಿಗಬೇಕು. ಎಲ್ಲಿಯವರೆಗೆ ಜಾತಿವ್ಯವಸ್ಥೆ ಈ ದೇಶದಲ್ಲಿ ಇರುತ್ತೋ, ಅಲ್ಲಿಯವರೆಗೆ ಮೀಸಲಾತಿಯನ್ನು ಕೊಡಬೇಕು ಎಂದು ಕೃಷ್ಣಪ್ಪನವರು ಹೇಳಿದ್ದಾರೆ.

ಪ್ರೊ.ಬಿ.ಕೃಷ್ಣಪ್ಪನವರು ಭವಿಷ್ಯದ ಸಮಾಜವನ್ನು ರೂಪಿಸುವ ಅಧ್ಯಾಪಕ ತನ್ನ ಕರ್ತವ್ಯ, ಜೀವನದ ಬದಲಾದ ಸ್ಥಿತಿಗತಿಗಳ, ಬದುಕಿನ ಜೀವನ ಅವ್ಯವಸ್ಥೆಯಿಂದ ಭ್ರಷ್ಟಾಚಾರಿಯಾದ ಅಧಿಕಾರಿಗಳು, ರಾಜಕಾರಣಿಗಳು ತತ್ಕಾಲಿಕ ಸಮಾಜ ಶೋಷಣೆ ಮಾಡುತ್ತಿದ್ದರೆ, ಅಧ್ಯಾಪಕ ಭವಿಷ್ಯದ ಸಮಾಜವಾದ ವಿದ್ಯಾರ್ಥಿಯನ್ನು ಶೋಷಣೆ ಮಾಡುತ್ತಿದ್ದಾನೆ ಎಂದು ಹೇಳಿದ್ದಾರೆ.

ಕೃಷ್ಣಪ್ಪನವರು ಶೋಷಿತರ ಪರವಾಗಿ ನಿಲ್ಲುವ ಹೋರಾಟಗಾರರು. ಶೋಷಿತರ ಹೋರಾಟಗಳಿಗೆ ಮುಂದಾಳತ್ವ ವಹಿಸಿ ಕೆಳವರ್ಗದ ಸಮುದಾಯಗಳಿಗೆ ತಿಳುವಳಿಕೆ ನೀಡುತ್ತಿದ್ದರು. ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿ ಕೆಳವರ್ಗದವರು, ದಲಿತರು ಮಾತ್ರ ಬೆತ್ತಲೆಸೇವೆ ಸಲ್ಲಿಸುತ್ತಿದ್ದರು. ಇದು ಕೆಳವರ್ಗದ ಮಹಿಳೆಯರ ಶೋಷಣೆಯಾಗಿತ್ತು. ಮೇಲ್ವರ್ಗದವರು ದಲಿತರನ್ನು ನಡೆಸಿಕೊಳ್ಳುವ ಹೀನತೆಯನ್ನು ಕೃಷ್ಣಪ್ಪನವರು ಮನಗೊಂಡು ಚಳುವಳಿ ಆರಂಭಿಸಿದರು. ಆ ಆಚರಣೆಯ ವಿರುದ್ಧ ಹೋರಾಟ ಮಾಡುವ ಮೂಲಕ ನಿಷೇಧಿಸಲು ಕಾರಣರಾದರು. ಆ ಭಾಗದ ಜನರಿಗೆ ಅರಿವು ಮೂಡಿಸಿದರು. ಹಿಂದಿನ ಕಾಲದಿಂದಲೂ ಭಾರತದಲ್ಲಿ ಸ್ತ್ರೀಯರನ್ನು ಶೋಷಣೆ ಮಾಡುತ್ತಾ ಬಂದಿದ್ದಾರೆ. ಅವರಿಗೆ ಸ್ವಾತಂತ್ರ್ಯವನ್ನು ನೀಡಿಲ್ಲ. ಎರಡನೇ ದರ್ಜೆ ಪ್ರಜೆಯನ್ನಾಗಿ ನೋಡಲಾಗಿದೆ. 'ಗ್ರಾಮದೇವತೆ' ಹಬ್ಬದಲ್ಲಿ ಕ್ರೂರ ಆಚರಣೆಗಳನ್ನು ಇಂದೂ ಸಹ ನಡೆಸಿಕೊಂಡು ಬಂದಿದ್ದಾರೆ. ಆಚರಣೆಯಲ್ಲಿ ಹಿಂಸಾತ್ಮಕ ಮೌಲ್ಯಗಳು ಇರಬಾರದು ಎಂಬುದು ಕೃಷ್ಣಪ್ಪನವರ ನಿಲುವು. ದಲಿತರ ಆಚರಣೆಗಳಲ್ಲಿ ಒಂದಾದ ಪ್ರಾಣಿಬಲಿಯನ್ನು ವಿರೋಧಿಸುತ್ತಿದ್ದರು. ಇದು ಅವರ ಅಹಿಂಸಾ ಧೋರಣೆಗೆ ಕಾರಣವಾಗಿರಬಹುದು.

ಕರ್ನಾಟಕದ ಚರಿತ್ರೆಯಲ್ಲಿ ೧೨ನೇ ಶತಮಾನದಲ್ಲಿ ನಡೆದ ವಚನಕಾರರ ಸಮಗ್ರ ಚಳುವಳಿಯಿಂದ ಆತ್ಮಗೌರವಕ್ಕೆ ಬೆಲೆ ಸಿಕ್ಕಿತ್ತು. ಜಾತಿವಿನಾಶ, ಕಾಯಕದ ಮಹತ್ವ, ಲಿಂಗ ಸಮಾನತೆ, ವೃತ್ತಿ ಸಮಾನತೆ ಒಟ್ಟು ಮನುಷ್ಯನ ಬದುಕಿನಲ್ಲಿ ಸಮಾನತೆ ಇರಬೇಕೆಂದು ಶರಣರು ಗಂಭೀರವಾದ ಚಿಂತನೆಯನ್ನು ಮಾಡಿದ್ದಾರೆ. ೮೫೦ ವರ್ಷಗಳ ಹಿಂದೆಯೇ ಹೊಸ ಸಮಾಜದ ಕನಸು ಕಟ್ಟಿ ಅದನ್ನು ನನಸು ಮಾಡಲು ವಚನಕಾರರು ತಮ್ಮ ಪ್ರಾಣವನ್ನು ಬಲಿಕೊಟ್ಟರು. ಇದು ಬಿ.ಕೃಷ್ಣಪ್ಪನವರಿಗೆ ಆದರ್ಶದಂತೆ ಕಂಡಿತು. ಆದರೆ ಶರಣರು ಕಟ್ಟಿದ ಸಮಾಜವು ಇಂದು ವೀರಶೈವ ಎಂದು ಪ್ರತ್ಯೇಕ ಜಾತಿಯಾಗಿರುವುದು ದುರಂತವೆಂದು ಹೇಳಬಹುದು. ಕೃಷ್ಣಪ್ಪನವರಿಗೆ ದಲಿತರಂತೆ ಊರ ಹೊರಗಿರುವ ಅನೇಕ ಜನಾಂಗಗಳ ಬಗ್ಗೆ ಅವರ ಸ್ಥಿತಿಗತಿಗಳ ಬಗ್ಗೆ ಚಿಂತನೆ ನಡೆಸಿದ್ದರು. ಆ ಜನಾಂಗಗಳಲ್ಲಿರುವ ಸಾಂಸ್ಕೃತಿಕ ಸಂಪತ್ತನ್ನು

ಮೆಚ್ಚಿಕೊಂಡಿದ್ದರು. ಸದಾ ಹೋರಾಟಗಳಲ್ಲೇ ನಾಡನ್ನು ಸುತ್ತುತ್ತಿದ್ದ ಕೃಷ್ಣಪ್ಪನವರು ಅಲ್ಲಿನ ವಿಶೇಷತೆಗಳ ಬಗ್ಗೆಯು ಗುರುತಿಸಿ ಸಮಾಜಕ್ಕೆ ಪರಿಚಯಿಸಿದ್ದು ಕೃಷ್ಣಪ್ಪನವರಿಗೆ ಸಲ್ಲಬೇಕು. ಅಂತಹದರಲ್ಲಿ ಬೈರ ಜೋಗಿಗಳ ಕಲೆಯು ಒಂದು. ಈ ಕಲೆಯು ಕಣ್ಮರೆಯಾಗುತ್ತಿರುವುದನ್ನು ತಮ್ಮ ಲೇಖನಗಳಲ್ಲಿ ಚರ್ಚಿಸಿದ್ದಾರೆ.

ಕೃಷ್ಣಪ್ಪನವರು ಕವಿಯ ಕಾವ್ಯದಲ್ಲಿ ಕವಿಯ ಉನ್ನತವಾದ ವಿಚಾರಗಳಿದ್ದರೆ ಒಳ್ಳೆಯ ಕಾವ್ಯ ಬರುತ್ತದೆ. ಕವಿ ತನ್ನ ಆತ್ಮತೃಪ್ತಿಗೆ ಕಾವ್ಯ ಬರೆದರೂ ಅದನ್ನು ಇತರರು ಮೆಚ್ಚಲಿ ಎಂಬುದು ಅವನ ಉದ್ದೇಶವಾಗಿರುತ್ತದೆ ಎಂದು ಕೃಷ್ಣಪ್ಪನವರು ಕವಿ ಕಾವ್ಯದಲ್ಲಿ ಅವುಗಳು ಒಳಗೊಳ್ಳಬೇಕಾದ ವಿಷಯಗಳನ್ನು ಕುರಿತು ಹೇಳಿದ್ದಾರೆ.

ಭಾಷೆಯ ಕುರಿತು ಭಾಷೆಯು ಮನುಷ್ಯನಿಗೆ ಉಪಯುಕ್ತ ಭಾಷೆಯಿಂದಲೇ ಮಾನವನ ಸಂಸ್ಕೃತಿ, ನಾಗರಿಕತೆಗಳು ಉಳಿದುಕೊಂಡು ಬಂದಿರುವುದು ಎಂದು ಬಿ.ಕೃಷ್ಣಪ್ಪನವರು ಹೇಳಿದ್ದಾರೆ. ಪಂಪಭಾರತದ ಸನ್ನಿವೇಶದಲ್ಲಿ ಅರ್ಜುನನ್ನು ಕೊಲ್ಲಲು ಕರ್ಣ ಸರ್ಪಾಸ್ತ್ರ ಪ್ರಯೋಗಿಸಿ ಕೃಷ್ಣನ ತಂತ್ರದಿಂದ ವಿಫಲವಾದಾಗ ಹಾಗೂ ಅರ್ಜುನನು ಕರ್ಣನನ್ನು ಕೊಲ್ಲುವ ಸಂದರ್ಭದಲ್ಲಿ ಉಂಟಾದ ಅರ್ಜುನನ ಮನಸ್ಥಿತಿ ಕೇವಲ ಕವಿಯ ಕಲ್ಪನೆಯಾಗಿದೆ. ಅಜ್ಜ–ಗುರುವನ್ನು ಕೊಂದವನಿಗೆ ತನ್ನ ಅಣ್ಣ ಕರ್ಣನನ್ನು ಕೊಲ್ಲುವುದು ದೊಡ್ಡ ವಿಷಯವಲ್ಲವೆಂದಿದ್ದಾರೆ. ಇದು ಒಂದು ವರ್ಗದ ಒಲೈಕೆಯಂತಿದೆ. ವಾಸ್ತವದಲ್ಲಿ ಹೇಳುವುದಾದರೆ ಹಿಂದೂಧರ್ಮದಲ್ಲಿನ ಅಸಮಾನತೆ, ವೈಷಮ್ಯ, ಜಾತಿ ರಾಜಕಾರಣ, ಮೀಸಲಾತಿಗಳ ಬಗೆಗಿನ ತಾರತಮ್ಯತೆಯನ್ನು ಪಂಪಭಾರತದಲ್ಲಿ ಗುರುತಿಸಿದ್ದಾರೆ.

ಕೃಷ್ಣಪ್ಪನವರು ಮಹಾಭಾರತದ ಕತೆಯನ್ನು ವಾಸ್ತವದ ಸಮಾಜದಲ್ಲಿ ಕಂಡಿದ್ದಾರೆ. ಅಲ್ಲಿನ ಪಕ್ಷಪಾತತನ, ರಾಜಕಾರಣ ಬಗ್ಗೆ ವಾಸ್ತವಿಕ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. 'ಪಾಂಡವರ ಕಡೆ ಇರುವ ಸೈನ್ಯಕ್ಕಿಂತ ಕೌರವರ ಸೈನ್ಯ ಬಲಿಷ್ಠವಾಗಿತ್ತು. ಗಾತ್ರದಲ್ಲಿ ಹೆಚ್ಚಿತ್ತು. ಆದರೆ ಕೌರವರ ಕಡೆಯಿರುವವರು ಸರಿಯಾಗಿ ಯುದ್ಧದಲ್ಲಿ ಪಾಲ್ಗೊಳ್ಳಲಿಲ್ಲ. ತಮ್ಮ ಸ್ವಪ್ರತಿಷ್ಠೆಯಿಂದ ದುರ್ಯೋಧನ ಸೋಲುವಂತಾಯಿತು' ಎಂದು ಹೇಳಿದ್ದಾರೆ. ಮಹಾಭಾರತದ ಕತೆಯಲ್ಲಿ ಪಕ್ಷಪಾತತನವು ಇಂದಿನ ಸಮಾಜಕ್ಕೆ ವಿಸ್ತರಿಸಿಕೊಂಡಿದೆ. ಹಿಂದೆ ಪಾಂಡವರು ಗೆಲ್ಲಬೇಕಾದ ತಂತ್ರಗಳನ್ನು ಇಂದಿನವರು ಬಳಸುತ್ತಿದ್ದು ದಲಿತ ಹೋರಾಟಕ್ಕೆ ಹಿನ್ನೆಡೆಯಾಗಿತ್ತು. ಕೆಳವರ್ಗದವರು ಕೌರವರಂತೆ ಬಲಿಷ್ಠವಾಗಿ ಕಂಡರು. ಇದರಿಂದಾಗಿ ಹೋರಾಟಗಳಿಗೆ ಸಂಘಟನೆಯು ಕೊರತೆಯಾಗಿ ಕಾಣತೊಡಗಿತು.

ಕುವೆಂಪು ಕಾದಂಬರಿಯಲ್ಲಿ ದಲಿತ ಪಾತ್ರಗಳನ್ನು ಕುವೆಂಪು ಅವರು ಶೂದ್ರರಿಗಿಂತ ಕೆಳವರ್ಗದ ನೆಲೆಯಲ್ಲಿ ಚಿತ್ರಿಸಿರುವುದನ್ನು ಬಿ.ಕೃಷ್ಣಪ್ಪ ಗುರುತಿಸಿದ್ದಾರೆ. ಅಸ್ಪೃಶ್ಯರಿಗೆ ಕಾದಂಬರಿಯಲ್ಲಿ ದುಡಿಯುವ ವರ್ಗವಾದರೂ, ಅವರನ್ನು ಸಮವಾಗಿ ಕಾಣಲಾಗಿಲ್ಲ ಎಂದು ಹೇಳಬಹುದು. 'ಕುವೆಂಪು ಕಾದಂಬರಿಯಲ್ಲಿ ದಲಿತ ಜೀವನಚಿತ್ರಣ' ಲೇಖನವು ಹೆಚ್ಚು ಚರ್ಚೆಯಾಗಿದೆ. ಆದರೆ ಇರುವ 'ದಲಿತರು ಮತ್ತು ಮತಾಂತರ', 'ಜಾತಿವಿನಾಶ', 'ಮೀಸಲಾತಿ ಮತ್ತು ದಲಿತರು' ಶೈಕ್ಷಣಿಕ ಚಿಂತನೆಗಳು. 'ಭಾರತೀಯ ಸ್ತ್ರೀ', 'ಜಾನಪದ

ಕಲೆ', 'ವೀರಶೈವ ಪರಂಪರೆ' ಮುಂತಾದ ಉನ್ನತ ಮೌಲ್ಯವಿರುವ ಲೇಖನಗಳು ಸಹ ತುಂಬ ಚರ್ಚೆಯಾಗಬೇಕಿದೆ. ಕೃಷ್ಣಪ್ಪನವರು ಜಾತಿಪದ್ಧತಿ, ಆರ್ಥಿಕ ಅಸಮಾನತೆ, ಸಾಮಾಜಿಕ ವೈಷಮ್ಯ, ರಾಜಕೀಯ ಸ್ಥಿತಿಗತಿಯ ಸಾಂಸ್ಕೃತಿಕ ಚಿಂತಕರು. ಒಂದು ಕಡೆ ದಲಿತರ ಪರವಾಗಿ ಎತ್ತುವ ಜೊತೆಗೆ ದಲಿತರು ಮತಾಂತರದ ಬಗ್ಗೆ ಬೇರೆ ಮತಗಳು ಅವರನ್ನು ಒಲೈಸಿಕೊಳ್ಳುವ ಬಗ್ಗೆ ತೀವ್ರ ಅಸಮಾಧಾನವಿತ್ತು. ಸರ್ಕಾರವು ಮಿಸಲಾತಿ ಹೆಸರಲ್ಲಿ ಆರ್ಹರಿಗೆ ಮಾಡಿದ ಅನ್ಯಾಯಗಳಿಗೆ ಅವರ ವಿರೋಧವಿತ್ತು. ಕೃಷ್ಣಪ್ಪನವರು ವೈಚಾರಿಕವಾಗಿ ವಾಸ್ತವ ನೆಲೆಯಲ್ಲಿ ಬರೆದಿರುವ ಲೇಖನಗಳಾಗಿವೆ. ಅವರ ಚಿಂತನೆಗಳು ಅವುಗಳ ಮೌಲ್ಯಗಳು ಸಾಕಾರಗೊಳ್ಳಬೇಕಿದೆ. ಈ ನೆಲೆಯಲ್ಲಿ ಮತ್ತಷ್ಟು ಅಧ್ಯಯನಗಳು ನಡೆಯಬೇಕಿದೆ. ಅವರ ಆಶಯದಂತೆ ಸಮಾಜದಲ್ಲಿ ಸಮಾನತೆ ಉಂಟಾಗಬೇಕು. ದಲಿತ ಚಿಂತನೆಗಳು, ದಲಿತ ಸಾಹಿತ್ಯದ ಹೋರಾಟಗಳಿಗೆ ಪ್ರೊ.ಬಿ.ಕೃಷ್ಣಪ್ಪನವರ ಲೇಖನಗಳು ಇಂದಿಗೂ ಸ್ಫೂರ್ತಿ ನೀಡಿವೆ.

ಅನುಬಂಧಗಳು

ಮೂಲ ಆಕರಗ್ರಂಥ

ಕೃಷ್ಣಪ್ಪ ಬಿ., ೧೯೯೯, **ಪ್ರೊ.ಬಿ.ಕೃಷ್ಣಪ್ಪ ಚಿಂತನೆಗಳು ಮತ್ತು ಬರಹಗಳು,** ಕನ್ನಡ ಪ್ರಾಧಿಕಾರ, ಬೆಂಗಳೂರು.

ಆಕರಗ್ರಂಥಗಳು

೧. ಅರವಿಂದ ಮಾಲಗತ್ತಿ (ಸಂ)., ೨೦೦೨, **ದಲಿತಮಾರ್ಗ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨. ಅರವಿಂದ ಮಾಲಗತ್ತಿ, ೨೦೦೩, **ಸಾಹಿತ್ಯ ಮತ್ತು ದಲಿತ ಪ್ರಜ್ಞೆ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೩. ಅರ್ಜುನ್ ಗೊಳಸಂಗಿ (ಸಂ)., ೨೦೦೩, **ಕನ್ನಡ ದಲಿತ ಸಾಹಿತ್ಯ ಸಮಾಲೋಕನ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪. ಇಂದಿರಾ ಕೃಷ್ಣಪ್ಪ (ಸಂ), ೨೦೦೩, **ಸಂಘರ್ಷದ ನುಡಿಗಳು**, ಪ್ರ.ಬಿ.ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು.

೫. ಇಂದಿರಾ ಕೃಷ್ಣಪ್ಪ(ಸಂ), ೨೦೦೫, **ನೆನಪುಗಳೇ ನಿಲ್ಲಿ... ನಿಲ್ಲಿ...**, ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು.

೬. ಇಂದಿರಾ ಕೃಷ್ಣಪ್ಪ(ಸಂ), ೨೦೦೬, **ಬಯಲು ಬೆತ್ತಲೆ ಚಂದ್ರಗುತ್ತಿ**, ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು.

೭. ಉಮಾದೇವಿ ಎಂ.ಪಾಟೀಲ, ೨೦೦೭, **ಪ್ರೊ.ಬಿ.ಕೃಷ್ಣಪ್ಪ ದಲಿತ ಕಥನ**, ಪಲ್ಲವ ಪ್ರಕಾಶನ, ಚನ್ನಪಟ್ಟಣ.

೮. ಕೃಷ್ಣಪ್ಪ ಬಿ., ೧೯೯೯, **ಪ್ರೊ.ಬಿ.ಕೃಷ್ಣಪ್ಪ ಚಿಂತನೆಗಳು ಮತ್ತು ಬರಹಗಳು**, ಕನ್ನಡ ಪ್ರಾಧಿಕಾರ, ಬೆಂಗಳೂರು.

೯. ಕೃಷ್ಣಪ್ಪ ಬಿ., ೨೦೦೦, **ಚಳುವಳಿಗಳು ಮತ್ತು ಬರಹಗಳು**, ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು.

೧೦. ಕೇಶವ ಎಸ್.ಆರ್., ೨೦೧೧, **ಪ್ರೊ.ಬಿ.ಕೃಷ್ಣಪ್ಪ ದಲಿತರ ಮನೆಮನೆಯ ಜ್ಯೋತಿ(ಅಂಬೇಡ್ಕರ್ ವಾದ)**, ದಲಿತ ಸಂಘರ್ಷ ಸಮಿತಿ, ಬೆಂಗಳೂರು

೧೧. ಗಂಗಾರಾಂ ಚಾಂಡಾಳ, ೧೯೯೨, **ಕರ್ನಾಟಕ ದಲಿತ ಚಳುವಳಿ ಮತ್ತು ಅಂಬೇಡ್ಕರ್**, ಚೈತ್ರಾಪ್ರಕಾಶನ, ಚಿಕ್ಕ ತಿರುಪತಿ.

೧೨. ಗಂಗಾಧರ ಕುಷ್ಟಗಿ (ಸಂ), ೨೦೦೦, **ತಲೆಮಾರಿನ ತಳಮಳ**, ಕವಿತಾ ಪ್ರಕಾಶನ, ರಾಯಚೂರು.

೧೩. ಚಿನ್ನಸ್ವಾಮಿ ಸೋಸಲೆ, ೨೦೦೮, **ಭಾರತೀಯ ಸಮಾಜ ಮತ್ತು ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಚಿನ್ನಸ್ವಾಮಿ ಸೋಸಲೆ, ೨೦೧೨, **ಅಂಬೇಡ್ಕರ್ ದೃಷ್ಟಿಯಲ್ಲಿ ದಲಿತರು ಮತ್ತು ಮತಾಂತರ,** ಯಾಜಿ ಪ್ರಕಾಶನ, ಹೊಸಪೇಟೆ.

೧೫. ಚೆನ್ನಣ್ಣ ವಾಲೀಕಾರ, ೨೦೦೩, **ಸಮಗ್ರ ಕಥಾಸಂಪುಟ,** ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲ್ಬರ್ಗಾ.

೧೬. ಚೆನ್ನಣ್ಣ ವಾಲೀಕಾರ, ೨೦೦೧, **ಕರ್ನಾಟಕ ದೇವದಾಸಿಯರ ಸಮಾಜೋ-ಧಾರ್ಮಿಕ ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ,** ವಾಲೀಕಾರ ವಿರಸಂ, ಗುಲ್ಬರ್ಗಾ.

೧೭. ಚಂದ್ರಶೇಖರ್ ಎಸ್., ೧೯೯೨, **ಅಂಬೇಡ್ಕರ್ ಮತ್ತು ಗಾಂಧಿ,** ಅಕ್ಷರ ಪ್ರಕಾಶನ, ಹೆಗ್ಗೋಡು.

೧೮. ದೇವನೂರ ಮಹಾದೇವ, ೨೦೧೨, **ಎದೆಗೆ ಬಿದ್ದ ಅಕ್ಷರ,** ಅಭಿನವ ಪ್ರಕಾಶನ, ಬೆಂಗಳೂರು.

೧೯. ದೇವಯ್ಯ ಹರವೆ, ೧೯೯೮, **ದಲಿತ ಸಾಹಿತ್ಯ ಮತ್ತು ಇತರೆ ಲೇಖನಗಳು,** ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

೨೦. ಮುನಿವೆಂಕಟಪ್ಪ ವಿ.(ಸಂ)., ೨೦೦೯, **ದಲಿತ ಚಳುವಳಿ ಚರಿತ್ರೆ,** ತನುಮನು ಪ್ರಕಾಶನ, ಮೈಸೂರು.

೨೧. ಮೊಗಳ್ಳಿ ಗಣೇಶ್(ಸಂ), ೨೦೦೩, **ದಲಿತ ಚಿಂತನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೨೨. ಮಹೇಶ್ ಸಿ.ಕೆ., ೨೦೦೩, **ಮೀಸಲಾತಿ ಮತ್ತು ಭವಿಷ್ಯದ ಪಥಗಳು,** ವಿಮೋಚನ ಪ್ರಕಾಸನ, ಚಿತ್ರದುರ್ಗ.

೨೩. ಮಹೇಶ್ ಸಿ.ಕೆ., ೨೦೧೩, **ಶೋಷಿತರ ಹಣತೆ ಪ್ರೊ.ಬಿ.ಕೃಷ್ಣಪ್ಪ,** ವಿಮೋಚನ ಪ್ರಕಾಶನ, ಚಿತ್ರದುರ್ಗ.

೨೪. ಮಹಾದೇವಯ್ಯ ಪಿ.(ಸಂ)., ೨೦೦೫, **ದಲಿತರು ಮತ್ತು ಪರ್ಯಾಯ ರಾಜಕಾರಣ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೨೫. ಎಂ.ಎಸ್.ಆಶಾದೇವಿ, ೨೦೦೨, **ಉರಿಚಮ್ಮಾಳಿಗೆ,** ವಸಂತ ಪ್ರಕಾಶನ, ಬೆಂಗಳೂರು.

೨೬. ಮುನಿವೆಂಕಟಪ್ಪ ವಿ., ೨೦೦೨, **ದಲಿತ ಸಾಹಿತ್ಯ ದರ್ಶನ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೭. ಮುನಿವೆಂಕಟಪ್ಪ ವಿ., ೨೦೦೮, **ಮೀಸಲಾತಿ: ಒಂದು ಅವಲೋಕನ,** ಪ್ರಸಾದ ಏಜೆನ್ಸೀಸ್, ಮೈಸೂರು.

೨೮. ಮೊಗಳ್ಳಿ ಗಣೇಶ್, ೨೦೦೬, **ದಲಿತ ಕಥನ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೨೯. ರುದ್ರಪ್ಪ ಹನಗವಾಡಿ, ೨೦೦೧, **ಸಂಘರ್ಷದ ರೂವಾರಿ,** ಪ್ರೊ.ಬಿ.ಕೆ. ಪಂಚಮ ಸಾಂಸ್ಕೃತಿಕ ಸಂಸ್ಥೆ, ಬೆಂಗಳೂರು.

೩೦. ರಹಮತ್ ತರೀಕೆರೆ, ೨೦೧೨, **ಕನ್ನಡ ಸಾಹಿತ್ಯವಾಗ್ವಾದಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೧. ರಂಗರಾಜ ವನದುರ್ಗ, ೨೦೦೪, **ದಲಿತ ಸಂವೇದನೆ,** ಸಿ.ವಿ.ಜಿ.ಪ್ರಕಾಶನ, ಬೆಂಗಳೂರು

೩೨. ಸಿದ್ಧಲಿಂಗಯ್ಯ, ೨೦೦೦, **ಊರು ಕೇರಿ(ಆತ್ಮಕಥನ: ಭಾಗ ೧),** ಅಂಕಿತ ಪುಸ್ತಕ, ಬೆಂಗಳೂರು.

೩೩. ಸಿದ್ಧಲಿಂಗಯ್ಯ, ೨೦೦೬, **ಊರುಕೇರಿ(ಆತ್ಮಕಥನ ಭಾಗ ೨),** ಸಿ.ವಿ.ಜಿ.ಪಬ್ಲಿಕೇಷನ್, ಬೆಂಗಳೂರು.

೩೪. ಲಿಂಗಪ್ಪ ಎಚ್., ೨೦೦೮, **ಹೋರಾಟಗಾರ ಪ್ರೊ.ಬಿ.ಕೃಷ್ಣಪ್ಪ,** ರಶ್ಮಿ ಪ್ರಕಾಶನ, ಚಿತ್ರದುರ್ಗ.

೩೫. ಬಾನಂದೂರು ಕೆಂಪಯ್ಯ, ೨೦೦೮, **ಕರ್ನಾಟಕ ದಲಿತ ಜನಪದ ಸಂಗೀತ,** ಕಣ್ವ ಪ್ರಕಾಶನ, ಬೆಂಗಳೂರು.

೩೬. ಪ್ರಹ್ಲಾದ ಅಗಸನ ಕಟ್ಟೆ, ೨೦೦೪, **ದಲಿತ ಬಂಡಾಯ ಕಾವ್ಯ ಮತ್ತು ವಿವರವಾದಗಳು,** ಹರ್ಷ ಪ್ರಕಾಶನ, ಹುಬ್ಬಳ್ಳಿ.

೩೭. ಜಿ.ಆರ್.ತಿಪ್ಪೇಸ್ವಾಮಿ, ೨೦೦೧, **ಕನ್ನಡ ದಲಿತ ಸಾಹಿತ್ಯದ ನೆಲೆ,** ವಿಚಾರವಾದಿ ಪ್ರಕಾಶನ, ಮೈಸೂರು.

೩೮. ಶೇಖರ್ ಎಂ.ಎಸ್., ೨೦೦೬, **ಮೊದಲ ತಲೆಮಾರಿನ ದಲಿತ ಸಾಹಿತಿಗಳು,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೦. ಯಲ್ಲಪ್ಪ ಭೂತಯ್ಯ ಟಿ., ೧೯೯೪, **ಆದಿ ಕರ್ನಾಟಕರು(ಆದಿ ಜಾಂಬವರು) ಮತ್ತು ಮೀಸಲಾತಿ,** ಆದಿ ಭಾರತ ಸಾಹಿತ್ಯ ಪ್ರಕಾಶನ, ಮೈಸೂರು.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ